ಹಣಕಾಸು, ವಾಣಿಜ್ಯ ಕ್ಷೇತ್ರಗಳಿಗೆ ಮೀಸಲಾದ ವಿಶ್ವವಾಣಿಯ ವಿಶೇಷ ಯೂಟ್ಯೂಬ್ ಚಾನೆಲ್, SUBSCRIBE ಮಾಡಿ

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅಪಪ್ರಚಾರ ಮಾಡುವವರು ಬಹಿರಂಗ ಚರ್ಚೆಗೆ ಬನ್ನಿ: ಸಿಎಂ ಸವಾಲು

ಅಭಿವೃದ್ಧಿಯೇ ಉತ್ತರ

ಮೈಸೂರು: ಅಭಿವೃದ್ಧಿಗೆ ಸರಕಾರದ ಬಳಿ ಹಣ ಇಲ್ಲ ಎಂದು ಅಪಪ್ರಚಾರ ಮಾಡುತ್ತಿರುವ ವರಿಗೆ ನಮ್ಮ ಅಭಿವೃದ್ಧಿ ಕಾರ್ಯಗಳೇ ಉತ್ತರ. ಬಿಜೆಪಿ-ಜೆಡಿಎಸ್‌ನವರಿಗೆ ಈ ಮಟ್ಟಿಗಿನ ಮತ್ಸರ ಇರಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಛೇಡಿಸಿದರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶನಿವಾರ ಆಯೋಜಿಸಿದ್ದ ಸರ ಕಾರದ ಸಾಧನಾ ಸಮಾವೇಶ ಮತ್ತು 2,578 ಕೋಟಿ ರು. ಅಭಿವೃದ್ಧಿ ಕಾರ್ಯಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿ ಮಾತ ನಾಡಿದ ಅವರು, ಗ್ಯಾರಂಟಿ ಯೋಜನೆಗಳನ್ನು ರಾಜ್ಯದ ಜನರ ಮನೆ ಬಾಗಿಲಿಗೆ ತಲುಪಿಸಿ ದ್ದೇವೆ. ಇದನ್ನು ಕಂಡು ಬಿಜೆಪಿ-ಜೆಡಿಎಸ್ ನಾಯಕರು ಹೊಟ್ಟೆ ಉರಿ ತಾಳಲಾರದೆ ಹಣವೇ ಇಲ್ಲ, ಅಭಿವೃದ್ಧಿ ಕಾರ್ಯ ಮಾಡು ತ್ತಿಲ್ಲ ಅಂತೆಲ್ಲ ಆರೋಪ ಮಾಡುತ್ತಿದ್ದಾರೆ. ಹಣವೇ ಇಲ್ಲದೇ ಇದ್ದರೆ ಮೈಸೂರಿನಲ್ಲಿ 2,578 ಕೋಟಿ ರು. ವೆಚ್ಚದ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ ಮಾಡಲು ಹೇಗೆ ಸಾಧ್ಯವಾಯಿತು? ನಾವು ಮಾಡಿರುವ ಅಭಿವೃದ್ಧಿ ಬಗ್ಗೆ ಬಹಿರಂಗ ಚರ್ಚೆಗೆ ಬನ್ನಿ ಎಂದು ಸವಾಲು ಹಾಕಿದರು. → 4

ವೇದಿಕೆಯತ್ತ ಆಗಮಿಸಿದ ಸಿಎಂ ಸಿದ್ದರಾಮಯ್ಯ ಅವರಿಗೆ ಕಾರ್ಯಕರ್ತರು ಹೂಮಳೆಗೈದರು.

ಸರಕಾರಿ ದೂರದರ್ಶನದಲ್ಲಿ ಹಿಂದಿನ ಯಾವ ಪ್ರಧಾನಿಯೂ ಈಗಿನವರಂತೆ ಬೊಗಳುತ್ತಿರಲಿಲ್ಲ. ಮಣಿಪುರದ ಜನರ ಸಮಸ್ಯೆ ಕೇಳಲು ಇವರಿಗೆ ಸಮಯ ಇಲ್ಲ.
– ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷ

ಸಂವಿಧಾನವನ್ನು ಬದಲಾಯಿಸಲು ಬಿಜೆಪಿ ಷಡ್ಯಂತ್ರ ನಡೆಸುತ್ತಿದೆ. ದೇಶದ ಜನ ಮತ್ತು ಕಾಂಗ್ರೆಸ್ ಪಕ್ಷವು ಬಿಜೆಪಿ ಮತ್ತು ಮನುವಾದಿಗಳ ಷಡ್ಯಂತ್ರವನ್ನು ಸೋಲಿಸುತ್ತಾರೆ.
–ಸಿದ್ದರಾಮಯ್ಯ ಸಿಎಂ

ನಿಮ್ಮ ಟೀಕೆ, ನಿಂದನೆಗೆ ಬಗ್ಗಲ್ಲ. ನಿಂದಕರಿರಬೇಕು, ನಿಂದಕರಿದ್ದರೆ ನಮ್ಮ ತಪ್ಪನ್ನು ಸರಿಪಡಿಸಿಕೊಳ್ಳಲು ಸಾಧ್ಯ. ನಿಮ್ಮ ಟೀಕೆ ನಿಂದನೆಗೆ ಜಗ್ಗದೇ ನುಗ್ಗಿ ನಡೆ ಮುಂದೆ ಎಂದು ಸಾಗುತ್ತೇವೆ.
–ಡಿ.ಕೆ.ಶಿವಕುಮಾರ್ ಡಿಸಿಎಂ

- ಸರಕಾರ ಎರಡು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಸಾಧನಾ ಸಮಾವೇಶ
- ಮೈಸೂರು ಜಿಲ್ಲೆಯಲ್ಲಿ 2,578 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ
- ಹರಿದು ಬಂದಿದ್ದ ಜನಸಾಗರ, ಕಾರ್ಯ ಕರ್ತರಿಂದ ತುಂಬಿದ್ದ ಕಾರ್ಯಕ್ರಮ
- ಸಿಎಂ ಫೋಟೊ ಪ್ರದರ್ಶಿಸಿ ಸಂಭ್ರಮ

ಕಾಂಗ್ರೆಸ್‌ಗೆ ಮತ ನೀಡಿರುವವರು ಮಾತ್ರ ರಾಜ್ಯದ ಪ್ರಜೆಗಳಾ?

ಅನುದಾನ ತಾರತಮ್ಯ ಕೈ ವಿರುದ್ಧ ಕಮಲ ಕಿಡಿ

ಬೆಂಗಳೂರು: ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಶಾಸಕರ ಕ್ಷೇತ್ರಗಳಿಗೆ 50 ಕೋಟಿ ರು. ಬಿಡುಗಡೆ ಮಾಡಿರುವ ಸಿಎಂ ಸಿದ್ದರಾಮಯ್ಯ ಅವರ ಧೋರಣೆಗೆ ಪ್ರತಿಪಕ್ಷ ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದೆ. ಆದರೆ ಕಾಂಗ್ರೆಸ್ ನಾಯಕರು ಸರಕಾರದ ನಡೆಯನ್ನು ಸಮರ್ಥಿಸಿಕೊಂಡಿದ್ದು, 'ಬಿಜೆಪಿಯವರ ನಡೆಯನ್ನೇ ನಾವು ಮಾಡುತ್ತಿದ್ದೇವೆ' ಎಂದು ತಿರುಗೇಟು ನೀಡಿದ್ದಾರೆ.

ಈ ಸಂಬಂಧ ತಮ್ಮ ಸಾಮಾಜಿಕ ಜಾಲತಾಣ ದಲ್ಲಿ ಸರಕಾರದ ವಿರುದ್ಧ ಸಾಲು ಸಾಲು ಪೋಸ್ಟ್ ಹಾಕಿರುವ ಪ್ರತಿಪಕ್ಷ ನಾಯಕ ಆರ್.ಅಶೋಕ, ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿರುವವರು ಮಾತ್ರ ಕರ್ನಾಟಕದ ಪ್ರಜೆ ಗಳಾ? ಕಾಂಗ್ರೆಸ್ ಶಾಸಕರನ್ನು ಗೆಲ್ಲಿಸಿರುವ ಕ್ಷೇತ್ರಗಳಿಗೆ ಮಾತ್ರ ತಾವು ಮುಖ್ಯಮಂತ್ರಿನಾ? ಕನ್ನಡಿಗರಿಗೆ ದ್ರೋಹ ಬಗೆಯುತ್ತಿರುವ ಲಜ್ಜೆಗೆಟ್ಟ ಕಾಂಗ್ರೆಸ್ ಪಕ್ಷಕ್ಕೆ ನಾಚಿಕೆಯಾಗಬೇಕು ಎಂದಿದ್ದಾರೆ.

ಸೂಪರ್ ಸಿಎಂ ರಣದೀಪ್ ಸಿಂಗ್ ಸುರ್ಜೇವಾಲ ಅವರು ಶಾಸಕರೊಂದಿಗೆ ನಡೆಸಿದ ಸಭೆ ನಂತರ ಬಹಿರಂಗವಾಗಿರುವ ಅಸಮಾಧಾನಕ್ಕೆ ಬೆಚ್ಚಿ ಬಿದ್ದಿರುವ ಸಿಎಂ ಸಿದ್ದರಾಮಯ್ಯ, ತಮ್ಮ ಕುರ್ಚಿ ಉಳಿಸಿಕೊಳ್ಳಲು ಕಾಂಗ್ರೆಸ್ ಶಾಸಕರಿಗೆ ತಲಾ 50 ಕೋಟಿ ರು. ಅನುದಾನ ನೀಡಲು ಮುಂದಾಗಿದ್ದಾರೆ ಎಂದು ಆರೋಪಿಸಿದ್ದಾರೆ. ಅಲ್ಲದೆ, ಮಾತೆತ್ತಿದರೆ ಕೇಂದ್ರ ಸರಕಾರ ಮಲ ತಾಯಿ ಧೋರಣೆ ತೋರುತ್ತಿದೆ ಎಂದು ಬೊಬ್ಬೆ ಹೊಡೆಯುತ್ತೀರಲ್ಲ ಸಿಎಂ ಅವರೇ, ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ 50 ಕೋಟಿ ರು. ಗಳ ಬೆಣ್ಣೆ ಹಚ್ಚಿ, ಪ್ರತಿಪಕ್ಷ ಶಾಸಕರ ಕ್ಷೇತ್ರಗಳಿಗೆ ದೊಡ್ಡ ಸೊನ್ನೆ ಸುತ್ತಿ ಸುಣ್ಣ ಹಚ್ಚಿದ್ದೀರಲ್ಲ, ಇದು ಮಲ ತಾಯಿ ಧೋರಣೆ ಅಲ್ಲವೇ? ಎಂದು ಪ್ರಶ್ನಿಸಿದ್ದಾರೆ.

ಮತ್ತೊಂದು ಪೋಸ್ಟ್‌ನಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರೇ, ಕ್ಷೇತ್ರದ ಅನುದಾನಕ್ಕಾಗಿ ಪ್ರತಿಪಕ್ಷದ ಶಾಸಕರು ತಾಳ್ಮೆಯಿಂದ ಕಾಯಬೇಕು ಎಂದರೆ ಏನು ಸ್ವಾಮಿ? ತಾವು ಈ ಮೊದಲೇ ಹೇಳಿರುವಂತೆ ಶಾಸಕರು ತಮ್ಮ ಬಳಿ ತಗ್ಗಿ-ಬಗ್ಗಿ ನಡೆಯಬೇಕು ಎನ್ನುವುದು ನಿಮ್ಮ ಮಾತಿನ ಅರ್ಥಾನಾ? ಅಥವಾ ತಾಳ್ಮೆಯಿಂದ ಇರದಿದ್ದರೆ ನಟ್ಟು-ಬೋಲ್ಟು ಟೈಟು ಮಾಡುತ್ತೇನೆ ಎನ್ನುವ ಧಮ್ಕಿನಾ? ಎಂದು ಪ್ರಶ್ನಿಸಿದ್ದಾರೆ. → 4

ಕುರ್ಚಿ ಉಳಿಸಿಕೊಳ್ಳಲು ಅನುದಾನದ ಕಪಟ ನಾಟಕ

ಎರಡು ವರ್ಷ ಆಡಳಿತಾವಧಿ ಮುಗಿದರೂ ಅನುದಾನ ಸಿಗದ ಕುರಿತು ಅವರ ಪಕ್ಷದ ಶಾಸಕರೇ ಅಸಮಾಧಾನ ತೋಡಿಕೊಂಡಿದ್ದಾರೆ. ಮುಖ್ಯಮಂತ್ರಿ ಕುರ್ಚಿ ಉಳಿಸಿಕೊಳ್ಳಲು ಅನುದಾನದ ಕಪಟ ನಾಟಕ ಆಡುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, 50 ಕೋಟಿ ಬಿಡುಗಡೆಗೆ ಸಿಎಂ ಪತ್ರ ಬರೆದಿದ್ದಾರೆ. ಅಷ್ಟೇ ಬಿಡುಗಡೆ ಆಗಲಿದೆಯೇ? ಯಾವಾಗ ಬಿಡುಗಡೆ ಆಗಲಿದೆ? ಯಾವಾಗ ಶಾಸಕರ ಕೈ ಸೇರಲಿದೆ? ಅಭಿವೃದ್ಧಿ ಕೆಲಸ ಆಗುವುದು ಯಾವಾಗ? ಇವೆಲ್ಲವೂ ಯಕ್ಷಪ್ರಶ್ನೆ. ಕಾಂಗ್ರೆಸ್ ಆಡಳಿತದಲ್ಲಿ ಆಡಳಿತ ಪಕ್ಷದವರ ಕಣ್ಣಿಗೆ ಬೆಣ್ಣೆ, ಪ್ರತಿಪಕ್ಷದವರ ಕಣ್ಣಿಗೆ ಸುಣ್ಣ ಎಂಬುದು ನಿರಂತರವಾಗಿ ನಡೆಯುತ್ತ ಬಂದಿದೆ. ಈಗಲೂ ಅದನ್ನೇ ಮುಂದುವರಿಸಿದ್ದಾರೆ ಎಂದರು.

ಬೆಂಗಳೂರಲ್ಲಿ ಐದು ನಗರ ಪಾಲಿಕೆ ರಚನೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಡಿಯಲ್ಲಿ ಐದು ನಗರ ಪಾಲಿಕೆಗಳನ್ನು ರಚನೆ ಮಾಡಿ ರಾಜ್ಯ ಸರಕಾರ ಶನಿವಾರ ಆದೇಶ ಹೊರಡಿಸಿದೆ.

5 ನಗರ ಪಾಲಿಕೆಗಳ ಗಡಿಯನ್ನು ಗುರುತು ಮಾಡಿ ಕರ್ನಾಟಕ ರಾಜ್ಯಪತ್ರದಲ್ಲಿ ಸರಕಾರ ಆದೇಶ ಹೊರಡಿಸಿದ್ದು, ಬಿಬಿಎಂಪಿ ಕೇಂದ್ರ ಕಚೇರಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಕೇಂದ್ರ ಕಚೇರಿಯಾಗಿ ಮಾರ್ಪಾಡು ಮಾಡಲಾಗುವುದು ಎಂದು ತಿಳಿಸಿದೆ. ಆಗಸ್ಟ್ 11ರಿಂದ ಆರಂಭವಾಗುವ ಮುಂಗಾರು ಅಧಿವೇಶನದಲ್ಲಿ ಈ ಕುರಿತು ಚರ್ಚೆ ಮಾಡಿ, ಬಿಲ್ ಪಾಸ್ ಮಾಡಲು ಸರಕಾರ ಸಿದ್ಧತೆ ನಡೆಸಿದೆ. ಪಾಲಿಕೆಗಳ ರಚನೆ ಬಗ್ಗೆ ಆಕ್ಷೇಪಣೆ ಇದ್ದರೆ ಸಾರ್ವಜನಿಕರು ಸಲಹೆ ನೀಡುವಂತೆ ಸರಕಾರ ತಿಳಿಸಿದೆ.

5 ನಗರ ಪಾಲಿಕೆಗಳು ಯಾವುವು?
1) ಬೆಂಗಳೂರು ದಕ್ಷಿಣ ನಗರ ಪಾಲಿಕೆ
2) ಬೆಂಗಳೂರು ಉತ್ತರ ನಗರ ಪಾಲಿಕೆ
3) ಬೆಂಗಳೂರು ಕೇಂದ್ರ ನಗರ ಪಾಲಿಕೆ
4) ಬೆಂಗಳೂರು ಪಶ್ಚಿಮ ನಗರ ಪಾಲಿಕೆ
5) ಬೆಂಗಳೂರು ಪೂರ್ವ ನಗರ ಪಾಲಿಕೆ

ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾಗಿ ನೇಮಕಗೊಂಡಿರುವ ನ್ಯಾ.ವಿಭು ಬಖ್ರು ಅವರಿಗೆ ರಾಜ್ಯಪಾಲರ ಥಾವರ್ ಚಂದ್ರ ಗೆಹ್ಲೋಥ್ ಅವರು ಶನಿವಾರ ಪ್ರಮಾಣ ವಚನ ಬೋಧಿಸಿದರು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಡಿಸಿಎಂ ಡಿ.ಕೆ.ಶಿವಕುಮಾರ್, ಹೈಕೋರ್ಟ್ ಹಂಗಾಮಿ ನ್ಯಾಯಾಧೀಶ ವಿ.ಕಾಮೇಶ್ವರ ರಾವ್ ಸೇರಿದಂತೆ ಹಲವರಿದ್ದರು.

10 ವರ್ಷಕ್ಕೂ ಹೆಚ್ಚು ಕಾಲದಿಂದ ಬಾಕಿ ಉಳಿದಿರುವ ಕೆಲವು ಪ್ರಕರಣಗಳು

ಲೋಕಾಯುಕ್ತ: 22,328 ಪ್ರಕರಣಗಳ ವಿಚಾರಣೆ ಬಾಕಿ

ವಿಶ್ವವಾಣಿ ವಿಶೇಷ ಬೆಂಗಳೂರು

ರಾಜ್ಯ ಲೋಕಾಯುಕ್ತ ಸಂಸ್ಥೆಯಲ್ಲಿ ಸುಮಾರು 22,328ಕ್ಕೂ ಹೆಚ್ಚು ಪ್ರಕರಣಗಳು ವಿಚಾರಣೆಯಾಗದೇ ಕಡತಗಳು ಮೂಲೆ ಸೇರಿವೆ.

ಲೋಕಾಯುಕ್ತ ಸಂಸ್ಥೆ ಸದ್ಯಕ್ಕೆ ಹಳೆಯ ಪ್ರಕರಣಗಳ ಭಾರವನ್ನು ಹೊತ್ತುಕೊಂಡಿದೆ. ಲೋಕಾಯುಕ್ತ ನ್ಯಾ.ಬಿ.ಎಸ್.ಪಾಟೀಲ್ ಅವರ ಬಳಿ 6 ಸಾವಿರಕ್ಕೂ ಅಧಿಕ ಪ್ರಕರಣಗಳು ಬಾಕಿ ಇವೆ. 2023ರ ಏಪ್ರಿಲ್ 1ಕ್ಕೂ ಮೊದಲು 4,048 ಪ್ರಕರಣಗಳು ಬಾಕಿ ಇದ್ದವು. ನಂತರ 6,997 ಹೊಸ ಪ್ರಕರಣಗಳು ದಾಖಲಾಗಿದ್ದು, ಇದುವರೆಗೆ 184 ಪ್ರಕರಣಗಳು ವಿಲೇವಾರಿಯಾಗಿ, ಪ್ರಸ್ತುತ 6,997 ಪ್ರಕರಣಗಳು ಬಾಕಿ ಇವೆ. ಅದೇ ರೀತಿ, ಲೋಕಾಯುಕ್ತ-1 ನ್ಯಾ.ಕೆ.ಎನ್.ಫಣೀಂದ್ರ ಬಳಿ 67,767 ಪ್ರಕರಣಗಳು ಮತ್ತು ಲೋಕಾಯುಕ್ತ-2 ನ್ಯಾ.ಬಿ.ವೀರಪ್ಪ ಬಳಿ 8,555 ಪ್ರಕರಣಗಳು ಬಾಕಿ ಉಳಿದಿವೆ.

ಎಷ್ಟು ಪ್ರಕರಣಗಳು ಬಾಕಿ?

ವಿಭಾಗ	ಪ್ರಕರಣಗಳು
ಲೋಕಾಯುಕ್ತ	6,997
ಉಪ ಲೋಕಾಯುಕ್ತ 1	6,776
ಉಪ ಲೋಕಾಯುಕ್ತ 2	8,555
ಒಟ್ಟು	22,328

ಪ್ರತ್ಯೇಕ ಆಂತರಿಕ ನಿಗಾ ಘಟಕ ಪ್ರಸ್ತಾವನೆ ತಿರಸ್ಕಾರ

ಲೋಕಾಯುಕ್ತದಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಿಸಿ ಅಧಿಕಾರಿ ಹಾಗೂ ಸಿಬ್ಬಂದಿ ಮೇಲೆ ನಿಗಾ ಇಡಲು ಪ್ರತ್ಯೇಕ ಆಂತರಿಕ ನಿಗಾ ಘಟಕ ಸ್ಥಾಪಿಸಲು 24 ಅಧಿಕಾರಿ ಹಾಗೂ ಸಿಬ್ಬಂದಿ ಹುದ್ದೆಗಳನ್ನು ಸೃಷ್ಟಿಸುವಂತೆ ಎರಡು ಬಾರಿ ಸರಕಾರಕ್ಕೆ ಪತ್ರ ಬರೆಯಲಾಗಿದ್ದು, ಸರಕಾರವು ಪ್ರಸ್ತಾವನೆಯನ್ನು ತಿರಸ್ಕರಿಸಿದೆ. ಎಸಿಬಿ ರದ್ದುಗೊಂಡ ಬಳಿಕ ಲೋಕಾಯುಕ್ತಕ್ಕೆ ವರ್ಗಾವಣೆಯಾದ 2,159 ಪ್ರಕರಣಗಳ ಜತೆ 2022 ಸೆ.22ರಿಂದ ಈವರೆಗೂ ಕರ್ನಾಟಕದಲ್ಲಿ 205 ದಾಳಿ ಪ್ರಕರಣಗಳು, 645 ಟ್ರ್ಯಾಪ್ ಪ್ರಕರಣಗಳು ಹಾಗೂ 77 ಇತರ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ.

ಚುನಾಯಿತ ಪ್ರತಿನಿಧಿಗಳು ಮತ್ತು ಸರಕಾರಿ ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ತಡೆ ಕಾಯಿದೆಯಡಿ ಕರ್ನಾಟಕ ಲೋಕಾಯುಕ್ತದಲ್ಲಿ 1,228 ಪ್ರಕರಣಗಳು ಇತ್ಯರ್ಥವಾಗದೆ ಬಾಕಿ ಉಳಿದಿವೆ. ಕೆಲವು ಪ್ರಕರಣಗಳು 10 ವರ್ಷಕ್ಕೂ ಹೆಚ್ಚು ಕಾಲದಿಂದ ಬಾಕಿ ಉಳಿದಿವೆ. 1,228 ಪ್ರಕರಣಗಳಲ್ಲಿ 337 ಪ್ರಕರಣಗಳನ್ನು ಪ್ರಾಸಿಕ್ಯೂಷನ್‌ಗೆ ಮಂಜೂರಾತಿಗಾಗಿ ಕಳುಹಿಸಲಾಗಿದೆ. → 4

ಸೊಂಪಾದ ಪುಟಗಳು

ಸರಕಾರಿ ಕಚೇರಿಗಳಲ್ಲಿ ನನ್ನ ಫೋಟೋ ಬೇಡ ಎಂದ ಸೆನೆಗಲ್ ಅಧ್ಯಕ್ಷರು!
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6



ಕ್ರಿಕೆಟ್ ಕಾಶಿಯಲ್ಲಿ ಬಾಯಿತನಕ ಬಂದು ಕೈಜಾರಿದ ತುತ್ತು
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 7

ದಾರಿದೀಪೋಕ್ತಿ

ನಿಮ್ಮ ಸಂತೋಷ ಮತ್ತು ನೆಮ್ಮದಿಗೆ ನೀವೇ ಕಾರಣ. ಅವು ಸಿಗದಿದ್ದರೆ ಬೇರೆಯವರನ್ನು ಹೊಣೆಗಾರರನ್ನಾಗಿ ಮಾಡುವುದರಲ್ಲಿ ಅರ್ಥವಿಲ್ಲ. ನಿಮ್ಮ ನೆಮ್ಮದಿಯ ಉಸ್ತುವಾರಿ ಮತ್ತು ನೇತೃತ್ವ ನಿಮ್ಮದೇ.

ವಕ್ರತುಂಡೋಕ್ತಿ



ನಿಮ್ಮ ಉತ್ತರ ಪತ್ರಿಕೆ ಖಾಲಿ ಯಾಕೆ ಎಂದು ಟೀಚರ್ ಕೇಳಿದರೆ, ಮೌನವೇ ಅತ್ಯುತ್ತಮ ಉತ್ತರ ಎಂದು ಹೇಳಬಹುದು.

ಫನ್‌ತರಂಗ

– ರಘುಪತಿ ಶೃಂಗೇರಿ –

ಕೋಲ್ಡ್ ಪ್ಲೇ ಕಾರ್ಯಕ್ರಮದಲ್ಲಿ HR ಅಪ್ಪಿಕೊಂಡು ಪೇಚಿಗೆ ಸಿಲುಕಿದ ಸಿಇಓ
ಸುದ್ದಿ



23ರಿಂದ ಮೋದಿ ವಿದೇಶ ಪ್ರವಾಸ

ದೆಹಲಿ: ಜು.23ರಿಂದ 26ರವರೆಗೆ ಪ್ರಧಾನಿ ಮೋದಿ ಅವರು ಬ್ರಿಟನ್ ಮತ್ತು ಮಾಲ್ಡೀವ್‌ಗೆ ಭೇಟಿ ನೀಡಲಿದ್ದಾರೆ. ಈ ಭೇಟಿಯು ಭಾರತ-ಇಂಗ್ಲೆಂಡ್ ನಡುವಿನ ದ್ವಿಪಕ್ಷೀಯ ವಾಣಿಜ್ಯ ಒಪ್ಪಂದಕ್ಕೆ ಅಂತಿಮ ಸ್ವರೂಪ ನೀಡುವುದು ಹಾಗೂ ದ್ವಿಪಕ್ಷೀಯ ಸಂಬಂಧ ಮತ್ತಷ್ಟು ಗಟ್ಟಿಗೊಳಿಸುವ ಪ್ರಮುಖ ಗುರಿ ಹೊಂದಿದೆ. ಮೂರು ವರ್ಷಗಳ ಚರ್ಚೆಯ ಬಳಿಕ ಮೇ ತಿಂಗಳಲ್ಲಿ ಒಪ್ಪಂದಕ್ಕೆ ಅಂತಿಮ ರೂಪ ನೀಡಲಾಗಿದ್ದು, ಇದು ಭಾರತದ ಶೇ.99ರಷ್ಟು ರಫ್ತುಗಳ ಮೇಲಿನ ಸುಂಕವನ್ನು ತೆಗೆದುಹಾಕಲಿದೆ. ಇದರಿಂದ ಬ್ರಿಟಿಷ್ ಉತ್ಪನ್ನಗಳಾದ ವಿಸ್ಕಿ ಮತ್ತು ಆಟೋಮೊಬೈಲ್‌ಗಳಿಗೆ ಭಾರತದ ಮಾರುಕಟ್ಟೆಯಲ್ಲಿ ಸುಲಭ ಪ್ರವೇಶ ಸಿಗಲಿದೆ.

ವರದಿ ಪುಟ → 8

ಪರ್ಯಾಯ ಸ್ವಾಮೀಜಿ ನೇಮಿಸಲು ನಿರ್ಧಾರ

ಹುಬ್ಬಳ್ಳಿ: ಕೂಡಲ ಸಂಗಮದ ಲಿಂಗಾಯತ ಪಂಚಮಸಾಲಿ ಪೀಠಕ್ಕೆ ನೂತನ ಸ್ವಾಮೀಜಿಯನ್ನು ನೇಮಕ ಮಾಡಿಕೊಳ್ಳಲು ನಿರ್ಧರಿಸಲಾಗಿದ್ದು, ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರಾಗಿಯೇ ಪೀಠ ತೊರೆದರೆ ಸಂತೋಷ ಎಂದು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜದ ಟ್ರಸ್ಟ್ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಅವರ ವರ್ತನೆ, ನಡವಳಿಕೆಯಿಂದ ಸಮಾಜದ ಜನರು ಬೇಸತ್ತಿದ್ದಾರೆ. ಈ ಕುರಿತು ಸಮಾಜದ ಹಿರಿಯರು, ಮುಖಂಡರು, ಜನಪ್ರತಿನಿಧಿಗಳು ಸಭೆ ನಡೆಸಿ ಪರ್ಯಾಯ ಗುರುಗಳ ನೇಮಕದ ಬಗ್ಗೆ ಚರ್ಚಿಸಿದ್ದಾರೆ. ಆ ಕುರಿತು ವ್ಯವಸ್ಥೆ ಸಹ ನಡೆಯುತ್ತಿದೆ. ಈಗಿರುವ ಸ್ವಾಮೀಜಿಯನ್ನು ಮಠ ಬಿಟ್ಟು ಹೋಗಿ ಎಂದು ನಾವಾಗಿಯೇ ಹೇಳುವುದಿಲ್ಲ, ಅವರಾಗಿಯೇ ಹೋದರೆ ಸಂತೋಷ ಎಂದರು.

ಸ್ವಾಮೀಜಿ ಆಸ್ಪತ್ರೆಗೆ ದಾಖಲು

ಬಾಗಲಕೋಟೆ: ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಬಾಗಲಕೋಟೆಯ ಕೆರೂಡಿ ಆಸ್ಪತ್ರೆಗೆ ಶನಿವಾರ ದಾಖಲಾಗಿದ್ದಾರೆ. ತಲೆನೋವು, ವಾಂತಿ, ಎದೆನೋವು ತೊಂದರೆ ಕಾಣಿಸಿಕೊಂಡಿದ್ದರಿಂದ ಆಸ್ಪತ್ರೆಗೆ ದಾಖಲಾಗಿದ್ದಾರೆ. ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. 'ಆಹಾರದಲ್ಲಿ ವ್ಯತ್ಯಾಸವಾಗಿ ಆರೋಗ್ಯ ಏರುಪೇರಾಗಿದೆ. ಆತಂಕ ಪಡುವ ವಿಷಯವಿಲ್ಲ. ಸ್ವಾಮೀಜಿ ಆರೋಗ್ಯ ಚೆನ್ನಾಗಿದೆ' ಎಂದು ಪಂಚಮಸಾಲಿ ಸಮಾಜದ ಕಲಬುರಗಿ ಜಿಲ್ಲಾ ಅಧ್ಯಕ್ಷ ಮಲ್ಲನಗೌಡ ಪಾಟೀಲ ತಿಳಿಸಿದ್ದಾರೆ.

ವಿಶ್ವದ ದೊಡ್ಡ ಡ್ಯಾಂ ನಿರ್ಮಾಣಕ್ಕೆ ಚಾಲನೆ



ಬೀಜಿಂಗ್: ಭಾರತದಲ್ಲಿ ಬ್ರಹ್ಮಪುತ್ರ ಮತ್ತು ಟಿಬೆಟ್‌ನಲ್ಲಿ ಯಾರ್ಲಂಗ್ ಸಂಗ್ಪೊ ಎಂಬ ಹೆಸರಿನಲ್ಲಿ ಹರಿಯುವ ನದಿಗೆ ವಿಶ್ವದ ಅತಿ ದೊಡ್ಡ ಅಣೆಕಟ್ಟು ನಿರ್ಮಾಣಕ್ಕೆ ಚೀನಾ ಶನಿವಾರ ಚಾಲನೆ ನೀಡಿದೆ. ಅಣೆಕಟ್ಟಿನ ಗಾತ್ರದ ಲೆಕ್ಕಾಚಾರದಂತೆ ನದಿಯಿಂದ ದೊಡ್ಡ ಪ್ರಮಾಣ ದಲ್ಲಿ ನೀರು ಹರಿಸಿದರೆ, ಭಾರತ, ಬಾಂಗ್ಲಾದೇಶದಲ್ಲಿ ನದಿಯ ಕೆಳಭಾಗದಲ್ಲಿ ಪ್ರವಾಹ ಸ್ಥಿತಿ ತಲೆದೋರುವ ಸಾಧ್ಯತೆ ಇದೆ ಎನ್ನಲಾಗಿದೆ. ಆದರೆ, ಚೀನಾ ಇದನ್ನು ಅಲ್ಲಗಳೆದಿದೆ.

ಬೈರತಿ ಬಸವರಾಜ್ ವಿಚಾರಣೆಗೆ ಹಾಜರು

ಬೆಂಗಳೂರು: ರೌಡಿಶೀಟರ್ ಬಿಕ್ಲ ಶಿವ ಕೊಲೆ ಪ್ರಕರಣದಲ್ಲಿ ಎ5 ಆರೋಪಿ ಆಗಿರುವ ಕೆ.ಆರ್.ಪುರ ಬಿಜೆಪಿ ಶಾಸಕ ಬೈರತಿ ಬಸವರಾಜ್ ಭಾರತಿ ನಗರ ಪೊಲೀಸ್ ಠಾಣೆಗೆ ಹಾಜರಾಗಿ, ಸತತ ಮೂರೂವರೆ ಗಂಟೆ ವಿಚಾರಣೆ ಎದುರಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, 'ಕೊಲೆ ಪ್ರಕರಣದಲ್ಲಿ ವಿಚಾರಣೆಗೆ ಕರೆದಿದ್ದರು, ಪೊಲೀಸರು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಿ ದ್ದೇನೆ. ಇದರಲ್ಲಿ ನನ್ನ ಪಾತ್ರ ಇಲ್ಲ ಎಂದು ಹೇಳಿದ್ದೇನೆ ಎಂದರು.

ನಾಳೆಯಿಂದ ಸಂಸತ್ ಅಧಿವೇಶನ ಆರಂಭ



ದೆಹಲಿ: ಸೋಮವಾರದಿಂದ ಸಂಸತ್‌ನ ಮಳೆಗಾಲದ ಅಧಿವೇಶನ ಆರಂಭವಾಗಲಿದ್ದು, ಆಗಸ್ಟ್ 21ನೇ ತಾರೀಕಿನವರೆಗೂ ನಡೆಯಲಿದೆ. ಈ ಸಲದ ಸಂಸತ್ ಕಲಾಪವು ಆಡಳಿತ-ಪ್ರತಿಪಕ್ಷಗಳ ವಾದ- ಪ್ರತಿವಾದಗಳಿಗೆ ವೇದಿಕೆ ಯಾಗಲಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ಆಪರೇಷನ್ ಸಿಂದೂರ ಸೇನಾ ಕಾರ್ಯಾಚರಣೆ ಸೇರಿ ಹಲವಾರು ವಿಷಯಗಳು ಈ ಬಾರಿಯ ಕಲಾಪದಲ್ಲಿ ಚರ್ಚೆಯಾಗಲಿದೆ.

ವಾಯುಪ್ರದೇಶ ನಿರ್ಬಂಧ ವಿಸ್ತರಣೆ

ಇಸ್ಲಾಮಾಬಾದ್: ಭಾರತೀಯ ವಿಮಾನಗಳಿಗೆ ಪಾಕಿಸ್ತಾನದ ವಾಯುಪ್ರದೇಶ ನಿಷೇಧವನ್ನು ಆಗಸ್ಟ್ 24ರವರೆಗೆ ವಿಸ್ತರಿಸ ಲಾಗಿದೆ ಎಂದು ಪಾಕಿಸ್ತಾನದ ವಿಮಾನಯಾನ ಪ್ರಾಧಿಕಾರ ಹೇಳಿದೆ. ಇದರಿಂದಾಗಿ ಇಂಡಿಗೊ ಮತ್ತು ಏರ್ ಇಂಡಿಯಾ ವಿಮಾನಯಾನ ಸಂಸ್ಥೆಗಳು ತಾವು ನಿರ್ವಹಿಸುವ ಉತ್ತರ ಅಮೆರಿಕ, ಬ್ರಿಟನ್, ಯುರೋಪ್ ಮತ್ತು ಮಧ್ಯ ಪ್ರಾಚ್ಯ ರಾಷ್ಟ್ರಗಳಿಗೆ ಪರ್ಯಾಯ ಮಾರ್ಗದ ಮೂಲಕ ಪ್ರಯಾಣಿಸುವುದಾಗಿ ಹೇಳಿವೆ.

ಆ.11-22ರ ವರೆಗೆ ಮುಂಗಾರು ಅಧಿವೇಶನ

ಬೆಂಗಳೂರು: ಆಗಸ್ಟ್ 11 ರಿಂದ 22ರವರೆಗೆ 9 ದಿನ ರಾಜ್ಯ ಮುಂಗಾರು ಅಧಿವೇಶನ ನಡೆಯಲಿದೆ. ಈ ಸಂಬಂಧ ಅಧಿಸೂಚನೆ ಹೊರಡಿಸಲಾಗಿದ್ದು, ಆಗಸ್ಟ್ 11 ರಂದು ಬೆಳಗ್ಗೆ 11 ಗಂಟೆಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರು ವಿಧಾನಸಭೆ ಹಾಗೂ ವಿಧಾನ ಪರಿಷತ್‌ನ ಜಂಟಿ ಅಧಿವೇಶ ವನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ. ಕರ್ನಾಟಕ ರೋಹಿತ್ ವೇಮುಲಾ ಮಸೂದೆ, ಕರ್ನಾಟಕ ತಪ್ಪು ಮಾಹಿತಿ, ಸುಳ್ಳು ಸುದ್ದಿ ನಿಷೇಧ ಮಸೂದೆ, ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ತಡೆ ಮಸೂದೆ ಸೇರಿದಂತೆ ಹಲವು ಮಸೂದೆಗಳು ಅಧಿವೇಶನದಲ್ಲಿ ಮಂಡನೆ ಯಾಗುವ ನಿರೀಕ್ಷೆಯಿದೆ.

ಭೂಸ್ವಾಧೀನ: 1 ಲಕ್ಷ ಕೋಟಿ ರು. ನಷ್ಟ



ಬೆಂಗಳೂರು: ಅಧಿಕಾರಿಗಳ ಬೇಜವಾಬ್ದಾರಿಯಿಂದ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿಯೇ ಒಂದು ಲಕ್ಷ ಕೋಟಿ ರು. ಸರಕಾರಕ್ಕೆ ನಷ್ಟವಾಗಲಿದ್ದು, ಇದಕ್ಕೆ ಹೊಣೆ ಯಾರು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಕಿಡಿಕಾರಿದ್ದಾರೆ. ರಾಜ್ಯದ ಎಲ್ಲ ಉಪ ವಿಭಾಗಾಧಿಕಾರಿಗಳಿಗೆ ಶನಿವಾರ ಏರ್ಪಡಿಸಿದ್ದ ಭೂಸ್ವಾಧೀನ ಹಾಗೂ ನ್ಯಾಯಾಲಯ ಪ್ರಕರಣಗಳ ವ್ಯವಹರಣೆ ಕುರಿತ ವಿಶೇಷ ಕಾರ್ಯಾಗಾರದಲ್ಲಿ ಮಾತನಾಡಿ, ಕೃಷ್ಣಾ ಮೇಲ್ದಂಡೆ ಯೋಜನೆಯ ಭೂಸ್ವಾಧೀನಕ್ಕೆ ಕ್ಯಾಬಿನೆಟ್‌ನಲ್ಲಿ ಒಪ್ಪಿಗೆ ಪಡೆದಿರುವ ಹಣ 17,000 ಕೋಟಿ. ಯೋಜನೆಯ ಅಂದಾಜು ಒಟ್ಟು ವೆಚ್ಚ 51,000 ಕೋಟಿ. ಆದರೆ, ಭೂ ಸ್ವಾಧೀನಕ್ಕೆ ಮಾತ್ರ 2.01 ಲಕ್ಷ ಕೋಟಿ ರು ಹಣ ಸರಕಾರದ ಬೊಕ್ಕಸದಿಂದ ಕರಗಿಹೋಗುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಕಲ್ಯಾಣಿಯಲ್ಲಿ ಬಿದ್ದ ಬಾಲಕ ಸಾವು

ಆನೇಕಲ್: ಶೈಲರ್‌ನಲ್ಲಿ ಚಲಿಸುವಾಗ ಆಯತಪ್ಪಿ ಕಲ್ಯಾಣಿಗೆ ಬಿದ್ದ ಬಾಲಕನೊಬ್ಬ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ಘಟನೆ ಸರ್ಜಾಪುರ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಸರ್ಜಾಪುರ ಟೌನ್ ವಾಸಿ ಮಹಮದ್ ರೈಯಾನ್ (14) ಮೃತ ಬಾಲಕ. ಸುಬ್ಬಯ್ಯನ ತೋಟ ರಸ್ತೆಯಲ್ಲಿರುವ ಕಲ್ಯಾಣಿಯಲ್ಲಿ ಘಟನೆ ನಡೆದಿದ್ದು, ಅಗ್ನಿಶಾಮಕ ಠಾಣೆ ಸಿಬ್ಬಂದಿ ಶೋಧ ಕಾರ್ಯಾ ನಡೆಸಿ ಬಾಲಕನ ಮೃತದೇಹ ಹೊರತೆಗೆದಿದ್ದಾರೆ. ಈ ಸಂಬಂಧ ಸರ್ಜಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಶವವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

40 ಕೋಟಿ ಮೌಲ್ಯದ ಕೋಕೇನ್ ಜಪ್ತಿ

ಬೆಂಗಳೂರು: ವಿದೇಶದಿಂದ ಬೆಂಗಳೂರಿಗೆ ಸರಬರಾಜು ಮಾಡುತ್ತಿದ್ದ 40 ಕೋಟಿ ಮೌಲ್ಯದ ಕೊಕೇನ್ ಡ್ರಗ್ಸ್ ಅನ್ನು ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಜಪ್ತಿ ಮಾಡಲಾಗಿದೆ. 40 ಕೋಟಿ ಮೌಲ್ಯದ 4 ಕೆಜಿ ಕೊಕೇನ್ ಅನ್ನು ಡಿಆರ್‌ಐ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಭಾರತ ಮೂಲದ ಪ್ರಯಾಣಿಕ ನೋರ್ವ ದೋಹಾದಿಂದ ಬೆಂಗಳೂರಿಗೆ ಬಂದಿದ್ದ. ಪ್ರಯಾಣಿಕನ ಬ್ಯಾಗೇಜ್ ಅನ್ನು ಡಿಆರ್‌ಐ ಅಧಿಕಾರಿಗಳು ತಪಾಸಣೆ ನಡೆಸಿದ ವೇಳೆ ಬಳಕೆ ಮಾಡದ ಎರಡು ಸೂಪರ್ ಹೀರೋ ಕಾಮಿಕ್ಸ್/ಮ್ಯಾಗಜೀನ್ಸ್ ಪತ್ತೆಯಾಗಿದೆ. ಮ್ಯಾಗಜೀನ್ ಕವರ್ ಮೇಲೆ ಸೀಲ್ ಮಾಡಿದ ರೀತಿಯಲ್ಲಿದ್ದ ಕೊಕೇನ್ ಪೌಡರ್ ಪತ್ತೆಯಾಗಿದೆ. ಈ ಹಿನ್ನೆಲೆ ಡಿಆರ್‌ಐ ಅಧಿಕಾರಿಗಳು ಬಿಳಿ ಬಣ್ಣದ ಪೌಡರ್ ಅನ್ನು ಪರೀಕ್ಷೆಗೆ ಒಳಪಡಿಸಿದ್ದಾರೆ. ಪರೀಕ್ಷೆ ವೇಳೆ ಕೊಕೇನ್ ಎಂದು ಪಾಸಿಟಿವ್ ರಿಪೋರ್ಟ್ ಬಂದಿದೆ. ಬಳಿಕ ಡಿಆರ್‌ಐ ಅಧಿಕಾರಿಗಳು ಮ್ಯಾಗಜೀನ್ ಕವರ್ ಮೇಲಿದ್ದ ಕೊಕೇನ್ ಸಂಗ್ರಹಿಸಿ ಸುಮಾರು 4 ಕೆಜಿಯಷ್ಟು ಕೊಕೇನ್ ಜಪ್ತಿ ಮಾಡಿದ್ದಾರೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ 40 ಕೋಟಿ ರು. ಮೌಲ್ಯದ ಕೊಕೇನ್ ಅನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದು, ಕೊಕೇನ್ ಸಾಗಾಟ ಮಾಡಿದ್ದ ಪ್ರಯಾಣಿಕನನ್ನು ಬಂಧಿಸಿದ್ದಾರೆ. ಎನ್‌ಡಿಪಿಎಸ್ ಆಕ್ಟ್ ಅಡಿಯಲ್ಲಿ ಪ್ರಯಾಣಿಕನನ್ನು ಡಿಆರ್‌ಐ ಅಧಿಕಾರಿಗಳು ಬಂಧಿಸಿದ್ದಾರೆ. ವಿಚಾರಣೆ ನಡೆಸಿದ ನ್ಯಾಯಾಲಯ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ನೀಡಿದೆ.

ಸೋರಿಕೆ ತಡೆಯಲು ಸಿಎಂ ಸೂಚನೆಯ ಬೆನ್ನಲ್ಲೇ ಎಚ್ಚೆತ್ತ ಅಧಿಕಾರಿಗಳು | ಮೊದಲ ತ್ರೈಮಾಸಿಕದಲ್ಲಿ ಗುರಿ ತಲುಪದ ವಾಣಿಜ್ಯ ತೆರಿಗೆ ಆದಾಯ

ಗುರಿ ತಲುಪಲು ಸಣ್ಣ ವ್ಯಾಪಾರಿಗಳಿಗೆ ನೋಟಿಸ್?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೀದಿಬದಿ, ಸಣ್ಣ ಪುಟ್ಟ ವ್ಯಾಪಾರಿಗಳಿಗೆ ಲಕ್ಷಾಂತರ ರುಪಾಯಿ ಮೌಲ್ಯದ ಜಿಎಸ್‌ಟಿ ಪಾವತಿಸುವಂತೆ ರಾಜ್ಯ ವಾಣಿಜ್ಯ ಇಲಾಖೆ ನೋಟಿಸ್ ನೀಡಿರುವುದು ಭಾರಿ ವಿವಾದಕ್ಕೆ ಕಾರಣವಾಗಿದೆ. ಆದರೆ ನಿಗದಿಯಾಗಿದ್ದ ಗುರಿ ತಲುಪದಿರುವುದು, ಈ ಪ್ರಮಾಣದಲ್ಲಿ ನೋಟಿಸ್ ಜಾರಿಗೊಳಿಸಲು ಒಂದು ಕಾರಣ ಎನ್ನುವ ಮಾತುಗಳು ಕೇಳಿಬರುತ್ತಿವೆ.

ವಾಣಿಜ್ಯ ಇಲಾಖೆ ಬೆಂಗಳೂರಿನಲ್ಲಿ 40 ಲಕ್ಷ ರು. ವಹಿವಾಟು ನಡೆಸಿದ ಸಣ್ಣಪುಟ್ಟ ವ್ಯಾಪಾರಿಗಳಿಗೆ ಜಿಎಸ್‌ಟಿ ಪಾವತಿಸುವಂತೆ ನೋಟಿಸ್ ನೀಡಿದೆ. 2021-22ರಿಂದ 2024-25ರ ವರೆಗೆ ಪ್ರತಿ ವರ್ಷ 40 ಲಕ್ಷ ರು.ಗಳಿಗಿಂತ ಹೆಚ್ಚಿನ ವ್ಯಾಪಾರ ವಹಿವಾಟು ನಡೆಸಿದವರಿಗೆ ನೋಟಿಸ್ ಜಾರಿಯಾಗಿದೆ. 40 ಲಕ್ಷದಿಂದ 1 ಕೋಟಿವರೆಗೆ ದಂಡ ಸಮೇತ ಜಿಎಸ್‌ಟಿ ಕಟ್ಟುವಂತೆ ತಿಳಿಸಲಾಗಿದ್ದು, ವ್ಯಾಪಾರಸ್ಥರು ಕಂಗೆಟ್ಟುಹೋಗಿದ್ದಾರೆ.

ಸಣ್ಣಪುಟ್ಟ ಅಂಗಡಿಗಳು ಫೋನ್ ಪೇ, ಗೂಗಲ್ ಪೇ, ಆನ್‌ಲೈನ್ ಪೇಮೆಂಟ್ ಮೂಲಕ ವಹಿವಾಟು ನಡೆಸುತ್ತಾರೆ. ಈ ಆನ್‌ಲೈನ್ ಪಾವತಿಯಲ್ಲಿನ ವಹಿವಾಟು ಆಧಾರದಲ್ಲಿ ವಾಣಿಜ್ಯ ಇಲಾಖೆ ನೋಟಿಸ್ ನೀಡುತ್ತಿದೆ. ಸಮಗ್ರ ವಹಿವಾಟು ಒಂದು ಹಣಕಾಸು ವರ್ಷದಲ್ಲಿ 40 ಲಕ್ಷ ಮೀರಿದರೆ, ಅಥವಾ ಸೇವೆಗಳ ಪೂರೈಕೆದಾರರ ಸಮಗ್ರ ವಹಿವಾಟು ಒಂದು ಹಣಕಾಸು ವರ್ಷದಲ್ಲಿ 20 ಲಕ್ಷ ರುಪಾಯಿಗಳನ್ನು ಮೀರಿದರೆ ಜಿಎಸ್‌ಟಿ ನೋಂದಣಿ ಪಡೆಯುವುದು ಕಡ್ಡಾಯವಾಗಿದೆ. ವಾಣಿಜ್ಯ ತೆರಿಗೆಗಳ ಇಲಾಖೆಯು ಯುಪಿಐ ಮೂಲಕ ವರ್ತಕರು 2021-22ರಿಂದ 2024-25ರ ಸಾಲಿನಲ್ಲಿ ಸ್ವೀಕರಿಸಿರುವ ಹಣದ ವಿವರಗಳನ್ನು ವಿವಿಧ ಯುಪಿಐ ಸೇವೆಗಳ ಪೂರೈಕೆದಾರರಿಂದ ಸಂಗ್ರಹಿಸಿದೆ.

ವಾಣಿಜ್ಯ ಇಲಾಖೆ ಈಗಾಗಲೇ ನೀಡಿರುವ ವಿವರಣೆಯಂತೆ, ಈಗಾಗಲೇ ರಾಜ್ಯದಲ್ಲಿ 98,915 ವರ್ತಕರು ರಾಜಿ ತೆರಿಗೆ ಪದ್ಧತಿಯಡಿ ನೋಂದಣಿ ಪಡೆದು ವ್ಯಾಪಾರ ನಡೆಸುತ್ತಿದ್ದಾರೆ. ಈಗಾಗಲೇ ವಾರ್ಷಿಕ ವಹಿವಾಟು 40 ಲಕ್ಷ ರೂ. (ಸರಕುಗಳ ಪೂರೈಕೆದಾರರು) ಹಾಗೂ 20 ಲಕ್ಷ ರೂ. (ಸೇವೆಗಳ ಪೂರೈಕೆದಾರರು) ಮೀರಿರುವ ನೋಂದಣಿ ಪಡೆಯದೇ ಇರುವ ವರ್ತಕರಿಗೆ ನೋಟಿಸ್ ನೀಡುವ ಪ್ರಕ್ರಿಯೆ ನಡೆಯುತ್ತಿದೆ ಎಂದು ತಿಳಿಸಲಾಗಿದೆ.

ನೋಂದಾಯಿತ ವರ್ತಕರು ಇನ್ನುಮುಂದೆ ರಾಜಿ ತೆರಿಗೆ ಪದ್ಧತಿಯಡಿ ಶೇ.1ರಂತೆ ತೆರಿಗೆ ಪಾವತಿಸುವುದು ಕಷ್ಟವಾಗುವುದಿಲ್ಲ. ಈಗಾಗಲೇ ಶೇ.90ರಷ್ಟು ವರ್ತಕರು ರಾಜಿ ತೆರಿಗೆ ಪದ್ಧತಿಯಡಿ ತೆರಿಗೆ ಪಾವತಿಸುತ್ತಿರುವುದರಿಂದ ಉಳಿದ ಶೇ.10ರಷ್ಟು ವರ್ತಕರು ತೆರಿಗೆ ಪಾವತಿಸದಿರುವುದು ಸಮಂಜಸವಲ್ಲ. ಜೊತೆಗೆ, ಇಲಾಖೆಯು ನೋಟಿಸ್ ನೀಡಿದ ಬೆನ್ನಲ್ಲೇ ಕೆಲವು ವರ್ತಕರು ಯುಪಿಐ ಮೂಲಕ ಹಣ ಪಡೆಯುವುದನ್ನು ನಿಲ್ಲಿಸಿ, ಗ್ರಾಹಕರಿಂದ ನಗದು ರೂಪದಲ್ಲಿ ಹಣ ಸ್ವೀಕರಿಸುತ್ತಿರುವುದನ್ನು ಗಮನಿಸಲಾಗಿದೆ. ವ್ಯಾಪಾರಿಗಳು ಯಾವುದೇ ರೂಪದಲ್ಲಿ ಹಣ ಪಡೆದಿದ್ದರೂ ಜಿಎಸ್‌ಟಿ ಅನ್ವಯವಾಗುತ್ತದೆ ಎಂದು ಇಲಾಖೆ ಸ್ಪಷ್ಟಪಡಿಸಿದೆ.

ರಾಜ್ಯದಲ್ಲಿ 40 ಸಾವಿರ ಯುಪಿಐ ದಾಖಲೆಗಳನ್ನು ಕಲೆಹಾಕಲಾಗಿದೆ. ಆ ಪೈಕಿ 40 ಲಕ್ಷ ರು. ವಹಿವಾಟು ದಾಟಿದ ಆರು ಸಾವಿರ ಮಾಲೀಕರಿಗೆ ನೋಟಿಸ್ ನೀಡಲಾಗಿದೆ. ವಾರ್ಷಿಕ 40 ಲಕ್ಷಕ್ಕಿಂತ ಹೆಚ್ಚಿನ ವಹಿವಾಟುದಾರರು ಜಿಎಸ್‌ಟಿ ನೋಂದಣಿ ಮಾಡಿಕೊಳ್ಳಬೇಕು. ಹೂ, ಹಣ್ಣು, ಹಾಲು ಸೇರಿ ಮೊದಲಾದ ಉತ್ಪನ್ನಗಳು ಜಿಎಸ್‌ಟಿ ವ್ಯಾಪ್ತಿಗೆ ಬರುವುದಿಲ್ಲ. ಇಂಥವರಿಗೆ ನೋಟಿಸ್ ಬಂದಿದ್ದರೆ ಆ ವ್ಯಾಪಾರಿಗಳು ಸ್ಪಷ್ಟೀಕರಣ ನೀಡಬಹುದು. ಆದರೆ ಹಾಲು, ಬ್ರೆಡ್ ಮಾರಾಟ, ತರಕಾರಿ ಮಾರಾಟದ ಬಗ್ಗೆ ದಾಖಲೆ ನೀಡಿದರೆ ಬಡ್ಡಿಯನ್ನು ಮನ್ನಾ ಮಾಡಲಾಗುವುದು.

-ಚಂದ್ರಶೇಖರ್ ನಾಯಕ್, ವಾಣಿಜ್ಯ ತೆರಿಗೆ ಇಲಾಖೆ ಹೆಚ್ಚುವರಿ ಆಯುಕ್ತ

ಸೋರಿಕೆ ತಡೆಯಲು ಸಿಎಂ ಖಡಕ್ ಎಚ್ಚರಿಕೆ

ಇತ್ತೀಚೆಗೆ, ಸಿಎಂ ಸಿದ್ದರಾಮಯ್ಯ ಅವರು ತೆರಿಗೆ ಸಂಗ್ರಹ ಇಲಾಖೆಗಳ ಸಭೆಯಲ್ಲಿ ತೆರಿಗೆ ಸಂಗ್ರಹ ಗುರಿ ಮುಟ್ಟುವಂತೆ ಖಡಕ್ ಎಚ್ಚರಿಕೆ ನೀಡಿದ್ದರು. ಅಧಿಕಾರಿಗಳು ಬಜೆಟ್ ಗುರಿ ಮುಟ್ಟದೇ ಇದ್ದರೆ ಹಾಗೂ ಹೊಣೆಗಾರಿಕೆ ಮರೆತರೆ ಖಂಡಿತವಾಗಿಯೂ ಕಠಿಣ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ತಿಳಿಸಿದ್ದರು. ಇದಕ್ಕೂ ಮೊದಲು 2025-26 ಸಾಲಿನ ಬಜೆಟ್‌ನಲ್ಲಿ ಸಿಎಂ ಸಿದ್ದರಾಮಯ್ಯ ಅವರು 1,20,000 ಕೋಟಿ ರು. ವಾಣಿಜ್ಯ ತೆರಿಗೆ ಸಂಗ್ರಹದ ಗುರಿ ನಿಗದಿಪಡಿಸಿದ್ದಾರೆ. ಆದರೆ, ಬಜೆಟ್ ವರ್ಷದ ಮೊದಲ ತ್ರೈಮಾಸಿಕ ಮುಕ್ತಾಯವಾಗಿದ್ದು, ಗುರಿಯಂತೆ ವಾಣಿಜ್ಯ ತೆರಿಗೆ ಸಂಗ್ರಹ ಸಾಧ್ಯವಾಗಿಲ್ಲ. ಗುರಿ ತಲುಪಲು ಸಿಎಂ ಖಡಕ್ ಸೂಚನೆ ಕೊಟ್ಟಿದ್ದರೂ ನಿರೀಕ್ಷಿತ ಪ್ರಮಾಣದಲ್ಲಿ ತೆರಿಗೆ ಸಂಗ್ರಹ ಸಾಧ್ಯವಾಗುತ್ತಿಲ್ಲ. ವಾಣಿಜ್ಯ ಇಲಾಖೆ ನೀಡಿದ ಅಂಕಿ-ಅಂಶದಂತೆ, ಮೊದಲ ತ್ರೈಮಾಸಿಕದಲ್ಲಿ ವಾಣಿಜ್ಯ ತೆರಿಗೆ ರೂಪದಲ್ಲಿ ಒಟ್ಟು 26,241 ಕೋಟಿ ಸಂಗ್ರಹ ಮಾಡಿದೆ. ಈ ಪೈಕಿ ಜಿಎಸ್‌ಟಿ ರೂಪದಲ್ಲಿ 19,083 ಕೋಟಿ ರು., ತೈಲ ಮೇಲಿನ ಮಾರಾಟ ತೆರಿಗೆ ರೂಪದಲ್ಲಿ 6,727 ಕೋಟಿ ರು. ಹಾಗೂ ವೃತ್ತಿ ತೆರಿಗೆ ರೂಪದಲ್ಲಿ 431 ಕೋಟಿ ಸಂಗ್ರಹವಾಗಿದೆ. ಬಜೆಟ್ ಗುರಿಯಂತೆ, ಮಾಸಿಕ 10,000 ಕೋಟಿ ರು. ವಾಣಿಜ್ಯ ತೆರಿಗೆ ಸಂಗ್ರಹ ಮಾಡಬೇಕಾಗಿದೆ. ಆದರೆ, ಮೊದಲ ತ್ರೈಮಾಸಿಕದಲ್ಲಿ ಸರ್ಕಾರ ಸರಾಸರಿ 8,700 ಕೋಟಿ ರೂ. ವಾಣಿಜ್ಯ ತೆರಿಗೆ ಸಂಗ್ರಹಿಸಲು ಸಾಧ್ಯವಾಗಿದೆ.

ಸೋರಿಕೆ ತಡೆದು ಗುರಿ ಸಾಧಿಸಲು ಮುಂದಾದ ವಾಣಿಜ್ಯ ತೆರಿಗೆ ಇಲಾಖೆ

ಬಜೆಟ್ ಗುರಿ ತಲುಪಲು ಹಿಂದೆ ಬಿದ್ದಿರುವ ವಾಣಿಜ್ಯ ಇಲಾಖೆ ಇದೀಗ ಸೋರಿಕೆ ತಡೆಗೆ ಮುಂದಾಗಿದೆ. ಅದರ ಭಾಗವಾಗಿಯೇ ಸಣ್ಣ ವ್ಯಾಪಾರಿಗಳಿಗೆ ಜಿಎಸ್‌ಟಿ ತೆರಿಗೆ ನೋಟಿಸ್ ನೀಡಲಾಗುತ್ತಿದೆ. 40 ಲಕ್ಷ ವಾಹಿವಾಟು ನಡೆಸಿ ತೆರಿಗೆ ಕಟ್ಟದ ವ್ಯಾಪಾರಿಗಳಿಗೆ ನೋಟಿಸ್ ನೀಡುತ್ತಿದೆ. ತೆರಿಗೆ ಸೋರಿಕೆಯನ್ನು ಗಂಭೀರವಾಗಿ ಪರಿಗಣಿಸಿರುವ ಇಲಾಖೆಯು ಜಿಎಸ್‌ಟಿ ಕಾಯ್ದೆಯಂತೆ 40 ಲಕ್ಷ ಮೀರಿ ವಹಿವಾಟು ನಡೆಸಿದರೂ ಜಿಎಸ್‌ಟಿ ನೋಂದಣಿ ಮಾಡದ ವ್ಯಾಪಾರಿಗಳಿಗೆ ನೋಟಿಸ್ ನೀಡಿ, ಜಿಎಸ್‌ಟಿ ಪಾವತಿಸಲು ತಿಳಿಸಿದೆ. ಈ ಸಂಬಂಧ 40 ಲಕ್ಷ ವಹಿವಾಟು ದಾಟಿದ 6 ಸಾವಿರ ವ್ಯಾಪಾರಿಗಳಿಗೆ ಈವರೆಗೆ ನೋಟಿಸ್ ನೀಡಲಾಗಿದೆ ಎಂದು ವಾಣಿಜ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಈ ಸೋರಿಕೆ ತಡೆದು ಬಜೆಟ್ ಗುರಿ ಮೀರಿ ವಾಣಿಜ್ಯ ತೆರಿಗೆ ಸಂಗ್ರಹ ಮಾಡುವ ಉದ್ದೇಶ ಅಧಿಕಾರಿಗಳದ್ದಾಗಿದೆ.

ರೌಡಿಶೀಟರ್ ಹತ್ಯೆ: ಐವರ ಬಂಧನ

ಬೆಂಗಳೂರು: ಚಿಕ್ಕಮ್ಮನನ್ನು ಭೇಟಿಯಾಗಲು ಬಂದಿದ್ದ ರೌಡಿಶೀಟರ್‌ನನ್ನು ಮಾರಕಾಸ್ತ್ರಗಳಿಂದ ಹೊಡೆದು ಬರ್ಬರವಾಗಿ ಹತ್ಯೆಗೈದಿದ್ದ ಐವರು ಆರೋಪಿಗಳನ್ನ ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶಫೀಕ್ (25), ಇರ್ಫಾನ್ ಪಾಶಾ (27), ಶೇಕ್ ಸದ್ದಾಂ (27), ಇಮ್ರಾನ್ ಖಾನ್ (27) ಹಾಗೂ ಯತೀಶ್ (29) ಬಂಧಿತ ಆರೋಪಿಗಳು. ಜೂನ್ 17ರಂದು ರಾತ್ರಿ ಅನ್ನಸಂದ್ರಪಾಳ್ಯದಲ್ಲಿ ಮೊಹಮ್ಮದ್ ನಯೀಂ (26) ಎಂಬಾತನ ಮೇಲೆ ಮಾರಕಾಸ್ತ್ರಗಳಿಂದ ದಾಳಿ ನಡೆಸಿ ಆರೋಪಿಗಳು ಪರಾರಿಯಾಗಿದ್ದರು. ತೀವ್ರವಾಗಿ ಗಾಯಗೊಂಡಿದ್ದ ನಯೀಂನನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಒಂದು ವಾರಗಳ ಬಳಿ ಚಿಕಿತ್ಸೆ ಫಲಕಾರಿಯಾಗದೇ ಆತ ಸಾವನ್ನಪ್ಪಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಹತ್ಯೆ, ದರೋಡೆ ಪ್ರಕರಣಗಳ ಆರೋಪಿಯಾಗಿದ್ದ ನಯೀಂ ವಿರುದ್ಧ ರೌಡಿಶೀಟ್ ತೆರೆಯಲಾಗಿತ್ತು. ಇತ್ತೀಚಿಗೆ ಆಟೋ ಚಾಲನೆಯ ಜತೆಗೆ ಕೋಳಿ ಅಂಗಡಿ ಆರಂಭಿಸಿದ್ದ ನಯೀಂ ನೀಲಸಂದ್ರದಲ್ಲಿ ವಾಸವಾಗಿದ್ದ. ಆರೋಪಿ ಶಫೀಕ್‌ನ ಮೇಲೆ ಈ ಹಿಂದೆ ಹಲ್ಲೆ ಮಾಡಿದ್ದ ನಯೀಂನ ವಿರುದ್ಧ ಪ್ರಕರಣ ದಾಖಲಾಗಿತ್ತು. ಜೂನ್ 17ರಂದು ರಾತ್ರಿ ಅನ್ನಸಂದ್ರಪಾಳ್ಯಕ್ಕೆ ಬಂದಿದ್ದ ನಯೀಂ, ತನ್ನ ಚಿಕ್ಕಮ್ಮನನ್ನ ಭೇಟಿಯಾಗಿ ವಾಪಸ್ ತೆರಳಬೇಕು ಎನ್ನುವಷ್ಟರಲ್ಲಿ ಶಫೀಕ್ ಮತ್ತು ಆತನ ತಂಡ ನಯೀಂ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿತ್ತು. ಬಳಿಕ ಆತನ ತಂದೆ ಮೊಹಮ್ಮದ್ ಇಸ್ಮಾಯಿಲ್ ಎಚ್‌ಎಎಲ್ ಠಾಣೆಗೆ ದೂರು ನೀಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತ ಆರೋಪಿಗಳಲ್ಲಿ ಕೆಲವರು ಸಣ್ಣಪುಟ್ಟ ಕಳ್ಳತನ, ರಾಬರಿ ಪ್ರಕರಣಗಳಲ್ಲಿ ಆರೋಪಿಗಳಾಗಿದ್ದಾರೆ. ಶಫೀಕ್ ವಿರುದ್ಧ ಎಚ್‌ಎಎಲ್ ಹಾಗೂ ಬೈಯ್ಯಪ್ಪನಹಳ್ಳಿ ಠಾಣೆಗಳಲ್ಲಿ ಒಟ್ಟು 7 ಪ್ರಕರಣಗಳು ದಾಖಲಾಗಿದ್ದು, ರೌಡಿಶೀಟ್ ತೆರೆಯಲು ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಎಚ್‌ಎಎಲ್ ಠಾಣೆ ಪೊಲೀಸರು ಹೇಳಿದ್ದಾರೆ.

ಜಿಎಸ್‌ಟಿ ಬರೆ: ಸಿಎಂ ಪ್ರವೇಶಿಸಲಿ

ಬೆಂಗಳೂರು: ಕರ್ನಾಟಕದಲ್ಲಿ ಸಣ್ಣ ಮತ್ತು ಅತಿ ಸಣ್ಣ ವ್ಯಾಪಾರಸ್ಥರಿಗೆ ರಾಜ್ಯ ಸರಕಾರದ ವಾಣಿಜ್ಯ ತೆರಿಗೆ ಇಲಾಖೆ ಜಿಎಸ್‌ಟಿ ಶಾಕ್ ಕೊಟ್ಟಿರುವಂಥದ್ದು ಖಂಡನೀಯ. ಜಿಎಸ್‌ಟಿ ಕಾನೂನು ಅಡಿಯಲ್ಲಿ ವ್ಯಾಪಾರ ವಹಿವಾಟು ಮಾಡಲು ಕೆಲವು ರಿಯಾಯಿತಿ ಇದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಈ ವಿಚಾರದಲ್ಲಿ ಮಧ್ಯ ಪ್ರವೇಶ ಮಾಡಿ ಕೂಡಲೇ ಸಣ್ಣ ವ್ಯಾಪಾರಸ್ಥರಿಗೆ ಪರಿಹಾರ ಒದಗಿಸಬೇಕೆಂದು ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಸಣ್ಣ ಮತ್ತು ಅತಿ ಸಣ್ಣ ವ್ಯಾಪಾರಿಗಳ ವಿಚಾರದಲ್ಲಿ ರಾಜ್ಯ ವಾಣಿಜ್ಯ ತೆರಿಗೆ ಇಲಾಖೆ ದುಡುಕಿ ಹಲವು ವರ್ಷದ ತೆರಿಗೆ ಅದರ ಮೇಲೆ ಬಡ್ಡಿ ಮತ್ತು ಇತರ ಚಾರ್ಜ್ ಹಾಕಿ ಸಣ್ಣ ಬೀದಿ ಬದಿ ವ್ಯಾಪಾರಸ್ಥರ ಮೇಲೆ ದೊಡ್ಡ ಹೊರೆ ಹೊರೆಸಿ ಅವರು ವ್ಯಾಪಾರ ಮುಚ್ಚುವ ಪರಿಸ್ಥಿತಿಗೆ ತಂದಿರುವುದು ಯಾರೂ ಕೂಡ ಒಪ್ಪಲು ಸಾಧ್ಯವಿಲ್ಲ. ಈ ಸಂಬಂಧ ಪಟ್ಟ ಸಣ್ಣ ವ್ಯಾಪಾರಿಗಳ ಪ್ರತಿನಿದಿಗಳನ್ನು ಕರೆದು ಚರ್ಚೆ ಮಾಡಿ ಅವರಿಗೆ ಎಲ್ಲ ರೀತಿಯ ರಿಯಾಯಿತಿ ಕೊಟ್ಟು ಕರ ಸಮಾಧಾನ ಯೋಜನೆ ಅಡಿಯಲ್ಲಿ ಯಾವ ರೀತಿ ತೆರಿಗೆದಾರರಿಗೆ ಸಹಾಯ ಮಾಡುತ್ತೇವೊ ಅದೇ ರೀತಿ ಅವರಿಗೂ ಸಹಾಯ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ರಾಜ್ಯದಲ್ಲಿ ಹಣಕಾಸಿನ ತೊಂದರೆಯಾಗಿ ಬೊಕ್ಕಸ ಖಾಲಿಯಾಗಿರುವುದು ಮತ್ತು ಈ ವರ್ಷದ ಮೊದಲನೇಯ ತ್ರೈಮಾಸಿಕ ತೆರಿಗೆ ಸಂಗ್ರಹದಲ್ಲಿ ಕೊರತೆಯಾಗಿರುವ ಹಿನ್ನೆಲೆಯಲ್ಲಿ ಗಾಬರಿಯಿಂದ ತೀವ್ರವಾದ ಕ್ರಮಕ್ಕೆ ಆದೇಶದ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ವಾಣಿಜ್ಯ ತೆರಿಗೆ ಇಲಾಖೆಯ ಉನ್ನತ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇದಕ್ಕೆ ಪರಿಹಾರ ಒದಗಿಸಬೇಕು.

-ಬಸವರಾಜ ಬೊಮ್ಮಾಯಿ, ಸಂಸದ

ಗನ್ ತೋರಿಸಿ ಅಪಹರಣ

ಬೆಂಗಳೂರು: ಗನ್ ತೋರಿಸಿ ಸಿನಿಮಾ ಶೈಲಿಯಲ್ಲಿ ವ್ಯಕ್ತಿಯೊಬ್ಬನನ್ನು ಅಪಹರಣ ಮಾಡಿದ ಘಟನೆ ಆನೇಕಲ್ ಕೋರ್ಟ್ ಬಳಿ ನಡೆದಿದೆ.

ವಾಬಸಂದ್ರ ನಿವಾಸಿ ಶ್ರೀನಿಧಿ (29) ಅಪಹರಣ ಆದ ವ್ಯಕ್ತಿ. ಆನೇಕಲ್ ಕೋರ್ಟ್ ಬಳಿಯ ವಕೀಲ ನಂದೀಶ್ ಕಚೇರಿ ಬಳಿ ಜು.4 ರಂದು ಅಪಹರಣವಾಗಿದೆ. ಆಸ್ತಿ ವಿವಾದ ಸಂಬಂಧ ಮಾತುಕತೆಗೆ ವಕೀಲ ನಂದೀಶ್, ಶ್ರೀನಿಧಿಯವರನ್ನು ಕರೆಸಿದ್ದರು. ಮಾತುಕತೆ ಮುಗಿಸಿ ಹೊರಬರುತ್ತಿದ್ದಂತೆ ಸ್ಕಾರ್ಪಿಯೋ ಕಾರಿನಲ್ಲಿ ಅವರನ್ನು ಅಪಹರಿಸಲಾಗಿತ್ತು. ಅಪಹರಣದ ದೃಶ್ಯಗಳು ಸಿಸಿಟಿವಿಯಲ್ಲಿ ಸೆರೆಯಾಗಿದೆ. ಕಣ್ಣಿಗೆ ಬಟ್ಟೆ ಕಟ್ಟಿ ಬಡಾವಣೆಯೊಂದಕ್ಕೆ ಕರೆದೊಯ್ದು ಹಲ್ಲೆ ನಡೆಸಲಾಗಿದೆ. ಅಲ್ಲದೇ ಗನ್ ತೋರಿಸಿ ನಿನ್ನ ಜಮೀನನ್ನು ಪದ್ಮನಾಭ ರಾವ್‌ಗೆ ರಿಜಿಸ್ಟರ್ ಮಾಡಬೇಕು. ಇಲ್ಲದಿದ್ದರೆ ನಿನ್ನ ಮತ್ತು ತಂದೆ ರಾಮಣ್ಣನ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ.

ಜೀವ ಭಯದಿಂದ ರಿಜಿಸ್ಟರ್ ಮಾಡಿಕೊಡಲು ಒಪ್ಪಿಕೊಂಡಿದ್ದರು. ಇತ್ತ ಸರ್ಜಾಪುರ ಸಬ್ ರಿಜಿಸ್ಟರ್ ಕಚೇರಿಯಲ್ಲಿ ತನ್ನದೇ ಅಕೌಂಟ್‌ನಿಂದ ಹಣ ಪಾವತಿಸಿ ವಕೀಲ ನಂದೀಶ್ ರಿಜಿಸ್ಟರ್ ಮಾಡಲು ಸಿದ್ಧತೆ ಮಾಡಿಕೊಂಡಿದ್ದ. ಸಬ್ ರಿಜಿಸ್ಟರ್ ಒಳ ಹೋಗುತ್ತಿದ್ದಂತೆ ಕ್ಲರ್ಕ್ ಕೊಠಡಿಗೆ ಹೋಗಿ ನನ್ನನ್ನು ಅಪಹರಣ ಮಾಡಿದ್ದು, ಪೊಲೀಸರಿಗೆ ಮಾಹಿತಿ ನೀಡಿ ಎಂದು ಶ್ರೀನಿಧಿ ಕಿರುಚಾಡಿದ್ದಾರೆ. ಪೊಲೀಸರು ಬರುತ್ತಿದ್ದಂತೆ ವಕೀಲ ನಂದೀಶ್ ಗ್ಯಾಂಗ್ ಪರಾರಿಯಾಗಿದೆ. ಈ ಸಂಬಂಧ ಆನೇಕಲ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

PUBLIC NOTICE

This is informing the General Public notice to **Sri. N Vijaya Kumar, S/o. Sri. Narasiman,** Aged about 59 years, Residing at no.14/7, Flot no.302, 5th Cross, Sai Garden apartment Shankarpura, Basavanagudi, Bangalore – 560 034. Mobile no. 9342127331, under the instruction of my client Sri. Munivenkatappa, S/o Late Venkataramaiah, aged about 80 years, residing at Ivarakandapura Village, Hesharagatta Hobli, Yalahanka Taluk, Bangalore – 560 089, I issue this notice to you as follows:

1. My client represents me to state that, my client is the absolute owner in possession and enjoyment of the Land bearing new Sy. No.9/P-2 (Old Sy no.9), measuring an extent of 2-00 acres and another Land bearing new Sy. No.9/P-1(Old Sy no.9), measuring an extent of 00-20 Guntas both are situated at Thamarasanahalli Village, Hesaragatta Hobli, Yalahanka Taluk, Bangalore – 560 089, which are more fully described in the schedule of this notice hereunder and hereinafter referred to as the Schedule Properties.
2. My client represents me to state that you have agreed to purchase schedule properties for a total sale consideration amount of Rs. 75,00,000/- (Rupees Seventy Five Lakhs only) and my client has agreed to sell the schedule properties to you for a total sale consideration amount of Rs. 75,00,000/-(Rupees Seventy Five Lakhs only) and terms and conditions reduced into writing on 02/12/2020 and you have paid an advance amount of Rs.49,00,000/- (Rupees forty Nine Lakh only) to my client and further agreed to pay the balance sale consideration amount of Rs. 26,00,000/- within **(6) six** months from the date of the agreement of sale and to get the sale deed in your name. The agreement of sale between you and my client is duly registered as document No. HSR-1-00911-2020-21, in Book No.1 and stored in CD No.HSRD667 on 02/12/2020 at the office of Sub-Registrar, Gandhinagar(Hesaraghatta), Bengaluru. My client represents me to state that as per the terms of the sale agreement between you and my client **"Time is of the essence"**. My client was always ready and willing to perform his part of contract and you have utterly failed to perform your part of contract.
3. My client represents me to state that you have not come forward to get the sale deed with balance sale consideration amount as agreed under the registered agreement of sale dated 2/12/2020 and though my client approached you by securing the requisite documentation necessary for registration to perform your part of contract in terms of the sale agreement, you have postponed the same for one or other reasons and dragged the time for the reasons best known to you. My client represents me to state that you are evading to pay the balance sale consideration amount to complete the sale transactions and finally due to failure on your part in paying the balance sale consideration and to get the registered sale deed executed, my client is constrained to forfeit the entire advance amount paid under the said agreement of sale dated: 02-12-2020 and you have no right to seek enforcement of the said contract.
4. My client represents me to state that my client is badly in need of money and he doesn't want to keep the property intact with the said agreement of sale for long time and accordingly please appear before the jurisdictional Sub Registrar on 29th day of July 2025 for cancellation of agreement of sale dated 02/12/2020 and if you I failed to do so, the agreement of sale dated 02.12.2020 deemed to be cancelled. This is, therefore, calling upon your good self to appear before the jurisdictional Sub Registrar on 28th July 2025 for cancellation of registered agreement of sale dated 02/12/2020, if you failed to do so, the agreement of sale dated 02.12.2020 is deemed to have cancelled from 29th day of July 2025 and my client is at liberty to take the steps for cancellation of agreement of sale dated 02/12/2020 in accordance with law.

SCHEDULE

ITEM NO.1: All that piece and parcel of the Land bearing New Sy. No.9/P-2, Old Sy no.9, measuring to an extent of 2-00 acres, situated at Thamarasanahalli Village, Hesaragatta Hobli, Yalanka Taluk, Bangalore – 560 089 and bounded on:- **East by :** Land belonging to Siddalingappa, & Gov Honi, **West by :** Land belonging to Anurada in Sy no. 8/2, **North by:** Land belonging to Munihaumaiha, **South by:** Land belongs to Siddalingaiaha.

ITEM NO.2: All that piece and parcel of the Land bearing New Sy. No.9/P-1, Old Sy no.9, measuring to an extent of 00-20 Guntas, situated at Thamarasanahalli Village, Hesaragatta Hobli, Yalanka Taluk, Bangalore – 560 089 and bounded on:- **East by** : Government Honi,
West by: Land belonging to Venkataramaiah,
North by: Land belonging to Munihaumaiha,
South by: Land belongs to Sanjeev.

PRAKASHA K S, Advocate
No.26,8th Main, JC Nagar, Kurubarahalli, Bengaluru-560086 , MOB-9901012674

ವಿರಾಮ
ಪ್ರತಿ ಭಾನುವಾರ

CHANGE OF NAME

We, S.PRAKASH (Father) and SHWETHA.S (Mother) Parents of our Minor son **S.P PAVANKUMAR** Residing at #No-71, 1st floor, 2nd Cross, Chikkalakshmaiah Layout, Adugodi,Bengaluru – 560030 have changed our son's Name from **S.P.PAVANKUMAR** to **ANVIK THEJAPRAKASH GOWDA P**, vide affidavit dated 18.06.2025 sworn before Meera Hassan, Advocate and Notary Bangalore-560 011

CHANGE OF NAME

We, S.PRAKASH (Father) and SHWETHA.S (Mother) Parents of our Minor Daughter **S.P.REETHU** Residing at #No-71, 1st floor, 2nd Cross, Chikkalakshmaiah Layout, Adugodi,Bengaluru – 560030 have changed our Daughter's Name from **S.P.REETHU** to **ROSHINI SHOBITHA.P**, vide affidavit dated 18.06.2025 sworn before Meera Hassan, Advocate and Notary Bangalore-560 011

22ರಿಂದ ಮೆಟ್ರೋ ಹಳದಿ ಮಾರ್ಗದ ಸುರಕ್ಷತಾ ಪರೀಕ್ಷೆ

ಬೆಂಗಳೂರು: ನಮ್ಮ ಮೆಟ್ರೋದ ಹಳದಿ ಮಾರ್ಗದ ಸುರಕ್ಷತಾ ಪರಿಶೀಲನೆಯು ಜುಲೈ.22ರಿಂದ 25ರವರೆಗೆ ನಡೆಯಲಿದ್ದು, ಈ ಮೂಲಕ ರೈಲು ಸಂಚಾರವು ಆರಂಭವಾಗುವ ದಿನದ ಸುಳಿವು ದೊರೆತಿದೆ.

ಮೆಟ್ರೋ ರೈಲ್ವೆ ಸುರಕ್ಷತಾ ಆಯುಕ್ತರು ಜುಲೈ.22ರಿಂದ ಸುರಕ್ಷತಾ ಪರೀಕ್ಷೆ ನಡೆಸಲಿದ್ದು, ಎಲ್ಲವೂ ಸರಿಯಿದ್ದರೆ ಆ ನಂತರ ಸಂಚಾರಕ್ಕೆ ಅನುಮತಿ ನೀಡುವ ನಿರೀಕ್ಷೆ ಇದೆ. 19.15 ಕಿಮೀ ಉದ್ದದ ಈ ಮೆಟ್ರೋ ಮಾರ್ಗದ ಸುರಕ್ಷತಾ ಪರಿಶೀಲನೆ ಬಹು ಹಂತಗಳಲ್ಲಿ ನಡೆಯಲಿದ್ದು, ಆರ್‌ವಿ ರಸ್ತೆಯಿಂದ ಡೆಲ್ಟಾ ಎಲೆಕ್ಟ್ರಾನಿಕ್ಸ್ ಬೊಮ್ಮಸಂದ್ರದವರೆಗಿನ ಹೊಸ ವಿಭಾಗದ ತಪಾಸಣೆ ಜುಲೈ 22 ಮತ್ತು 24 ರ ನಡುವೆ ನಡೆಯಲಿದೆ. ಕಾರ್ಯಾಚರಣೆ ನಿಯಂತ್ರಣ ಕೇಂದ್ರದ ಅನುಸರಣಾ ಪರಿಶೀಲನೆ ಮತ್ತು ಪರಿಶೀಲನೆಯನ್ನು ಜುಲೈ 25 ರಂದು ನಿಗದಿಪಡಿಸಲಾಗಿದೆ ಎಂದು ಸಿಎಂಆರ್‌ಎಸ್ ಮೂಲಗಳು ತಿಳಿಸಿವೆ.

16 ನಿಲ್ದಾಣಗಳನ್ನು ಹೊಂದಿರುವ ಸಂಪೂರ್ಣ ಎಲಿವೇಟೆಡ್ ಕಾರಿಡಾರ್ ಆಗಿರುವ ಹಳದಿ ಮಾರ್ಗವನ್ನು ಆರಂಭದಲ್ಲಿ ಡಿಸೆಂಬರ್ 2021 ರೊಳಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿತ್ತಾದರೂ ವಿವಿಧ ಕಾರಣಗಳಿಂದಾಗಿ ಯೋಜನೆಯು ಗಮನಾರ್ಹ ವಿಳಂಬವಾಗಿತ್ತು. ಈಗ ಸುರಕ್ಷತಾ ಪರೀಕ್ಷೆಯು ನಡೆಯಲಿದ್ದು,ಶೀಘ್ರವೇ ಸಂಚಾರ ಆರಂಭವಾಗುವ ನಿರೀಕ್ಷೆಯಿದೆ ಎಂದು ಹೇಳಲಾಗುತ್ತಿದೆ.

ಹಳದಿ ಮಾರ್ಗದ ಸುರಕ್ಷತಾ ಪರಿಶೀಲನೆ ಪ್ರಕ್ರಿಯೆ ಹೇಗಿರಲಿದೆ?: ಮುಂಬರುವ ಸುರಕ್ಷತಾ ಪರಿಶೀಲನೆಯು ಟ್ರ್ಯಾಕ್ ಮೂಲಸೌಕರ್ಯ, ವಯಾಡಕ್ಟ್‌ಗಳು , ನಿಲ್ದಾಣ ಸೌಲಭ್ಯಗಳು, ಸಿಗ್ನಲಿಂಗ್ ವ್ಯವಸ್ಥೆಗಳು ಮತ್ತು ಇತರ ಉಪ-ಘಟಕಗಳು ಸೇರಿದಂತೆ ಎಲ್ಲಾ ನಿರ್ಣಾಯಕ ವ್ಯವಸ್ಥೆಗಳನ್ನು ಒಳಗೊಂಡಿರಲಿದೆ. ಮಾರ್ಗವು ಸುರಕ್ಷತೆ ಮತ್ತು ಕಾರ್ಯಾಚರಣೆಯ ಮಾನದಂಡಗಳನ್ನು ಪೂರೈಸಿರುವುದನ್ನು ಸಂಪೂರ್ಣ ಖಾತರಿಪಡಿಸಿಕೊಂಡ ನಂತರ ಸಿಎಂಆರ್‌ಎಸ್ ಕಾರ್ಯಾಚರಣೆಗೆ ಅನುಮೋದನೆ ನೀಡಲಿದೆ. ಸಿಎಂಆರ್‌ಎಸ್ ಅನುಮೋದನೆ ದೊರೆತ ನಂತರ, ಕೇಂದ್ರ ಮತ್ತು ಕರ್ನಾಟಕ ಸರಕಾರಗಳೊಂದಿಗೆ ಬಿಎಂಆರ್‌ಸಿಎಲ್ ಸಮಾಲೋಚನೆ ನಡೆಸಲಿದ್ದು, ನಂತರ ಹಳದಿ ಮಾರ್ಗದಲ್ಲಿ ಮೆಟ್ರೋ ಸಂಚಾರಕ್ಕೆ ಚಾಲನೆ ದಿನಾಂಕ ನಿಗದಿಪಡಿಸಲಿದೆ.

ಪ್ರಧಾನಿ ಮೋದಿ ಉದ್ಘಾಟಿಸುವ ಸಾಧ್ಯತೆ

ಹಳದಿ ಮಾರ್ಗ ಮೆಟ್ರೋ ಸಂಚಾರಕ್ಕೆ ಅದ್ದೂರಿ ಚಾಲನೆ ನೀಡಲು ಸಿದ್ಧತೆಗಳು ನಡೆಯುತ್ತಿವೆ. ಹಳದಿ ಮಾರ್ಗದ ಪ್ರಯಾಣ, ನಿಲ್ದಾಣದ ವಿಡಿಯೋಗಳು ಮತ್ತು ಡ್ರೋನ್ ದೃಶ್ಯಗಳನ್ನು ಪ್ರದರ್ಶಿಸುವ ಸಾಕ್ಷ್ಯ ಚಿತ್ರವನ್ನು ನಿರ್ಮಿಸಲು ನಮ್ಮ ಮೆಟ್ರೋ ಖಾಸಗಿ ಸಂಸ್ಥೆ ಜತೆ ಒಪ್ಪಂದ ಮಾಡಿಕೊಂಡಿದೆ. ಆಗಸ್ಟ್ ಮೊದಲ ಅಥವಾ ಎರಡನೇ ವಾರದಲ್ಲಿ ಉದ್ಘಾಟನೆ ನಡೆಯುವ ಸಾಧ್ಯತೆಯಿದ್ದು, ಹಳದಿ ಮಾರ್ಗದ ಮೆಟ್ರೋ ಸಂಚಾರಕ್ಕೆ ಚಾಲನೆ ನೀಡಲು ಪ್ರಧಾನಿ ನರೇಂದ್ರ ಮೋದಿಯವರಿಗೆ ಮೆಟ್ರೋ ನಿಗಮ ಆಹ್ವಾನ ನೀಡುವ ನಿರೀಕ್ಷೆಯಿದೆ ಎಂದು ಹೇಳಲಾಗುತ್ತಿದೆ.

ನಿವೇಶನದಲ್ಲಿ ತ್ಯಾಜ್ಯ: ಮಾಲೀಕರಿಗೆ ದಂಡ

ಬೆಂಗಳೂರು: ಖಾಲಿ ನಿವೇಶನಗಳಲ್ಲಿ ತ್ಯಾಜ್ಯ ಸಂಗ್ರಹಣೆಯಾದಲ್ಲಿ ನಿವೇಶನ ಮಾಲೀಕರಿಗೆ ನೋಟಿಸ್ ನೀಡಿ ದಂಡ ವಿಧಿಸುವಂತೆ ಅಧಿಕಾರಿಗಳಿಗೆ ಪೂರ್ವ ವಲಯ ಆಯುಕ್ತೆ ಸ್ನೇಹಲ್ ಸೂಚನೆ ನೀಡಿದರು.

ಪೂರ್ವ ವಲಯ ಆಯುಕ್ತ ಕಚೇರಿಯಲ್ಲಿ ಆಯೋಜಿಸಲಾದ ಕುಂದು ಕೊರತೆ ಸಭೆಯಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಮಾತನಾಡಿ, ಎಚ್‌ಆರ್‌ಬಿಆರ್ ಲೇಔಟ್‌ನ ಖಾಲಿ ನಿವೇಶನಗಳಲ್ಲಿ ತ್ಯಾಜ್ಯ ಹಾಗೂ ಕಟ್ಟಡ ಭಗ್ನಾವಶೇಷಗಳ ಸಂಗ್ರಹದಿಂದಾಗಿ ನೆರೆಹೊರೆಯವರಿಗೆ ತೊಂದರೆಯಾಗುತ್ತಿದ್ದು, ಕ್ರಮಕ್ಕೆ ಮನವಿ ಮಾಡಲಾಯಿತು. ಅಹವಾಲಿಗೆ ಪ್ರತಿಕ್ರಿಯಿಸಿದ ವಲಯ ಆಯುಕ್ತರು, ಖಾಲಿ ನಿವೇಶನಗಳಲ್ಲಿ ತ್ಯಾಜ್ಯ ಹಾಗೂ ಕಟ್ಟಡ ಭಗ್ನಾವಶೇಷ ಸಂಗ್ರಹವಾದಲ್ಲಿ ನಾಗರಿಕರಿಗೆ ತೊಂದರೆಯಾದಂತಹ ಸಂದರ್ಭದಲ್ಲಿ ಅಂತಹ ಖಾಲಿ ನಿವೇಶನಗಳ ಮಾಲೀಕರಿಗೆ ನೋಟಿಸ್ ನೀಡಿ, ದಂಡ ವಿಧಿಸಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಕೆಎಸ್‌ಎಫ್‌ಸಿ ಲೇಔಟ್‌ನ ಸ್ಮಶಾನ ಭೂಮಿಯನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಂಡು, ಸದರಿ ಸ್ಥಳದ ದುರಸ್ತಿ ಕಾರ್ಯ ಕೈಗೊಳದಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸ್ವಚ್ಛತಾ ಅಭಿಯಾನ ಕೈಗೊಳ್ಳಲು ಸೂಚನೆ: ಎಚ್‌ಆರ್‌ಬಿಆರ್ ಲೇಔಟ್‌ನಲ್ಲಿ ಹಂಚಿಕೆಯಾಗದ ಹಾಗೂ ಹಕ್ಕುದಾರರಿಲ್ಲದ ನಿವೇಶನ ಗಳಲ್ಲಿ ತ್ಯಾಜ್ಯ ಸಂಗ್ರಹವಾಗಿರುವುದಲ್ಲದೇ ಸ್ಥಳದ ದುರುಪಯೋಗವಾಗುತ್ತಿದ್ದು, ಮುಂದಿನ ಶುಕ್ರವಾರದಂದು ಸ್ಥಳವನ್ನು ಸ್ವಚ್ಛಗೊಳಿಸಲು ಅಧಿಕಾರಿಗಳಿಗೆ ತಿಳಿಸಿದ್ದು, ಈ ಸ್ಥಳವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಬಳಸುವಂತೆ ತಿಳಿಸಲಾಯಿತು. ಸಾರ್ವಜನಿಕರ ಕುಂದು ಕೊರತೆಯ ಅಹವಾಲಿನ ಕಾರ್ಯಕ್ರಮದಲ್ಲಿ ನಾಗರೀಕರಿಂದ ಬರುವ ದೂರುಗಳಿಗೆ ಶೀಘ್ರ ಸ್ಪಂದನೆಗೆ ಸೂಚನೆ ನೀಡಲಾಯಿತು. ಪೂರ್ವ ವಲಯದಲ್ಲಿ ಇಂದು ನಡೆದ ಕಾರ್ಯಕ್ರಮದಲ್ಲಿ ನಾಗರಿಕರು ಆಗಮಿಸಿ ವಲಯ ಆಯುಕ್ತರಿಗೆ ಧನ್ಯವಾದಗಳನ್ನು ತಿಳಿಸಿದರು.

ಈ ವೇಳೆ ಜಂಟಿ ಆಯುಕ್ತೆ ಸರೋಜ, ಉಪ ಆಯುಕ್ತ ರಾಜು, ಮುಖ್ಯ ಅಭಿಯಂತರ ಸುಗುಣ, ಆರೋಗ್ಯಾಧಿಕಾರಿ ಭಾಗ್ಯಲಕ್ಷ್ಮಿ, ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಡಿಜಿಎಂ, ಎಜಿಎಂ, ಜಲಮಂಡಳಿ ಅಧಿಕಾರಿಗಳು ಇದ್ದರು.

ಪ್ರಮುಖ ಅಹವಾಲುಗಳು

- ಬಂಬೂ ಬಜಾರ್ ಸಿಟಿ ಗ್ರಂಥಾಲಯದಲ್ಲಿ ನೀರಿನ ವ್ಯವಸ್ಥೆ ಸೇರಿ ಇತರೆ ಸೌಲಭ್ಯ ಒದಗಿಸುವಂತೆ ವಿನಂತಿಸಿದರು.
- ಹೈನ್ಸ್ ರಸ್ತೆ ಶಾಖೆ ನಗರ ಕೇಂದ್ರ ಗ್ರಂಥಾಲಯದ ಕಟ್ಟಡ ಅವಶೇಷ ತೆರವಿಗೆ, ನೀರಿನ ವ್ಯವಸ್ಥೆಗೆ ಮನವಿ
- ಅನಧಿಕೃತ ಕಟ್ಟಡಗಳ ತೆರವಿಗೆ ಮನವಿ
- ಕೆಎಸ್‌ಎಫ್‌ಸಿ ಲೇಔಟ್‌ನ ಸಮುದಾಯ ಭವನವನ್ನು ಸಾರ್ವಜನಿಕ ಗ್ರಂಥಾಲಯವನ್ನಾಗಿ ಪರಿವರ್ತಿಸಲು ವಿನಂತಿ
- ವಲಯದ ಹಲವು ಪ್ರದೇಶಗಳಲ್ಲಿ ಬೀದಿ ದೀಪಗಳ ಅಳವಡಿಕೆಗೆ ಮನವಿ ನೀಡಿದರು.
- ನಮ್ಮ ಕ್ಲಿನಿಕ್‌ನ ಸೂಕ್ತ ನಿರ್ವಹಣೆಗೆ ಮನವಿ ನೀಡಲಾಯಿತು.
- ಪಾದಾಚಾರಿಯನ್ನು ಬೀದಿಬದಿ ವ್ಯಾಪಾರಿಗಳು ಒತ್ತುವರಿ ಮಾಡಿದ್ದು ಸಂಚಾರಕ್ಕೆ ಅಡಚಣೆಯಾಗುತ್ತಿರುವುದರಿಂದ ಅಂಗಡಿಗಳ ತೆರವಿಗೆ ವಿನಂತಿಸಿದರು.
- ಹಂಚಿಕೆಯಾಗದ ಹಾಗೂ ಹಕ್ಕುದಾರರಿಲ್ಲದ ನಿವೇಶನಗಳ ಸಮಸ್ಯೆ ಬಗೆಹರಿಸಲು ಮನವಿ.
- ಹೈನ್ಸ್ ರಸ್ತೆಯ ಪಾದಚಾರಿ ಮಾರ್ಗ ದುರಸ್ತಿಗೆ ಮನವಿ

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ.784/2024

ಅರ್ಜಿದಾರರು: ಶ್ರೀ. ಎಂ. ವೆಂಕಟೇಶಯ್ಯ ಬಿನ್ ಲೇಟ್ ದೊಡ್ಡೋನು ವಯಸ್ಸು 60 ವರ್ಷ ವಾಸ: ಮುತ್ತುರಾಯನಪುರ ಗ್ರಾಮ ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಮತ್ತು ಇನ್ನೊಬ್ಬರು
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ 1ನೇ ಅರ್ಜಿದಾರರ ಚಿಕ್ಕಪ್ಪ, 2ನೇ ಅರ್ಜಿದಾರರ ಮಾವ, 8ನೇ ಅರ್ಜಿದಾರರ ಭಾವ, 3 ರಿಂದ 7,9 ಮತ್ತು 10ನೇ ಅರ್ಜಿದಾರರ ತಾತನವರಾದ ಶ್ರೀ ದಾಸಯ್ಯ @ ನಿಂಗಯ್ಯ ಬಿನ್ ಲೇಟ್ ಮಾಡಕಲ್ಲ @ ಮಾಡಕಲ್ಲಯ್ಯ ರವರು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಮುತ್ತುರಾಯನಪುರ ಗ್ರಾಮದಲ್ಲಿ ದಿನಾಂಕ: 19.07.1999 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 01/09/2025 ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2025ರ ಜುಲೈ 18ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಸಿದ್ದಾರ್ಥ,
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 17/07/2025

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ.782/2024

ಅರ್ಜಿದಾರರು: ಶ್ರೀ. ಎಂ. ವೆಂಕಟೇಶಯ್ಯ ಬಿನ್ ಲೇಟ್ ದೊಡ್ಡೋನು ವಯಸ್ಸು 60 ವರ್ಷ ವಾಸ: ಮುತ್ತುರಾಯನಪುರ ಗ್ರಾಮ ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಮತ್ತು ಇನ್ನೊಬ್ಬರು
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ 1ನೇ ಅರ್ಜಿದಾರರ ತಂದೆ, 2 ಮತ್ತು 8ನೇ ಅರ್ಜಿದಾರರ ಮಾವ, 3 ರಿಂದ 7,9&10ನೇ ಅರ್ಜಿದಾರರ ತಾತನವರಾದ ಶ್ರೀ ದೊಡ್ಡೋನು @ ಮುತ್ತಯ್ಯ ಬಿನ್ ಲೇಟ್ ಮಾಡಕಲ್ಲ @ ಮಾಡಕಲ್ಲಯ್ಯ ರವರು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಮುತ್ತುರಾಯನಪುರ ಗ್ರಾಮದಲ್ಲಿ ದಿನಾಂಕ: 30.01.1998 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 01/09/2025 ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2025ರ ಜುಲೈ 18ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಸಿದ್ದಾರ್ಥ,
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 17/07/2025

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ.781/2024

ಅರ್ಜಿದಾರರು: ಶ್ರೀ. ಎಂ. ವೆಂಕಟೇಶಯ್ಯ ಬಿನ್ ಲೇಟ್ ದೊಡ್ಡೋನು ವಯಸ್ಸು 60 ವರ್ಷ ವಾಸ: ಮುತ್ತುರಾಯನಪುರ ಗ್ರಾಮ ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಮತ್ತು ಇನ್ನೊಬ್ಬರು
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ 1,9&10ನೇ ಅರ್ಜಿದಾರರ ಸಹೋದರ, 2ನೇ ಅರ್ಜಿದಾರರ ಭಾವ, 8ನೇ ಅರ್ಜಿದಾರರ ಮಾವ, 3 ರಿಂದ 5ನೇ ಅರ್ಜಿದಾರರ ಚಿಕ್ಕಪ್ಪ, 6 ಮತ್ತು 7ನೇ ಅರ್ಜಿದಾರರ ತಂದೆಯವರಾದ ಶ್ರೀ ಮುತ್ತಯ್ಯ ಬಿನ ಲೇಟ್ ದಾಸಯ್ಯ @ ನಿಂಗಯ್ಯ ರವರು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಮುತ್ತುರಾಯನಪುರ ಗ್ರಾಮದಲ್ಲಿ ದಿನಾಂಕ: 29.12.2021 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 01/09/2025 ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2025ರ ಜುಲೈ 18ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಸಿದ್ದಾರ್ಥ, ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 17/07/2025

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ.783/2024

ಅರ್ಜಿದಾರರು: ಶ್ರೀ. ಎಂ. ವೆಂಕಟೇಶಯ್ಯ ಬಿನ್ ಲೇಟ್ ದೊಡ್ಡೋನು ವಯಸ್ಸು 60 ವರ್ಷ ವಾಸ: ಮುತ್ತುರಾಯನಪುರ ಗ್ರಾಮ ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಮತ್ತು ಇನ್ನೊಬ್ಬರು
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ 1ನೇ ಅರ್ಜಿದಾರರ ತಾತ, 2ಮತ್ತು 8ನೇ ಅರ್ಜಿದಾರರ ಮಾವ, 3 ರಿಂದ 7,9&10ನೇ ಅರ್ಜಿದಾರರ ಮುತ್ತಾತನವರಾದ ಶ್ರೀ ಮಾಡಕಲ್ಲ @ ಮಾಡಕಲ್ಲಯ್ಯ ಬಿನ್ ಲೇಟ್ ಮಾಡಕಲ್‌ಮುತ್ತರವರು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಮುತ್ತುರಾಯನಪುರ ಗ್ರಾಮದಲ್ಲಿ ದಿನಾಂಕ:01.09.1965 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 01/09/2025 ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2025ರ ಜುಲೈ 18ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಸಿದ್ದಾರ್ಥ,
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 17/07/2025

ಮಾನ್ಯ ಮೂರನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ, ಕನಕಪುರ,
ಅಪರಾಧಿಕಾ ಸಂಕೀರ್ಣ ಅರ್ಜಿ ಸಂಖ್ಯೆ: 477/2025

ಅರ್ಜಿದಾರರು: 1. ಕಮಲಮ್ಮ ಕೋಂ. ಲೇಟ್ ಪುಟ್ಟಸ್ವಾಮಿ.ಬಿ ಮಾವ ಲೇಟ್ ಈರಶೆಟ್ಟಿ, ವಯಸ್ಸು ಸುಮಾರು 52 ವರ್ಷ. ಕಿತ್ತಗಾನ ಹಳ್ಳಿ ಗ್ರಾಮ, ಆನೇಕಲ್ ತಾಲೋಕು, ಬೆಂಗಳೂರು ಜಿಲ್ಲೆ. ಮತ್ತು ಇತರರು.
ವಿರುದ್ಧ
ಎದುರುದಾರರು: ಪೌರಾಯುಕ್ತರು, ಜನನ ಮತ್ತು ಮರಣ ನೋಂದಣಾಧಿಕಾರಿಗಳು, ನಗರಸಭೆ, ಕನಕಪುರ ಟೌನ್. ಕನಕಪುರ ತಾಲೋಕು, (ರಾಮನಗರ ಜಿಲ್ಲೆ,) ಬೆಂಗಳೂರು ದಕ್ಷಿಣ ಜಿಲ್ಲೆ.
ಸಾರ್ವಜನಿಕ ಪ್ರಕಟಣೆ
ಈ ಮೇಲ್ಕಾಣಿಸಿದ ಅರ್ಜಿದಾರರು ಈ ಮೂಲಕ ತಿಳಿಸುವುದೇನೆಂದರೆ, 1ನೇ ಅರ್ಜಿದಾರರ ಅತ್ತೆ, 2ನೇ ಅರ್ಜಿದಾರರಿಂದ 7ನೇ ಅರ್ಜಿದಾರರ ತಾಯಿಯಾದ ಲೇಟ್ ಚೆನ್ನಮ್ಮ ಕೋಂ ಲೇಟ್ ಈರಶೆಟ್ಟಿ ಅವರ ಜೀವಿತಾವಧಿಯಲ್ಲಿ ಈ ಮೇಲ್ಕಂಡ ವಿಳಾಸವಾದ ಅಮರನಾರಯಣ ಬ್ಲಾಕ್, ಕನಕಪುರ ಟೌನ್, ಕನಕಪುರ ತಾಲೋಕು, (ರಾಮನಗರ ಜಿಲ್ಲೆ.) ಬೆಂಗಳೂರು ದಕ್ಷಿಣ ಜಿಲ್ಲೆ, ಪಿನ್ ಕೋಡ್: 562117. ಇಲ್ಲಿ ವಾಸವಾಗಿದ್ದು, ದಿನಾಂಕ: 20/07/2018 ರಂದು ಚೆನ್ನಮ್ಮ ಕೋಂ ಲೇಟ್ ಈರಶೆಟ್ಟಿರವರು ಅವರ ಸ್ವ-ಗೃಹದಲ್ಲಿ ಮರಣ ಹೊಂದಿರುತ್ತಾರೆ. ಸದರಿಯವರ ಮರಣ ಪ್ರಮಾಣ ಪತ್ರವನ್ನು ಕೋರಿ ಅರ್ಜಿದಾರರುಗಳು, ಎದುರುದಾರರಿಗೆ ನೀರ್ದೇಶನ ನೀಡುವಂತೆ ಮಾನ್ಯ ನ್ಯಾಯಾಲಯದಲ್ಲಿ ಈ ಅರ್ಜಿಯನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಬೇರೆ ಯಾರಿಗಾದರು ತಕರಾರು ಇದ್ದ ಪಕ್ಷದಲ್ಲಿ ಖುದ್ದಾಗಿ ಆಗಲಿ ಅಥವಾ ವಕೀಲರ ಮುಖಾಂತರವಾಗಲಿ ನ್ಯಾಯಾಲಯ ನಿಗದಿಪಡಿಸಿದ ದಿನಾಂಕದಂದು ಅಂದರೆ 01/09/2025ರ ಬೆಳಿಗ್ಗೆ ಸರಿಯಾಗಿ 11-00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾವ ತಕರಾರು ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಮೇಲ್ಕಂಡ ಪ್ರಕರಣವನ್ನು ಇತ್ಯರ್ಥ ಗೊಳಿಸಲಾಗುವುದು.
ದಿನಾಂಕ : 15/07/2025 ರಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ
ಶೀರಸ್ತೇದಾರರು
ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ. ಎಂ. ಎಫ್.ಸಿ. ಕನಕಪುರ
ಅರ್ಜಿದಾರರ ಅರ್ಜಿದಾರರ ಪರ ವಕೀಲರು
ಪ್ರಕಾಶ್.ಟಿ, ವಕೀಲರು
ಕನಕಪುರ

ಮಾನ್ಯ ಮೂರನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ,
ಅಪರಾಧಿಕಾ ಸಂಕೀರ್ಣ ಅರ್ಜಿ ಸಂಖ್ಯೆ: 476/2025

ಅರ್ಜಿದಾರರು: 1. ಕಮಲಮ್ಮ ಕೋಂ. ಲೇಟ್ ಪುಟ್ಟಸ್ವಾಮಿ.ಬಿ ಮಾವ ಲೇಟ್ ಈರಶೆಟ್ಟಿ, ವಯಸ್ಸು ಸುಮಾರು 52 ವರ್ಷ. ಕಿತ್ತಗಾನ ಹಳ್ಳಿ ಗ್ರಾಮ, ಆನೇಕಲ್ ತಾಲೋಕು, ಬೆಂಗಳೂರು ಜಿಲ್ಲೆ.ಮತ್ತು ಇತರರು.
ವಿರುದ್ಧ
ಎದುರುದಾರರು: ಪೌರಾಯುಕ್ತರು, ಜನನ ಮತ್ತು ಮರಣ ನೋಂದಣಾಧಿಕಾರಿಗಳು, ನಗರಸಭೆ, ಕನಕಪುರ ಟೌನ್. ಕನಕಪುರ ತಾಲೋಕು, (ರಾಮನಗರ ಜಿಲ್ಲೆ) ಬೆಂಗಳೂರು ದಕ್ಷಿಣ ಜಿಲ್ಲೆ.
ಸಾರ್ವಜನಿಕ ಪ್ರಕಟಣೆ
ಈ ಮೇಲ್ಕಾಣಿಸಿದ ಅರ್ಜಿದಾರರು ಈ ಮೂಲಕ ತಿಳಿಸುವುದೇನೆಂದರೆ, 1ನೇ ಅರ್ಜಿದಾರರ ಮಾವ, 2ನೇ ಅರ್ಜಿದಾರರಿಂದ 7ನೇ ಅರ್ಜಿದಾರರ ತಂದೆಯಾದ ಲೇಟ್ ಈರಶೆಟ್ಟಿ ಬಿನ್ ಮುದ್ದಶೆಟ್ಟಿರವರು ಅವರ ಜೀವಿತಾವಧಿಯಲ್ಲಿ ಈ ಮೇಲ್ಕಂಡ ವಿಳಾಸವಾದ ಅಮರನಾರಯಣ ಬ್ಲಾಕ್, ಕನಕಪುರ ಟೌನ್, ಕನಕಪುರ ತಾಲೋಕು, (ರಾಮನಗರ ಜಿಲ್ಲೆ.) ಬೆಂಗಳೂರು ದಕ್ಷಿಣ ಜಿಲ್ಲೆ, ಪಿನ್ ಕೋಡ್: 562117. ಇಲ್ಲಿ ವಾಸವಾಗಿದ್ದು, ದಿನಾಂಕ: 13/10/1994 ರಂದು ಅವರ ಸ್ವ-ಗೃಹದಲ್ಲಿ ಮರಣ ಹೊಂದಿರುತ್ತಾರೆ. ಸದರಿಯವರ ಮರಣ ಪ್ರಮಾಣ ಪತ್ರವನ್ನು ಕೋರಿ ಅರ್ಜಿದಾರರುಗಳು, ಎದುರುದಾರರಿಗೆ ನೀರ್ದೇಶನ ನೀಡುವಂತೆ ಮಾನ್ಯ ನ್ಯಾಯಾಲಯದಲ್ಲಿ ಈ ಅರ್ಜಿಯನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಬೇರೆ ಯಾರಿಗಾದರು ತಕರಾರು ಇದ್ದ ಪಕ್ಷದಲ್ಲಿ ಖುದ್ದಾಗಿ ಆಗಲಿ ಅಥವಾ ವಕೀಲರ ಮುಖಾಂತರವಾಗಲಿ ನ್ಯಾಯಾಲಯ ನಿಗದಿಪಡಿಸಿದ ದಿನಾಂಕದಂದು ಅಂದರೆ 01/09/2025ರ ಬೆಳಿಗ್ಗೆ ಸರಿಯಾಗಿ 11-00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾವ ತಕರಾರು ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಮೇಲ್ಕಂಡ ಪ್ರಕರಣವನ್ನು ಇತ್ಯರ್ಥಗೊಳಿಸಲಾಗುವುದು.
ದಿನಾಂಕ : 15/07/2025 ರಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ
ಶೀರಸ್ತೇದಾರರು
ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ. ಎಂ. ಎಫ್.ಸಿ. ಕನಕಪುರ
ಅರ್ಜಿದಾರರ ಅರ್ಜಿದಾರರ ಪರ ವಕೀಲರು
ಪ್ರಕಾಶ್.ಟಿ, ವಕೀಲರು
ಕನಕಪುರ

ಆರೋಪಿಗಳ ಮಧ್ಯೆ ಗಲಾಟೆ

ಬೆಂಗಳೂರು: ಬಿಕ್ಲು ಶಿವ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಆರೋಪಿಗಳು ಸರೆಂಡರ್ ಆಗುವ ಮುನ್ನ ಜಗಳ ಮಾಡಿಕೊಂಡಿರುವ ವಿಚಾರ ಬಯಲಾಗಿದೆ. ಕಿರಣ್, ವಿಮಲ್, ಪ್ರದೀಪ್, ಸ್ಯಾಮ್ಯುಯೆಲ್ ಮತ್ತು ಮದನ್ ಐವರು ಕೊಲೆ ಮಾಡಿರುವುದಾಗಿ ತಿಳಿಸಿ ಸರೆಂಡರ್ ಆಗಿದ್ದರು. ಪೊಲೀಸರು ಐವರನ್ನು ವಿಚಾರಣೆ ನಡೆಸಿದ್ದಾರೆ. ಪೊಲೀಸರ ವಶದಲ್ಲಿರುವ ಕಿರಣ್‌ನನ್ನು ವಿಚಾರಣೆಗೆ ಒಳ ಪಡಿಸಿದ್ದು, ಎ1 ಆರೋಪಿಯ ಬಗ್ಗೆ ಮಾಹಿತಿ ಪಡೆದಿದ್ದಾರೆ. ನನಗೂ ಬಿಕ್ಲು ಶಿವ ಶಿವಪ್ರಕಾಶ್‌ಗೆ ದ್ವೇಷ ಇತ್ತು. ಕೊಲೆ ಮಾಡುವಾಗ ವಿಡಿಯೊ ದಲ್ಲಿರುವುದು ನಾನು ಮಾತ್ರ. ಪ್ರಕರಣದಲ್ಲಿ ನನ್ನ ಭಾವ ಜಗ್ಗ ಜಗದೀಶನ ಪಾತ್ರ ಇಲ್ಲ ನಾನೇ ಹತ್ಯೆ ಮಾಡಿದ್ದಿನಿ ಎಂದು ಹೇಳಿದ್ದಾನೆ.

ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಸರಕಾರಕ್ಕೆ 1 ಲಕ್ಷ ಕೋಟಿ ರು. ನಷ್ಟ

ಅವೈಜ್ಞಾನಿಕ ಭೂಸ್ವಾಧೀನದಿಂದ ಭಾರಿ ನಷ್ಟ: ಕಂದಾಯ ಸಚಿವ ಕೃಷ್ಣಬೈರೇಗೌಡ

ಬೆಂಗಳೂರು: ಅಧಿಕಾರಿಗಳ ಬೇಜವಾಬ್ದಾರಿಯಿಂದ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿಯೇ ಒಂದು ಲಕ್ಷ ಕೋಟಿ ರು. ಸರಕಾರಕ್ಕೆ ನಷ್ಟವಾಗಲಿದ್ದು, ಇದಕ್ಕೆ ಹೊಣೆಯಾರು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಆತಂಕ ವ್ಯಕ್ತಪಡಿಸಿದರು.

ಬೆಂಗಳೂರಿನ ಸೆಂಟ್ರಲ್ ಕಾಲೇಜು ಸಭಾಂಗಣದಲ್ಲಿ ರಾಜ್ಯದ ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ ಶನಿವಾರ ಏರ್ಪಡಿಸಿದ್ದ ಭೂ ಸ್ವಾಧೀನ ಹಾಗೂ ನ್ಯಾಯಾಲಯ ಪ್ರಕರಣಗಳ ವ್ಯವಹರಣೆ ಕುರಿತ ವಿಶೇಷ ಕಾರ್ಯಾಗಾರದಲ್ಲಿ ಮಾತನಾಡಿ, ಅಧಿಕಾರಿಗಳ ಬೇಜವಾಬ್ದಾರಿ ಭೂಸ್ವಾಧೀನ ಪರಿಹಾರ ಪ್ರಕ್ರಿಯೆಯಿಂದ ಮಹತ್ವದ ಸರಕಾರಕ್ಕೆ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲೇ ಕನಿಷ್ಠ ಒಂದು ಲಕ್ಷ ಕೋಟಿ ನಷ್ಟ ಉಂಟಾಗಲಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಭೂಸ್ವಾಧೀನಕ್ಕೆ ಕ್ಯಾಬಿನೆಟ್‌ನಲ್ಲಿ ಒಪ್ಪಿಗೆ ಪಡೆದಿರುವ ಹಣ 17,000 ಕೋಟಿ. ಯೋಜನೆಯ ಅಂದಾಜು ಒಟ್ಟು ವೆಚ್ಚ 51,000 ಕೋಟಿ. ಆದರೆ, ಭೂ ಸ್ವಾಧೀನಕ್ಕೆ ಮಾತ್ರ 2.01 ಲಕ್ಷ ಕೋಟಿ ರು ಹಣ ಸರಕಾರದ ಬೊಕ್ಕಸದಿಂದ ಕರಗಿಹೋಗುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದರು.

ಭೂಸ್ವಾಧೀನಗೊಂಡ ಜಮೀನಿಗೆ ಅಧಿಕಾರಿಗಳು ನಿಗದಿಪಡಿಸಿದ ದರವನ್ನು ನ್ಯಾಯಾಲಯ ಮತ್ತಷ್ಟು ವೃದ್ಧಿಸಿದೆ. ಮುಳುಗಡೆ ಭೂಮಿ ಎಕರೆಗೆ 1.26 ಕೋಟಿ, ಕಾಲುವೆ ಭೂಸ್ವಾಧೀನಕ್ಕೆ ಎಕರೆಗೆ 74 ಲಕ್ಷ, ಆರ್‌ಸಿ ಭೂಮಿಗೆ ಎಕರೆಗೆ 5.53 ಕೋಟಿ ಹಾಗೂ ಬಿಟಿಡಿಎ ಭೂಮಿಗೆ ಎಕರೆಗೆ 23.50 ಕೋಟಿ ಪರಿಹಾರವನ್ನು ನ್ಯಾಯಾಲಯದ ನಿಗದಿಪಡಿಸಿದೆ. ಈಗಾಗಲೇ 29,400 ಎಕರೆ ಭೂ ಸ್ವಾಧೀನಗೊಂಡಿದ್ದು, 66,000 ಕೋಟಿ ಹಣವನ್ನು ಪರಿಹಾರವಾಗಿ ನೀಡಬೇಕಿದೆ. ಆದರೆ, ಇನ್ನೂ 1.04ಲಕ್ಷ ಎಕರೆ ಭೂಮಿ ಸ್ವಾಧೀನಗೊಳ್ಳಬೇಕಿದ್ದು, ಅಷ್ಟೂ ಭೂಮಿಗೆ ನ್ಯಾಯಾಲಯ ನಿಗದಿಪಡಿಸಿರುವ ದರದಲ್ಲೇ ಪರಿಹಾರ ನೀಡಿದರೂ ಅದಕ್ಕೆ ಸುಮಾರು 2.01ಲಕ್ಷ ಕೋಟಿ ಹಣ ಖರ್ಚಾಗಲಿದೆ. ಇದಕ್ಕೆ ಯಾರು ಹೊಣೆ ಎಂದು ಪ್ರಶ್ನಿಸಿದರು.

ಯಾವ ಸರಕಾರದಿಂದ ಇಷ್ಟು ಮೊತ್ತದ ಹಣ ನೀಡಲು ಸಾಧ್ಯ. ಇದೆಲ್ಲಕ್ಕೂ ಸರಕಾರಿ ಅಧಿಕಾರಿಗಳ ಬೇಜವಾಬ್ದಾರಿ ತನವೇ ಕಾರಣ. ಅವರು ಸರಿಯಾದ ಸಮಯಕ್ಕೆ ನ್ಯಾಯಾಲಯದ ಅಪೀಲಿಗೆ ಹೋಗಿದ್ದರೆ ಭೂ ಸ್ವಾಧೀನ ಪ್ರಕ್ರಿಯೆಗಳು ಸರಕಾರಕ್ಕೆ ಹೊರೆಯಾಗುತ್ತಿರಲಿಲ್ಲ. ಈ ವಿಚಾರದಲ್ಲಿ ಸರಕಾರದ ವಕೀಲರು, ನಿಗಮ ಹಾಗೂ ಜನ ಪ್ರತಿನಿಧಿಗಳಾದ ನಮ್ಮದೂ ತಪ್ಪಿದೆ. ಪರಿಸ್ಥಿತಿ ಹೀಗೆ ಮುಂದುವರೆದರೆ ನಾಳೆ ಮಹತ್ವದ ಕೃಷ್ಣ ಮೇಲ್ದಂಡೆ ಯೋಜನೆ ಭವಿಷ್ಯ ಏನಾಗಲಿದೆ ಯೋಚಿಸಿ ಎಂದರು.

ಅಧಿಕಾರಿಗಳು ಇಂತಹ ಸಮಸ್ಯೆಗಳನ್ನು ಹರಿಹರಿಸುವ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ, ಯಾವ ಸರಕಾರವೂ ಉಳಿಯಲ್ಲ, ಜನರನ್ನೂ ಉಳಿಸಲು ಆಗೋಲ್ಲ. ಅಧಿಕಾರಿಗಳು ಈ ಬಗ್ಗೆ ಎಚ್ಚೆತ್ತುಕೊಳ್ಳಬೇಕು, ಇಲ್ಲದಿದ್ದರೆ ಅವರನ್ನು ಎಚ್ಚರಿಸುವ ವಿಧಾನವನ್ನೂ ಸರ್ಕಾರ ಅನಿವಾರ್ಯವಾಗಿ ಕೈಗೆತ್ತಿಕೊಳ್ಳಬೇಕಾಗುತ್ತದೆ. ಒಳ್ಳೆಯ ಮಾತಿಗೆ ಗೌರವ ಕೊಟ್ಟು ಸರಿಪಡಿಸಿಕೊಳ್ಳುವವರಿಗೆ ನಾವೂ ಗೌರವಿಸುತ್ತೇವೆ. ಇಲ್ಲದಿದ್ದರೆ ನಾವೂ ಅನಿವಾರ್ಯ ಕ್ರಮಗಳಿಗೆ ಮುಂದಾಗಬೇಕಾಗುತ್ತದೆ. ಹೀಗಾಗಿ ಚರ್ಚೆ ಮಾಡಿ ತಪ್ಪುಗಳನ್ನು ಸರಿಪಡಿಸಿಕೊಳ್ಳಬೇಕು ಎಂಬ ಕಾರಣಕ್ಕೆ ಇಂದು ಕಾರ್ಯಾಗಾರ ಆರಂಭಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಾಗಾರದಲ್ಲಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾದ ರಾಜೇಂದ್ರ ಕುಮಾರ್ ಕಟಾರಿಯಾ, ಕಂದಾಯ ಆಯುಕ್ತರಾದ ಸುನೀಲ್ ಕುಮಾರ್ ಹಾಗೂ ಬೆಂಗಳೂರು ನಗರ ಜಿಲ್ಲೆ ಜಿಲ್ಲಾಧಿಕಾರಿಗಳಾದ ಜಗದೀಶ್ ಅವರು ಉಪಸ್ಥಿತರಿದ್ದರು.

ಅವೈಜ್ಞಾನಿಕ ನೀತಿಯೇ ನಷ್ಟಕ್ಕೆ ಕಾರಣ

ಭೂ ಸ್ವಾಧೀನ ಪ್ರಕ್ರಿಯೆ ವಿಚಾರದಲ್ಲಿ ಕೆಲ ಅಧಿಕಾರಿಗಳ ಬೇಜವಾಬ್ದಾರಿತನ ಹಾಗೂ ಅವೈಜ್ಞಾನಿಕ ನೀತಿಯಿಂದ ಸರಕಾರದ ಬೊಕ್ಕಸಕ್ಕೆ ಅಪಾರ ನಷ್ಟ ಉಂಟಾಗುತ್ತಿದೆ. ಭೂ ಸ್ವಾಧೀನ ಹಾಗೂ ಜಮೀನು ಮಾಲೀಕರಿಗೆ ಪರಿಹಾರ ನೀಡುವ ವಿಚಾರದಲ್ಲಿ ರಾಜ್ಯದಲ್ಲಿ ಬಹಳ ಹಿಂದಿನಿಂದಲೂ ಭಾರೀ ತಪ್ಪುಗಳು ನಡೆಯುತ್ತಲೇ ಇವೆ. ಇದರಿಂದ ಸರಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ನಷ್ಟ ಉಂಟಾಗುತ್ತಿದೆ ಎಂದು ವಿಷಾದಿಸಿದರು. ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಜಮೀನು ಮಾಲೀಕರಿಗೆ 2017ರ ಪರಿಷ್ಕೃತ ದರದ ಪರಿಹಾರ ನೀಡಬೇಕಾದ ಪ್ರಕರಣದಲ್ಲಿ ಕೆಲ ಅಧಿಕಾರಿಗಳು 2023ರ ಪರಿಷ್ಕೃತ ದರ ನೀಡಿದ್ದಾರೆ. ಎಲ್ಲಾ ಸರ್ವೇ ನಂಬರ್‌ಗಳ ನೀರಾವರಿ ಮತ್ತು ಖುಷ್ಕಿ ಜಮೀನುಗಳಿಗೆ ನಿಯಮ ಮೀರಿ ಒಂದೇ ದರ ನಿಗದಿ ಮಾಡಲಾಗಿದೆ. ಭೂ ಪರಿವರ್ತನೆಗೊಂದು ಅಭಿವೃದ್ಧಿಪಡಿಸದ ಭೂಮಿಯ ಪೈಕಿ ಶೇ.55 ರಷ್ಟು ಭೂಮಿಗೆ ಮಾತ್ರ ಪರಿಹಾರ ನೀಡಬೇಕು ಎಂಬ ನಿಯಮವಿದೆ. ಆದರೆ, ಹಲವು ಪ್ರಕರಣಗಳಲ್ಲಿ ಶೇ.100 ರಷ್ಟು ಪರಿಹಾರ ನೀಡಲಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದರು.



ಕೃಷ್ಣಮೇಲ್ದಂಡೆ ಯೋಜನೆ ಭೂಸ್ವಾಧೀನಗೊಂಡ ಅನುದಾನದ ಮೊತ್ತವನ್ನು ಯಾವ ಸರಕಾರದಿಂದ ನೀಡಲು ಸಾಧ್ಯ? ಇದೆಲ್ಲಕ್ಕೂ ಸರಕಾರಿ ಅಧಿಕಾರಿಗಳ ಬೇಜವಾಬ್ದಾರಿ ತನವೇ ಕಾರಣ. ಅವರು ಸರಿಯಾದ ಸಮಯಕ್ಕೆ ನ್ಯಾಯಾಲಯದ ಅಪೀಲಿಗೆ ಹೋಗಿದ್ದರೆ ಭೂ ಸ್ವಾಧೀನ ಪ್ರಕ್ರಿಯೆಗಳು ಸರಕಾರಕ್ಕೆ ಹೊರೆಯಾಗುತ್ತಿರಲಿಲ್ಲ. ಈ ವಿಚಾರದಲ್ಲಿ ಸರಕಾರದ ವಕೀಲರು, ನಿಗಮ ಹಾಗೂ ಜನ ಪ್ರತಿನಿಧಿಗಳಾದ ನಮ್ಮದೂ ತಪ್ಪಿದೆ. ಪರಿಸ್ಥಿತಿ ಹೀಗೆ ಮುಂದುವರೆದರೆ ನಾಳೆ ಮಹತ್ವದ ಕೃಷ್ಣ ಮೇಲ್ದಂಡೆ ಯೋಜನೆ ಭವಿಷ್ಯ ಏನಾಗಲಿದೆ ಯೋಚಿಸಿ.

- ಕೃಷ್ಣಬೈರೇಗೌಡ ಕಂದಾಯ ಸಚಿವ

ಎಸ್.ಆರ್.ವಿಶ್ವನಾಥ್ ಜನ್ಮದಿನದ ಪ್ರಯುಕ್ತ

'ಫಿಟ್ ಇಂಡಿಯಾ – ಫಿಟ್ ಯಲಹಂಕ'

ಆರೋಗ್ಯ ಜಾಗೃತಿಗಾಗಿ 'ಬೃಹತ್ ವಾಕಥಾನ್'

ಯಲಹಂಕ: ಯಲಹಂಕ ಶಾಸಕರಾದ ಎಸ್.ಆರ್ ವಿಶ್ವನಾಥ್ ಅವರ ಜನ್ಮದಿನದ ಪ್ರಯುಕ್ತ ಸಾರ್ವಜನಿಕರಲ್ಲಿ ಆರೋಗ್ಯ ಜಾಗೃತಿ ಮೂಡಿಸುವ ಸಲುವಾಗಿ ಭಾನುವಾರ ಬೆ.05.30 ಗಂಟೆಗೆ ಯಲಹಂಕ ಕೆರೆ ಆವರಣದಲ್ಲಿ 'ಫಿಟ್ ಇಂಡಿಯಾ – ಫಿಟ್ ಯಲಹಂಕ' ಪರಿಕಲ್ಪನೆಯಲ್ಲಿ ಬೃಹತ್ ವಾಕಥಾನ್ ಆಯೋಜಿಸಲಾಗಿದೆ ಎಂದು ಹಿರಿಯ ಬಿಜೆಪಿ ಮುಖಂಡ ದಿಬ್ಬೂರು ಜಯಣ್ಣ ತಿಳಿಸಿದ್ದಾರೆ.

ಸಾರ್ವಜನಿಕರ ಅನುಕೂಲಕ್ಕಾಗಿ ಶಾಸಕರ ಅನುದಾನದಲ್ಲಿ ವಿಶೇಷ ರೀತಿಯಲ್ಲಿ ಅಭಿವೃದ್ಧಿಪಡಿಸಿರುವ ಕೆರೆಯ ಪಾದಚಾರಿ ಮಾರ್ಗದಲ್ಲಿ ವಾಕಥಾನ್ ಮಾಡುವ ಮೂಲಕ ಉತ್ತಮ ಆರೋಗ್ಯ ಮತ್ತು ಕೆರೆಯ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವುದು ಈ ಬೃಹತ್ ವಾಕಥಾನ್ ಮುಖ್ಯ ಉದ್ದೇಶವಾಗಿದೆ ಎಂದು ಯಲಹಂಕ ಗ್ರಾಮಾಂತರ ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿಶ್ವನಾಥಪುರ ಮಂಜುನಾಥ್ ತಿಳಿಸಿದರು.

ಬೆಳಗ್ಗೆ 5.30ಕ್ಕೆ ವಾಕಥಾನ್ ಆರಂಭವಾಗಲಿದ್ದು, ವಾಕಥಾನ್‌ನಲ್ಲಿ ಬಿಜೆಪಿ ಮುಖಂಡರು, ಕಾರ್ಯಕರ್ತರು, ವಿವಿಧ ಸಂಘ ಸಂಸ್ಥೆಗಳ ಮುಖಂಡರು, ವಾಯು ವಿಹಾರಗಳು, ಸಾರ್ವಜನಿಕರು ಸೇರಿದಂತೆ ಸುಮಾರು ಎರಡು ಸಾವಿರಕ್ಕೂ ಹೆಚ್ಚು ಜನ ಪಾಲ್ಗೊಳ್ಳಲಿದ್ದಾರೆ ಎಂದು ಯಲಹಂಕ ನಗರ ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿ ಗಳಾದ ವಿ.ಪವನ್ ಕುಮಾರ್, ಈಶ್ವರ್ ಅವರು ತಿಳಿಸಿದರು.

ಜು.24ರಂದು ಬೃಹತ್ ರಕ್ತದಾನ, ಆರೋಗ್ಯ ಶಿಬಿರ: ಶಾಸಕರ ಜನ್ಮದಿನದ ಅಂಗವಾಗಿ ವಿಶ್ವವಾಣಿ ಫೌಂಡೇಶನ್, ಬಿಜೆಪಿ ಯುವ ಮೋರ್ಚಾ, ಎಸ್.ಸಿ.ಮೋರ್ಚಾ ಯಲಹಂಕ ನಗರ ಹಾಗೂ ಗ್ರಾಮಾಂತರ ಮಂಡಲ ಮತ್ತು ರಾಷ್ಟ್ರೋತ್ಥಾನ ಪರಿಷತ್, ನಾರಾಯಣ ಹೃದಯಾಲಯ, ಲಯನ್ಸ್ ಕ್ಲಬ್, ಬಿಜೆಪಿ ವೈದ್ಯಕೀಯ ಪ್ರಕೋಷ್ಠ, ಸಪ್ತಗಿರಿ ಆಸ್ಪತ್ರೆ, ನೇತ್ರಧಾಮ, ಕೃಷ್ಣ ನೇತ್ರಾಲಯ ಇವರ ಸಂಯುಕ್ತ ಆಶ್ರಯದಲ್ಲಿ ಸಿಂಗನಾಯಕನಹಳ್ಳಿಯ ರಮಡ ಹೋಟೆಲ್ ನಲ್ಲಿ ಜು.24ರಂದು ಬೃಹತ್ ರಕ್ತದಾನ ಶಿಬಿರ, ಉಚಿತ ಆರೋಗ್ಯ ಮತ್ತು ನೇತ್ರ ತಪಾಸಣಾ ಶಿಬಿರ ಆಯೋಜಿಸಿದ್ದು, ಇದರಲ್ಲಿ ಹೃದಯ ಸಂಬಂಧಿ ಖಾಯಿಲೆ ಹಾಗೂ ಸೀಳು ತುಟಿ ಸಮಸ್ಯೆಗಳ ತಪಾಸಣೆ ಸೇರಿದಂತೆ ಹಲವು ಖಾಯಿಲೆಗಳ ತಪಾಸಣೆ ಕೈಗೊಳ್ಳಲಾಗುವುದು ಎಂದು ನಗರ ಮಂಡಲ ಬಿಜೆಪಿ ಪ್ರಭಾರ ಅಧ್ಯಕ್ಷ ಮುರಾರಿ ರಾಮು ಮಾಹಿತಿ ನೀಡಿದರು.

ಸಮಾಚಾರ ಸಣ್ಣದಲ್ಲ

ರಂಗ ಮುಂಗಾರು ತರಬೇತಿ ಶಿಬಿರ ನಾಳೆಯಿಂದ

ಬೆಂಗಳೂರು: ರಂಗ ಮುಂಗಾರು ತರಬೇತಿ ಶಿಬಿರ ಜು.21 ರಿಂದ ಇಪ್ಪತ್ತು ದಿನಗಳ ಕಾಲ ಪ್ರತಿದಿನ ಸಂಜೆ ಉದಯಭಾನು ಕಲಾಸಂಘದಲ್ಲಿ ನಡೆಯಲಿದೆ. ಉದಯಭಾನು ರಂಗಶಾಲೆ ಆಯೋಜಿಸಿರುವ ಶಿಬಿರವನ್ನು ಹಿರಿಯ ರಂಗಕರ್ಮಿ ಸಾಗರ್ ನೀನಾಸಂ ಅವರ ನೇತೃತ್ವದಲ್ಲಿ ನಡೆಸಲಾಗುವುದು. ರಂಗ ಚಟುವಟಿಕೆಗಳಲ್ಲಿ ಆಸಕ್ತಿ ಇರುವ ಹದಿಮೂರು ವರ್ಷ ಪ್ರಾಯಕ್ಕಿಂತ ಮೇಲ್ಪಟ್ಟವರಿಗೆ ರಂಗ ನಟನೆ, ನೇಪಥ್ಯ, ಮುಖವರ್ಣಿಕೆ, ವಸ್ತ್ರವಿನ್ಯಾಸ, ಮೇಳ, ಧ್ವನಿ–ಬೆಳಕು ವ್ಯವಸ್ಥೆಗಳ ಪ್ರಾಥಮಿಕ ಪರಿಚಯ ಮತ್ತು ತರಬೇತಿ ನೀಡಲಾಗುವುದು. ಆಸಕ್ತರು ಸಂಘದ ಕಚೇರಿಗೆ ಭೇಟಿ ನೀಡಿ ಅಥವಾ ವಾಟ್ಸ್ ಆ್ಯಪ್ ಸಂಖ್ಯೆ 9844192952 ಗೆ ಸಂದೇಶ ಕಳಿಸುವ ಮೂಲಕ ನೋಂದಾಯಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಬಿಡಿಎ ಫ್ಲಾಟ್ ಮೇಳಕ್ಕೆ ಉತ್ತಮ ಸ್ಪಂದನೆ

ಬೆಂಗಳೂರು: ಬಿಡಿಎ ಶನಿವಾರ ಕೊಮ್ಮಘಟ್ಟ ವಸತಿ ಸಮುಚ್ಚಯದಲ್ಲಿ ಆಯೋಜಿಸಿದ್ದ ಫ್ಲಾಟ್ ಮೇಳಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆತಿದೆ. ಆಷಾಡ ಮಾಸವಾಗಿದ್ದರೂ ಫ್ಲಾಟ್ ಮೇಳದಲ್ಲಿ ಸುಮಾರು 500ಕ್ಕೂ ಹೆಚ್ಚು ಸಾರ್ವಜನಿಕರು ಭಾಗವಹಿಸಿದ್ದು, ಕೆಲವರು 100 ಫ್ಲಾಟ್ ಗಳನ್ನು ಕಾಯ್ದಿರಿಸಿದರೆ , 75 ಸಾರ್ವಜನಿಕರು ಫ್ಲಾಟ್ ನ ಪ್ರಾರಂಭಿಕ ಠೇವಣಿ ಮೊತ್ತವನ್ನು ಪಾವತಿಸಿ, ಸ್ಥಳದಲ್ಲಿಯೇ ಹಂಚಿಕೆ ಪತ್ರವನ್ನು ಪಡೆದಿದ್ದಾರೆ. ಕೊಮ್ಮಘಟ್ಟದಲ್ಲಿ ಫ್ಲಾಟ್ ಮೇಳವನ್ನು ಆಯೋಜಿಸಿದ್ದರೂ ಕಣಿಮಿಣಿಕೆ ವಸತಿ ಸಮುಚ್ಚಯಕ್ಕೆ ಬೇಡಿಕೆ ಹೆಚ್ಚಾಗಿರುತ್ತದೆ. ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಚ್ ಡಿಎಫ್‌ಸಿ ಬ್ಯಾಂಕ್, ಪಂಜಾಬ್ ನ್ಯಾಷನಲ್ ಬ್ಯಾಂಕ್ ಮತ್ತು ಸೌತ್ ಇಂಡಿಯನ್ ಬ್ಯಾಂಕ್ ಗಳ ಪ್ರತಿನಿಧಿಗಳು ಸ್ಥಳದಲ್ಲಿ ಇದ್ದರು. ಬಿಡಿಎ ಆರ್ಥಿಕ ಸದಸ್ಯ ಡಾ. ಎ. ಲೋಕೇಶ, ಮುಖ್ಯ ಲೆಕ್ಕಾಧಿಕಾರಿ ಶ್ರೀನಿವಾಸಮೂರ್ತಿ, ಉಪ ಕಾರ್ಯದರ್ಶಿ ಜ್ಞಾನೇಶ್, ಅಭಿಯಂತರ ಅಧಿಕಾರಿ ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಇಂಬವಳ್ಳಿ, ಭುವನೇಶ್ವರ್ ಹಾಗೂ ಇತರೆ ಅಧಿಕಾರಿಗಳು ಇದ್ದರು.

ಉಚಿತ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಎಸ್.ಆರ್.ಎನ್.ಜಿ.ಸಂಪನ್ನಪ್ಪ ಧರ್ಮಸಂಸ್ಥೆಯ ಉಚಿತ ವಿದ್ಯಾರ್ಥಿನಿಲಯ ದಾಖಲಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. 2025–26 ನೇ ಸಾಲಿನ ವಿದ್ಯಾರ್ಥಿ ನಿಲಯಕ್ಕೆ ದಾಖಲಾತಿಗಳು ಆರಂಭಗೊಂಡಿದ್ದು, ಡಿಪ್ಲೊಮಾ ಹಾಗೂ ಪದವಿ ವ್ಯಾಸಂಗಕ್ಕಾಗಿ ಶೇ.60 ರಷ್ಟು ಮೇಲ್ಪಟ್ಟು ಅಂಕ ಗಳಿಸಿದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು. ಅರ್ಹ ವಿದ್ಯಾರ್ಥಿಗಳಿಗೆ ಅರ್ಜಿಗಳನ್ನು ಜು.27 ರಿಂದ ಆ.23ರ ವರಗೆ ಸಂಸ್ಥೆಯ ಕಚೇರಿಯಲ್ಲಿ ನೀಡಲಾಗುವುದು. ಭರ್ತಿ ಮಾಡಿದ ಅರ್ಜಿಯನ್ನು ಆ.25 ರ ಒಳಗಾಗಿ ಸಲ್ಲಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ 7204020874 ಗೆ ಸಂಪರ್ಕಿಸಿ.

ಸ್ನಾತಕೋತ್ತರ ಪದವಿಗಳಿಗಾಗಿ ಐಬಿಎಂನಿಂದ ಪ್ರವೇಶ ಪರೀಕ್ಷೆ

ಬೆಂಗಳೂರು: 2025–26 ಶೈಕ್ಷಣಿಕ ವರ್ಷಕ್ಕೆ ಭಾರತದಾದ್ಯಂತದ ಪ್ರತಿಷ್ಠಿತ ವಿಶ್ವವಿದ್ಯಾಲಯಂಗಳಿಂದ ಸ್ನಾತಕೋತ್ತರ ಪದವಿ ಪಡೆಯಲು ಬಯಸುವ ವಿದ್ಯಾರ್ಥಿಗಳಿಗಾಗಿ ಐಬಿಎಂ ಪ್ರವೇಶ ಪರೀಕ್ಷೆ ಆರಂಭಿಸಿದೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಐಬಿಎಂ, ಐಬಿಎಂ ಕ್ಯೂಜೆಡಿ ನೈಜ–ಪ್ರಪಂಚದ ತಂತ್ರಜ್ಞಾನ ತರಬೇತಿಯನ್ನು ಶೈಕ್ಷಣಿಕ ಚೌಕಟ್ಟಿನಲ್ಲಿ ಸೇರಿಸಲು ವಿನ್ಯಾಸಗೊಳಿಸಲಾದ ಯೋಜನೆಯಾಗಿದೆ. ಐಬಿಎಂನ ಟಾಪ್ ಇಂಡಸ್ಟ್ರಿ ಎಕ್ಸ್‌ಪರ್ಟ್‌ಗಳು ಅಭಿವೃದ್ಧಿಪಡಿಸಿದ, ಕ್ಯೂಜೆಡಿ ಕ್ಲೌಡ್ ಲ್ಯಾಬ್‌ಗಳು, ಎಐ–ಚಾಲಿತ ಕಲಿಕಾ ಪ್ಲಾಟ್‌ಫಾರ್ಮ್, ಜ್ಞಾನ ಹಂಚುವ ಬೂಟ್ ಕ್ಯಾಂಪ್, ಲೈವ್ ಪ್ರಾಜೆಕ್ಟ್ ಮತ್ತು ಕಾರ್ಪೊರೇಟ್ ಮಾರ್ಗದರ್ಶನ ಒಳಗೊಂಡಿದೆ. ಐಬಿಎಂ ಗ್ಲೋಬಲ್ ಪ್ರವೇಶ ಪರೀಕ್ಷೆ ಐಬಿಎಂನ ಸ್ನಾತಕೋತ್ತರ ಕಾರ್ಯಕ್ರಮಗಳಾದ ಎಂಬಿಎ, ಎಂಸಿಎ ಮತ್ತು ಎಂಎಸ್‌ಸಿ ಕಂಪ್ಯೂಟರ್ ಸೈನ್ಸ್ ಶಿಕ್ಷಣಕ್ಕೆ ಪ್ರವೇಶಿಸಲು ಅವಕಾಶ ಒದಗಿಸುತ್ತದೆ. ಈ ಪ್ರವೇಶ ಪರೀಕ್ಷೆಯ ಮೂಲಕ ಪ್ರವೇಶ ಪಡೆದ ವಿದ್ಯಾರ್ಥಿಗಳು ಐಬಿಎಂನ ಭವಿಷ್ಯದ ಪಠ್ಯಕ್ರಮದೊಂದಿಗೆ ಸಂಯೋಜಿಸಲ್ಪಟ್ಟ ವಿಶ್ವವಿದ್ಯಾಲಯದ ಕಾರ್ಯಕ್ರಮಗಳಿಗೆ ದಾಖಲಾಗುತ್ತಾರೆ. ಇದು ಉದ್ಯಮ–ಚಾಲಿತ ವಿಷಯ, ಇನ್ನೋವೇಶನ್ ಲ್ಯಾಬ್‌ಗಳು, ಐಬಿಎಂನ ಡಿಜಿಟಲ್ ಬ್ಯಾಡ್ಜ್ ಮತ್ತು ಯೋಜನೆಗಳು, ಇಂಟರ್ನ್‌ಶಿಪ್ ಮತ್ತು ಉದ್ಯೋಗ ಅವಕಾಶಗಳೊಂದಿಗೆ ನೈಜ–ಪ್ರಪಂಚದ ಕಲಿಕೆಯ ಅನುಭವ ಒದಗಿಸುತ್ತದೆ ಎಂದು ತಿಳಿಸಿದೆ.

ಬೇಂದ್ರೆ ಕಾವ್ಯ ಕೊಲ್ಲುವ ಪ್ರಯತ್ನ ನಡೆದಿತ್ತೆನ್ನುವುದು ಬೇಸರ



ದ.ರಾ.ಬೇಂದ್ರೆ ನಾಕುತಂತಿ ಷಷ್ಟ್ಯಬ್ದಿ ಸರಣಿಯ 'ನಾದ–6' ಕಾರ್ಯಕ್ರಮದಲ್ಲಿ ಕಾದಂಬರಿಕಾರ ಡಾ. ಜಿ.ಬಿ.ಹರೀಶ ಇದ್ದರು.

ಬೆಂಗಳೂರು: ಬೇಂದ್ರೆಯವರ ಕಾವ್ಯದ ಆಳಕ್ಕಿಳಿದು ಅರ್ಥ ಮಾಡಿಕೊಳ್ಳಲಾಗದೆ, ಬೇಂದ್ರೆ ಕಾವ್ಯದಲ್ಲಿ ಏನೂ ಇಲ್ಲ ಎಂದು ಕೊಲ್ಲುವ ಪ್ರಯತ್ನ ಕನ್ನಡ ಸಾರಸ್ವತ ಲೋಕದಲ್ಲಿ ನಡೆದಿದ್ದು ಬೇಸರದ ಸಂಗತಿ ಎಂದು ಕವಿ, ಕಾದಂಬರಿಕಾರ ಡಾ. ಜಿ.ಬಿ.ಹರೀಶ ಹೇಳಿದರು.

ಅಖಿಲ ಭಾರತೀಯ ಸಾಹಿತ್ಯ ಪರಿಷದ್ (ಅಭಾಸಾಪ) ಬೆಂಗಳೂರು ದಕ್ಷಿಣ ಘಟಕದ ವತಿಯಿಂದ ಸುಬ್ರಹ್ಮಣ್ಯಪುರದ ರಾಜಾ ಗಾರ್ಡೇನಿಯಾ ಲೇಔಟ್‌ನ ಭಾರದ್ವಾಜ ಸಭಾಂಗಣದಲ್ಲಿ ಆಯೋಜಿಸಿದ್ದ ನಾಕುತಂತಿ ಷಷ್ಟ್ಯಬ್ದಿ ಸರಣಿಯ 'ನಾದ–6' ಕಾರ್ಯಕ್ರಮದಲ್ಲಿ ಮಾತನಾಡಿದರು.

ಬೇಂದ್ರೆಯವರು ಗ್ರಾಮೀಣ ಸೊಗಡಿನಿಂದ ವೇದಗಳ ವರೆಗೆ ಎಲ್ಲ ವಿಚಾರಗಳನ್ನೂ ತಮ್ಮ ಕಾವ್ಯಗಳಲ್ಲಿ ತಂದಿದ್ದಾರೆ. ಆದರೆ ಬೇಂದ್ರೆಯವರನ್ನು ವಿಮರ್ಶೆ ಮಾಡಿದ ಅನೇಕರು ಅವರ ಕಾವ್ಯದ ಆತ್ಮವನ್ನು ಪ್ರವೇಶಿಸಿಯೇ ಇಲ್ಲ. ಕವಿಯನ್ನು ಮೇಲೆಮೇಲೆ ಅರ್ಥಮಾಡಿಕೊಂಡು ಮುಂದೆ ಹೋಗಿದ್ದಾರೆ. ಯಾವುದೇ ರಸಿಕ, ವಿಮರ್ಶಕರಿಗೆ ಕವಿಯ ದೃಷ್ಟಿ, ಕೃಪೆ ಸಿಕ್ಕರೆ ಮಾತ್ರ ಕಾವ್ಯ ಅರ್ಥವಾಗುತ್ತದೆ. ಇಲ್ಲದಿದ್ದರೆ ವಿಮರ್ಶೆಯ ಮೇಲೆ ವಿಮರ್ಶೆ ನಡೆಯುತ್ತದೆಯೇ ಹೊರತು ಆಳಕ್ಕೆ ಇಳಿಯುವುದಿಲ್ಲ. ಬರೆದ್ದದ್ದರಲ್ಲೇ ಏನೇನೋ ಕಲ್ಪನೆ ಮಾಡಿಕೊಂಡು ಆಹಾ ಓಹೋ ಎಂದು ಹೇಳುತ್ತಿದ್ದ ನವ್ಯ ಕವಿಗಳನ್ನು ಸ್ವತಃ ಬೇಂದ್ರೆ 'ಊಹೆ' ಕವನದಲ್ಲಿ ಟೀಕಿಸಿದ್ದಾರೆ. ವ್ಯರ್ಥವಾದ ಒಂದು ಕವನವನ್ನೂ ಬೇಂದ್ರೆಯವರು ಬರೆದಿಲ್ಲ.

ಬೇಂದ್ರೆಯವರ ಕವನದಲ್ಲಿ ಸತ್ವವಿಲ್ಲ ಎಂದು ಚಂದ್ರಶೇಖರ ಕಂಬಾರರು ಒಮ್ಮೆ ಬಾಷಣ ಮಾಡಿದ್ದರು. ಬೇಂದ್ರೆಯವರ ಕಾವ್ಯದಲ್ಲಿ ಸತ್ವವಿತ್ತು ಎನ್ನುವುದು ಅವರು ನಿಧನರಾದ ದಶಕದ ನಂತರವೂ ಅವರನ್ನು ಸ್ಮರಿಸುತ್ತಿರುವುದೇ ಸಾಕ್ಷಿ. ಕಂಬಾರರ ಸಾಹಿತ್ಯದಲ್ಲಿ ಸತ್ವ ಇದೆಯೇ ಇಲ್ಲವೇ ಎಂದು ಕಾಲವೇ ಉತ್ತರಿಸಲಿದೆ. ಹೀಗೆ ಅನೇಕ ಸಂದರ್ಭಗಳಲ್ಲಿ ಬೇಂದ್ರೆ ಕಾವ್ಯವನ್ನು ಕೊಲ್ಲುವ ಪ್ರಯತ್ನ ಕನ್ನಡದಲ್ಲಿ ನಡೆದದ್ದು ಬೇಸರದ ಸಂಗತಿ ಎಂದರು. ಕವಿ ಬರೆಯುವುದಷ್ಟೇ ಮುಖ್ಯವಾದುದು, ರಸಿಕರು ಅದನ್ನು ಉಳಿಸಿಕೊಳ್ಳುವುದು. ಸಂಸ್ಕೃತದಲ್ಲಿ ಐದಾರು ಕವಿಗಳನ್ನು ಮಹಾಕವಿ ಎಂದು ಉಳಿಸಿಕೊಂಡು ಬಂದಿದ್ದಾರೆ. ಆದರೆ ಕನ್ನಡದಲ್ಲಿ ಈ ರೀತಿಯ ಅಭ್ಯಾಸ ಕಡಿಮೆ. ಕೆಲವು ಭಾಷೆಗಳು ಉತ್ಪತ್ತಿಯಾಗಿ ಅನೇಕ ವರ್ಷಗಳ ನಂತರ ಕಾವ್ಯ ರಚನೆ ಆಗುತ್ತದೆ. ಆದರೆ ಕನ್ನಡದ ಆರಂಭದಿಂದಲೇ ಕವಿತೆ ರಚನೆಯಾಗಿದೆ. ಇಂತಹ ಭಾಷೆಯ ಸಾಹಿತ್ಯ, ಅದರ ಕವಿಗಳನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಪ್ರಯತ್ನ ಆಗಬೇಕಾಗಿದೆ ಎಂದರು.

ಕಾರ್ಯಕ್ರಮದ ಆರಂಭದಲ್ಲಿ ಡಾ.ಮಾರುತಿರಾಮ್ ಅವರಿಂದ ಬೇಂದ್ರೆ ಕಾವ್ಯಗಾಯನ ನಡೆಯಿತು. ಅಭಾಸಾಪ ಬೆಂಗಳೂರು ಮಹಾನಗರ ಅಧ್ಯಕ್ಷ ಎಂ.ಎಸ್. ನರಸಿಂಹಮೂರ್ತಿ, ಡಾ. ಭಾನು ಉಪಸ್ಥಿತರಿದ್ದರು.

ಉಚಿತ ವೈದ್ಯಕೀಯ ಶಿಬಿರ ಇಂದು

ಬೆಂಗಳೂರು: ಉಚಿತ ವೈದ್ಯಕೀಯ ಶಿಬಿರ ಉದ್ಘಾಟನಾ ಸಮಾರಂಭ ಭಾನುವಾರ ಬೆಳಗ್ಗೆ 9.30 ಕ್ಕೆ ಮಲ್ಲೇಶ್ವರದ ಹವ್ಯಕ ಭವನದಲ್ಲಿ ನಡೆಯಲಿದೆ.

ಅಖಿಲ ಹವ್ಯಕ ಮಹಾಸಭೆ ಆಯೋಜಿಸಿರುವ ಶಿಬಿರವನ್ನು ಶಾಸಕ ಡಾ.ಸಿ.ಎನ್.ಅಶ್ವಥ್ ನಾರಾಯಣ್ ಉದ್ಘಾಟಿಸಲಿದ್ದು, ಮಹಾಸಭೆಯ ಅಧ್ಯಕ್ಷ ಡಾ.ಗಿರಿಧರ ಕಜೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಶ್ರೀಭಾರತೀ ಆರೋಗ್ಯಧಾಮ, ಕರ್ನಾಟಕ ಕ್ಯಾನ್ಸರ್ ಸೊಸೈಟಿ, ಸುನೇತ್ರ ಕಣ್ಣಿನ ಆಸ್ಪತ್ರೆ, ಶ್ರೀರಕ್ಷಾ ಲ್ಯಾಬ್ಸ್, ಹಾಗೂ ಆಸ್ಟರ್ ಆರ್‌ವಿ ಆಸ್ಪತ್ರೆಗಳ ಸಹಯೋಗದೊಂದಿಗೆ ವೈದ್ಯಕೀಯ ಶಿಬಿರ ನಡೆಯಲಿದ್ದು, ಶಿಬಿರದಲ್ಲಿ ರಕ್ತ ಪರೀಕ್ಷೆ, ಸಕ್ಕರೆ ಕಾಯಿಲೆ, ಎಕೋಸ್ಕ್ಯಾನ್, ಇಸಿಜಿ, ಬಿಪಿ, ಕಣ್ಣು, ಕಿವಿ ಮೂಗು ಗಂಟಲು ಬೇನೆ, ಕ್ಯಾನ್ಸರ್, ಥೈರಾಯ್ಡ್, ಸಂದಿವಾತ, ಮುಟ್ಟಿನ ತೊಂದರೆ, ಚರ್ಮ ಕಾಯಿಲೆ, ದಮ್ಮು, ಕೆಮ್ಮು, ಅಲರ್ಜಿ, ಮುಂತಾದ ಕಾಯಿಲೆಗಳಿಗೆ ನಾಡಿನ 20 ಕ್ಕೂ ಅಧಿಕ ಖ್ಯಾತ ವೈದ್ಯರು ಉಚಿತ ಸಲಹೆ ಹಾಗೂ ಚಿಕಿತ್ಸೆ ನೀಡಲಿದ್ದಾರೆ.

ಸಾರ್ವಜನಿಕರಿಗೆ ಈ ಶಿಬಿರದಲ್ಲಿ 'ಪಾಲ್ಗೊಳ್ಳಲು ಮುಕ್ತ ಅವಕಾಶವಿದ್ದು, ಎಲ್ಲಾ ಸಾರ್ವಜನಿಕರು ಶಿಬಿರದ ಪ್ರಯೋಜನ ಪಡೆದುಕೊಳ್ಳಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅಗ್ನಿವೀರರ ನೇಮಕಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಅಗ್ನಿಪಥ ಏರ್‌ಫೋರ್ಸ್ ಅಗ್ನಿವೀರರ ನೇಮಕಾತಿಗೆ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ವಿಜ್ಞಾನ ವಿಷಯದಲ್ಲಿ ಗಣಿತ, ಭೌತಶಾಸ್ತ್ರ ಮತ್ತು ಇಂಗ್ಲಿಷ್ ಶೇ.50ರಷ್ಟು ಪಿಯುಸಿ 10+2 / ಎಂಜಿನಿಯರಿಂಗ್‌ನಲ್ಲಿ ಮೂರು ವರ್ಷ ಡಿಪ್ಲೊಮಾ ಶೇ.50 ರಷ್ಟು ಪಡೆದ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಯ ಮೂಲಕ ಆಯ್ಕೆ ಮಾಡಲಾಗವುದು. ಅರ್ಜಿ ಸಲ್ಲಿಸಲು 2025 ರ ಜುಲೈ 31 ಕೊನೆಯ ದಿನಾಂಕವಾಗಿದೆ.

ಅರ್ಜಿ ಸಲ್ಲಿಸಲು ಅಗತ್ಯ ದಾಖಲೆಗಳಾದ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ಜಾತಿ ಮತ್ತು ಆದಾಯ (ಪ.ಜಾ./ಪ.ಪಂ ಅಭ್ಯರ್ಥಿಗಳು ಇಂಗ್ಲಿಷ್ ಭಾಷೆಯಲ್ಲಿರಬೇಕು), ಒಬಿಸಿ ಪ್ರಮಾಣಪತ್ರ (2ಎ, 2ಬಿ, ಅಭ್ಯರ್ಥಿಗಳು ಇಂಗ್ಲಿಷ್ ಭಾಷೆಯಲ್ಲಿರಬೇಕು), ಇಡಬ್ಲ್ಯುಎಸ್ (3ಎ, 3ಬಿ), ಆಧಾರ್ ಕಾರ್ಡ್ , ಪೋಟೋ, ಸಹಿ(ಪೋಟೋ ಬ್ಯಾಗ್ರೌಂಡ್ ಬಿಳಿಯಾಗಿರಬೇಕು. ಮತ್ತು ಪೋಟೋ ಕೆಳಗಡೆ ಅಭ್ಯರ್ಥಿಯ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯಲ್ಲಿರುವಂತೆ ಹೆಸರು ಹಾಗೂ ಪೊಟೋ ತೆಗೆಸಿದ ದಿನಾಂಕ ನಮೂದಿಸಿ ಸಲ್ಲಸಬೇಕು ಎಂದು ಪ್ರಕಟಣೆ ತಿಳಿಸಿದೆ.

ದೇಶ ಮೊದಲು, ಪಕ್ಷ ನಂತರ ಎಂಬ ದೇಶ ಭಕ್ತಿ ಸಾರುವ ಪಕ್ಷ ಬಿಜೆಪಿ: ಕೇಂದ್ರ ಸಚಿವ ವಿ.ಸೋಮಣ್ಣ

ಅಭಿವೃದ್ಧಿಗೆ ಜನರ ಸಹಕಾರ ಶ್ರೀರಕ್ಷೆ

ವಿಜಯನಗರ: ಅಭಿವೃದ್ಧಿ ಯೋಜನೆಗಳು ಯಶಸ್ವಿಯಾಗಿ ಜಾರಿಗೊಳ್ಳಲು ಕ್ಷೇತ್ರದ ಜನರ ಶ್ರೀರಕ್ಷೆ ಬಹಳ ಮುಖ್ಯ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಹೇಳಿದರು.

ವಿ.ಸೋಮಣ್ಣ ಅಭಿಮಾನಿಗಳ ಬಳಗ ಆಯೋಜಿಸಿದ್ದ ತಮ್ಮ ಹುಟ್ಟುಹಬ್ಬ ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಿದ್ದಗಂಗಾ ಮಠದ ಶಿವಕುಮಾರ ಮಹಾಸ್ವಾಮಿಜಿ, ಆದಿಚುಂಚನಗಿರಿ ಮಠದ ಬಾಲಗಂಗಾಧರನಾಥ ಮಹಾಸ್ವಾಮಿಗಳ ಆಶೀರ್ವಾದದ ಫಲದಿಂದ ನಾನು ರಾಜಕೀಯದಲ್ಲಿ ಯಶಸ್ವಿಯಾಗಲು, ಜನಸೇವೆ ಮಾಡಲು ಸಾಧ್ಯವಾಯಿತು. ದೇಶ ಮೊದಲು, ಪಕ್ಷ ನಂತರ, ದೇಶ ಉಳಿದರೆ ಪಕ್ಷ ಉಳಿಯುತ್ತದೆ. ಈ ಮುಂಚೆ ಬಿನ್ನಿಪೇಟೆ ಕ್ಷೇತ್ರವಾಗಿದ್ದ ವಿಜಯನಗರ, ಗೋವಿಂದರಾಜ ವಿಧಾನಸಭಾ ನನ್ನ ಆಡಳಿತ ಅವಧಿಯಲ್ಲಿ ಜನರ ಆಶಯದಂತೆ ಕೆಲಸ ಮಾಡಿ ಮಾದರಿ ವಿಧಾನಸಭಾ ಕ್ಷೇತ್ರ ರೂಪಿಸುವಲ್ಲಿ ಜನರು ಸಹಕಾರ ನೀಡಿದರು. ಪ್ರಧಾನಿ ನರೇಂದ್ರಮೋದಿ ಅವರ ನೇತೃತ್ವದಲ್ಲಿ ದೇಶ ಅಭಿವೃದ್ಧಿ ಪಥದತ್ತ ಸಾಗುತ್ತಿದೆ ಮತ್ತು ರಾಜ್ಯ ರೈಲ್ವೆ ಯೋಜನೆಗಳಿಗೆ ಸಂಪೂರ್ಣ ಸಹಕಾರ ನೀಡುತ್ತಿದ್ದಾರೆ. ಬೆಂಗಳೂರಿನಂತೆ ತುಮಕೂರು ಲೋಕಸಭಾ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ, ಕಣ್ಣಿನ ಪರೀಕ್ಷೆ ನಡೆಸಲಾಯಿತು. ಮಾಜಿ ಮಂಡಲ ಅಧ್ಯಕ್ಷ ವಿಶ್ವನಾಥಗೌಡ, ಎಚ್.ರವೀಂದ್ರ, ಮಾಜಿ ಪಾಲಿಕೆ ಸದಸ್ಯ ಮೋಹನ್ ಕುಮಾರ್, ದಾಸೇಗೌಡ, ಬಿಜೆಪಿ ಮುಖಂಡ ಸಿ.ಎಂ.ರಾಜಪ್ಪ, ಪಾಲಿಕೆ ಮಾಜಿ ಸದಸ್ಯರುಗಳಾದ ಟಿ.ವಿ.ಕೃಷ್ಣ, ಡಾ.ಎಸ್.ರಾಜು, ಪಲ್ಲವಿ ಚನ್ನಪ್ಪ, ಬಿಜೆಪಿ ಮುಖಂಡರುಗಳಾದ ವೇಣು, ಕನಕಪುರ ರಾಜಣ್ಣ, ಎಚ್. ರಮೇಶ್, ಶ್ರೀಧರ್, ಕ್ರಾಂತಿರಾಜು, ರತ್ನಮ್ಮ ಉಪಸ್ಥಿತರಿದ್ದರು.

ಸೋಮಣ್ಣ ಅವರ ಹಾದಿಯಲ್ಲಿ ಜನಸೇವೆ: ಡಾ.ಅರುಣ್ ಸೋಮಣ್ಣ ಮಾತನಾಡಿ, ಕಾರ್ಯಕರ್ತರು, ಸ್ನೇಹಿತರ ಸಹಕಾರ, ಬೆಂಬಲದಿಂದ ಜನಸೇವೆ ಮಾಡಲು ಸಾಧ್ಯವಾಗಿದೆ. ವಿಜಯನಗರ, ಗೋವಿಂದರಾಜನಗರ ವಿಧಾನಸಭಾ ಮತ್ತು ತುಮಕೂರು ಲೋಕಸಭಾ ಕ್ಷೇತ್ರಗಳು ವಿ.ಸೋಮಣ್ಣ ಅವರನ್ನು ರಾಜಕೀಯವಾಗಿ ಬೆಳಸಿದೆ. ಕಳೆದ 45ವರ್ಷಗಳಿಂದ ಜನಸೇವೆಯೆ ನನ್ನ ಉಸಿರು ಎಂದು ಸೋಮಣ್ಣ ಅವರು ಹಗಲಿರುಳು ಶ್ರಮಿಸುತ್ತಿದ್ದಾರೆ. ಅಭಿವೃದ್ಧಿಯ ಪರ, ಜನಪರ ಕೆಲಸಗಳು ಜನರಿಗೆ ನೀಡಿ ಉತ್ತಮ ಜನನಾಯಕ ಎಂದು ಗುರುತಿಸಿಕೊಂಡಿದ್ದಾರೆ. ಎಲ್ಲಾ ರಾಜಕೀಯ ಪಕ್ಷಗಳು ಮತ್ತು ರಾಜಕಾರಣಿಗಳು ವಿ. ಸೋಮಣ್ಣ ಅವರನ್ನು ಒಬ್ಬ ಕೆಲಸಗಾರ ಎಂಬ ಪ್ರಶಂಸೆ ವ್ಯಕ್ತಪಡಿಸುತ್ತಾರೆ, ಅವರ ಹಾದಿಯಲ್ಲಿ ನಾನು ಸಹ ಬಿಜೆಪಿ ಪಕ್ಷದಲ್ಲಿ ಸಂಘಟನೆ, ಜನಸೇವೆ ಮಾಡುತ್ತಿದ್ದೇನೆ ಎಂದರು.

ಸೋಮಣ್ಣ ಅಭಿಮಾನಿಗಳ ಬಳಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇಕ್ ಕತ್ತರಿಸಿ ವಿ. ಸೋಮಣ್ಣ ಹುಟ್ಟುಹಬ್ಬ ಆಚರಿಸಿಕೊಂಡರು.

ಸಮಾಚಾರ ಸಣ್ಣದಲ್ಲ

ಯಕ್ಷಗಾನ ಕಲಾವಿದ ವೆಂಕಟರಮಣ ನಿಧನ

ಮಂಗಳೂರು: ಯಕ್ಷಗಾನದ ಮೇರು ಕಲಾವಿದ ಪಾತಾಳ ವೆಂಕಟರಮಣ ಭಟ್ (92) ಶನಿವಾರ ಹೃದಯಾಘಾತದಿಂದ ಸ್ವಗೃಹ ಉಪ್ಪಿನಂಗಡಿಯಲ್ಲಿ ನಿಧನರಾದರು. ತೆಂಕು ಹಾಗೂ ಬಡಗು ತಿಟ್ಟುಗಳಲ್ಲಿ ವೇಷ ಮಾಡಿ ಯಕ್ಷಾಭಿಮಾನಿಗಳ ಮನ ಗೆದ್ದವರು ವೆಂಕಟರಮಣ ಭಟ್ಟರು.

16 ನವೆಂಬರ್ 1933ರಲ್ಲಿ ಪುತ್ತೂರು ಸಮೀಪದ ಬೈಪದವು ಎಂಬಲ್ಲಿ ಜನಿಸಿದರು. ಚಿಕ್ಕಂದಿನಲ್ಲೇ ಯಕ್ಷಗಾನ ಆಸಕ್ತಿ ಬೆಳೆಸಿಕೊಂಡವರು. ಪುತ್ತೂರು ಕೃಷ್ಣ ಭಟ್ಟರಿಂದ ತೆಂಕುತಿಟ್ಟಿನ ಯಕ್ಷಗಾನ ವಿದ್ಯೆ ಕಲಿತು, ಸೌಕೂರು ಮೇಳ, 1954ರಲ್ಲಿ ಮೂಲ್ಕಿ ಮೇಳ, 1963ರಲ್ಲಿ ಧರ್ಮಸ್ಥಳ ಮೇಳಕ್ಕೆ ಸೇರಿದರು. ಧರ್ಮಸ್ಥಳ ಮೇಳದ ತಿರುಗಾಟವು ಪಾತಾಳ ವೆಂಕಟರಮಣ ಭಟ್ಟರ ಕಲಾ ಜೀವನದ ಸುವರ್ಣ ಯುಗ. ರಂಭೆ, ಊರ್ವಶಿ, ಮೇನಕೆ, ಸತ್ಯಭಾಮೆ, ದ್ರೌಪದಿ, ಮೀನಾಕ್ಷಿ ಮೊದಲಾದ ಪಾತ್ರಗಳಿಗೆ ಜೀವ ತುಂಬಿದವರು ವೆಂಕಟರಮಣ ಭಟ್ಟರು. ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ, ಕಸಾಪ ಪ್ರಶಸ್ತಿ, ಯಕ್ಷಗಾನ ಕಲಾರಂಗ ಪ್ರಶಸ್ತಿ, ವಿಟ್ಲ ಗೋಪಾಲಕೃಷ್ಣ ಭಟ್ ಪ್ರತಿಷ್ಠಾನ ಪ್ರಶಸ್ತಿ, ವಿದ್ಯಾಮಾನ್ಯ ಪ್ರಶಸ್ತಿ, ಯಕ್ಷ ಕಲಾನಿಧಿ ಪ್ರಶಸ್ತಿ, ಅಗರಿ ಪ್ರಶಸ್ತಿ ದೊರೆತಿವೆ. ಅನೇಕ ಸಂಘ ಸಂಸ್ಥೆಗಳು ಅವರನ್ನು ಗೌರವಿಸಿವೆ.

ಅನುದಾನ ತಾರತಮ್ಯ ಕೈ ವಿರುದ್ಧ ಕಮಲ ಕಿಡಿ

← ಮೊದಲಪುಟದಿಂದ

ಅಲ್ಲದೆ, ತಮಗೆ ಇಷ್ಟ ಬಂದ ಹಾಗೆ ಬರೀ ಕಾಂಗ್ರೆಸ್ ಶಾಸಕರಿಗೆ ಮಾತ್ರ ಅನುದಾನ ಕೊಡೋಕೆ ರಾಜ್ಯ ಸರಕಾರದ ಖಜಾನೆ ನಿಮ್ಮ ಪಕ್ಷದ ಪಾರ್ಟಿ ಫಂಡ್ ಅಲ್ಲ, ಅದು ಆರೂವರೆ ಕೋಟಿ ಕನ್ನಡಿಗರ ಬೆವರಿನ ತೆರಿಗೆ ಹಣ. ಈ ಮಲತಾಯಿ ಧೋರಣೆ ನಿಲ್ಲಿಸಿ, ಎಲ್ಲ ಕ್ಷೇತ್ರಗಳಿಗೂ ಅನುದಾನ ಬಿಡುಗಡೆ ಮಾಡಿ ಎಂದು ಒತ್ತಾಯಿಸಿದ್ದಾರೆ.

ತಾರತಮ್ಯ ಶುರು ಮಾಡಿದ್ದೇ ಬಿಜೆಪಿ- ಪರಂ: ಬಿಜೆಪಿ ನಾಯಕರ ಹೇಳಿಕೆಗೆ ತಿರುಗೇಟು ನೀಡಿರುವ ಗೃಹ ಸಚಿವ ಡಾ.ಜಿ.ಪರಮೇಶ್ವರ, ಪ್ರತಿಪಕ್ಷ ಶಾಸಕರಿಗೆ ಅನುದಾನ ತಾರತಮ್ಯ ಬಿಜೆಪಿಯವರೇ ಮಾಡಿಕೊಟ್ಟಿರುವುದು. ಅದನ್ನೇ ನಾವು ಅನುಸರಿಸುತ್ತಿದ್ದೇವೆ ಎಂದು ಟಾಂಗ್ ನೀಡಿದ್ದಾರೆ. ಹಿಂದೆ ಅವರೇ ಮಾಡಿಕೊಟ್ಟಿರೋದು. ಆಡಳಿತ ಪಕ್ಷದ ಶಾಸಕರಿಗೆ ಒಂದು, ಪ್ರತಿಪಡದವರಿಗೆ ಒಂದು ರೀತಿ ಕೊಟ್ಟಿದ್ದರು. ಅವರ ಶಾಸಕರಿಗೆ 50 ಕೋಟಿ ರು. ಕೊಟ್ಟಿದ್ದರು. ನಮಗೆಲ್ಲ ಆಗ 25 ಕೋಟಿ ಕೊಟ್ಟಿದ್ದರು. ಕೆಲವರಿಗೆ 20, 10 ಕೋಟಿ ಕೊಟ್ಟಿದ್ದರು. ಅದನ್ನೇ ನಾವೂ ಫಾಲೋ ಮಾಡ್ತಿದ್ದೇವೆ. ಸಿಎಂ ಅಭಿವೃದ್ಧಿ ನೋಡಿಕೊಂಡು ಕೊಡುತ್ತಾರೆ. ಈ ರೀತಿ ಮಾನದಂಡ ನೋಡ್ಕೊಂಡು ಕೊಡ್ತಾರೆ. ಇದು ರಿವೇಂಜ್ ಮಾಡೋದಲ್ಲ ಎಂದು ತಿರುಗೇಟು ನೀಡಿದ್ದಾರೆ.

ಕಾಂಗ್ರೆಸ್ ಶಾಸಕರು ಸರಕಾರದ ವಿರುದ್ಧ ಮುಗಿಬಿದ್ದಿದ್ದಾರೆ. ಭ್ರಷ್ಟಾಚಾರದ ವಿರುದ್ಧ ಅವರೇ ಧ್ವನಿ ಎತ್ತಿದ್ದು, ಸಾಧನೆ ಏನೂ ಆಗಿಲ್ಲ ಎಂದಿದ್ದಾರೆ. ತಾವು ಕ್ಷೇತ್ರಗಳಿಗೆ ಹೋಗಲಾಗುತ್ತಿಲ್ಲ ಎಂದು ಆರೋಪಿಸಿದ ಬಳಿಕ ಕೇವಲ ಕಾಂಗ್ರೆಸ್ ಶಾಸಕರಿಗೆ ತಲಾ 50 ಕೋಟಿ ಅನುದಾನ ಬಿಡುಗಡೆ ಮಾಡುವುದಾಗಿ ಹೇಳಿದ್ದಾರೆ.

-ಛಲವಾದಿ ನಾರಾಯಣಸ್ವಾಮಿ

ಎಸ್‌ಬಿಐಗೆ ಕೋಟ್ಯಂತರ ರು. ಪಂಗನಾಮ

8 ಕೋಟಿ ರು. ವಂಚಿಸಿದ್ದ ಮಹಿಳೆ | ತಂತ್ರಜ್ಞಾನದ ಸಹಾಯದಿಂದ 20 ವರ್ಷಗಳ ಬಳಿಕ ಬಂಧನ

ಬೆಂಗಳೂರು: ಸಾರ್ವಜನಿಕ ಸ್ವಾಮ್ಯದ ಎಸ್‌ಬಿಐ ಬ್ಯಾಂಕ್‌ನಿಂದ ಬರೋಬ್ಬರಿ 8 ಕೋಟಿ ರು. ಸಾಲ ಪಡೆದು ಮರುಪಾವತಿ ಮಾಡದೇ, ನಿಗೂಢವಾಗಿ ನಾಪತ್ತೆ ಆಗಿದ್ದವರನ್ನು, ಬರೋಬ್ಬರಿ 20 ವರ್ಷದ ಬಳಿಕ ಸಿಬಿಐ ಪತ್ತೆ ಹಚ್ಚಿ ಬಂಧಿಸಿದೆ.

ವೇಷ, ಹೆಸರು ಮರೆಸಿಕೊಂಡು, ಹಳೆಯ ಯಾವುದೇ ದಾಖಲೆ ಬಳಸದೇ, ನಿಗೂಢವಾಗಿದ್ದ ಮಹಿಳೆಯನ್ನು ಇಳಿವಯಸ್ಸಿನಲ್ಲಿ ಸಿಬಿಐ ಬಂಧಿಸಿರುವುದು ವಿಶೇಷ. ತಂತ್ರಜ್ಞಾನದ ಸಹಾಯದಿಂದ ಬೆಂಗಳೂರಿನಿಂದ ಮಧ್ಯ ವಯಸ್ಸಿನಲ್ಲಿ ನಾಪತ್ತೆಯಾಗಿದ್ದ ಮಹಿಳಾ ಆರೋಪಿಯನ್ನು ಇಳಿ ವಯಸ್ಸಿನಲ್ಲಿ ಬಂಧಿಸುವಲ್ಲಿ ಸಿಬಿಐ ಯಶಸ್ವಿಯಾಗಿದೆ.

ಬೆಂಗಳೂರಿನ ಎಸ್‌ಬಿಐ ಬ್ಯಾಂಕ್‌ನ ಸಾಗರೋತ್ತರ ಶಾಖೆಯಿಂದ ತಮಿಳುನಾಡು ಮೂಲದ ಮಣಿ ಎಂ.ಶೇಖರ್ ಅಲಿಯಾಸ್ ಗೀತಾ ಎಂಬ ಮಹಿಳೆ ಹಾಗೂ ಆಕೆಯ ಪತಿ ರಾಮಾನುಜಮ್ ಮುತ್ತು ರಾಮಲಿಂಗಂ ಅವರು, 8 ಕೋಟಿ ರು. ಹಣ ಸಾಲವಾಗಿ ಪಡೆದಿದ್ದರು. ರಾಮಾನುಜಮ್ ಮೆಸರ್ಸ್ ಇಂಡೋ ಮಾರ್ಕೆಟ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾಗಿದ್ದರು. ಮಣಿ ಎಂ.ಶೇಖರ್ ಮೆಸರ್ಸ್ ಇಂಡೋ ಮಾರ್ಕ್ ಆ್ಯಂಡ್ ಬಿಟಿಸಿ ಹೋಂ ಪ್ರಾಡಕ್ಟ್ ಕಂಪನಿಯ ನಿರ್ದೇಶಕಿಯಾಗಿದ್ದರು.

ಇಳಿವಯಸ್ಸಿನ ತಮಿಳುನಾಡು ಮೂಲದ ಮಣಿ ಎಂ.ಶೇಖರ್ ಅಲಿಯಾಸ್ ಗೀತಾ ಸೆರೆ

ಸಾಲ ಮರುಪಾತಿಸದೇ ಹೆಸರು ಬದಲಾಯಿಸಿಕೊಂಡು ಗೀತಾ, ಪತಿ ರಾಮಾನುಜಮ್ ಇಂದೋರ್‌ನಲ್ಲಿ ವಾಸ

ವಸಂತನಗರದಲ್ಲಿ ವಂಚಕಿ ವಾಸ: ಈ ದಂಪತಿಯು ಎಸ್‌ಬಿಐ ಬ್ಯಾಂಕ್ ಸಾಗರೋತ್ತರ ಬ್ಯಾಂಕ್ ಶಾಖೆಯಿಂದ 8 ಕೋಟಿ ರು. ಸಾಲ ಪಡೆದು ದುರ್ಬಳಕೆ ಮಾಡಿಕೊಂಡು ಮರುಪಾವತಿಸದೇ ವಂಚಿಸಿದ್ದರು. 2002 ರಿಂದ 2005ರ ವರೆಗೆ ಬೆಂಗಳೂರಿನ ವಸಂತನಗರದಲ್ಲಿ ಈ ವಂಚಕಿ ವಾಸ ಇದ್ದರು. ಬಳಿಕ ಸಾಲ ಮರುಪಾತಿಸದೇ ಮೂಲ ಹೆಸರು ಬದಲಾಯಿಸಿಕೊಂಡು ವಂಚನೆ ಮಾಡಿದ್ದರು. ನಕಲಿ ದಾಖಲೆ ಸೃಷ್ಟಿಸಿ ಮಧ್ಯಪ್ರದೇಶದ ಇಂದೋರ್‌ನಲ್ಲಿ ಮಹಿಳೆ ಹಾಗೂ ಆಕೆಯ ಪತಿ ರಾಮಾನುಜಮ್ ವಾಸವಿದ್ದರು.

ಮಣಿ ಎಂ.ಶೇಖರ್ ಎಂಬ ಮಹಿಳೆಯು ಬೆಂಗಳೂರಿನಿಂದ ಮಧ್ಯಪ್ರದೇಶದ ಇಂದೋರ್‌ಗೆ ಪಲಾಯನ ಮಾಡಿದ್ದರು. ಇಂದೋರ್‌ನಲ್ಲಿ ತಮ್ಮ ಹೆಸರು, ವೇಷ ಎಲ್ಲವನ್ನೂ ಬದಲಾಯಿಸಿಕೊಂಡಿದ್ದರು. ಗೀತಾ ಕೃಷ್ಣ ಕುಮಾರ್ ಗುಪ್ತಾ ಹೆಸರಲ್ಲಿ ನಕಲಿ ದಾಖಲೆ ಸೃಷ್ಟಿಸಿಕೊಂಡಿದ್ದರು. ಎಸ್‌ಬಿಐ ಬ್ಯಾಂಕ್‌ಗೆ ವಂಚನೆ ಸಂಬಂಧ ಬ್ಯಾಂಕ್ ಅಧಿಕಾರಿಗಳು ಸಿಬಿಐಗೆ ದೂರು ನೀಡಿದ್ದರು. ವಂಚನೆ ಸಂಬಂಧ ಕೇಸ್ ದಾಖಲಿಸಿಕೊಂಡಿದ್ದ ಸಿಬಿಐ, 2006 ರಲ್ಲಿ ತನಿಖೆ ಕೈಗೆತ್ತಿಕೊಂಡಿತ್ತು. ಆದರೇ, ದಂಪತಿ ತಲೆಮರೆಸಿಕೊಂಡಿದ್ದರು.

ಇಂದೋರ್‌ನಲ್ಲಿ ಹೆಸರು ಬದಲಿಸಿಕೊಂಡಿದ್ದ ದಂಪತಿ: ಬೆಂಗಳೂರಿನಿಂದ ಪರಾರಿಯಾದ ದಂಪತಿ ಹಲವು ರಾಜ್ಯಗಳನ್ನು ಸುತ್ತಾಡಿ, ಕೊನೆಗೆ ಮಧ್ಯಪ್ರದೇಶದ ಇಂದೋರ್‌ನಲ್ಲಿ ವಾಸ ಇದ್ದರು. ತಮ್ಮ ಸಂಬಂಧಿಕರ ಜೊತೆಗೂ ಯಾವುದೇ ಸಂಪರ್ಕದಲ್ಲಿ ಇರಲಿಲ್ಲ. ಹೀಗಾಗಿ ಈ ದಂಪತಿಯನ್ನು ಪತ್ತೆ ಹಚ್ಚುವುದೇ ಸವಾಲು ಆಗಿತ್ತು. ಇಂದೋರ್‌ನಲ್ಲಿ ತಮ್ಮ ಮೂಲ ಹೆಸರುಗಳನ್ನು ಬದಲಾಯಿಸಿಕೊಂಡಿದ್ದರು. ರಾಮಾನುಜಮ್ ತನ್ನ ಹೆಸರು ಅನ್ನು ಕೃಷ್ಣ ಕುಮಾತಗಗಗ ಗುಪ್ತಾ ಎಂದು ಬದಲಾಯಿಸಿಕೊಂಡಿದ್ದರು. ಇನ್ನೂ ಮಣಿ ಎಂ. ಶೇಖರ್ ತಮ್ಮ ಹೆಸರು ಅನ್ನು ಗೀತಾ ಕೃಷ್ಣ ಕುಮಾರ್ ಎಂದು ಬದಲಾಯಿಸಿಕೊಂಡಿದ್ದರು. ಇದೇ ಹೆಸರುಗಳಲ್ಲಿ ಪ್ಯಾನ್ ಕಾರ್ಡ್, ಆಧಾರ್ ಕಾರ್ಡ್ ಸೇರಿದಂತೆ ಹಲವು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದರು. ಹೊಸ ಮೊಬೈಲ್ ನಂಬರ್‌ಗಳನ್ನು ಪಡೆದುಕೊಂಡಿದ್ದರು. ಹಳೆಯ ಹೆಸರಿನ ದಾಖಲೆಗಳನ್ನು ಎಲ್ಲಿಯೂ ಬಳಸಿರಲಿಲ್ಲ. 2008ರಲ್ಲಿ ರಾಮಾನುಜನ್ ಮೃತಪಟ್ಟಿದ್ದು, ಮಣಿ ಒಬ್ಬರೇ ಇಂದೋರ್‌ನಲ್ಲಿ ವಾಸಿಸುತ್ತಿದ್ದರು.

ಸುಧಾರಿತ ತಂತ್ರಜ್ಞಾನದಿಂದ ಸೆರೆ

ಆದರೇ, ಇತ್ತ ದಂಪತಿ ನಾಪತ್ತೆಯಾಗಿದ್ದರೂ, ಸಿಬಿಐ ನಿರಂತರವಾಗಿ ದಂಪತಿಯ ಪತ್ತೆಗೆ ತನಿಖೆ, ಶೋಧ ಮುಂದುವರಿಸಿತ್ತು. ಆರೋಪಿಗಳ ಬಗ್ಗೆ ಸುಳಿವು ನೀಡಿದವರಿಗೆ 50 ಸಾವಿರ ರು. ಬಹುಮಾನ ಘೋಷಿಸಿದ್ದರೂ, ಯಾವುದೇ ಪ್ರಯೋಜನ ಆಗಿರಲಿಲ್ಲ. ಇತ್ತೀಚೆಗೆ ಇಂದೋರ್‌ನಲ್ಲಿ ನೆಲೆಸಿದ್ದ ಗೀತಾ ಕೃಷ್ಣಕುಮಾರ್ ಬಗ್ಗೆ ಸಿಬಿಐಗೆ ಅನುಮಾನ ಬಂದಿತ್ತು. ಗೀತಾ ಕೃಷ್ಣ ಕುಮಾರ್ ಅವರ ಈಗಿನ ಪೋಟೋ ಹಾಗೂ ಮಣಿ ಎಂ ಶೇಖರ್ ಅವರ ಹಿಂದಿನ ಭಾವಚಿತ್ರಗಳನ್ನು ಸುಧಾರಿತ ತಂತ್ರಜ್ಞಾನ ಆಧರಿಸಿ ವಿಶ್ಲೇಷಿಸಿದಾಗ, ಶೇ.90 ರಷ್ಟು ಸಾಮ್ಯತೆ ಕಂಡು ಬಂದಿತ್ತು. ಹೀಗಾಗಿ ಸಿಬಿಐ ತನಿಖಾ ತಂಡ ಬೆಂಗಳೂರಿನಿಂದ ಇಂದೋರ್‌ಗೆ ತೆರಳಿ, ಗೀತಾ ಕೃಷ್ಣ ಕುಮಾರ್ ಗುಪ್ತಾ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಆಕೆಯೇ 20 ವರ್ಷದ ಹಿಂದೆಯೇ ಬೆಂಗಳೂರಿನಿಂದ ಪರಾರಿಯಾಗಿದ್ದ ಮಣಿ ಎಂ.ಶೇಖರ ಎಂಬುದು ಖಚಿತವಾಗಿದೆ.

ಜೈಲು ಪಾಲಾದ ವೃದ್ಧೆ

ಬಳಿಕ ಬೆಂಗಳೂರಿನ ಸಿಬಿಐ ಅಧಿಕಾರಿಗಳು ಗೀತಾ ಕೃಷ್ಣ ಕುಮಾರ್ ಗುಪ್ತಾ ಅಲಿಯಾಸ್ ಮಣಿ ಎಂ.ಶೇಖರ್ ಎಂಬ ಈ ಆರೋಪಿ ಮಹಿಳೆಯನ್ನು ಬಂಧಿಸಿ ಬೆಂಗಳೂರಿಗೆ ಕರೆ ತಂದಿದ್ದಾರೆ. ಸಿಬಿಐ ವಿಶೇಷ ಕೋರ್ಟ್‌ಗೆ ಹಾಜರುಪಡಿಸಿ, ಪರಪ್ಪನ ಆಗ್ರಹಾರ ಜೈಲಿಗೆ ಕಳಿಸಿದ್ದಾರೆ. ಮಣಿ ಎಂ.ಶೇಖರ್ ಅಲಿಯಾಸ್ ಗೀತಾ ಕೃಷ್ಣ ಕುಮಾರ್ ಗುಪ್ತಾಗೆ ಈಗ 69 ವರ್ಷ ವಯಸ್ಸು. ಮಧ್ಯ ವಯಸ್ಸಿನಲ್ಲಿ ಬೆಂಗಳೂರಿನಿಂದ ನಾಪತ್ತೆಯಾದವರು, ಇಳಿ ವಯಸ್ಸಿನಲ್ಲಿ ಸಿಬಿಐನಿಂದ ಬಂಧನಕ್ಕೊಳಗಾಗಿ ಬೆಂಗಳೂರು ಜೈಲು ಸೇರಿದ್ದಾರೆ. 20 ವರ್ಷ ಹಳೆಯ ಪ್ರಕರಣವನ್ನು ಸಿಬಿಐ ಬೆನ್ನತ್ತಿ ಹೋಗಿ ಈಗ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ.

ಕಿಪ್ಪಿ 'ಕೀರ್ತಿ'ಗೆ ಕಪ್ಪೆ, ಕೋಬ್ರಾ ಜಗಳ!

ಕಿಪ್ಪಿಗಾಗಿ ಚಾಕು ತೋರಿಸಿದ ಮುತ್ತುಗೆ ಖಾಕಿ ವಾರ್ನ್ | ಕಾನೂನು ಕ್ರಮದ ಎಚ್ಚರಿಕೆ

ಬೆಂಗಳೂರು: ಹಾಯ್ ಜನರೇ, ಬನ್ನಿ ಬನ್ನಿ ಜನರೇ ಎಂದು ಸಾಮಾಜಿಕ ಜಾಲತಾಣದಲ್ಲಿ ತನ್ನದೇ ಆದ ಟ್ರೆಂಡ್ ಶುರುಮಾಡಿದ್ದ ಕಿಪ್ಪಿ ಕೀರ್ತಿಗಾಗಿ ಕಪ್ಪೆ ಮತ್ತು ಕೋಬ್ರಾ ಜಗಳವಾಡಿರುವ ಪ್ರಕರಣ ಪೊಲೀಸ್ ಠಾಣೆ ಮೆಟ್ಟಿಲೇರಿದೆ.

ಸಾಮಾಜಿಕ ಜಾಲತಾಣದಲ್ಲಿ ತನ್ನ ವಿಶೇಷ ನಗು ಮತ್ತು ಮಾತುಗಳಿಂದಲೇ ಗಮನ ಸೆಳೆದಿರುವ ಕಿಪ್ಪಿ ಕೀರ್ತಿ ಲವ್ ಸ್ಟೋರಿ ಪ್ರಕರಣ ಸದ್ಯ ಸಂಚಲನ ಮೂಡಿಸಿದೆ. ಕಿಪ್ಪಿ ಕೀರ್ತಿಗಾಗಿ ಬಿಲ್ಡಪ್ ಕೊಡುವ ರೀಲ್ಸ್ ಮಾಡಿದ್ದ ಮುತ್ತು ಅಲಿಯಾಸ್ ಬ್ಲಾಕ್ ಕೋಬ್ರಾ ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದು ತರಾಟೆಗೆ ತೆಗೆದುಕೊಂಡಿದ್ದಾರೆ.

ಕಿಪ್ಪಿಗಾರಿ ಪೊಲೀಸ್ ಠಾಣೆಗೆ: ಸುನೀಲ ಎಂಬುವವನು ತುಮಕೂರಿನ ನಿವಾಸಿ. ಕಿಪ್ಪಿ ನನ್ನವಳು ಆಕೆ ನನ್ನ ಲವ್ ಮಾಡುತ್ತಿದ್ದಾಳೆ ಎಂದು ಸಾಮಾಜಿಕ ಜಾಲತಾಣದಲ್ಲಿ ವಿಡಿಯೊಗಳನ್ನು ಹಂಚಿಕೊಳ್ಳುತ್ತಿದ್ದ. ಈ ಸುನೀಲ ಅಲಿಯಾಸ್ ಕಪ್ಪೆ ನನ್ನ ಕೀರ್ತಿ ಬಗ್ಗೆ ಯಾರೂ ಮಾತಾಡಬಾರದು ಎಂದು ಹೇಳಿದ್ದ. ಇವನಿಗೆ ಟಾಂಗ್ ಕೊಡಲು ಮುತ್ತು ಅಲಿಯಾಸ್ ಬ್ಲಾಕ್ ಕೋಬ್ರಾ ಬೆದರಿಕೆ ಹಾಕಿದ್ದ. ಆದರೆ, ಮಂಗಳೂರು ಮೂಲದ ಕಿಪ್ಪಿ ಸದ್ಯ ತನ್ನ ಪ್ರಿಯಕರ ದಚ್ಚುವಿನ ಜತೆ ಪ್ರೀತಿಯಲ್ಲಿದ್ದಾಳೆ. ಬ್ರೇಕಪ್ ಅಂದಿದ್ದ ಇಬ್ಬರೂ ಕೆಲ ದಿನಗಳ ಹಿಂದಷ್ಟೇ ಮತ್ತೆ ಒಂದಾಗಿದ್ದಾರೆ. ಈ ಬಗ್ಗೆ ಕಿಪ್ಪಿ ತನ್ನ ಸೋಷಿಯಲ್ ಮೀಡಿಯಾ ಖಾತೆ ಹಂಚಿಕೊಂಡಿದ್ದಾರೆ. ಸಿನಿಮಾಗಳಲ್ಲೂ ಕಿಪ್ಪಿಗೆ ಅವಕಾಶ ಬರುತ್ತಿವೆ. ಆದರೆ ಕಪ್ಪೆ ಮತ್ತು ಕೋಬ್ರಾ ಕಿಪ್ಪಿ ನನ್ನವಳು, ಕಿಪ್ಪಿ ನನ್ನವಳು ಎಂದು ಜಗಳವಾಡಿ ಅಂತ ಕಿತ್ತಾಡ್ಕೊಂಡು ಪೊಲೀಸ್ ಸ್ಟೇಷನ್ ಮೆಟ್ಟಿಲು ಹತ್ತುತ್ತಿದ್ದಾರೆ. ಇಲ್ಲಿ ಯಾರಿಗೇಳೋಣಾ ನಮ್ಮ ಪ್ರಾಬ್ಲಮ್ಮು ಅಂತಾ ಯಾರು ಯಾರಿಗೆ ಹೇಳಿಕೊಳ್ತಿದ್ದಾರೋ ಗೊತ್ತಿಲ್ಲ.

ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಮಿಡಿಗೇಶಿ ಹೊಬಳಿಯ ಹೊಸಕೆರೆ ಮೂಲದ ಮುತ್ತು, ಕ್ಯಾತ್ಸಂದ್ರ ಬಳಿ ಕಡಲೆಕಾಯಿ ವ್ಯಾಪಾರ ಮಾಡಿಕೊಂಡಿದ್ದ. ಈ ವ್ಯಾಪಾರದ ಜತೆಯಲ್ಲಿ ರೀಲ್ಸ್ ಮಾಡಿಕೊಂಡಿದ್ದ. ಕಿಪ್ಪಿ ಕೀರ್ತಿ ನನ್ನವಳು. ಅವಳ ಹೆಸರು ಹೇಳಿದರೇ ನಾಲಿಗೆ ಕತ್ತರಿಸುತ್ತೇನೆ ಎಂದು ಚಾಕು ಹಿಡಿದು ಜಂಬ ಕೊಚ್ಚಿಕೊಂಡಿದ್ದ. ಇದರ ಜತೆಯಲ್ಲಿಯೇ ಕಿಪ್ಪಿ ಕೀರ್ತಿ ವಿಚಾರವಾಗಿ ಒಂದಿಷ್ಟು ವಿಡಿಯೋಗಳನ್ನು ಮಾಡಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಅಪ್ಲೋಡ್ ಮಾಡಿಕೊಂಡಿದ್ದ. ಚಾಕು ಹಿಡಿದ ವಿಡಿಯೊ ವೈರಲ್ ಆಗಿತ್ತು. ಈ ವಿಡಿಯೊ ನೋಡಿದ ಕ್ಯಾತ್ಸಂದ್ರ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದರು. ಬಳಿಕ ಮುತ್ತುವನ್ನು ಠಾಣೆಗೆ ಕರೆಸಿ ಪೊಲೀಸರು ಮತ್ತೊಮ್ಮೆ ಈ ರೀತಿ ವಿಡಿಯೊ ಮಾಡಿದರೆ ಕಾನೂನಾತ್ಮಕವಾಗಿ ಕ್ರಮವೆಂದು ಎಚ್ಚರಿಕೆ ನೀಡಿದ್ದಾರೆ. ಮತ್ತೊಮ್ಮೆ ಚಾಕು ಹಿಡಿದು ಈ ರೀಲ್ಸ್ ಮಾಡೋದಿಲ್ಲ ಎಂದು ಪೊಲೀಸರ ಮುಂದೆ ಒಪ್ಪಿಕೊಂಡಿದ್ದಾನೆ.

ವೈರಲ್ ವಿಡಿಯೋದಲ್ಲಿ ಏನಿದೆ?

ಏಯ್ ಕಪ್ಪೆ, ನರಸೇಪುರದ ಸುನಿಲ್ ಕಪ್ಪೆ. ಏನೋ ನಿಂದು, ಯಾರನ್ನ ಮೂಟೆ ಕಟ್ಟಿ ಹಾಕ್ತಿನಿ ಅಂತ ಹೇಳ್ತಿದ್ದೀಯಾ? ಜಾಸ್ತಿ ಮಾಡ್ತಿದ್ದೀಯಾ? ತುಮಕೂರಿಗೆ ಬಂದು ಮುತ್ತು ಬ್ಲಾಕ್ ಕೋಬ್ರಾ ಯಾರು ಅಂತ ಕೇಳು? ತುಮಕೂರಿನ ಜನ ನನ್ನ ಹಿಸ್ಟರಿ ಹೇಳುತ್ತಾರೆ. ನನ್ನ ಹೆಸರು ಕೇಳಿದ್ರೆ ನೀನು ದಂಗಾಗಿ ಹೋಗ್ತಿಯಾ. ತುಮಕೂರಿಗೆ ಬಂದ್ರೆ ನಿನ್ನನ್ನು ಚುಚ್ಚಿ ಸಾಯಿಸ್ತೀನಿ. ತುಮಕೂರಿಗೆ ಬಂದಾಗ ನನ್ನ ಕೈಗೆ ಸಿಕ್ಕರೆ ನೀನು ಫಿನಿಶ್. ಇನ್ನೊಮ್ಮೆ ಕಿಪಿ ಕೀರ್ತಿ ಹೆಸರು ಹೇಳಿದರೆ ನಿನ್ನ ನಾಲಿಗೆ ಕತ್ತರಿಸುತ್ತೇನೆ. ಉಸಿರಾಡೋಕ್ಕೆ ಆಗದಂತೆ ಕೊಂದು ಮೂಟೆ ಕಟ್ಟಿ ಸಕಲೇಶಪುರಕ್ಕೆ ಬಂದು ಹೇಮಾವತಿ ನದಿಗೆ ಎಸೆಯುತ್ತೇನೆ ಎಂದು ಚಾಕು ಹಿಡಿದು ಮುತ್ತು ಜೀವ ಬೆದರಿಕೆ ಹಾಕಿದ್ದನು.

ಏನಿವ್ರ ಕಥೆ?

- ರೀಲ್ಸ್ ಮಾಡಿಕೊಂಡು ಕುಬ್ಜ ಕಾಯದ ಕಿಪ್ಪಿ ಸೋಷಿಯಲ್ ಮೀಡಿಯಾದಲ್ಲಿ ಫೇಮಸ್
- ಕಿಪ್ಪಿ ಕೀರ್ತಿಯನ್ನು ಲವ್ ಮಾಡುತ್ತೇನೆಂದು ಮುತ್ತು ಅಲಿಯಾಸ್ ಕಪ್ಪೆ ರೀಲ್ಸ್
- ದಚ್ಚು ಅಲಿಯಾಸ್ ಕೋಬ್ರಾಗೆ ಮುತ್ತು ಕಿಪ್ಪಿಗಾಗಿ ಚಾಕುತೋರಿಸಿ ಬೆದರಿಕೆ
- ಚಾಕು ತೋರಿಸಿ ರೀಲ್ಸ್ ಮಾಡಿದ ಕಪ್ಪೆಯನ್ನು ಠಾಣೆಗೆ ಕರೆಸಿ ಪೊಲೀಸ್ ಕ್ಲಾಸ್

ರೌಡಿ ಹತ್ಯೆ ಪ್ರಕರಣ: ಬೈರತಿ ಬಸವರಾಜ್‌ಗೆ ಡ್ರಿಲ್

ಬೆಂಗಳೂರು: ರೌಡಿಶೀಟರ್ ಬಿಕ್ಲ ಶಿವ ಕೊಲೆ ಪ್ರಕರಣದಲ್ಲಿ ಎ5 ಆರೋಪಿ ಆಗಿರುವ ಕೆ.ಆರ್. ಪುರ ಬಿಜೆಪಿ ಶಾಸಕ ಬೈರತಿ ಬಸವರಾಜ್ ಭಾರತಿನಗರ ಪೊಲೀಸ್ ಠಾಣೆಗೆ ಹಾಜರಾಗಿದ್ದರು. ಸತತ ಮೂರುವರೆ ಗಂಟೆಗಳ ಕಾಲ ವಿಚಾರಣೆ ಎದುರಿಸಿದರು.

ಪ್ರಕರಣಕ್ಕೆ ಸಂಬಂಧಿಸಿ ನೋಟಿಸ್ ನೀಡಿದ್ದರೂ ಪೊಲೀಸ್ ವಿಚಾರಣೆಗೆ ಹಾಜರಾಗದೆ ಗೈರಾಗಿದ್ದ ಬೈರತಿ ಬಸವರಾಜು ಅವರು, ಶನಿವಾರ ತನಿಖಾಧಿಕಾರಿ ಮುಂದೆ ಹಾಜರಾಗುವ ಅನಿವಾರ್ಯತೆ ನಿರ್ಮಾಣವಾಗಿತ್ತು. ಹೈಕೋರ್ಟ್ ಸಹ ವಿಚಾರಣೆಗೆ ಹಾಜರಾಗುವಂತೆ ಸ್ಪಷ್ಟವಾಗಿ ಶಾಸಕರಿಗೆ ಸೂಚಿಸಿತ್ತು. ಬಂಧನ ಭೀತಿಯಿಂದ ಶನಿವಾರ ಮಧ್ಯಾಹ್ನದ ವರೆಗೂ ವಿಚಾರಣೆಗೆ ಬಂದಿರಲಿಲ್ಲ, ಹೆಚ್ಚಿನ ಪೊಲೀಸ್ ಭದ್ರತೆಯೊಂದಿಗೆ ತನಿಖಾಧಿಕಾರಿ ಕಾದು ಕುಳಿತಿದ್ದರು. ಮಧ್ಯಾಹ್ನ 2:30ರ ಸುಮಾರಿಗೆ ಬಂದ ಮಾಜಿ ಸಚಿವರಿಗೆ ಸುಮಾರು ಮೂರುವರೆ ಗಂಟೆಗಳ ಕಾಲ ತನಿಖಾಧಿಕಾರಿ ಡ್ರಿಲ್ ಮಾಡಿದರು. 100ಕ್ಕೂ ಹೆಚ್ಚು ಪ್ರಶ್ನೆಗಳನ್ನು ಕೇಳಿದ್ದಾರೆ. ಕೊಲೆ, ಜಮೀನು ವ್ಯಾಜ್ಯ, ಪರಿಚಯ, ಮೃತನ ತಾಯಿಯ ಆರೋಪ, ಆರೋಪಿಗಳ ಜತೆಗಿನ ಶಾಸಕರ ನಂಟು, ಜಗ್ಗನ ಪರಿಚಯ, ಜಗ್ಗನ ನಂಟು, ಜಮೀನು ವ್ಯಾಜ್ಯದಲ್ಲಿ ನಿಮ್ಮ ಹೆಸರು ಯಾಕೆ ಬಂತು, ಫೆಬ್ರವರಿಯಲ್ಲಿ ಕೊಟ್ಟ ದೂರಿನಲ್ಲಿ ನಿಮ್ಮ ಹೆಸರು ಉಲ್ಲೇಖ ಆಗಿದೆ. ಕಿರುಕುಳ, ಕುಮ್ಮಕ್ಕು ಕೊಟ್ಟ ಆರೋಪಗಳು ಇವೆ ಎಂಬ ಪ್ರಶ್ನೆಗಳನ್ನು ಶಾಸಕ ಬೈರತಿ ಬಸವರಾಜ್ ಅವರನ್ನು ತನಿಖಾಧಿಕಾರಿ ಪ್ರಶ್ನೆ ಮಾಡಿದ್ದಾರೆ.

ಬೈರತಿ ಬಸವರಾಜ್ ಹೇಳಿದ್ದೇನು?

ಸತತ ಮೂರುವರೆಗಂಟೆಗಳ ಕಾಲ ವಿಚಾರಣೆ ಎದುರಿಸಿದ ಬೈರತಿ ಬಸವರಾಜ್, ಭಾರತಿ ನಗರ ಠಾಣೆಯಿಂದ ಹೊರ ಬರುತ್ತಿದ್ದಂತೆ ಮಾಧ್ಯಮಗಳೊಂದಿಗೆ ಮಾತನಾಡಿದ್ದು, ಕೊಲೆ ಪ್ರಕರಣದಲ್ಲಿ ವಿಚಾರಣೆಗೆ ಕರೆದಿದ್ದರು, ಪೊಲೀಸರು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಿದ್ದೀನಿ. ಇದರಲ್ಲಿ ನನ್ನ ಪಾತ್ರ ಇಲ್ಲ ಎಂದು ಹೇಳಿದ್ದೇನೆ. ನನಗೂ ಕೊಲೆಗೂ ಸಂಬಂಧವಿಲ್ಲ, ಯಾವ ಜಗ್ಗನೂ ನನಗೆ ಗೊತ್ತಿಲ್ಲ. ಬುಧವಾರ ಮತ್ತೆ ವಿಚಾರಣೆಗೆ ಬರಬೇಕೆಂದು ಹೇಳಿದ್ದಾರೆ. ಬರುತ್ತೇನೆ. ತನಿಖೆಗೆ ಎಲ್ಲ ರೀತಿಯಿಂದಲೂ ಸಹಕಾರ ಕೊಡುತ್ತೇನೆ ಎಂದು ಹೇಳಿದರು.

ಅಭಿವೃದ್ಧಿಯೇ ಉತ್ತರ

← ಮೊದಲಪುಟದಿಂದ

ರಾಜ್ಯದಲ್ಲಿ ಬಿಜೆಪಿ ಸ್ವಂತ ಶಕ್ತಿಯಿಂದ ಒಮ್ಮೆಯೂ ಅಧಿಕಾರಕ್ಕೆ ಬಂದಿಲ್ಲ. ಪ್ರತೀ ಬಾರಿ ಹಿಂಬಾಗಿಲಿನಿಂದ ಅಧಿಕಾರ ಹಿಡಿಯುತ್ತಿದ್ದಾರೆ. ಈ ಹಿಂದೆ ಆಪರೇಷನ್ ಕಮಲ ಮಾಡಿ ಅಧಿಕಾರಕ್ಕೆ ಬಂದಿದ್ದರು. ಜೆಡಿಎಸ್‌ನ ಕುಮಾರಸ್ವಾಮಿ ಸ್ವಂತ ಶಕ್ತಿ ಮೇಲೆ ಯಾವತ್ತೂ ಅಧಿಕಾರಕ್ಕೆ ಬರಲು ಸಾಧ್ಯವೇ ಇಲ್ಲ. ರಾಜ್ಯದ ಜನರ ಪ್ರೀತಿ, ವಿಶ್ವಾಸ, ಅಭಿಮಾನ ಉಳಿಸಿಕೊಳ್ಳದ ಇವರಿಗೆ ನಮ್ಮನ್ನು ಟೀಕಿಸುವ ನೈತಿಕತೆ ಇಲ್ಲ ಎಂದರು.

ನಾವು ಐದು ಗ್ಯಾರಂಟಿಗಳಲ್ಲದೆ ಅಭಿವೃದ್ಧಿ ಕಾರ್ಯಗಳಿಗೆ ಲಕ್ಷ ಕೋಟಿಯಷ್ಟು ಹಣ ಕೊಟ್ಟಿದ್ದೇವೆ. ಬಿಜೆಪಿ-ಜೆಡಿಎಸ್ ಬೆಂಬಲಿಗರು, ಮತದಾರರಿಗೂ ಪ್ರತೀ ದಿನ, ಪ್ರತೀ ತಿಂಗಳು ಸರಕಾರದ ನೆರವು ದೊರೆಯುತ್ತಿದೆ.

ಮೊನ್ನೆ ಯಷ್ಟೆ ಶಕ್ತಿ ಯೋಜನೆಯಡಿ ಪ್ರಯಾಣಿಸಿದ 500ನೇ ಕೋಟಿಯ ಮಹಿಳೆಗೆ ನಾನೇ ಉಚಿತ ಟಿಕೆಟ್ ಕೊಟ್ಟಿದ್ದೇನೆ. ಇದು ನಮ್ಮ ಸರಕಾರದ ಬದ್ಧತೆ ಎಂದರು.

ಸಂವಿಧಾನ ನಿಮ್ಮ ತಾತ ಬಂದು ಮಾಡಿದ್ನಾ?: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ಸಂವಿಧಾನ ಬದಲಾವಣೆ ಮಾಡಲು ಬಿಜೆಪಿ, ಆರ್‌ಎಸ್‌ಎಸ್ ಪ್ರಯತ್ನಿಸುತ್ತಿವೆ. ಆದರೆ, ಅದು ಎಂದಿಗೂ ಸಾಧ್ಯವಾಗುವುದಿಲ್ಲ. ಸಂವಿಧಾನವನ್ನು ನಿಮ್ಮ ತಾತ ಬಂದು ಮಾಡಿದ್ನಾ? ಅಥವಾ ಆರ್‌ಎಸ್‌ಎಸ್‌ನವರು ಮಾಡಿದ್ರಾ? ಏಳು ಜನರ ಸಮಿತಿ ಸಂವಿಧಾನ ರಚನೆ ಮಾಡಿದೆ. ಸಂವಿಧಾನದಡಿ ಮುಖ್ಯಮಂತ್ರಿ, ಪ್ರಧಾನಿ ಪಟ್ಟ ಅಲಂಕರಿಸಿದ ಮೋದಿ ಇದೀಗ ಸಂವಿಧಾನದ ಕಗ್ಗೊಲೆಗೆ ಪ್ರಯತ್ನಿಸುತ್ತಿದ್ದಾರೆ ಎಂದು ಹರಿಹಾಯ್ದರು.

ಗ್ಯಾರಂಟಿಗಳ ನಕಲು: ಡಿಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿ, ಗ್ಯಾರಂಟಿಯಿಂದ ರಾಜ್ಯ ದಿವಾಳಿಯಾಗಲಿದೆ ಎಂದಿದ್ದ ಬಿಜೆಪಿಯವರು ಇದೀಗ ಅವರು ಕೂಡ ಗ್ಯಾರಂಟಿ ಭರವಸೆ ನೀಡುತ್ತಿದ್ದಾರೆ. ಮುಂಬರುವ ಬಿಹಾರ ಚುನಾವಣೆಯಲ್ಲಿ ಗ್ಯಾರಂಟಿ ಭರವಸೆ ನೀಡುತ್ತಿದ್ದಾರೆ. ಮಧ್ಯಪ್ರದೇಶ, ದೆಹಲಿ, ಹರಿಯಾಣ, ಮಹಾರಾಷ್ಟ್ರ ಸೇರಿದಂತೆ ಇತರೆ ರಾಜ್ಯಗಳ ಚುನಾವಣೆಯಲ್ಲೂ ಗ್ಯಾರಂಟಿ ಯೋಜನೆಗಳ ಭರವಸೆ ನೀಡಿದ್ದಾರೆ ಎಂದರು.

ಗೃಹ ಸಚಿವ ಡಾ.ಜಿ.ಪರಮೇಶ್ವರ, ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಕೆ.ಎಚ್.ಮುನಿಯಪ್ಪ, ಕೆ.ಜೆ.ಜಾರ್ಜ್, ಶರಣಬಸಪ್ಪ ದರ್ಶನಾಪುರ, ಶಿವರಾಜ ತಂಗಡಗಿ, ರಹೀಂ ಖಾನ್, ಶಾಸಕರಾದ ತನ್ವೀರ್ ಸೇಠ್, ಅನಿಲ್ ಚಿಕ್ಕಮಾದು, ರವಿಶಂಕರ್, ಕೆ.ಹರೀಶ್ ಗೌಡ, ಟಿ.ಗುರುಮೂರ್ತಿ, ಪುಟ್ಟರಂಗ ಶೆಟ್ಟಿ, ಗಣೇಶ ಪ್ರಸಾದ್, ಎ.ಆರ್.ಕೃಷ್ಣಮೂರ್ತಿ, ದರ್ಶನ್ ಧ್ರುವನಾರಾಯಣ, ಸಂಸದ ಸುನಿಲ್ ಬೋಸ್, ವಿಧಾನ ಪರಿಷತ್ ಸದಸ್ಯ ಡಿ.ತಿಮ್ಮಯ್ಯ, ರಾಜಕೀಯ ಕಾರ್ಯದರ್ಶಿ ನಜೀರ್ ಅಹಮ್ಮದ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಮತ್ತಿತರರು ಪಾಲ್ಗೊಂಡಿದ್ದರು.

ಲೋಕಾಯುಕ್ತ: 22,328 ಪ್ರಕರಣಗಳ ವಿಚಾರಣೆ ಬಾಕಿ

← ಮೊದಲಪುಟದಿಂದ

ಆದರೆ ಅಧಿಕಾರಿಗಳು 142 ಪ್ರಕರಣಗಳಲ್ಲಿ ಪ್ರಾಸಿಕ್ಯೂಷನ್‌ಗೆ ಮಾತ್ರ ಮಂಜೂರಾತಿ ನೀಡಿದ್ದಾರೆ. ಆದಾಯಕ್ಕಿಂತ ಹೆಚ್ಚಿನ ಆಸ್ತಿ ಗಳಿಕೆ, ಭ್ರಷ್ಟಾಚಾರ ಆರೋಪ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳು, ನೌಕರರ ಮೇಲೆ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ ಲೋಕಾಯುಕ್ತ ಕಳುಹಿಸಿರುವ 105 ಪ್ರಕರಣಗಳು ರಾಜ್ಯ ಸರಕಾರದ ವಿವಿಧ ಇಲಾಖೆಗಳಲ್ಲಿ ಬಾಕಿ ಇವೆ.

ಲೋಕಾಯುಕ್ತ ಸಂಸ್ಥೆ ದುರ್ಬಳಕೆ ಮಾಡಿಕೊಳ್ಳುವವರ ವಿರುದ್ಧ 2022ರಿಂದ ಜೂನ್ 30ರ ವರೆಗೆ 41 ಪ್ರಕರಣಗಳನ್ನು ದಾಖಲಿಸಲಾಗಿದೆ. ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಸರಣಿ ಬಾಣಂತಿಯರ ಸಾವಿನ ಪ್ರಕರಣ, ಜಲಮೂಲ ರಕ್ಷಣೆ ಹಾಗೂ ಪುನಶ್ಚೇತನ ಸೇರಿದಂತೆ 150ಕ್ಕೂ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ. ಸರಕಾರಿ ಕಚೇರಿಗಳಿಂದ ದುರಾಡಳಿತಕ್ಕೆ ಸಂಬಂಧಿಸಿದಂತೆ 500ಕ್ಕೂ ಹೆಚ್ಚು ಶೋಧನಾ ವಾರೆಂಟ್ ನೀಡಿ ಅಗತ್ಯ ದಾಖಲಾತಿಗ ಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಲಾಗಿದೆ.

ಸಿಬ್ಬಂದಿ ಕೊರತೆ: ಸಂಸ್ಥೆಗೆ ಒಟ್ಟು 1,929 ಅಧಿಕಾರಿಗಳು ಹಾಗೂ ಸಿಬ್ಬಂದಿ ಹುದ್ದೆಗಳು ಮಂಜೂರಾಗಿದ್ದರೂ ಪೂರ್ತಿಯಾಗಿ ತುಂಬಲು ಸಾಧ್ಯವಾಗಿಲ್ಲ. ಗ್ರೂಪ್-ಸಿ ವೃಂದದ ಪ್ರಥಮ, ದ್ವಿತೀಯ ದರ್ಜೆ ಸಹಾಯಕರು, ಕ್ಲರ್ಕ್, ಟೈಪಿಸ್ಟ್‌ಗಳು ಸೇರಿದಂತೆ ಒಟ್ಟು 66 ಹುದ್ದೆಗಳಿಗೆ ನೇರ ನೇಮಕಾತಿ, ಖಾಲಿಯಿರುವ 8 ಜಿಲ್ಲೆಗಳಲ್ಲಿ ಎಸ್‌ಪಿಗಳನ್ನು ತುಂಬುವಂತೆ ಹಲವು ಬಾರಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಹೊಸದಾಗಿ 339 ಹುದ್ದೆಗಳನ್ನು ಸೃಜಿಸಲು ಕಳೆದ ವರ್ಷ ಸರಕಾರಕ್ಕೆ ಪತ್ರ ಬರೆಯಲಾಗಿತ್ತು.

ಮಾರ್ಗದರ್ಶನ ನೀಡುವ ಅನುಭವದ ಗಣಿ: ಮಲ್ಲಿಕಾರ್ಜುನ ಖರ್ಗೆ

ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಸೋನಿಯಾ ಗಾಂಧಿ ಅವರು ಮುನ್ನಡೆಸಿದ ಕಾಂಗ್ರೆಸ್ ಪಕ್ಷದ ಚುಕ್ಕಾಣಿ ಹಿಡಿದಿರುವ ಕರ್ನಾಟಕದ ಹೆಮ್ಮೆಯ ಪುತ್ರ ಮಲ್ಲಿಕಾರ್ಜುನ ಖರ್ಗೆಯವರು. ನಾಳೆ (ಜುಲೈ 21) ಅವರ ಜನ್ಮದಿನ. ಈ ಹಿನ್ನೆಲೆಯಲ್ಲಿ ಖರ್ಗೆಯವರ ಬದುಕು ಹಾಗೂ ಸಾಧನೆಗಳ ಚಿತ್ರಣವನ್ನು ಕಟ್ಟಿಕೊಡುವ ಲೇಖನ ಇಲ್ಲಿದೆ

ಗುಣಗಾನ

ಮಂಜುನಾಥ್ ಭಂಡಾರಿ
vveditoped@gmail.com

ರಾಷ್ಟ್ರ ಹಾಗೂ ರಾಜ್ಯ ರಾಜಕಾರಣದಲ್ಲಿ ಅನೇಕ ನಾಯಕರು ಬಂದಿದ್ದಾರೆ, ಹೋಗಿದ್ದಾರೆ. ಆದರೆ ಅನೇಕರು ಇಂದಿಗೂ ಹೆಸರು ಉಳಿಸಿಕೊಂಡಿರುವುದು ತತ್ವ ಹಾಗೂ ಸಿದ್ಧಾಂತಕ್ಕೆ ನಿಷ್ಠರಾಗಿರುವುದರಿಂದಲೇ ಹೊರತು, ಅವರು ಮಾಡಿದ ರಾಜಕಾರಣದಿಂದಲ್ಲ. ಇಂಥ ರಾಜಕಾರಣಿಗಳು ಅಧಿಕಾರವನ್ನು ಬಿಟ್ಟುಬಿಡಬಹುದು, ಆದರೆ ತಾವು ರೂಢಿಸಿಕೊಂಡು ಬಂದ ಆದರ್ಶಗಳನ್ನು ಬಿಡುವುದಿಲ್ಲ. ಅಂಥ ಪ್ರಖರ ರಾಜಕಾರಣಿಯಲ್ಲೊಬ್ಬರು ಮಲ್ಲಿಕಾರ್ಜುನ ಖರ್ಗೆ.

ಮಹಾಭಾರತದಲ್ಲಿ ಭೀಷ್ಮ ತನ್ನ ಪ್ರತಿಜ್ಞೆಯನ್ನು ಕಾಪಾಡಿಕೊಳ್ಳಲು ಸಿಂಹಾಸನದಲ್ಲಿ ಕೂರುವುದೇ ಇಲ್ಲ. ಬದಲಾಗಿ ತನ್ನ ಮುಂದಿನ ಪೀಳಿಗೆಯ ಯುವಕರನ್ನು ಕೂರಿಸಿ ಪ್ರೋತ್ಸಾಹಿಸುತ್ತಾನೆ. ಆತನಿಗೆ ತನ್ನ ಪ್ರತಿಜ್ಞೆಯೇ ಮುಖ್ಯವಾಗಿರುತ್ತದೆ. ಆದರೆ ಪ್ರತಿಜ್ಞೆಯ ಜತೆಗೆ ಸಾಮ್ರಾಜ್ಯದ ಸುಖ, ದುಃಖಗಳಿಗೂ ಆತ ಕಿವಿಯಾಗಬೇಕಾಗುತ್ತದೆ. ಅದರ ಜತೆಗೆ ತನ್ನ ಕುಟುಂಬದ ಯುವ ಪೀಳಿಗೆಯನ್ನು ಬೆಳೆಸುವ ಹೊಣೆಗಾರಿಕೆ ಕೂಡ ಆತನ ಮೇಲಿರುತ್ತದೆ.

ಮಲ್ಲಿಕಾರ್ಜುನ ಖರ್ಗೆ ಕೂಡ ಒಂದು ರೀತಿಯಲ್ಲಿ ಆಧುನಿಕ ರಾಜಕಾರಣದ ಭೀಷ್ಮರು ಎಂದು ನನಗೆ ಅನ್ನಿಸುತ್ತದೆ. ಜೀವನದುದ್ದಕ್ಕೂ ರಾಜಕಾರಣದಲ್ಲಿದ್ದರೂ, ಅವರು ಅಧಿಕಾರದ ಆಸೆಗಾಗಿ ಮುಗಿಬಿದ್ದವರಲ್ಲ. ಆದರೆ ಜವಾಬ್ದಾರಿ ಬಂದಾಗಲೆಲ್ಲ ಅದನ್ನು ತಪ್ಪದೇ ವಹಿಸಿಕೊಳ್ಳುತ್ತಾರೆ. ಯುವ ರಾಜಕಾರಣಿಗಳನ್ನು ಬೆಳೆಸಬೇಕೆಂಬ ಹೊಣೆ ಬಂದಾಗಲೆಲ್ಲ ಅದನ್ನು ತಪ್ಪದೇ ತಲೆ ಮೇಲೆ ಹೊತ್ತು ಕಾರ್ಯೋನ್ಮುಖರಾಗುತ್ತಾರೆ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ನಾಳೆಗೆ (ಜುಲೈ 21) 83ನೇ ಜನ್ಮದಿನವನ್ನು ಆಚರಿಸಿಕೊಳ್ಳುತ್ತಿದ್ದಾರೆ. ನಾನು ನೋಡಿದಂತೆ ರಾಜಕೀಯದ ಯಾವುದೇ ಬಿರುಗಾಳಿಗೆ ಹೆದರದೆ, ಜಗ್ಗದೆ ಬಿಗಿಯಾಗಿ ನಿಂತ ಅಪರೂಪದ ರಾಜಕಾರಣಿಗಳಲ್ಲಿ ಅವರೂ ಒಬ್ಬರು. ಅವರ ಬಾಲ್ಯದ ಬದುಕು, ಸಂಕಷ್ಟಗಳ ಸರಮಾಲೆಯ ಜೀವನ ಕೂಡ ಅದಕ್ಕೆ ಪ್ರೇರಣೆಯಾಗಿರಬಹುದು.

ಬಾಲ್ಯದ ಸಂಕಷ್ಟ

ಇಂದಿನ ಯುವಪೀಳಿಗೆ, ಹಿರಿಯ ರಾಜಕಾರಣಿ ಮಲ್ಲಿಕಾರ್ಜುನ ಖರ್ಗೆಯವರನ್ನು ಮಾತ್ರ ನೋಡುತ್ತಿದೆ. ಆದರೆ ಅವರ ಸರಿಸಮಾನರಾದವರು, ಸಮವಯಸ್ಸಿನವರು ಅವರ ಕಷ್ಟಗಳನ್ನು ನೋಡಿದ್ದಾರೆ. ಅತಿ ಸಣ್ಣ ವಯಸ್ಸಿನಿಂದಲೂ, ಅವರು ಜೀವ ಬೆದರಿಕೆಯಲ್ಲೇ ಬದುಕಿದವರು. ಅವರು ಬದುಕು ಎಂದರೆ, ಬೆಂಕಿಯಲ್ಲಿ ಅರಳಿದ ಹೂವಿನಂತೆ. 1942ರ ಜುಲೈ 21ರಂದು ಬೀದರ್‌ನ ವರವಟ್ಟಿ ಎಂಬ ಪುಟ್ಟ ಗ್ರಾಮದಲ್ಲಿ ಮಲ್ಲಿಕಾರ್ಜುನ ಖರ್ಗೆ ಜನಿಸಿದಾಗ, ಆ ಮಗುವಿಗೆ ಮುಂದಾಗಲಿರುವ ಅನಾಹುತಗಳ ಅರಿವೇ ಇರಲಿಲ್ಲ. ಅವರು ಜನಿಸಿದ ಕೆಲವೇ ವರ್ಷಗಳಲ್ಲಿ, 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ದೊರೆಯಿತು. ಆಗ ಹೈದರಾಬಾದ್ ಇನ್ನೂ ಭಾರತದ ಒಕ್ಕೂಟಕ್ಕೆ ಸೇರ್ಪಡೆಯಾಗದೆ, ನಿಜಾಮರ ಹಿಡಿತದಲ್ಲೇ ಇತ್ತು. ನಿಜಾಮನ ಸೈನಿಕರು ಸ್ಥಳೀಯ ಗ್ರಾಮಗಳ ಮೇಲೆ ದಾಳಿ ಮಾಡಿ ಕ್ರೌರ್ಯ ಮೆರೆಯುತ್ತಿದ್ದರು. ಬಡಜನರು ಅಂತ ನೋಡದೆ ಅವರ ಮನೆಗಳನ್ನು ಸುಟ್ಟು ಬದುಕನ್ನು ಬೀದಿಗೆ ತರುತ್ತಿದ್ದರು. ಅಂತೆಯೇ, ತೀರಾ ಬಡಕುಟುಂಬದ ಮಲ್ಲಿಕಾರ್ಜುನ ಖರ್ಗೆ ಅವರ ಮನೆಗೂ ಬೆಂಕಿ ಹಾಕಿ ಇಡೀ ಕುಟುಂಬವನ್ನು ನಾಶಮಾಡಲು ಪ್ರಯತ್ನ ಮಾಡಿದರು. ದುರದೃಷ್ಟವೆಂದರೆ, ಖರ್ಗೆ ಅವರ ತಾಯಿ ಹಾಗೂ ಕುಟುಂಬದ ಇತರೆ ಸದಸ್ಯರು ಆ ಬೆಂಕಿಯಲ್ಲಿ ಬೆಂದುಹೋದರು. ಅದೃಷ್ಟವೆಂದರೆ, ಅಪ್ಪ ಮಾಪಣ್ಣ ತಮ್ಮ ಮಗು ಮಲ್ಲಿಕಾರ್ಜುನನನ್ನು ಎತ್ತಿಕೊಂಡು ಹೊರಗೆ ಓಡಿಹೋದರು. ಆ ಕ್ಷಣದಲ್ಲೇ ರಾಷ್ಟ್ರ ರಾಜಕಾರಣಕ್ಕೆ ಒಬ್ಬ ಮಹಾನ್ ನಾಯಕ ಬರಲಿದ್ದಾನೆ ಎಂಬ ಸುಳಿವು ಯಾರಿಗೂ ಇರಲಿಲ್ಲ.

ಹೋರಾಟದ ಹೆಜ್ಜೆಗಳು

ಖರ್ಗೆಯವರ ತಂದೆ, ಮಗನನ್ನು ಕಲಬುರ್ಗಿಗೆ ಕರೆದುಕೊಂಡು ಬಂದು ಶಾಲೆಗೆ ಸೇರಿಸಿದರು. ಶಾಲೆಯಲ್ಲಿ ಉತ್ತಮವಾಗಿ ವ್ಯಾಸಂಗ ಮಾಡಿದ ಅವರು, ಮುಂದೆ ಕಾನೂನು ಶಿಕ್ಷಣ ಪಡೆದರು. ಈ ಹಂತದಲ್ಲಿ ಅವರಿಗೆ ಹೋರಾಟವೇ ಉಸಿರಾಯಿತು. ವಿದ್ಯಾರ್ಥಿಯಾಗಿದ್ದಾಗಲೇ ಅನೇಕ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದರು. ಈ ಹೋರಾಟಗಳ ಫಲವಾಗಿ ಅವರು ರಾಜಕಾರಣಕ್ಕೆ ಕಾಲಿಡುವ ಮನಸ್ಸು ಮಾಡಿ, 1969ರಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಯಾದರು.

1972ರಲ್ಲಿ ಮೊದಲ ಬಾರಿಗೆ ಗುರುಮಿಠಕಲ್ ಕ್ಷೇತ್ರದಲ್ಲಿ ಗೆದ್ದು, ವಿಧಾನಸಭೆ ಪ್ರವೇಶಿಸಿ, 2008ರವರೆಗೆ ಒಂಬತ್ತು ಬಾರಿ ಜಯ ಸಾಧಿಸಿ ಸೋಲಿಲ್ಲದ ಸರದಾರರು ಎನಿಸಿಕೊಂಡರು. ಈ ಅವಧಿಯಲ್ಲಿ ಕೆಪಿಸಿಸಿ ಅಧ್ಯಕ್ಷರಾಗಿ, ಪ್ರತಿಪಕ್ಷದ ನಾಯಕರಾಗಿ, ಸಚಿವರಾಗಿ ಸೇವೆ ಸಲ್ಲಿಸಿದರು. 2009 ಹಾಗೂ 2014ರಲ್ಲಿ ಕಲಬುರ್ಗಿ ಸಂಸದರಾಗಿ, ಕೇಂದ್ರದಲ್ಲಿ ಸಚಿವರಾಗಿ, ಸಂಸದೀಯ ನಾಯಕರಾಗಿ ಕೆಲಸ ಮಾಡಿದರು. ಎಲ್ಲ ದಾಖಲೆಗಳಿಗೂ ಒಂದು ತೊಡಕು ಇದ್ದೇ ಇರುತ್ತದೆ. ಅಲ್ಲಿಯವರೆಗೆ ಸತತವಾಗಿ ಗೆದ್ದಿದ್ದ ಅವರು, 2019ರ ಲೋಕಸಭಾ ಚುನಾವಣೆಯಲ್ಲಿ ಸೋಲು ಕಂಡರು. ಅದು ಕಾಂಗ್ರೆಸ್ ಮಾತ್ರವಲ್ಲದೆ, ಪ್ರತಿಪಕ್ಷಗಳಿಗೂ ಒಂದು ಅಚ್ಚರಿಯ ಸಂಗತಿ ಎನಿಸಿತ್ತು. ಆದರೆ ಕಾಂಗ್ರೆಸ್ ಪಕ್ಷಕ್ಕೂ ಹಾಗೂ ದೇಶಕ್ಕೂ ಅವರ ಅನುಭವ ಮತ್ತು ಸಾಮರ್ಥ್ಯದ ಅಗತ್ಯವಿತ್ತೇನೋ. ಕಠಿಣ ಕಾಲದಲ್ಲಿ ರಾಜ್ಯಸಭೆಯ ವಿಪಕ್ಷ ನಾಯಕತ್ವದ ಹಾಗೂ ಕಾಂಗ್ರೆಸ್ ಪಾರ್ಟಿಯ ಅಧ್ಯಕ್ಷತೆಯ ಜವಾಬ್ದಾರಿಗಳು ಅವರ ಹೆಗಲೇರಿದವು.

ಮಲ್ಲಿಕಾರ್ಜುನ ಖರ್ಗೆಯವರ ಆಲೋಚನೆಗಳು ಯಾವಾಗಲೂ ತಳಮಟ್ಟದ್ದು. ಅವರು ತಂದ ಭೂ ಸುಧಾರಣೆಯ ಕ್ರಮಗಳೇ ಇದಕ್ಕೆ ಸಾಕ್ಷಿ. 1980ರಲ್ಲಿ ಆರ್.ಗುಂಡೂರಾವ್ ಸರಕಾರದಲ್ಲಿದ್ದಾಗ, ಭೂ ಸುಧಾರಣಾ ಕಾಯ್ದೆ ಜಾರಿ ಹಾಗೂ 1990ರಲ್ಲಿ ಎಸ್.ಬಂಗಾರಪ್ಪ ಅವರ ಸರಕಾರದಲ್ಲಿದ್ದಾಗ, ಭೂ ಸುಧಾರಣಾ ಕಾಯ್ದೆಯನ್ನು ಶಾಸನವಾಗಿಸಿ ಭೂರಹಿತರಿಗೆ ಭೂ ಒಡೆತನ ಕಲ್ಪಿಸಿದ್ದು ಬಡವರ ಪರವಾಗಿ ಅವರಿಗೆ ಇದ್ದ ದೃಷ್ಟಿಗೆ ಒಂದು ಉದಾಹರಣೆ. 371 ಜೆ ಅಧಿನಿಯಮದಡಿ ಹೈದರಾಬಾದ್ ಕರ್ನಾಟಕದ (ಕಲ್ಯಾಣ ಕರ್ನಾಟಕ) ಆರು ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನ, ಕೇಂದ್ರದಲ್ಲಿ ಕಾರ್ಮಿಕ ಸಚಿವರಾಗಿ ಬೆಂಗಳೂರು ಹಾಗೂ ಕಲಬುರ್ಗಿಯಲ್ಲಿ ಇಎಸ್‌ಐ ಆಸ್ಪತ್ರೆ ಸ್ಥಾಪನೆ, ರೈಲ್ವೆ ಸಚಿವರಾಗಿ ಚಿಕ್ಕಮಗಳೂರು-ಸಕಲೇಶಪುರ, ಶಿವಮೊಗ್ಗ-ಹರಿಹರ, ಬಾಗಲಕೋಟೆ-ಕುಡಚಿ ಮಾರ್ಗಗಳಿಗೆ ಹೆಚ್ಚು ಅನುದಾನ ಮಂಜೂರು, ಹೈದರಾಬಾದ್-ಹುಬ್ಬಳ್ಳಿ, ಶಿವಮೊಗ್ಗ-ತಾಳಗುಪ್ಪ, ಯಶವಂತಪುರ-ಬೀದರ್, ಬೆಂಗಳೂರು-ತುಮಕೂರು, ಯಶವಂತಪುರ-ಚಂಡೀಗಢಕ್ಕೆ 'ಸಂಪರ್ಕ ಕ್ರಾಂತಿ' ರೈಲು ಸೇವೆ, ಹೀಗೆ ಅವರ ಸಾಧನೆಗಳು ಹಲವಾರು.

ರಾಜ್ಯದಲ್ಲಿ ಎಸ್.ಎಂ.ಕೃಷ್ಣ ನೇತೃತ್ವದ ಸರಕಾರ ಇದ್ದಾಗ, ವರನಟ ಡಾ.ರಾಜ್‌ಕುಮಾರ್ ಅವರನ್ನು ಕಾಡುಗಳ್ಳ ವೀರಪ್ಪನ್ ಅಪಹರಣ ಮಾಡಿದ್ದು ಇಡೀ ಸರಕಾರಕ್ಕೆ ದಿಗಿಲು ಮೂಡಿಸಿತ್ತು. ಅಂಥ ಸಮಯದಲ್ಲಿ ಗೃಹ ಸಚಿವರಾಗಿ, ಎಸ್.ಎಂ.ಕೃಷ್ಣ ಅವರೊಂದಿಗೆ ಹೆಗಲಿಗೆ ಹೆಗಲಾಗಿ ನಿಂತವರೇ ಮಲ್ಲಿಕಾರ್ಜುನ ಖರ್ಗೆ. ಆ ಸಮಯದಲ್ಲಿ ಅವರ ಮೇಲೆ ಅತಿಯಾದ ಒತ್ತಡ ಇತ್ತು. ಅಂಥ ಸಂದರ್ಭವನ್ನು ಅವರು ಅತ್ಯಂತ ನಾಜೂಕಾಗಿ ನಿಭಾಯಿಸಿ ಪರಿಹರಿಸಿದ್ದರು.

ಗ್ಯಾರಂಟಿಗಳ ಸಂಕಲ್ಪ

ಇಂದು ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳು ದೇಶದೆಲ್ಲೆಡೆ ಚರ್ಚೆಯಾಗುತ್ತಿವೆ. ಅದರಲ್ಲಿ ಮಲ್ಲಿಕಾರ್ಜುನ ಖರ್ಗೆಯವರ ಪಾತ್ರವನ್ನು ಮರೆಯುವಂತಿಲ್ಲ. ಎನ್‌ಡಿಎ ಸರಕಾರವು ಮಾಡಿದ ಬೆಲೆ ಏರಿಕೆಯಿಂದ ಇಡೀ ರಾಜ್ಯ ತತ್ತರಿಸಿರುವಾಗ, ಜನರಿಗೆ ಉಪಶಮನ ನೀಡಿದ್ದೇ ಗ್ಯಾರಂಟಿಗಳು. ಚುನಾವಣೆಗೆ ಮುನ್ನ ಈ ಯೋಜನೆಗಳ ನೀಲನಕ್ಷೆ ರೂಪಿಸುವಾಗ ಮಲ್ಲಿಕಾರ್ಜುನ ಖರ್ಗೆ ನಮಗೆಲ್ಲರಿಗೂ ಹೆಚ್ಚು ಮಾರ್ಗದರ್ಶನ ನೀಡಿದ್ದರು. ಇಂಥ ಯೋಜನೆ ನಿಜಕ್ಕೂ ಜನರಲ್ಲಿ ಆಶಾವಾದವನ್ನು ಹುಟ್ಟುಹಾಕಲಿದೆ ಎಂದು ಅವರು ಪ್ರೋತ್ಸಾಹಿಸಿದ್ದರು. ಈ ಯೋಜನೆಗಳನ್ನು ಜಾರಿ ಮಾಡಿದ ನಂತರವೂ ಅದರ ಕುರಿತಾದ ಟೀಕೆಗಳು ನಿಂತಿಲ್ಲ. ಆಗಲೂ ನಮಗೆಲ್ಲರಿಗೂ ಬೆನ್ನು ತಟ್ಟಿ ಪ್ರೋತ್ಸಾಹ ನೀಡಿದ್ದು ಖರ್ಗೆಯವರೇ. ಇದರಿಂದಾಗಿ ಇಂದು ಜನರಿಗೆ ಆರ್ಥಿಕ ಶಕ್ತಿ ಸಿಕ್ಕಿದೆ. ಕುಟುಂಬಗಳ ಬಜೆಟ್‌ನಲ್ಲಿ ಬಹಳ ದೊಡ್ಡ ಸುಧಾರಣೆಯಾಗಿದೆ. ಜನರು ನೆಮ್ಮದಿಯಿಂದ ಬದುಕುವಂತಾಗಿದೆ.

ಬಲಿಷ್ಠ ಪ್ರತಿಪಕ್ಷ ನಾಯಕ

ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಸರಕಾರಕ್ಕೆ ದೊಡ್ಡ ಸವಾಲಾಗಿ ಕಾಡುತ್ತಿರುವ ಹೆಸರುಗಳೆಂದರೆ ಅದು ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ. ಖರ್ಗೆಯವರ ಮಾತಿನ ಶೈಲಿ, ಮುಖಕ್ಕೆ ಹೊಡೆದಂತೆ ನೇರವಾಗಿ ಹೇಳುವ ಕಠಿಣತೆ, ನಿಖರತೆ, ಸ್ಪಷ್ಟತೆಯಿಂದಾಗಿ ಎನ್‌ಡಿಎ ಸರಕಾರ ಪ್ರತಿ ಅಧಿವೇಶನದಲ್ಲೂ ಬೆಚ್ಚಿ ಬೀಳುತ್ತದೆ. ಸರಕಾರದ ಜನವಿರೋಧಿ ನೀತಿಗಳು, ಎಡವಟ್ಟಿನ ತೀರ್ಮಾನಗಳಿಂದಾಗಿ ಜನರು ಅತೀವ ಕಷ್ಟ ಅನುಭವಿಸುವಂತಾಗಿದೆ. ಅಂಥ ಸಂದರ್ಭಗಳಲ್ಲಿ ಜನರ ಮಾತಿಗೆ ಕಿವಿಯಾಗುವ ಕೆಲಸವನ್ನು ಖರ್ಗೆ ಮಾಡುತ್ತಿದ್ದಾರೆ. ಅವರು ನೊಂದ ಜನರ ಧ್ವನಿಯೂ ಹೌದು, ಅನುಭವದ ಗಣಿಯೂ ಹೌದು. ಕರ್ನಾಟಕ ಸರಕಾರದ ಆಡಳಿತದ ಪ್ರತಿ ಹೆಜ್ಜೆಯಲ್ಲೂ ಅವರ ಅನುಭವದ ಮಾರ್ಗದರ್ಶನ ಇದ್ದೇ ಇದೆ.

(ಲೇಖಕರು ಶಾಸಕರು ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷರು)

ಸರಕಾರದ 2 ವರ್ಷದ ಸಾಧನಾ ಸಮಾವೇಶ | ಮೈಸೂರು ಜಿಲ್ಲೆಯಲ್ಲಿ 2578 ಕೋಟಿ ರು. ವೆಚ್ಚದ ಅಭಿವೃದ್ಧಿಗೆ ಸಿಎಂ ಚಾಲನೆ

ಮೈಸೂರಿನ ಅಭಿವೃದ್ಧಿಗೆ ಕಾಂಗ್ರೆಸ್ ಕಂಕಣಬದ್ಧ

ಮೈಸೂರು: ಇಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ ಜರ್ಮನ್ ಟೆಂಟ್‌ನ ಬೃಹತ್ ಗಾತ್ರದ ವೇದಿಕೆಯಲ್ಲಿ ಕಾಂಗ್ರೆಸ್ ಸರಕಾರದ ಯಶಸ್ವಿ 2 ವರ್ಷದ ಆಡಳಿತದ ನಿಮಿತ್ತ ಸಾಧನಾ ಸಮಾವೇಶ ನಡೆಯಿತು. ಲಕ್ಷಕ್ಕೂ ಹೆಚ್ಚು ಮಂದಿ ಸಾಕ್ಷಿಯಾದರು. ಸಿಎಂ ಸಿದ್ದ ರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹಾದೇವಪ್ಪ ನೇತೃತ್ವದಲ್ಲಿ ಕಾರ್ಯಕ್ರಮ ಯಶಸ್ವಿಯಾಯಿತು.

ವಿಶೇಷವಾಗಿ ಸಜ್ಜಾಗಿದ್ದ ವೇದಿಕೆಯ ಮಧ್ಯ ಭಾಗದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿ ಕಾರ್ಜುನ ಖರ್ಗೆ ಹಾಗೂ ಅವರುಗಳು ವಿಶೇಷ ದಾರಿಯಲ್ಲಿ ಆಗಮಿಸಿ ನೆರೆದಿದ್ದ ಜನಸ್ತೋಮದತ್ತ ಕೈಬೀಸಿದರು. ಈ ವೇಳೆ ಘೋಷಣೆ ಮುಗಿಲು ಮುಟ್ಟಿತು. ನಾಡಗೀತೆ ಹಾಡಿದ ನಂತರ ಸಂವಿಧಾನ ಪೀಠಿಕೆ ಬೋಧಿಸಿ ಕಾರ್ಯಕ್ರಮ ಪ್ರಾರಂಭಿಸಲಾಯಿತು.

ಮೈಸೂರು ಜಿಲ್ಲೆಯ ನಾನಾ ವಿಧಾನಸಭಾ ಕ್ಷೇತ್ರಗಳಲ್ಲಿ ಕೈಗೊಂಡ 2578.03 ಕೋಟಿ ರು. ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್, ಕಾಂಗ್ರೆಸ್ ವರಿಷ್ಠ ಮಲ್ಲಿಕಾರ್ಜುನ ಖರ್ಗೆ ಚಾಲನೆ ನೀಡಿದರು.

ಈ ವೇಳೆ ಡಾ.ಜಿ.ಪರಮೇಶ್ವರ್, ಕೆ.ಎಚ್.ಮುನಿಯಪ್ಪ, ಕೆ.ಜೆ.ಜಾರ್ಜ್, ರಹೀಮ್ ಖಾನ್, ಕೆ. ವೆಂಕಟೇಶ್, ಸಂಸದ ಸುನೀಲ್ ಬೋಸ್, ಶಾಸಕರಾದ ತನ್ವೀರ್ ಸೇಟ್, ಎ.ಆರ್. ಕೃಷ್ಣಮೂರ್ತಿ, ಡಾ.ಡಿ.ತಿಮ್ಮಯ್ಯ, ಪುಟ್ಟರಂಗಶೆಟ್ಟಿ, ದರ್ಶನ್ ದ್ರುವ ನಾರಾ ಯಣ್, ಕೆ.ಹರೀಶ್ ಗೌಡ, ಎಚ್.ಎಂ. ರೇವಣ್ಣ, ಡಿ.ರವಿಶಂಕರ್, ಜಿಲ್ಲಾಧಿಕಾರಿ ಲಕ್ಷ್ಮಿ ಕಾಂತ ರೆಡ್ಡಿ, ಎಡಿಸಿ ಶಿವರಾಜು, ಎಡಿಜಿ ಹಿತೇಂದ್ರ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಇದ್ದರು.

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ನಡೆದ ಕಾಂಗ್ರೆಸ್ ಸಾಧನಾ ಸಮಾವೇಶವನ್ನು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಉದ್ಘಾಟಿಸಿದರು.

ಡಿಸಿಎಂ ಹೆಸರು ಹೇಳದ ಸಿಎಂ

ಸಾಧನಾ ಸಮಾವೇಶದಲ್ಲಿ ಸಿಎಂ ಸಿದ್ದರಾಮಯ್ಯ ಭಾಷಣ ಮಾಡುವಾಗ ಡಿ.ಕೆ. ಶಿವಕುಮಾರ್ ಹೆಸರು ಪ್ರಸ್ತಾಪಿಸಲಿಲ್ಲ ಎಂದು ವೇದಿಕೆಯ ಮೇಲಿದ್ದ ಕಾಂಗ್ರೆಸ್ ಮುಖಂಡರೊಬ್ಬರು ಸಿದ್ದರಾಮಯ್ಯನವರ ಗಮನ ಸೆಳೆದರು. ಇದಕ್ಕೆ ಖಾರವಾಗಿ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ವೇದಿಕೆ ಮೇಲಿರುವವರ ಹೆಸರನ್ನು ಹೇಳಿ ಸ್ವಾಗತಿಸಿದ್ದೇನೆ. ಡಿ.ಕೆ.ಶಿವಕುಮಾರ್ ವೇದಿಕೆಯಲ್ಲಿ ಇಲ್ಲ. ಅವರು ತುರ್ತು ಕೆಲಸಕ್ಕೆ ಬೆಂಗಳೂರಿಗೆ ಹೋದರು. ವೇದಿಕೆಯ ಮೇಲೆ ಅವರು ಇಲ್ಲದ ಕಾರಣ ಅವರ ಹೆಸರನ್ನು ಪ್ರಸ್ತಾಪಿಸಿಲ್ಲ ಎಂದು ಸ್ಪಷ್ಟಪಡಿಸಿದರು.

ಡಿಕೆಶಿ ಫೋಟೊ ಕಾಣಲಿಲ್ಲ

ಸಿಎಂ ಸಿದ್ದರಾಮಯ್ಯ ತವರು ಮೈಸೂರಿ ನಲ್ಲಿ ಸರಕಾರದ ಸಾಧನಾ ಸಮಾವೇಶ ಆಯೋಜನೆ ವೇಳೆ ಪ್ರತಿಯೊಂದು ಚೇರ್ ನಲ್ಲೂ ಅಭಿಮಾನಿ ಆನಂದ್ ಅವರು ಸಿಎಂ ಸಿದ್ದರಾಮಯ್ಯ ಭಾವ ಚಿತ್ರ ಇಟ್ಟು ವಿಧೇಯತೆ ಮೆರೆದರು. ಸಿದ್ದರಾಮಯ್ಯ ವೇದಿಕೆಗೆ ಬರುತ್ತಿದಂತೆ ಫೋಟೊ ಎತ್ತಿ ಹಿಡಿದು ಸಿದ್ದ ರಾಮಯ್ಯರ ಶಕ್ತಿ ತೋರಿಸಲು ಮಾಡಿದ ಪ್ಲಾನ್ ಅದಾಗಿತ್ತು. ಚೇರ್ ನಲ್ಲಿ ಎಲ್ಲಿಯೂ ಡಿಸಿಎಂ ಡಿ.ಕೆ ಶಿವಕುಮಾರ್ ಫೋಟೊ ಕಾಣಲಿಲ್ಲ.

ಸಂವಿಧಾನ ನಿಮ್ಮ ತಾತ ಬಂದು ಮಾಡಿದ್ನಾ?

ಖರ್ಗೆ ಕಿಡಿ

- ಸಂವಿಧಾನದ ಕಗ್ಗೊಲೆಗೆ ಯತ್ನಿಸುತ್ತಿರುವ ಪ್ರಧಾನಿ ಮೋದಿ
- ಅಭಿವೃದ್ಧಿ ಮಾಡದೇ ಕೇವಲ ಟೀಕೆಯಲ್ಲಿ ತೊಡಗಿರುವ ಬಿಜೆಪಿ
- ಮೋದಿ, ಅವರ ಶಿಷ್ಯರು ರಾಜ್ಯಕ್ಕೆ ಯಾವ ಕೊಡುಗೆ ಕೊಟ್ಟಿದ್ದಾರೆ
- ವಿದೇಶ ಸುತ್ತುವ ಮೋದಿ ಉದ್ವಿಗ್ನ ಮಣಿಪುರಕ್ಕೆ ಭೇಟಿ ಕೊಟ್ಟಿಲ್ಲ

ಮೈಸೂರಿನಲ್ಲಿ ನಡೆದ ಸಾಧನಾ ಸಮಾವೇಶದಲ್ಲಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬಿಜೆಪಿ ಹಾಗೂ ಆರ್‌ಎಸ್‌ಎಸ್ ವಿರುದ್ಧ ಹರಿಹಾಯ್ದರು.

ಸಂವಿಧಾನ ಬದಲಾವಣೆ ಮಾಡಲು ಬಿಜೆಪಿ, ಆರ್‌ಎಸ್‌ಎಸ್ ಪ್ರಯತ್ನಿಸುತ್ತಿವೆ. ಆದರೆ, ಅದು ಎಂದಿಗೂ ಸಾಧ್ಯವಾಗುವುದಿಲ್ಲ. ಸಂವಿಧಾನವನ್ನು ನಿಮ್ಮ ತಾತ ಬಂದು ಮಾಡಿದ್ನಾ? ಅಥವಾ ಆರ್‌ಎಸ್‌ಎಸ್‌ನವರು ಮಾಡಿದ್ರಾ? ಸಂವಿಧಾನದಡಿ ಮುಖ್ಯಮಂತ್ರಿ, ಪ್ರಧಾನಿ ಪಟ್ಟ ಅಲಂಕರಿಸಿದ ಮೋದಿ ಇದೀಗ ಸಂವಿಧಾನದ ಕಗ್ಗೊಲೆಗೆ ಪ್ರಯತ್ನಿಸುತ್ತಿದ್ದಾರೆ. ಬಿಜೆಪಿಯವರು ಯಾವುದೇ ಅಭಿವೃದ್ಧಿ ಮಾಡದೇ ಕೇವಲ ಟೀಕೆಯಲ್ಲಿ ತೊಡಗಿರುತ್ತಾರೆ. ಹಾಗಾಗಿ ಬಿಜೆಪಿಯವರು ಟೀಕಾಚಾರಿಗಳು. ಮೋದಿ ಹಾಗೂ ಮೋದಿ ಶಿಷ್ಯರ ಕೊಡುಗೆ ಮೈಸೂರು ಬೆಂಗಳೂರು ಕರ್ನಾಟಕಕ್ಕೆ ಏನು ಎಂಬುದನ್ನು ತಿಳಿಸಬೇಕು ಎಂದು ಆಗ್ರಹಿಸಿದ ಅವರು, ಬಿಜೆಪಿಯವರು ಬರೀ ಟಿವಿಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಯಾವುದೇ ಪ್ರಧಾನಿ ದಿನಬೆಳಗಾದರೆ ಇವರ ರೀತಿ ಬೊಗಳುತ್ತಿರಲಿಲ್ಲ ಎಂದು ಟೀಕಿಸಿದರು.

ಹತ್ತಾರು ವಿದೇಶಗಳಿಗೆ ಪ್ರವಾಸ ಕೈಗೊಳ್ಳುವ ಮೋದಿ ಹಿಂಸಾಚಾರದಿಂದ ನಲುಗಿರುವ ಮಣಿಪುರಕ್ಕೆ ಭೇಟಿ ಕೊಟ್ಟಿಲ್ಲ. ದೇಶದ ಜನರು ಸಾಯುತ್ತಿರುವಾಗಲೂ ಪ್ರಧಾನಿ ಮೋದಿ ವಿದೇಶ ಪ್ರವಾಸಕ್ಕೆ ತೆರಳುತ್ತಾರೆ ಎಂದು ಲೇವಡಿ ಮಾಡಿದರು.

ಜನರಿಗೆ ಶಕ್ತಿ ತುಂಬುವ ಕೆಲಸವನ್ನು ಕಾಂಗ್ರೆಸ್ ಪಾರ್ಟಿ ಮಾಡಿದೆ. ಕಾಂಗ್ರೆಸ್‌ಗೆ ದೇಶದ ಉದ್ದಗಲಕ್ಕೂ ನೆಲೆಯಿದೆ. ನಾವು ಚುನಾವಣೆಯಲ್ಲಿ ಸೋತಿದ್ದರೂ ಕಾಂಗ್ರೆಸ್ ಪಾರ್ಟಿ ಉಳಿಯಬೇಕೆಂದು ದೇಶದ ಜನರು ಬಯಸಿದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಸಿದ್ದರಾಮಯ್ಯ, ಡಿಕೆಶಿ ಇನ್ನೊಂದು ಹತ್ತು ಸೀಟು ಕೊಟ್ಟಿದ್ದರೆ, ಇತರ ರಾಜ್ಯಗಳಲ್ಲಿ ಒಂದಷ್ಟು ಸೀಟುಗಳು ಸಿಕ್ಕಿದ್ದರೆ ರಾಜಕೀಯ ಚಿತ್ರಣವೇ ಬದಲಾಗುತ್ತಿತ್ತು. ಇವರು ಒಂದಲ್ಲ ಒಂದು ದಿನ ಕೆಳಕ್ಕೆ ಬೀಳುತ್ತಾರೆ ಎಂದು ಭವಿಷ್ಯ ನುಡಿದರು. 5 ಗ್ಯಾರಂಟಿ ಬರೀ ಸಿದ್ದರಾಮಯ್ಯ ಮನೆಗಾ?, ಡಿ.ಕೆ.ಶಿವಕುಮಾರ್ ಮನೆಗಾ?, ಪರಮೇಶ್ವರ್ ಮನೆಗೆ ಕೊಟ್ಟಿದ್ದೀವಾ?. ಇಷ್ಟು ಅಭಿವೃದ್ಧಿ ಕಾರ್ಯ, ಗ್ಯಾರಂಟಿ ಕೊಟ್ಟ ಮೇಲೂ ನಮ್ಮವರೇ ಕೆಲವರು ಅಭಿವೃದ್ಧಿ ಆಗುತ್ತಿಲ್ಲ ಅಂತಾರೆ? ಯಾಕೆ ಅಂತಾನೆ ಗೊತ್ತಾಗಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸರಕಾರ ದಿವಾಳಿ ಆಗಿಲ್ಲ: ರಾಜ್ಯ ಕಾಂಗ್ರೆಸ್ ಸರಕಾರ ದಿವಾಳಿ ಆಗಿದೆ ಎಂದು ಸುಳ್ಳು ಹಬ್ಬಿಸಿದ್ದಾರೆ. ಈ ಸರಕಾರ ದಿವಾಳಿ ಆಗಿಲ್ಲ. ದಿವಾಳಿ ಆಗಿದ್ದರೆ ಶಾಸಕರಿಗೆ 50 ಕೋಟಿ ರೂಪಾಯಿ ಅನುದಾನ ಕೊಡುತ್ತಿದ್ದರಾ? ಎಂದು ಪ್ರಶ್ನಿಸಿದ ಅವರು, ಸಿದ್ದರಾಮಯ್ಯ ಯಾವಾಗ ಯಾವಾಗ ಹಣಕಾಸು ಸಚಿವರಾಗುತ್ತಾರೋ ಆಗ ಲಕ್ಷ್ಮಿ ಖಜಾನೆಯಲ್ಲಿ ಕೂರುತ್ತಾಳೆ ಎಂದರು.

ಮೋದಿ ಗ್ಯಾರಂಟಿ ಒಂದೇ, ಅದು ಸುಳ್ಳು: ಮೋದಿ ಬಳಿ ಇರೋದು ಸುಳ್ಳಿನ ಗ್ಯಾರಂಟಿ ಮಾತ್ರ. ಕಾಂಗ್ರೆಸ್ ಗ್ಯಾರಂಟಿ ನಿಜವಾದ ಗ್ಯಾರಂಟಿ. ಇವು ಬದುಕಿನ ಗ್ಯಾರಂಟಿ. ವಮೋದಿ ಅಂದರೆ ಸುಳ್ಳು. ಮೋದಿ ನಂಬರ್ ಒನ್ ಸುಳ್ಳುಗಾರ ಎಂದು ಟೀಕಿಸಿದರು.

ಮಹದೇವಪ್ಪಗೆ ಗದರಿದ ಖರ್ಗೆ : ಮಲ್ಲಿಕಾರ್ಜುನಖರ್ಗೆ ಭಾಷಣ ಮಾಡುತ್ತಿದ್ದಾಗ ಸಿಎಂ ಸಿದ್ದರಾಮಯ್ಯ ಜೊತೆ ಮಹಾದೇವಪ್ಪ ಮಾತುಕತೆ ನಡೆಸುತ್ತಿದ್ದರು. ಈ ವೇಳೆ ಹೇಯ್ ಮಹದೇವಪ್ಪ ಸಿಎಂ ಕಿವಿಗೆ ಏನೇನೋ ತುಂಬಬೇಡ. ಅವರ ಕಿವಿ ಚೆನ್ನಾಗಿದೆ, ಅವರು ಇಲ್ಲಿ ಕೇಳಿಸಿಕೊಳ್ಳಲಿ ಎಂದು ಗದರಿದರು.

ಮೋದಿಗೆ ಆಹ್ವಾನ

ಮೋದಿ ಅವರೆ ಕರ್ನಾಟಕಕ್ಕೆ ಬಂದು ನೋಡಿ. ಈ ನಾಡು ಎಷ್ಟು ಸುಭಿಕ್ಷವಾಗಿದೆ ಅಂತ. ಕರ್ನಾಟಕಕ್ಕೆ ಬಂಡವಾಳ ಹೂಡಿಕೆ ಮಾಡಲು ಹುಡುಕಿ ಹುಡುಕಿ ಜನ ಬರುತ್ತಿದ್ದಾರೆ. ಹೊಟ್ಟೆ ಕಿಚ್ಚಿಗೆ ಆರೋಪ ಮಾಡುತ್ತಾರೆ. ಹೊಟ್ಟೆ ಕಿಚ್ಚಿಗೆ ಮದ್ದಿಲ್ಲ. ಕರ್ನಾಟಕದಲ್ಲಿ ಕಾಂಗ್ರೆಸ್ ಮಾಡಿರುವ ಅಭಿವೃದ್ಧಿಯನ್ನು ಮೋದಿ 1% ಕೂಡ ಮಾಡಿಲ್ಲ ಎಂದು ಹರಿಹಾಯ್ದರು.

ಶಂಕುಸ್ಥಾಪನೆ

- ಯುನಿಟಿ ಮಾಲ್, ಬನ್ನಿಮಂಟಪದಲ್ಲಿ ನೂತನ ಬಸ್ ನಿಲ್ದಾಣ
- ವಸ್ತು ಪ್ರದರ್ಶನ ಅಭಿವೃದ್ಧಿ, ಸೆಸ್ಕ್‌ನಿಂದ ಭೂಗತ ಕೇಬಲ್ ಅಳವಡಿಕೆ
- ನಗರದ ವಿವಿಧೆಡೆ ಸಿಮೆಂಟ್ ರಸ್ತೆ ನಿರ್ಮಾಣ, ಕಾರ್ಮಿಕ ಭವನ ನಿರ್ಮಾಣ
- ಕೆರೆಗಳಿಗೆ ನೀರು ತುಂಬಿಸುವ ಯೋಜನೆ, ಕ್ರೀಡಾ, ವಿಜ್ಞಾನ ಕೇಂದ್ರ ನಿರ್ಮಾಣ
- ಫೆರಿಫೆರಲ್ ಕ್ಯಾನ್ಸರ್ ಕೇಂದ್ರ, ಯೂರಾಲಜಿ ಕೇಂದ್ರ, ಎಂಡೋಕ್ರೊನಾಲಜಿ ಕೇಂದ್ರ,
- ತಾಲೂಕು ಆಸ್ಪತ್ರೆ ಅಭಿವೃದ್ಧಿ, ಸ್ಮಶಾನಗಳ ಅಭಿವೃದ್ಧಿ, ಕಲಾಮಂದಿರ,
- ರಂಗಾಯಣ ನವೀಕರಣ, ಚೆಕ್ ಡ್ಯಾಮ್, ಗಾಂಧಿ ಭವನ,
- ಮಾರುಕಟ್ಟೆ ಮಳಿಗೆಗಳು, ಅರಸು ಭವನ ನಿರ್ಮಾಣ ಕಾಮಗಾರಿಗೆ ಚಾಲನೆ

ಸಾಧನಾ ಸಮಾವೇಶದಲ್ಲಿ ಸಿಎಂ ಸಿದ್ದರಾಮಯ್ಯ ಅವರ ಭಾವಚಿತ್ರಗಳ ಪ್ರದರ್ಶನ.

ಭಾಷಣ ಮುಗಿಸಿ ಬೆಂಗಳೂರಿನತ್ತ ಡಿಕೆಶಿ

ಡಿಸಿಎಂ ಡಿ.ಕೆ.ಶಿವಕುಮಾರ್ ಹೆಸರು ಹೇಳುವುದನ್ನು ಸಿಎಂ ಸಿದ್ದರಾಮಯ್ಯ ಹಾಗೂ ಸಚಿವ ಡಾ. ಮಹಾದೇವಪ್ಪ ಮರೆತರು. ಈ ನಡುವೆ ಹಿಂದೆ ಇದ್ದವರು ಕಿವಿಯ ಬಳಿಗೆ ಬಂದು ಹೇಳಿದ ನಂತರ ಡಿಕೆಶಿ ಹೆಸರು ಪ್ರಸ್ತಾಪಿಸಿದರು. ತಮ್ಮ ಭಾಷಣ ಮಾಡಿದ ನಂತರ ವೇದಿಕೆಯಿಂದ ಕೆಳಗಿಳಿದು ಡಿಸಿಎಂ ಡಿ.ಕೆ.ಶಿವಕುಮಾರ್ ನಿರ್ಗಮಿಸಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾಷಣ ಶುರು ಮಾಡುತ್ತಿದ್ದಂತೆ ಕುರ್ಚಿಯಿಂದ ಎದ್ದು ಹೊರಟುಬಿಟ್ಟರು. ಸಿದ್ದರಾಮಯ್ಯ ಭಾಷಣ ಮಾಡುವುದಕ್ಕೂ ಮುನ್ನವೇ ಮೈಸೂರು ತೊರೆದರು.

ಮೆಚ್ಚುಗೆ

- ಸಾಧನಾ ಸಮಾವೇಶಕ್ಕೆ ಹರಿದು ಬಂದಿದ್ದ ಜನಸಾಗರ
- ಕಾರ್ಯಕರ್ತರು, ಫಲಾನುಭವಿಗಳಿಂದ ತುಂಬಿದ್ದ ಕಾರ್ಯಕ್ರಮ
- ವೇದಿಕೆ ಮುಂಭಾಗ ಸಿಎಂ ಸಿದ್ದರಾಮಯ್ಯ ಭಾವಚಿತ್ರಗಳ ಪ್ರದರ್ಶನ
- ಆಕರ್ಷಿಸಿದ ಪಂಚ ಗ್ಯಾರಂಟಿ ಯೋಜನೆಗಳ ಕುರಿತ ಕಲಾಕೃತಿ
- ವ್ಯಸ್ಥಿತ ಪಾರ್ಕಿಂಗ್, ಪೊಲೀಸರ ಬಂದೋಬಸ್ತ್

ಸಿಎಂ ಸಿದ್ದರಾಮಯ್ಯ ಅವರನ್ನು ಸಾಧನಾ ಸಮಾವೇಶದ ವೇದಿಕೆ ಮೇಲೆ ಸತ್ಕರಿಸಲಾಯಿತು.

ಎಣ್ಣೆ ಬೇಕು ಅಣ್ಣ!

ಕಾರ್ಯಕ್ರಮಕ್ಕೆ ಕರೆತಂದ ಸಂಘಟಕರನ್ನು ಕೆಲವರು ಎಣ್ಣೆ ಬೇಕು ಅಣ್ಣ ಎಂದು ಬಹಿರಂಗವಾಗಿ ಕೇಳುತ್ತಿದ್ದರು. ಇನ್ನೂ ಕೆಲವರು ಸಮಾವೇಶದ ನಡುವೆಯೇ ಮದ್ಯ ದಂಗಡಿಗಳಿಗೆ ದೌಡಾಯಿಸಿದರು.

ಇಬ್ಬರು ಸಿಬ್ಬಂದಿಗೆ ಸಣ್ಣಪುಟ್ಟ ಗಾಯ, ಆಸ್ಪತ್ರೆಗೆ ದಾಖಲು

ಡಿಕೆಶಿ ಬೆಂಗಾವಲು ವಾಹನ ಪಲ್ಟಿ

ಮಂಡ್ಯ: ಮೈಸೂರಿನಲ್ಲಿ ನಡೆಯುತ್ತಿದ್ದ ಸಾಧನಾ ಸಮಾವೇಶ ಮುಗಿಸಿ ಬೆಂಗಳೂರಿಗೆ ವಾಪಸ್ ತೆರಳುತ್ತಿದ್ದ ವೇಳೆ ಡಿಸಿಎಂ ಡಿಕೆ ಶಿವಕುಮಾರ್ ಅವರ ಬೆಂಗಾವಲು ವಾಹನ ಪಲ್ಟಿಯಾಗಿರುವ ಘಟನೆ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ನಡೆದಿದೆ.

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕು ವ್ಯಾಪ್ತಿಯ ಗೌಡಹಳ್ಳಿ ಟಿಎಂ ಹೊಸೂರು ಬಳಿಯ ಎಕ್ಸ್‌ಪ್ರೆಸ್‌ವೇನಲ್ಲಿ ಘಟನೆ ನಡೆದಿದೆ. ಬೆಂಗಾವಲು ವಾಹನ ಪಲ್ಟಿಯಾಗಿದ್ದು, ಇಬ್ಬರು ಸಿಬ್ಬಂದಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮೈಸೂರಿನ ಸಾಧನಾ ಸಮಾವೇಶಕ್ಕೆ ತೆರಳಿದ್ದ ಡಿಕೆಶಿ ಬೆಂಗಳೂರಿಗೆ ವಾಪಸ್ ತೆರಳುತ್ತಿದ್ದರು. ಈ ವೇಳೆ ಡಿಕೆಶಿ ಬೆಂಗಾವಲು ವಾಹನ ಹೊಸೂರು ಬಳಿಯ ಎಕ್ಸ್‌ಪ್ರೆಸ್‌ವೇ ಬಳಿ ಡಿವೈಡರ್‌ಗೆ ಡಿಕ್ಕಿಯಾಗಿ ಪಲ್ಟಿಯಾಗಿದೆ.

ಶ್ರೀರಂಗಪಟ್ಟಣ ತಾಲೂಕು ವ್ಯಾಪ್ತಿಯ ಗೌಡಹಳ್ಳಿ ಟಿಎಂ ಹೊಸೂರು ಬಳಿಯ ಎಕ್ಸ್‌ಪ್ರೆಸ್ ವೇನಲ್ಲಿ ಪಲ್ಟಿ ಆಗಿರುವ ಡಿಸಿಎಂ ಡಿಕೆಶಿ ಬೆಂಗಾವಲು ವಾಹನ.

ಎಸ್ಕಾರ್ಟ್ ವಾಹನದಲ್ಲಿದ್ದ ಇಬ್ಬರು ಸಿಬ್ಬಂದಿ ಗಾಯಗೊಂಡಿದ್ದು ಚಿಕಿತ್ಸೆಗಾಗಿ ಮೈಸೂರು ಆಸ್ಪತ್ರೆಗೆ ರವಾನೆ ಮಾಡಲಾಗಿದೆ. ಅದೃಷ್ಟವಶಾತ್ ಹಿಂದೆಯೇ ಇದ್ದ ಡಿಕೆಶಿ ಕಾರಿಗೆ ಯಾವುದೇ ಅಪಾಯ ಆಗಿಲ್ಲ, ಘಟನೆ ಬಳಿಕ ಬೆಂಗಳೂರಿಗೆ ಪ್ರಯಾಣ ಮಾಡಿದ್ದಾರೆ.

ಮೃತ ಪವರ್‌ಮ್ಯಾನ್ ಕುಟುಂಬಕ್ಕೆ 1.06 ಕೋಟಿ ರು. ಚೆಕ್



ಮೃತಪಟ್ಟ ಸೆಸ್ಕ್ ಸಿಬ್ಬಂದಿಗೆ ಸಿಎಂ ಸಿದ್ದರಾಮಯ್ಯ ಚೆಕ್ ವಿತರಿಸಿದರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ಕರ್ತವ್ಯನಿರತ ವೇಳೆ ಪ್ರಾಣ ಕಳೆದುಕೊಂಡ ಕಿರಿಯ ಪವರ್ ಮ್ಯಾನ್ ಕುಟುಂಬಕ್ಕೆ 1.06 ಕೋಟಿ ರು. ಪರಿಹಾರದ ಚೆಕ್ ವಿತರಿಸಿದೆ. ಸಾಧನಾ ಸಮಾವೇಶ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದ ರಾಮಯ್ಯ ಮತ್ತು ಇಂಧನ ಸಚಿವ ಕೆ.ಜಾರ್ಜ್ ಅವರು ಕರ್ತವ್ಯದ ವೇಳೆ ಪ್ರಾಣಕಳೆದುಕೊಂಡು ಸೆಸ್ಕ್ ವ್ಯಾಪ್ತಿಯ ಪಾಂಡವಪುರ ಉಪ ವಿಭಾಗದ ಕಿರಿಯ ಪವರ್ ಮ್ಯಾನ್ ಮಹೇಶ್ (27) ಅವರ ಕುಟುಂಬಕ್ಕೆ 1.06 ಕೋಟಿ ರು. ಗಳ ಪರಿಹಾರದ ಚೆಕ್ ವಿತರಿಸಿದರು.

ಸಮಾವೇಶದಲ್ಲಿ ನೆರೆದಿದ್ದ ಜನರಿಗೆ ಸಂವಿಧಾನ ಪೀಠಿಕೆ ಬೋಧಿಸಲಾಯಿತು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೆಂಗಳೂರು**

ಸಮಸ್ಯೆಯೇನು..?

- ಸಹಕಾರ ನಗರದ 20ನೇ ಕ್ರಾಸ್‌ನಲ್ಲಿರುವ ರಾಧಾಕೃಷ್ಣ ಕಲ್ಯಾಣ ಮಂಟಪದ ರಸ್ತೆ ಸರಿಪಡಿಸಲು ಮನವಿ.
- **ಪರಿಹಾರ:** ಸಹಕಾರ ನಗರದ 20ನೇ ಕ್ರಾಸ್ ರಾಧಾಕೃಷ್ಣ ಕಲ್ಯಾಣ ಮಂಟಪದ ರಸ್ತೆಯ ರ‍್ಯಾಂಪ್ ಭಾಗ ತಗ್ಗಾಗಿರುವ ಬಗ್ಗೆ ದೂರುಗಳು ಬಂದಿದ್ದವು. ರಸ್ತೆ ಪರಿಶೀಲನೆ ನಡೆಸಲಾಗಿದ್ದು, ಸಮಸ್ಯೆ ಪರಿಹರಿಸಲು ಕ್ರಮ ವಹಿಸಲಾಗಿದೆ. ನಗರೋತ್ಥಾನ ಯೋಜನೆಯಲ್ಲಿ ಕೈಗೊಂಡ ವೈಟ್ ಟಾಪಿಂಗ್ ಕೆಲಸ ಪ್ರಗತಿಯಲ್ಲಿದೆ. ವಾಹನ ಸಂಚಾರಕ್ಕೆ ಅನುಕೂಲ ಆಗುವಂತೆ ರ‍್ಯಾಂಪ್‌ಗಳನ್ನು ನಿರ್ಮಾಣ ಮಾಡಲಾಗಿದೆ. ವಾಹನಗಳ ಓಡಾಟದಿಂದ ತಗ್ಗಾದ ಕೂಡಲೇ ಸರಿಪಡಿಸಲಾಗುವುದು.

ರಾಜಕೀಯ ಅಸ್ಥಿರತೆ ಕಾಡಿದಾಗ ಸಿಎಂ ಶಕ್ತಿ ಪ್ರದರ್ಶನ, ಸಾಧನಾ ಸಮಾವೇಶ: ಬಿವೈವಿ

ಹೈಕಮಾಂಡ್ ಮುಂದೆ ಸಿಎಂ ಅಹಿಂದ ಅಸ್ತ್ರ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುರ್ಚಿ ಯಾವಾಗ ಅಲ್ಲಾಡುತ್ತೋ, ಯಾವಾಗ ಅಸ್ಥಿರತೆ ಕಾಡುತ್ತದೋ ಅವಾಗೆಲ್ಲಾ ಅವರು ಸಮಾವೇಶಗಳ ಮೊರೆ ಹೋಗುತ್ತಾರೆ. ಸಿದ್ದ ರಾಮಯ್ಯ ಅಂದರೆ ಸಮಾವೇಶ, ಸಮಾವೇಶ ಅಂದರೆ ಸಿದ್ದರಾಮಯ್ಯ ಎನ್ನುವ ಹಾಗಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವ್ಯಂಗ್ಯವಾಡಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸಿದ್ದರಾಮಯ್ಯ ತಮ್ಮ ರಾಜಕೀಯ ಅಸ್ತಿತ್ವಕ್ಕಾಗಿ ಅಹಿಂದ ಸಮಾಜವನ್ನು ಮುಂದೆ ಇಟ್ಟುಕೊಂಡು ಹೈಕಮಾಂಡ್‌ಗೆ ಬೆದರಿಸುವ ಕುತಂತ್ರ ನಡೆಸಿದರು. ಈಗ ಸಿದ್ದರಾಮಯ್ಯ ಅವರಿಗೆ ಮತ್ತೆ ಸಿಎಂ ಗಾದಿ ಅನಿಶ್ಚಿತತೆ ಕಾಡುತ್ತಿದೆ. ಆದರಿಂದ ಹೈಕಮಾಂಡ್‌ನ್ನು ಬೆದರಿಸಲು ಮೈಸೂರಿನಲ್ಲಿ ಸಮಾವೇಶದ ಮೂಲಕ ಯತ್ನಿ ಸುತ್ತಿದ್ದಾರೆ. ಕಳೆದ ಎರಡೂವರೆ ವರ್ಷದಲ್ಲಿ ಕಾಂಗ್ರೆಸ್ ಸರಕಾರದ ಸಾಧನೆ ಶೂನ್ಯವಾಗಿದೆ.

ಸರಕಾರದ ಸಾಧನೆ ನಿಜವಾಗಿದ್ದರೆ, ಸುರ್ಜೆವಾಲ ಅವರು ಪದೇ ಪದೇ ಬಂದು ಶಾಸಕರ ಅಸಮಾಧಾನ ಹೋಗಲಾಡಿಸುವ ಪ್ರಮೇಯ ಇರುತ್ತಿರಲಿಲ್ಲ. ಶಾಸಕರ ಅಸಮಾಧಾನ ಎಷ್ಟಿದೆ ಎಂದು ಅರ್ಥ ಮಾಡಿಕೊಳ್ಳಲು, ಸಿಎಂ ಬದಲಾವಣೆ ಆದರೆ ಯಾರನ್ನು ಮಾಡಬೇಕು ಎನ್ನುವ ಶಾಸಕರ ಮನಸ್ಥಿತಿ ಅರ್ಥ ಮಾಡಿಕೊಳ್ಳಲೂ ಅವರು ಬರುತ್ತಿದ್ದಾರೆ ಎಂದು ಹೇಳಿದರು.

ಸಿಎಂ ಗಾದಿಗೆ ರೇಟ್ ಫಿಕ್ಸ್: ಕಾಂಗ್ರೆಸ್‌ನಲ್ಲಿ ಸಿಎಂ ನಾನಾಗಬೇಕು, ನಾನಾಗಬೇಕು ಎನ್ನುವ ಪೈಪೋಟಿ ಭರ್ಜರಿಯಾಗಿ ನಡೆ ಯುತ್ತಿದೆ. ಸಿಎಂ ಗಾದಿಗಾಗಿ ಕುದುರೆ ವ್ಯಾಪಾರ ನಡೆಯುತ್ತಿದೆ. ಎಲ್ಲವೂ ಕೂಡ ರೇಟ್ ಫಿಕ್ಸಿಂಗ್ ನಡೆಯುತ್ತಿದೆ. 5 ವರ್ಷ ನಾನೇ ಸಿಎಂ ಅಂತ ಸಿದ್ದ ರಾಮಯ್ಯ ಹೆಮ್ಮೆಯಿಂದ ಹೇಳಿದ್ದಲ್ಲ, ಹಾಗೇ ಹೇಳುವ ಮೂಲಕ ಸಿದ್ದರಾಮಯ್ಯ ಅವರು ಹೈಕಮಾಂಡಗೆ ನೇರ ಸವಾಲು ಹಾಕಿದ್ದಾರೆ ಎಂದು ವಿಜಯೇಂದ್ರ ಆರೋಪಿಸಿದರು.

ಕಲಬುರಗಿ ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿಕಾರಿದರು.

ಹಿಂದುಳಿದ ನಾಯಕ ಬೈರತಿ ಬಸವ ರಾಜ ಅವರನ್ನು ರಾಜಕೀಯವಾಗಿ ಮುಗಿಸೋ ಷಡ್ಯಂತ್ರವಿದೆ. ಬಸವರಾಜ ತಮ್ಮದೇನು ತಪ್ಪಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ದೂರು ಕೊಟ್ಟ ಆ ತಾಯಿಯೇ ಬೈರತಿ ಹೆಸರನ್ನೆ ಹೇಳಿಲ್ಲ. ಆದರೆ ಇದರ ಹಿಂದೆ ಅವರ ರಾಜಕೀಯ ಭವಿಷ್ಯ ಮುಗಿಸುವ ಚರ್ಚೆ ನಡೆಸಿದ್ದಾರೆ.

-ಬಿ.ವೈ ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ದಲಿತ ಸಿಎಂ ಬಗ್ಗೆ ಚರ್ಚೆ ನಡೆದರೆ ಸಿದ್ದರಾಮಯ್ಯ ಕೆಂಡ

ದಲಿತರಿಗೆ ಸಿಎಂ ಕುರ್ಚಿ ನೀಡಬೇಕು ಎಂದಾಗ ಸಿದ್ದರಾಮಯ್ಯ ಅವರಿಗೆ ಕೋಪ ಬರುತ್ತದೆ. ಜಿ.ಪರಮೇಶ್ವರ್ ಅವರಿಗೆ ಅನ್ಯಾಯ ಮಾಡಿದರು. ಇದೀಗ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರು ಹೇಳಿದರೆ ಸಿದ್ದರಾಮಯ್ಯ ಅವರಿಗೆ ಕೋಪ ಬರುತ್ತಿದೆ. ಈ ಬಗ್ಗೆ ನಾನು ಈ ಹಿಂದೆ ಹೇಳಿದಾಗಲೂ ಸಿಎಂ ಅವರು ಕೋಪ ಮಾಡಿಕೊಂಡಿದ್ದರು ಎಂದು ಬಿವೈ ವಿಜಯೇಂದ್ರ ಹೇಳಿದರು.

S. Rajashekar & Associates Advocates

1st Floor, Jathi, No. 28, N S Iyengar Street Kumara Park, Sheshadripuram
Bengaluru - 560 020. Ph.: 080-22267575 | Mob.: 9448725919 Email: rajadvo@gmail.com

PUBLIC NOTICE

By virtue of this notice, it is brought to the notice of the general Public that a suit in O.S. No. 5185/2025 has been instituted before X Additional City Civil and Sessions Judge (CCH-26), Bengaluru by my client Sri Harshendra Kumar D. S/o Late Rathnavarma Heggade seeking for mandatory injunction directing the defendant Nos.1 to 338 to remove/delete/deindex video contents detailed in the Schedule and the identified URLs/Weblinks in respect of Crime No.39/2025 of Dharmasthala Police or any other similar issues; a decree for permanent prohibitory injunction restraining the Defendant Nos.1 to 338 their men, servants, agents, administrators, assignees etc., or any persons claiming through or under them from making defamatory allegations against the plaintiff, Shri Manjunathaswamy Temple, Sri Kshetra Dharmasthala, the institutions run by the Kshetra Educational Society, the organizations established by Dharmasthala Temple, Dr. D. Veerendra Heggade and his family members in respect of Crime No.39/2025 of Dharmasthala Police Station or any other similar issues and for consequential reliefs. Further my client has filed Interlocutory Applications praying to pass an ad-interim ex-parte injunction order restraining the Defendant Nos. 1 to 339 including (John Doe/Ashok Kumar) their men, servants, agents, administrators, assignees etc. or any persons claiming through or under them from making/telecasting/publishing/circulating/forwarding/uploading/transmitting/ sharing any defamatory allegations against the plaintiff, elder brother of the plaintiff Padma Vibhushana Dr. D. Veerendra Heggade and his family members and the institutions run by them in connection with Crime No.39/2025 of Dharmasthala Police Station and to pass an ad-interim ex-parte injunction order directing the Defendants Nos. 1 to 338 their men, servants, agents, administrators, assignees etc. or any persons claiming through or under them to remove/delete/ de-index the defamatory allegations, i.e., the URLs mentioned in the Schedule and further transmitting/telecasting the videos specified in the schedule against the plaintiff, his elder brother Dr. D. Veerendra Heggade and his family members, the temple and the institutions run by them and further direct them to delete or de-index any such videos which will be uploaded in future by defendant No.339 (John Doe/Ashok Kumar).

It is further brought to the notice of the general public that the Hon'ble X Additional City Civil and Sessions Judge (CCH-26), Bengaluru has pleased passed the following order:

"Defendants, their men, officials, anchors, representatives or any persons claiming on behalf of them are restrained from publishing, circulating, forwarding, uploading, transmitting and telecasting any defamatory contents and information against the plaintiff, his family members, institutions run by the family of the plaintiff and Sri Manjunathaswamy temple, Dharmastala either in the digital media including You Tube channels, all social medias or print media of any kind until the next date of hearing. Further, the defendants are directed by way of ad-interim mandatory injunction to delete or de-index all the defamatory contents and information against the plaintiff, his family members, institutions run by the family of the plaintiff and Sri Manjunathaswamy temple, Dharmastala either in the digital media or print media of any kind until further orders. The plaintiff shall comply under Order XXXIX Rule 3(a) of CPC. The plaintiff is permitted to comply by forwarding the plaint, IA copies and documents through e-mail and whatsapp. In view of the urgency, the plaintiff is also permitted to forward the uploaded copy of this order to the defendants. Further, issue John Doe Order as sought in I.A.No.1 and 2. The plaintiff shall issue a paper publication in two English news papers and two Kannada newspaper having wide circulation. Issue T.I order, suit summons and notice on I.A.No.I and 2, returnable by 05.08.2025."

In view of the same, since the John Doe/Ashok Kumar order passed by the competent Court of law is against the world at large, the said order is binding on the general public. In that view of the matter, the general public are called upon not make/telecast/publish/circulate/forward/upload/transmit/share any false, baseless, reckless and defamatory allegations against Sri Harshendra Kumar D., his elder brother Padma Vibhushana Dr. D. Veerendra Heggade and their family members and the institutions run by them on the basis of false, fabricated, defamatory and concocted stories in connection with Crime No. 39/2025 registered by Dharmasthala Police station.

Place: Bengaluru
Date: 19.07.2025

Sd/-
(S.RAJASHEKAR) For ADVOCATE

ಸರಕಾರಿ ಕಚೇರಿಗಳಲ್ಲಿ ನನ್ನ ಫೋಟೋ ಬೇಡ ಎಂದ ಸೆನೆಗಲ್ ಅಧ್ಯಕ್ಷರು!

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com
vveditoped@gmail.com

ಸೆನೆಗಲ್‌ನ ನೂತನ ಯುವ ಅಧ್ಯಕ್ಷ ಬಸಿರು ಡಿಯೋಮಯೆ ಫಾಯೆ ಅವರ ಹೇಳಿಕೆ ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿರುವುದನ್ನು ಗಮನಿಸಿರಬಹುದು. ಪ್ರೇರಣಾದಾಯಕ ಮತ್ತು ನಾಯಕತ್ವಕ್ಕೆ ಹೊಸ ಆಯಾಮ ನೀಡುವ ಅವರ ಈ ಹೇಳಿಕೆ ಆಳವಾದ ಅರ್ಥ ಮತ್ತು ಸಂದೇಶವನ್ನು ಹೊಂದಿರುವುದು ಗಮನಾರ್ಹ.

ಏಪ್ರಿಲ್ 2, 2024ರಂದು ಬಸಿರು ಡಿಯೋಮಯೆ ಫಾಯೆ ಸೆನೆಗಲ್‌ನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ಅವರು ಕೇವಲ 44 ವರ್ಷ ವಯಸ್ಸಿನವರಾಗಿದ್ದು, ಆಫ್ರಿಕಾದ ಅತ್ಯಂತ ಕಿರಿಯ ಅಧ್ಯಕ್ಷರಲ್ಲಿ ಒಬ್ಬರು. ಭ್ರಷ್ಟಾಚಾರ ವಿರೋಧಿ ಹೋರಾಟಗಾರರಾಗಿ ಮತ್ತು ವ್ಯವಸ್ಥೆಯ ಬದಲಾವಣೆಯ ಪ್ರತಿಪಾದಕರಾಗಿ ಅವರು ಗುರುತಿಸಿಕೊಂಡಿದ್ದಾರೆ. ಅವರ ಆ ಒಂದು ಹೇಳಿಕೆ ಅವರು ಪ್ರತಿಪಾದಿಸುವ ಮೌಲ್ಯಗಳು ಮತ್ತು ಆಡಳಿತ ವೈಖರಿಗೆ ಕನ್ನಡಿಯಾಗಿದೆ. ಅಷ್ಟಕ್ಕೂ ಬಸಿರು ಡಿಯೋಮಯೆ ಫಾಯೆ ಹೇಳಿದ್ದಾದರೂ ಏನು?

'ನಾನು ಸರಕಾರಿ ಕಚೇರಿಗಳಲ್ಲಿ ಅಥವಾ ನಿಮ್ಮ ಕಚೇರಿಗಳಲ್ಲಿ ನನ್ನ ಫೋಟೋವನ್ನು ನೋಡಲು ಬಯಸುವುದಿಲ್ಲ. ಏಕೆಂದರೆ ನಾನು ದೇವರೂ ಅಲ್ಲ ಅಥವಾ ಐಕಾನ್ ಅಲ್ಲ. ನಾನು ಈ ದೇಶದ ಸೇವಕ. ಬದಲಾಗಿ, ಕಚೇರಿಯಲ್ಲಿ ನಿಮ್ಮ ಮಕ್ಕಳ ಫೋಟೋಗಳನ್ನು ಹಾಕಿ. ಆಫೀಸುಗಳಲ್ಲಿ ನಿರ್ಧಾರ ತೆಗೆದುಕೊಳ್ಳಬೇಕಾದಾಗಲೆಲ್ಲ ಆ ಫೋಟೋವನ್ನು ನೋಡಿ ಮತ್ತು ಯಾವುದೇ ರೀತಿಯಲ್ಲಿ ಕದಿಯುವ, ಭ್ರಷ್ಟಾಚಾರದ ಪ್ರಲೋಭನೆ ಉದ್ಭವಿಸಿದರೆ, ನಿಮ್ಮ ಕುಟುಂಬದ ಆ ಫೋಟೋವನ್ನು ಮತ್ತೊಮ್ಮೆ ಆಳವಾಗಿ ನೋಡಿ. ನಿಮ್ಮ ಕುಟುಂಬವು ಈ ದೇಶವನ್ನು ವಂಚಿಸಿದ ಕಳ್ಳನ ಕುಟುಂಬ ಎಂದು ಕರೆಸಿಕೊಳ್ಳಲು ಬಯಸುತ್ತದೆಯೇ ಎಂದು ನಿಮ್ಮನ್ನು ಕೇಳಿಕೊಳ್ಳಿ' ಎಂದು ಅವರು ಹೇಳಿದ್ದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿದೆ.

ಸಾಮಾನ್ಯವಾಗಿ ನಾಯಕರು ತಮ್ಮ ಪ್ರತಿಮೆಗಳನ್ನು ಅಥವಾ ಫೋಟೋಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸಲು ಬಯಸುತ್ತಾರೆ. ಇದು ಅಧಿಕಾರ ಮತ್ತು ವೈಭವದ ಸಂಕೇತ. ಆದರೆ ಫಾಯೆ ಅವರು ಇದನ್ನು ನಿರಾಕರಿಸುವ ಮೂಲಕ ತಮ್ಮ ವಿನಮ್ರತೆಯನ್ನು ಪ್ರದರ್ಶಿಸಿದ್ದಾರೆ. ಅವರು ತಮ್ಮನ್ನು ಜನರಿಂದ ಪ್ರತ್ಯೇಕಿಸದೇ, ಅವರಲ್ಲಿ ಒಬ್ಬರಾಗಿ, ಅವರ ಸೇವಕನಾಗಿ ಗುರುತಿಸಿಕೊಳ್ಳಲು ಬಯಸಿರುವುದು ವಿಶೇಷ.

ಅನೇಕ ದೇಶಗಳಲ್ಲಿ, ವಿಶೇಷವಾಗಿ ಆಫ್ರಿಕಾದಲ್ಲಿ, ನಾಯಕರು 'ಮಹಾಪುರುಷ' ಅಥವಾ 'ರಾಷ್ಟ್ರದ ಪಿತಾಮಹ' ಎಂಬ ರೀತಿಯಲ್ಲಿ ಬಿಂಬಿಸಿಕೊಳ್ಳುವುದನ್ನು ಇಷ್ಟಪಡುತ್ತಾರೆ. ಇದು ವ್ಯಕ್ತಿ ಆರಾಧನೆಗೆ ದಾರಿ ಮಾಡಿಕೊಡುತ್ತದೆ. ಫಾಯೆ ಅವರು ಇದನ್ನು ಸ್ಪಷ್ಟವಾಗಿ ನಿರಾಕರಿಸಿದ್ದಾರೆ, ಇದರಿಂದಾಗಿ ಅಧಿಕಾರ ದುರ್ಬಳಕೆಗೆ ಅವಕಾಶವಿರಬಾರದು ಎಂದು ಸೂಚಿಸಿದ್ದಾರೆ.

ಪ್ರಜಾಪ್ರಭುತ್ವದಲ್ಲಿ ನಾಯಕರು ಜನರ ಪ್ರತಿನಿಧಿಗಳು, ಅಧಿಪತಿಗಳಲ್ಲ. ಫಾಯೆ ಅವರ ಹೇಳಿಕೆ ಪ್ರಜಾಪ್ರಭುತ್ವದ ಈ ಮೂಲಭೂತ ತತ್ವವನ್ನು ಎತ್ತಿಹಿಡಿಯುತ್ತದೆ. ಅವರು 'ಸೇವಕ' ಎಂದು ತಮ್ಮನ್ನು ಕರೆದುಕೊಂಡಿರುವುದು, ಅಧಿಕಾರವು ಜನರ ಒಳಿತಿಗಾಗಿ ಇರುವ ಒಂದು ಸಾಧನ ಎಂಬುದನ್ನು ಒತ್ತಿ ಹೇಳುತ್ತದೆ. ತಮ್ಮ ಚಿತ್ರದ ಬದಲು ಸರಕಾರಿ ನೌಕರರ ಮಕ್ಕಳ ಚಿತ್ರವನ್ನು ಕಚೇರಿಯಲ್ಲಿ ಇಡಲು ಹೇಳುವ ಮೂಲಕ, ಫಾಯೆ ಅವರು ಪ್ರತಿಯೊಬ್ಬ ಸಾರ್ವಜನಿಕ ಸೇವಕರೂ ತಮ್ಮ ವೈಯಕ್ತಿಕ ಮತ್ತು ಕೌಟುಂಬಿಕ ಜವಾಬ್ದಾರಿಗಳ ಮೂಲಕ ದೇಶದ ಬಗ್ಗೆ ಚಿಂತಿಸುವಂತೆ ಪ್ರೇರೇಪಿಸಿದ್ದಾರೆ. ತಾವು ತೆಗೆದುಕೊಳ್ಳುವ ಪ್ರತಿಯೊಂದು ನಿರ್ಧಾರವೂ ತಮ್ಮ ಮಕ್ಕಳ ಭವಿಷ್ಯದ ಮೇಲೆ ಪರಿಣಾಮ ಬೀರುತ್ತದೆ ಎಂಬುದನ್ನು ನೆನಪಿಸಲು ಇದು ಒಂದು ಮಾರ್ಗ. 'ಕದಿಯುವ ಪ್ರಲೋಭನೆ ಉದ್ಭವಿಸಿದರೆ, ನಿಮ್ಮ ಕುಟುಂಬದ ಆ ಫೋಟೋವನ್ನು ಆಳವಾಗಿ ನೋಡಿ...' ಎಂಬ ಮಾತು ಪ್ರಬಲವಾದ ನೈತಿಕ ಕರೆ. ಒಬ್ಬ ಅಧಿಕಾರಿ ಲಂಚ ತೆಗೆದುಕೊಳ್ಳಲು ಅಥವಾ ಸಾರ್ವಜನಿಕ ಸಂಪತ್ತನ್ನು ದುರುಪಯೋಗಪಡಿಸಿಕೊಳ್ಳಲು ಯೋಚಿಸಿದಾಗ, ಅವರ ಕಣ್ಣೆದುರು ತಮ್ಮ ಮಕ್ಕಳ ನಗುತ್ತಿರುವ ಫೋಟೋ ಬರಬೇಕು. ಆ ಫೋಟೋವನ್ನು ನೋಡಿದಾಗ, 'ನಾನು ಭ್ರಷ್ಟನಾಗಿ ಗುರುತಿಸಿಕೊಂಡರೆ ನನ್ನ ಮಕ್ಕಳ ಭವಿಷ್ಯ ಏನಾಗುತ್ತದೆ? ಅವರ ಹೆಸರಿಗೆ ಕಳಂಕ ತರುತ್ತೇನೆಯೇ?' ಎಂದು ಪ್ರಶ್ನಿಸಿಕೊಳ್ಳಲು ಇದು ಪ್ರೇರೇಪಿಸುತ್ತದೆ.

ಇದೊಂದು ಸಾಮಾನ್ಯ ಹೇಳಿಕೆಯಲ್ಲ. ಒಬ್ಬ ವ್ಯಕ್ತಿಯು ತನ್ನ ಕಾರ್ಯಗಳ ಮೂಲಕ ತನ್ನ ಕುಟುಂಬದ ಗೌರವವನ್ನು ಎತ್ತಿಹಿಡಿಯಬೇಕೇ ಅಥವಾ ಕಳಂಕ ತರಬೇಕೇ ಎಂಬುದನ್ನು ನಿರ್ಧರಿಸುವಂತೆ ಇದು ಉತ್ತೇಜಿಸುತ್ತದೆ. ಭ್ರಷ್ಟಾಚಾರವು ಕೇವಲ ವ್ಯಕ್ತಿಗೆ ಸೀಮಿತವಾಗಿರದೇ, ಆತನ ಕುಟುಂಬದ ಮೇಲೂ ದುಷ್ಪರಿಣಾಮ ಬೀರುತ್ತದೆ ಎಂಬ ಅರಿವನ್ನು ಮೂಡಿಸುತ್ತದೆ. ಇದು ಸಾರ್ವಜನಿಕ ಸೇವಕರು ತಮ್ಮ ವೃತ್ತಿಜೀವನದಲ್ಲಿ ಪ್ರಾಮಾಣಿಕವಾಗಿರಲು ಒಂದು ಬಲವಾದ ಕಾರಣವನ್ನು ನೀಡುತ್ತದೆ. ಒಟ್ಟಾರೆ, ಈ ಹೇಳಿಕೆ ಪಾರದರ್ಶಕ, ಪ್ರಾಮಾಣಿಕ ಮತ್ತು ನೈತಿಕ ಆಡಳಿತದ ಕಡೆಗಿನ ಫಾಯೆ ಅವರ ಬದ್ಧತೆಯನ್ನು ತೋರಿಸುತ್ತದೆ. ಸಾರ್ವಜನಿಕ ಸೇವೆಯಲ್ಲಿರುವವರು ಕೇವಲ ನಿಯಮಗಳನ್ನು ಪಾಲಿಸುವುದಷ್ಟೇ ಅಲ್ಲದೆ, ವೈಯಕ್ತಿಕ ನೈತಿಕ ಮೌಲ್ಯಗಳನ್ನು ಎತ್ತಿಹಿಡಿಯಬೇಕು. ಸೆನೆಗಲ್‌ನ ಅಧ್ಯಕ್ಷರ ಈ ಹೇಳಿಕೆಯು ಕೇವಲ ಒಂದು ದೇಶಕ್ಕೆ ಸೀಮಿತವಾಗದೆ, ಜಗತ್ತಿನಾದ್ಯಂತದ ನಾಯಕರು ಮತ್ತು ಸಾರ್ವಜನಿಕ ಸೇವಕರಿಗೆ ಒಂದು ಆದರ್ಶಪ್ರಾಯ ಸಂದೇಶವಾಗಿದೆ. ಇದು ಅಧಿಕಾರದ ವೈಭವಕ್ಕಿಂತ ಜನಸೇವೆಗೆ ಹೆಚ್ಚು ಒತ್ತು ನೀಡುವ ಅಗತ್ಯವನ್ನು ಸಾರುತ್ತದೆ.

ಅದು ನರಮಂಡಲವಿದ್ದಂತೆ!

ಕೆಲ ದಿನಗಳ ಹಿಂದೆ ನನಗೆ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಪರಿಚಿತ ಪೈಲಟ್ ಒಬ್ಬರ ಜತೆ ಪ್ರಯಾಣ ಮಾಡುವ ಅವಕಾಶ ಸಿಕ್ಕಿತ್ತು. ಅಂದು ಅವರು ಡ್ಯೂಟಿಯಲ್ಲಿ ಇರಲಿಲ್ಲ. ಪತ್ನಿಯೊಂದಿಗೆ ಪ್ರವಾಸ ಹೊರಟಿದ್ದರು. ಒಂದೇ ವಿಮಾನದಲ್ಲಿ ಸಿಂಗಾಪುರಕ್ಕೆ ಪ್ರಯಾಣಿಸುತ್ತಿದ್ದೆವು. ಸಹಜವಾಗಿ ನಮ್ಮ ಮಾತುಕತೆ ಎರಡು ದಿನಗಳ ಹಿಂದೆಯಷ್ಟೇ ಸಂಭವಿಸಿದ ಏರ್ ಇಂಡಿಯಾ ಅಹಮದಾಬಾದ್ ದುರಂತದ ಬಗ್ಗೆ ಹರಿಯಿತು. ಅವರು ದುರಂತಕ್ಕೆ ತಮ್ಮದೇ ಕಾರಣಗಳನ್ನು ನೀಡಿದರು. ನಂತರ ನಮ್ಮ ಮಾತುಕತೆ ವಿಮಾನದಲ್ಲಿರುವ ತಂತಿಗಳ (Wires) ಕಡೆ ಹೋಯಿತು. ಅವರು ನೀಡಿದ ವಿವರಗಳು ನನ್ನಲ್ಲಿ ಬೆರಗು ಹುಟ್ಟಿಸಿದವು. ಅವರು ಹೇಳಿದ ಸಂಗತಿಗಳನ್ನು ನಾನು ಅರ್ಥ ಮಾಡಿಕೊಂಡಂತೆ ಹೇಳುತ್ತೇನೆ.

ವಿಮಾನದ ವೈರ್‌ಗಳು ಸಹಜವಾಗಿ ವಿದ್ಯುತ್ ವ್ಯವಸ್ಥೆಯ ಜೀವನಾಡಿಗಳು. ಇವು ವಿಮಾನದ ಪ್ರತಿಯೊಂದು ಭಾಗಕ್ಕೂ ವಿದ್ಯುತ್ ಶಕ್ತಿಯನ್ನು ಪೂರೈಸಲು, ಮಾಹಿತಿ ವರ್ಗಾಯಿಸಲು ಮತ್ತು ನಿಯಂತ್ರಣ ಸಂಕೇತಗಳನ್ನು ಕಳುಹಿಸಲು ಅತ್ಯಗತ್ಯ. ವಿಮಾನದ ಸುರಕ್ಷಿತ ಕಾರ್ಯಾಚರಣೆಗೆ ಈ ವೈರಿಂಗ್ ವ್ಯವಸ್ಥೆ ಅತ್ಯಂತ ನಿರ್ಣಾಯಕ. ವಿಮಾನದಲ್ಲಿ ಬಳಸುವ ತಂತಿಗಳು ಸಾಮಾನ್ಯ ವಿದ್ಯುತ್ ತಂತಿಗಳಿಗಿಂತ ಹೆಚ್ಚು ವಿಶೇಷವಾಗಿರುತ್ತವೆ. ಇವುಗಳನ್ನು ಅತ್ಯಂತ ಕಠಿಣ ಪರಿಸ್ಥಿತಿಗಳನ್ನು ತಡೆದುಕೊಳ್ಳಲು ವಿನ್ಯಾಸಗೊಳಿಸಲಾಗುತ್ತದೆ. ಏಕೆಂದರೆ ವಿಮಾನವು ಎತ್ತರದಲ್ಲಿ ಹಾರುವಾಗ, ತಾಪಮಾನದ ವ್ಯತ್ಯಾಸ, ಕಂಪನಗಳು ಮತ್ತು ತೇವಾಂಶದಂಥ ವಿಪರೀತ ವಾತಾವರಣಗಳಿಗೆ ಒಳಪಡುತ್ತದೆ. ವಿಮಾನದ ಪ್ರತಿಯೊಂದು ಸಣ್ಣ ಭಾಗದಿಂದ ಹಿಡಿದು ದೊಡ್ಡ ಎಂಜಿನ್‌ಗಳವರೆಗೆ ಎಲ್ಲವೂ ಈ ತಂತಿಗಳ ಮೂಲಕ ಸಂಪರ್ಕ ಹೊಂದಿರುತ್ತವೆ.



ವಿಮಾನದಲ್ಲಿ ಹಗುರ ಮತ್ತು ಬಲಶಾಲಿ ತಂತಿಗಳನ್ನು ಬಳಸಲಾಗುತ್ತದೆ. ವಿಮಾನದ ತೂಕ ಕಡಿಮೆ ಮಾಡುವುದು ಬಹಳ ಮುಖ್ಯ. ಹೀಗಾಗಿ ತಂತಿಗಳನ್ನು ಹಗುರವಾದ ವಸ್ತುಗಳಿಂದ ತಯಾರಿಸಲಾಗುತ್ತದೆ, ಆದರೆ ಅವು ಸಾಕಷ್ಟು ಬಲಶಾಲಿಯಾಗಿಯೂ ಇರಬೇಕು. ವಿಮಾನವು ವಿವಿಧ ಎತ್ತರಗಳಲ್ಲಿ ಮತ್ತು ತಾಪಮಾನಗಳಲ್ಲಿ ಹಾರುತ್ತದೆ. ಆದ್ದರಿಂದ, ತಂತಿಗಳು ಅತಿ ಹೆಚ್ಚು ಮತ್ತು ಅತಿ ಕಡಿಮೆ ತಾಪಮಾನಗಳನ್ನು ತಡೆದುಕೊಳ್ಳುವ ಸಾಮರ್ಥ್ಯ ಹೊಂದಿರಬೇಕು. ತಂತಿಗಳನ್ನು ಉತ್ತಮ ಗುಣಮಟ್ಟದ ವಿದ್ಯುತ್ ನಿರೋಧಕ ವಸ್ತುಗಳಿಂದ ಸುತ್ತಲಾಗುತ್ತದೆ. ಇದು ಶಾರ್ಟ್ ಸರ್ಕ್ಯೂಟ್‌ಗಳನ್ನು ತಡೆಗಟ್ಟಲು ಮತ್ತು ಬೆಂಕಿಯ ಅಪಾಯವನ್ನು ಕಡಿಮೆ ಮಾಡಲು ಸಹಾಯಕ. ವಿಮಾನದ ಎಂಜಿನ್‌ಗಳು ನಿರಂತರವಾಗಿ ಕಂಪಿಸುತ್ತಿರುತ್ತವೆ. ಇದರಿಂದ ತಂತಿಗಳು ಸವೆದುಹೋಗುವುದನ್ನು ತಡೆಯಲು ಅವುಗಳನ್ನು ವಿಶಿಷ್ಟ ವಸ್ತುಗಳಿಂದ ಮತ್ತು ವಿನ್ಯಾಸದಿಂದ ತಯಾರಿಸಲಾಗುತ್ತದೆ. ಹಾಗೆ ಕಂಪನದಿಂದ ಸಂಪರ್ಕ ಕಡಿದು ಹೋಗಬಾರದು.

ತಂತಿಗಳನ್ನು ವಿಮಾನದ ಸಂಕೀರ್ಣ ಭಾಗಗಳಲ್ಲಿ ಸುಲಭವಾಗಿ ಅಳವಡಿಸಲು ಅವುಗಳು ಹೆಚ್ಚು ಮೃದುವಾಗಿರಬೇಕು. ವಿಮಾನದಲ್ಲಿ ವಿವಿಧ ಉದ್ದೇಶಗಳಿಗಾಗಿ ವಿವಿಧ ರೀತಿಯ ತಂತಿಗಳನ್ನು ಬಳಸಲಾಗುತ್ತದೆ. ಉದಾಹರಣೆಗೆ, ವಿದ್ಯುತ್ ಸರಬರಾಜು ತಂತಿಗಳು (Power Distribution Wires). ಇವು ವಿಮಾನದ ವಿವಿಧ ಸಿಸ್ಟಮ್‌ಗಳಿಗೆ ವಿದ್ಯುತ್ ಶಕ್ತಿಯನ್ನು ಪೂರೈಸುತ್ತವೆ. ಇವು ಹೆಚ್ಚಿನ ವೋಲ್ಟೇಜ್ ಮತ್ತು ಕರೆಂಟ್ ಅನ್ನು ನಿಭಾಯಿಸುವ ಸಾಮರ್ಥ್ಯ ಹೊಂದಿರಬೇಕು. ಇನ್ನೊಂದು, ಡೇಟಾ ಕೇಬಲ್‌ಗಳು. ಇವು ವಿಮಾನದ ಸೆನ್ಸರ್‌ಗಳು, ಕಂಪ್ಯೂಟರ್‌ಗಳು ಮತ್ತು ಇತರ ಇಲೆಕ್ಟ್ರಾನಿಕ್ ಉಪಕರಣಗಳ ನಡುವೆ ಡಾಟಾವನ್ನು ವರ್ಗಾಯಿಸುತ್ತವೆ. ಮತ್ತೊಂದು, ನಿಯಂತ್ರಣ ತಂತಿಗಳು. ಇವು ವಿಮಾನದ ಪೈಲಟ್‌ನ ನಿಯಂತ್ರಣ ಸಂಕೇತಗಳನ್ನು ರೆಕ್ಕೆಗಳು, ರಡಾರ್ ಮತ್ತು ಇತರ ನಿಯಂತ್ರಣ ಮೇಲ್ಮೈಗಳಿಗೆ ರವಾನಿಸುತ್ತವೆ. ಇವುಗಳ ವಿಶ್ವಾಸಾರ್ಹತೆ ಅತ್ಯಂತ ಮುಖ್ಯ. ಜತೆಗೆ, ಸಂವೇದಕ ತಂತಿಗಳು (Sensor Wires). ವಿಮಾನದೊಳಗಿನ ಮತ್ತು ಹೊರಗಿನ ಪರಿಸ್ಥಿತಿಗಳನ್ನು ಅಳೆಯುವ ಸಂವೇದಕಗಳಿಂದ (ತಾಪಮಾನ, ಒತ್ತಡ, ವೇಗ ಇತ್ಯಾದಿ) ಮಾಹಿತಿಯನ್ನು ಕೇಂದ್ರ ವ್ಯವಸ್ಥೆಗೆ ಕಳುಹಿಸಲು ಇವುಗಳನ್ನು ಬಳಸಲಾಗುತ್ತದೆ. ವಿಮಾನದಲ್ಲಿ ಆಪ್ಟಿಕ್ ಫೈಬರ್ ಕೇಬಲ್‌ಗಳ (Optic Fiber Cables)ನ್ನು ಸಹ ಬಳಸಲಾಗುತ್ತದೆ. ಇತ್ತೀಚಿನ ವಿಮಾನಗಳಲ್ಲಿ, ವೇಗದ ಡಾಟಾ ವರ್ಗಾವಣೆ ಮತ್ತು ವಿದ್ಯುತ್ ಹಸ್ತಕ್ಷೇಪವನ್ನು (electrical interference) ಕಡಿಮೆ ಮಾಡಲು ಆಪ್ಟಿಕ್ ಫೈಬರ್ ಕೇಬಲ್‌ಗಳನ್ನು ಹೆಚ್ಚಾಗಿ ಬಳಸಲಾಗುತ್ತದೆ.

ವಿಮಾನದ ತಂತಿ ವ್ಯವಸ್ಥೆಯು ಅತ್ಯಂತ ಸಂಕೀರ್ಣವಾಗಿರುತ್ತದೆ ಮತ್ತು ಅದರ ನಿರ್ವಹಣೆ ಬಹಳ ಮುಖ್ಯ. ಯಾವುದೇ ಸಣ್ಣ ಹಾನಿ ಅಥವಾ ದೋಷವು ಗಂಭೀರ ಪರಿಣಾಮಗಳನ್ನು ಉಂಟುಮಾಡಬಹುದು. ಆದ್ದರಿಂದ, ವಿಮಾನದ ತಂತಿಗಳನ್ನು ನಿಯತವಾಗಿ ಪರಿಶೀಲಿಸಲಾಗುತ್ತದೆ, ದುರಸ್ತಿ ಮಾಡಲಾಗುತ್ತದೆ ಮತ್ತು ಅಗತ್ಯವಿದ್ದಲ್ಲಿ ಬದಲಾಯಿಸಲಾಗುತ್ತದೆ. ಇತ್ತೀಚೆಗೆ ನಡೆದ ಕೆಲವು ವಿಮಾನ ಅಪಘಾತಗಳಲ್ಲಿ ತಂತಿ ವ್ಯವಸ್ಥೆಯಲ್ಲಿನ ದೋಷಗಳು ಒಂದು ಕಾರಣವಾಗಿವೆ ಎಂಬುದನ್ನು ಗಮನದಲ್ಲಿಟ್ಟುಕೊಂಡು, ಅವುಗಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಒಂದು ವಿಮಾನದಲ್ಲಿ ಇರುವ ತಂತಿಯ ಉದ್ದವಾದರೂ ಎಷ್ಟು? ಒಂದು ವಿಮಾನದಲ್ಲಿ ಬಳಸುವ ತಂತಿಗಳ ಒಟ್ಟು ಉದ್ದವು ಆ ವಿಮಾನದ ಗಾತ್ರ, ಮಾದರಿ ಮತ್ತು ಅದರ ತಾಂತ್ರಿಕ ಸಂಕೀರ್ಣತೆಯನ್ನು ಅವಲಂಬಿಸಿರುತ್ತದೆ. ಆಧುನಿಕ ದೊಡ್ಡ ಪ್ರಯಾಣಿಕ ವಿಮಾನಗಳಲ್ಲಿ ಇದು ನೂರಾರು ಕಿಲೋಮೀಟರ್‌ಗಳಷ್ಟು ಇರುತ್ತದೆ. ಸೋಜಿಗವೆಂದರೆ, ಬೋಯಿಂಗ್ 747 ವಿಮಾನದಲ್ಲಿ ಸುಮಾರು 200ರಿಂದ 270 ಕಿ.ಮೀ. ಉದ್ದದ ವಿದ್ಯುತ್ ತಂತಿಗಳು ಇರುತ್ತವೆ. ಏರ್‌ಬಸ್ ಎ-380 ವಿಮಾನ ವಿಶ್ವದ ಅತಿದೊಡ್ಡ ಪ್ರಯಾಣಿಕ ವಿಮಾನಗಳಲ್ಲಿ ಒಂದಾಗಿದ್ದು ಇದರಲ್ಲಿ ಸುಮಾರು 530 ಕಿ.ಮೀ. (330 ಮೈಲಿ) ಗಳಷ್ಟು ಉದ್ದದ ವಿದ್ಯುತ್ ತಂತಿಗಳು ಇರುತ್ತವೆ! ಈ ತಂತಿಗಳ ಸಂಕೀರ್ಣತೆಯಿಂದಾಗಿಯೇ ಎ-380 ವಿಮಾನದ ಉತ್ಪಾದನೆಯಲ್ಲಿ ಆರಂಭದಲ್ಲಿ ವಿಳಂಬವಾಗಿತ್ತು.

ಬೋಯಿಂಗ್ 787 ಡ್ರೀಮ್‌ಲೈನರ್ ಹೆಚ್ಚು ಆಧುನಿಕ ವಿಮಾನವಾಗಿದ್ದರೂ, ಹಿಂದಿನ ಮಾದರಿಗಳಿಗಿಂತ ಕಡಿಮೆ ತಂತಿಗಳನ್ನು ಹೊಂದಿದೆ. ಸುಮಾರು 100 ಕಿ.ಮೀ. ಉದ್ದದ ತಂತಿಗಳಿವೆ. ಏಕೆಂದರೆ ಇದು ಹೆಚ್ಚು ವಿದ್ಯುತ್ ಮತ್ತು ನೆಟ್‌ವರ್ಕ್ ಆಧಾರಿತ ವ್ಯವಸ್ಥೆಗಳನ್ನು ಬಳಸುತ್ತದೆ. ಈ ತಂತಿಗಳು ವಿಮಾನದ ಪ್ರತಿಯೊಂದು ಭಾಗವನ್ನೂ ಸಂಪರ್ಕಿಸುತ್ತವೆ- ಎಂಜಿನ್‌ಗಳು, ಕಾಕ್‌ಪಿಟ್ ನಿಯಂತ್ರಣಗಳು, ಮನರಂಜನಾ ವ್ಯವಸ್ಥೆಗಳು, ಬೆಳಕು, ಸಂವಹನ ವ್ಯವಸ್ಥೆಗಳು ಮತ್ತು ಸಾವಿರಾರು ಸಂವೇದಕಗಳು. ಇವು ವಿಮಾನವು ಸುರಕ್ಷಿತವಾಗಿ ಮತ್ತು ಸಮರ್ಥವಾಗಿ ಕಾರ್ಯನಿರ್ವಹಿಸಲು ಅವಶ್ಯಕವಾಗಿವೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ವಿಮಾನದ ತಂತಿಗಳು ಅದರ ಮಿದುಳು ಮತ್ತು ನರಮಂಡಲವಿದ್ದಂತೆ, ಅದು ವಿಮಾನದ ಪ್ರತಿಯೊಂದು ಕ್ರಿಯೆಯನ್ನು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುತ್ತದೆ.

ಹೀಗೊಂದು ಜಾಹೀರಾತು

ಇತ್ತೀಚೆಗೆ ಸ್ನೇಹಿತರೊಬ್ಬರು ವಾಟ್ಸಾಪ್‌ನಲ್ಲಿ ಕಳಿಸಿದ ಪ್ರಸಂಗವಿದು: ವಿದೇಶಿ ಪತ್ರಿಕೆಯೊಂದರಲ್ಲಿ ಒಂದು ವಿಶಿಷ್ಟ ಜಾಹೀರಾತು ಪ್ರಕಟಗೊಂಡಿತ್ತು. ಅದರ ಶೀರ್ಷಿಕೆ ಹೀಗಿತ್ತು- ವೃದ್ಧ ದಂಪತಿ ಬೇಕಾಗಿದ್ದಾರೆ. ಅವರು ನಮ್ಮ ಜತೆಯಲ್ಲಿ ಇರಬೇಕು.

ಆ ಜಾಹೀರಾತಿಗೆ ಪ್ರತಿಕ್ರಿಯೆ ಬಂತು. ವೃದ್ಧೆಯೊಬ್ಬರು ಕರೆ ಮಾಡಿ ಕೇಳಿದರು- 'ನಿಮ್ಮ ಜಾಹೀರಾತನ್ನು ಓದಿದೆವು. ನಿಮ್ಮ ಜತೆಯಲ್ಲಿ ನಾವು ಇರಲು ಸಿದ್ಧ. ಆದರೆ ನಾವು ಯಾವ ಯಾವ ಕೆಲಸ ಮಾಡಬೇಕು'.

ಜಾಹೀರಾತು ನೀಡಿದವರು ಹೇಳಿದರು- 'ನೀವು ಏನೂ ಕೆಲಸ ಮಾಡಬೇಕಿಲ್ಲ, ನಾನು ಮತ್ತು ನನ್ನ ಪತ್ನಿ ಇಬ್ಬರೂ ವೈದ್ಯರಾಗಿದ್ದೇವೆ. ನಾವು ದಿನ ಬೆಳಗ್ಗೆ ಕೆಲಸಕ್ಕೆ ಹೋಗುತ್ತೇವೆ, ರಾತ್ರಿ ಬರುತ್ತೇವೆ. ನಮ್ಮ ತಾಯಿ ಇತ್ತೀಚೆಗೆ ನಿಧನರಾದರು. ನಮಗೆ ತಂದೆ-ತಾಯಿ ಆಗಿ ಇರುವುದೇ ನಿಮ್ಮ ಕೆಲಸ. ಮನೆಯಲ್ಲಿ ಎಲ್ಲ ಕೆಲಸಕ್ಕೂ ಸೇವಕರಿದ್ದಾರೆ. ಆದರೆ ನಮ್ಮನ್ನು ಕೇಳುವವರು ಯಾರೂ ಇಲ್ಲ. ಮಕ್ಕಳೇ ಇಂದು ತಡವಾಗಿ ಏಕೆ ಬಂದಿರಿ? ಊಟ ಮಾಡಿದಿರೋ ಇಲ್ಲವೋ ಎಂದೆಲ್ಲ ನಮ್ಮನ್ನು ಕೇಳುವವರೇ ಇಲ್ಲ. ಕೆಲಸ ಮುಗಿಸಿ ಮನೆಗೆ ಬಂದಾಗ ನಮ್ಮನ್ನು ಪ್ರೀತಿ-ವಾತ್ಸಲ್ಯಗಳಿಂದ ಮಾತನಾಡಿಸುವವರು ನಮಗೆ ಬೇಕು. ಈ ಕೆಲಸ ಮಾಡಲು ಸಾಧ್ಯವಾ?'

ಈ ಮಾತುಗಳನ್ನು ಕೇಳುತ್ತಿದ್ದಂತೆ ವೃದ್ಧ ದಂಪತಿಗಳ ಕಣ್ಣುಗಳು ತೇವಗೊಂಡವು. ಅವರು ಆ ಕೆಲಸಕ್ಕೆ ಹೋದರೋ ಇಲ್ಲವೋ ಎಂಬುದು ಮುಖ್ಯವಲ್ಲ. ಜಗತ್ತಿನ ವಿಚಿತ್ರ ಹೇಗಿದೆ ಎಂದರೆ, ಯಾರ ಮನೆಯಲ್ಲಿ ವೃದ್ಧ ತಂದೆ-ತಾಯಿಯರು ಇರುವರೋ ಅವರ ಬಗ್ಗೆ ಮಕ್ಕಳಿಗೆ ಕಾಳಜಿಯೇ ಇಲ್ಲ. ಯಾರ ಮನೆಯಲ್ಲಿ ತಂದೆ-ತಾಯಿ ಇಲ್ಲವೋ ಅವರು, 'ಅಯ್ಯೋ ಅಪ್ಪ ಇರಬೇಕಿತ್ತು, ಅಯ್ಯೋ ಅಮ್ಮ ಇರಬೇಕಿತ್ತು' ಅಂತಾರೆ.

ತಂದೆ-ತಾಯಿಯರ ಪ್ರೀತಿ ಮಾತ್ರ, ಯಾವಾಗಲೂ ಉಚಿತ ಮತ್ತು ಧಾರಾಳ. ಸೃಷ್ಟಿಯಲ್ಲಿ ತಂದೆ-ತಾಯಿಗೆ ಮಿಗಿಲಾದುದು ಬೇರೇನೂ ಇಲ್ಲ.

ಅತಿ ಕಡಿಮೆ ಅವಧಿ ವಿಮಾನಯಾನ

ಕೆಲ ವರ್ಷಗಳ ಹಿಂದೆ ನಾನು ಕತಾರ್ ರಾಜಧಾನಿ ದೋಹಾದಿಂದ ಬಹ್ರೈನ್ ರಾಜಧಾನಿ ಮಾನಾಮಕ್ಕೆ ವಿಮಾನದಲ್ಲಿ ಇಪ್ಪತ್ತು ನಿಮಿಷಗಳಲ್ಲಿ ಹೋಗಿದ್ದೆ. ಎರಡು ದೇಶಗಳ ನಡುವೆ ಅತಿ ಕಡಿಮೆ ಅವಧಿಯಲ್ಲಿ ಪ್ರಯಾಣಿಸಿದ ವಿಮಾನಯಾನವದು.

ಜಗತ್ತಿನ ಅತಿ ಕಡಿಮೆ ಅವಧಿಯ ವಾಣಿಜ್ಯ ವಿಮಾನಯಾನ ಸ್ಕಾಟ್ಲೆಂಡ್‌ನ ಓರ್ಕ್ನಿ ದ್ವೀಪಗಳ ನಡುವೆ ನಡೆಯುತ್ತದೆ. ಸೋಜಿಗವೆಂದರೆ, ಇದು ಕೇವಲ 1.5 ನಿಮಿಷಗಳಲ್ಲಿ ಒಂದು ದ್ವೀಪದಿಂದ ಇನ್ನೊಂದು ದ್ವೀಪಕ್ಕೆ ತಲುಪುತ್ತದೆ! ಕೆಲವೊಮ್ಮೆ ಹಾರಾಟದ ಸಮಯ ಒಂದು ನಿಮಿಷಕ್ಕಿಂತಲೂ ಕಡಿಮೆ, ಅಂದರೆ 53 ಸೆಕೆಂಡುಗಳಲ್ಲಿ ದಾಖಲಾದ ಉದಾಹರಣೆಗಳೂ ಇವೆ!

ಈ ವಿಶಿಷ್ಟ ವಿಮಾನಯಾನವು ಸ್ಕಾಟ್ಲೆಂಡ್‌ನ ಓರ್ಕ್ನಿ ದ್ವೀಪ ಸಮೂಹದಲ್ಲಿರುವ ವೆಸ್ಟ್ರೇ ಮತ್ತು ಪಾಪಾ ವೆಸ್ಟ್ರೇ ಎಂಬ ಎರಡು ಪುಟ್ಟ ದ್ವೀಪಗಳ ನಡುವೆ ನಡೆಯುತ್ತದೆ. ಈ ಹಾರಾಟವು ಕೇವಲ 2.7 ಕಿಮೀ (1.7 ಮೈಲಿ) ದೂರವನ್ನು ಕ್ರಮಿಸುತ್ತದೆ. ವಿಚಿತ್ರ ಅಂದ್ರೆ ಇದು ಎಡಿನ್‌ಬರ್ಗ್ ವಿಮಾನ ನಿಲ್ದಾಣದ ರನ್‌ವೇಯಷ್ಟೇ ಉದ್ದವಾಗಿದೆ.

ಯಾಕೆ ಇಷ್ಟು ಚಿಕ್ಕ ಹಾರಾಟ?

ಇದು ಕೇವಲ ಪ್ರಚಾರಕ್ಕಾಗಿ ಇರುವ ವಿಮಾನಯಾನವಲ್ಲ. ಬದಲಿಗೆ ಸ್ಥಳೀಯ ಸಮುದಾಯಕ್ಕೆ ಅತ್ಯಗತ್ಯವಾದ ಒಂದು ಸಾರ್ವಜನಿಕ ಸೇವೆಯಾಗಿದೆ. ಇದಕ್ಕೆ ಕೆಲವು ಕಾರಣಗಳೂ ಇವೆ. ಪಾಪಾ ವೆಸ್ಟ್ರೇ ಒಂದು ಪುಟ್ಟ ದ್ವೀಪವಾಗಿದ್ದು, ಅಲ್ಲಿ ಕೇವಲ 70-80 ನಿವಾಸಿಗಳು ವಾಸಿಸುತ್ತಿದ್ದಾರೆ. ವೈದ್ಯಕೀಯ ಸೇವೆಗಳು, ಶಿಕ್ಷಣಕ್ಕಾಗಿ ಬಂದಿರುವ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಇತರ ಅಗತ್ಯ ಸಂಪರ್ಕಗಳಿಗಾಗಿ ಈ ವಿಮಾನಯಾನ ನಿರ್ಣಾಯಕವಾಗಿದೆ. ದ್ವೀಪವಾಸಿಗಳಿಗೆ ಮುಖ್ಯ ಭೂಭಾಗಕ್ಕೆ ಮತ್ತು ಇತರ ದ್ವೀಪಗಳಿಗೆ ತಲುಪಲು ಇದು ಸುಲಭ ಮತ್ತು ವೇಗದ ಮಾರ್ಗವಾಗಿದೆ.

ಈ ಎರಡು ದ್ವೀಪಗಳ ನಡುವೆ ರಸ್ತೆಯ ಸಂಪರ್ಕವಿಲ್ಲ, ಮೋಟಾರ್ ಬೋಟ್ ಮೂಲಕ ಪ್ರಯಾಣಿಸಿದರೆ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ, ಅದರಲ್ಲೂ ಪ್ರತಿಕೂಲ ಹವಾಮಾನವಿದ್ದಾಗ ಪ್ರಯಾಣ ಕಷ್ಟ. ಹೀಗಾಗಿ ವಿಮಾನಯಾನ ಅತ್ಯಂತ ವೇಗದ ಮತ್ತು ವಿಶ್ವಾಸಾರ್ಹ ಸಾರಿಗೆ ವಿಧಾನವಾಗಿದೆ.

ಈ ಹಾರಾಟವು ಸಾಮಾನ್ಯವಾಗಿ ಕಿರ್ಕ್ವಾಲ್ ವಿಮಾನ ನಿಲ್ದಾಣಕ್ಕೆ (ಓರ್ಕ್ನಿ ದ್ವೀಪಗಳ ಮುಖ್ಯ ಕೇಂದ್ರ) ಹೋಗುವ ಅಥವಾ ಅಲ್ಲಿಂದ ಬರುವ ಪ್ರಯಾಣದ ಭಾಗವಾಗಿರುತ್ತದೆ. ಇದು ಒಂದು ಸಣ್ಣ ತ್ರಿಕೋನ ಮಾರ್ಗದಂತೆ ಕಾರ್ಯನಿರ್ವಹಿಸುತ್ತದೆ. ಕಿರ್ಕ್ವಾಲ್‌ನಿಂದ ವೆಸ್ಟ್ರೇಗೆ, ಅಲ್ಲಿಂದ ಪಾಪಾ ವೆಸ್ಟ್ರೇಗೆ ಮತ್ತು ಪುನಃ ಕಿರ್ಕ್ವಾಲ್‌ಗೆ ಮರಳುತ್ತದೆ. ಈ ವಿಮಾನಯಾನವನ್ನು ಲೋಗಾನ್‌ಏರ್ (Loganair) ಎಂಬ ಸ್ಕಾಟಿಷ್ ಪ್ರಾದೇಶಿಕ ವಿಮಾನಯಾನ ಸಂಸ್ಥೆ 1967ರಿಂದ ನಡೆಸುತ್ತಿದೆ. ಇದು ಗಿನ್ನೆಸ್ ವಿಶ್ವ ದಾಖಲೆಯನ್ನು ಸಹ ಪಡೆದುಕೊಂಡಿದೆ.

ಅವರು ಬ್ರಿಟನ್-ನಾರ್ಮನ್ ಬಿಎನ್2ಬಿ-26 ಐಲ್ಯಾಂಡರ್ ಎಂಬ ಸಣ್ಣ ವಿಮಾನವನ್ನು ಬಳಸುತ್ತಾರೆ. ಇದು ಕೇವಲ ಒಬ್ಬ ಪೈಲಟ್ ಮತ್ತು 8-10 ಪ್ರಯಾಣಿಕರಿಗೆ ಆಸನಗಳನ್ನು ಹೊಂದಿದೆ. ವಿಮಾನ ಚಿಕ್ಕದಾಗಿರುವುದರಿಂದ, ಮುಂದೆ ಕುಳಿತುಕೊಳ್ಳುವ ಪ್ರಯಾಣಿಕರು ಪೈಲಟ್ ವಿಮಾನವನ್ನು ಹೇಗೆ ಹಾರಿಸುತ್ತಾರೆ ಎಂಬುದನ್ನು ನೋಡಬಹುದು! ಶನಿವಾರ ಹಾರಾಟ ಇರುವುದಿಲ್ಲ.

ಈ ವಿಶಿಷ್ಟ ಹಾರಾಟವು ಇತ್ತೀಚಿನ ದಿನಗಳಲ್ಲಿ ಪ್ರಪಂಚದಾದ್ಯಂತದ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಅನೇಕ ಜನರು ಈ ಚಿಕ್ಕ ವಿಮಾನಯಾನದ ಅನುಭವ ಪಡೆಯಲು ಓರ್ಕ್ನಿ ದ್ವೀಪಗಳಿಗೆ ಭೇಟಿ ನೀಡುತ್ತಾರೆ. ಇದು ವಿಶಿಷ್ಟವಾದ ಪ್ರಯಾಣದ ಅನುಭವವನ್ನು ನೀಡುತ್ತದೆ.

ಅಳಿಲಿನ ಬಾಲ ಅಳೆದ ಸೂರ್ಯನೂ, ಚಿತ್ರ ಬರೆದ ಪ್ರಣಮ್ಯಳೂ

ತಿಳಿರು ತೋರಣ

ಶ್ರೀವತ್ಸ ಜೋಶಿ
vveditoped@gmail.com
srivathsajoshi@yahoo.com

ಅಳಿಲಿನ ಬಾಲದ ಅಳತೆಗೆ ತಕ್ಕುದಾಗಿ ಹೊಳೆಯುವ ಬೇಗಡೆ ಅಂಟಿಸಿ ತಮಾಷೆ ನೋಡಿದ ಬಾಲಭಾಸ್ಕರ- ಇಂಥದೊಂದು ಕಲ್ಪನೆಯ ಚಿತ್ರಣ ಕೊಡುವ ತುಂಟ ಕವನ, ಮತ್ತು ಅದರ ಕವಯಿತ್ರಿ 'ಸುಪ್ತದೀಪ್ತಿ' (ಜ್ಯೋತಿ ಮಹಾದೇವ್) ಬಗ್ಗೆ ಏಳೆಂಟು ವಾರಗಳ ಹಿಂದಿನ ಅಂಕಣವೊಂದರಲ್ಲಿ ಪ್ರಸ್ತಾವಿಸಿದ್ದೆ. 'ಅಳಿಲಿನ ಬಾಲಕೆ। ಹೊಳೆಯುವ ಬೇಗಡೆ। ಅಳತೆಯಲಂಟಿಸಿ। ಕುಳಿತ ಸುಪ್ರಭಾತ' ಎಂದು ಇತ್ತು ಆ ಕವನ. ತಲಾ ಏಳು ಅಕ್ಷರೋಚ್ಚಾರ(ಸಿಲೆಬಲ್)ಗಳ ನಾಲ್ಕು ಸಾಲುಗಳುಳ್ಳ ಅಂಥ ಕವನಗಳನ್ನು 'ತನಗ' ಎನ್ನುತ್ತಾರಂತೆ. ಅದೊಂದು ಫಿಲಿಪ್ಪಿನೊ ಕಾವ್ಯಪ್ರಕಾರವಾಗಿದ್ದು ಈಗ ಕನ್ನಡದಲ್ಲೂ ತನಗ ಕೃಷಿ ಮಾಡುವವರಿದ್ದಾರೆಂದು ಆಮೇಲೆ ಗೊತ್ತಾಯಿತು. ಆವತ್ತಿನ ಅಂಕಣದಲ್ಲಿ ವಿವರಿಸಿದ್ದಂತೆ ನನಗೆ ಆ ಕವನದಲ್ಲಿ ವಿಶೇಷ ಆಕರ್ಷಣೆ ಎನಿಸಿದ್ದು ಬೇಗಡೆ ಎಂಬ ಪದಬಳಕೆ, ಮತ್ತು ತುಂಟ ಹುಡುಗನೆಂಬಂತೆ ಬಾಲರವಿಯ ಚಿತ್ರಣ. ಆ ಅಂಕಣಬರಹದ ದ್ವಿತೀಯಾರ್ಧದಲ್ಲಿ ಮರ ಸುತ್ತುವ ಅಳಿಲು, ಅದರ ಫೋಟೊ ಕ್ಲಿಕ್ಕಿಸಲೆಂದು ಅಳಿಲನ್ನೂ ಮರವನ್ನೂ ಸುತ್ತುವ ಫೋಟೊಗ್ರಾಫರ್- ಎಂಬೊಂದು ವಿಜ್ಞಾನಮಂಥನದ ಪೀಠಿಕೆಯಾಗಿಯಷ್ಟೇ ಆ ಕವನವನ್ನು ಬಳಸಿದ್ದಾಗಿತ್ತು. ಆ ವಿಜ್ಞಾನಮಂಥನವಾದರೋ ಓದಿ ತಲೆಸುತ್ತಿ ಬವಳಿ ಬರುವಂತೆ ಇತ್ತೆಂದು ಕೆಲ ಓದುಗರು ಪ್ರತಿಕ್ರಿಯಿಸಿದ್ದರು. ನಾನೂ ಅಳಿಲನ್ನು ಅದರ ಪಾಡಿಗೇ ಬಿಟ್ಟು ಮುಂದಿನ ಅಂಕಣಗಳಿಗೆ ವಿಷಯಸಂಗ್ರಹದಲ್ಲಿ ತೊಡಗಿದ್ದೆ.

ಕೆಲ ದಿನಗಳ ಹಿಂದೆ ಶಿವಮೊಗ್ಗದಿಂದ ಪ್ರಣಮ್ಯ ನನಗೊಂದು ವಾಟ್ಸ್ಯಾಪ್ ಸಂದೇಶದಲ್ಲಿ ಒಂದು ಪಿಡಿಎಫ್ ಕಳುಹಿಸಿದಳು. ಅದು, ಭರ್ತಿ ನಾಲ್ಕು ಪುಟಗಳಷ್ಟು ಅವಳದೇ ಕೈಬರಹದಲ್ಲಿ ಇಂಗ್ಲಿಷ್‌ನಲ್ಲಿ ಬರೆದ ಪತ್ರ. ಚಂದದ ಕರ್ಸಿವ್ ಹ್ಯಾಂಡ್‌ರೈಟಿಂಗ್. ಪ್ರಣಮ್ಯಳಿಗೆ ಈಗ ಪಿಯುಸಿ ಪರೀಕ್ಷೆಗಳ ಫಲಿತಾಂಶ, ಸಿಇಟಿ ಮತ್ತಿತರ ಪ್ರವೇಶಪರೀಕ್ಷೆಗಳ ಫಲಿತಾಂಶ ಎಲ್ಲ ಮುಗಿದು ಎಂಜಿನಿಯರಿಂಗ್ ಕಾಲೇಜುಗಳ ಆಯ್ಕೆ ಪ್ರಕ್ರಿಯೆಯೂ ಆಗಿ ಕೊಂಚ ಬಿಡುವು ಸಿಕ್ಕಿರುವುದರಿಂದ ಅಷ್ಟೊಂದು ಸುದೀರ್ಘ ಪತ್ರ. ಅದರಲ್ಲಿ ಅವಳ ವಿದ್ಯಾಭ್ಯಾಸ, ಹವ್ಯಾಸಗಳು, ಹೊಸ ಪುಸ್ತಕಗಳ ಓದು, ಅದೂಇದೂ ಎಲ್ಲ ಸಮಾಚಾರಗಳನ್ನು ಸೇರಿಸಿದ್ದಳು. ಒಂದು ಪ್ಯಾರಗ್ರಾಫ್ ಹೀಗೆ ಇತ್ತು (ಪ್ರಣಮ್ಯ ಇಂಗ್ಲಿಷಲ್ಲಿ ಬರೆದಿದ್ದನ್ನು ನಾನಿಲ್ಲಿ ಕನ್ನಡಕ್ಕಿಳಿಸಿದ್ದು): ''ಈ ದಿನಗಳಲ್ಲಿ ನಿಮ್ಮ ಅಂಕಣಬರಹಗಳನ್ನು ನಿಯತವಾಗಿ ಓದುತ್ತಿದ್ದೇನೆ. ಹಳೆಯವನ್ನು ಕೂಡ. ಕಳೆದ ವರ್ಷವಿಡಿಯ ಪೇಪರ್‌ಕಟ್ಟಿಂಗ್ಸ್ ನನಗೋಸ್ಕರ ಅಮ್ಮ ತೆಗೆದಿಟ್ಟಿದ್ದಾರೆ. ಅದರಲ್ಲಿ ನನಗೆ ಹೆಚ್ಚು ಮೋಜೆನಿಸಿದ ಲೇಖನವೆಂದರೆ ಮೇ 4ರಂದು ಪ್ರಕಟವಾದದ್ದು. ಸೂರ್ಯದೇವನು ಅಳಿಲಿನ ಬಾಲಕ್ಕೆ ಬೇಗಡೆ ಅಂಟಿಸಲಿಕ್ಕೆಂದು ಟೇಪ್‌ನಿಂದ ಬಾಲ ಅಳೆಯುತ್ತಿರುವ ದೃಶ್ಯ. ಎಂಥ ಮುದ್ದಾದ ಕಲ್ಪನೆ ಮಾಡಿದ್ದಾರೆ ಕವಯಿತ್ರಿ ಜ್ಯೋತಿ ಮೇಡಂ! ಅದಕ್ಕೆ ತಕ್ಕಂತೆ ನಿಮ್ಮ ವ್ಯಾಖ್ಯಾನವೂ ಬಲುಸೊಗಸು. ಎರಡೆರಡು ಸಲ ಓದಿದೆ. ಅರ್ಥ ಆಗಲಿಲ್ಲ ಅಂತಲ್ಲ, ಮತ್ತೆಮತ್ತೆ ಖುಷಿಪಡಲಿಕ್ಕೆ. ಓದುತ್ತಿದ್ದಂತೆ ಅದರದೊಂದು ಚಿತ್ರ ಬಿಡಿಸೋಣ ಎಂದು ಕೈತುರಿಸಿತು. ಆದಷ್ಟು ಬೇಗ ಚಿತ್ರ ಬಿಡಿಸಿ ನಿಮಗೆ ತೋರಿಸುತ್ತೇನೆ''.

ಪ್ರಣಮ್ಯ ನನಗೆ ಜುಲೈ 2021ರಲ್ಲಿ ಗೀತಾಪರಿವಾರದ ಆನ್‌ಲೈನ್ ಭಗವದ್ಗೀತೆ ಕಲಿಕೆ ತರಗತಿಗಳಲ್ಲಿ ಪರಿಚಯವಾದ ಪ್ರತಿಭಾನ್ವಿತ ಹುಡುಗಿ. ಕೋವಿಡ್ ಕರಿನೆರಳು ಇನ್ನೂ ಕವಿದಿದ್ದ ದಿನಗಳವು. ಝೂಮ್ ಮೂಲಕ ಭಗವದ್ಗೀತೆ ಪಠನವೇ ಮುಂತಾದ ಚಟುವಟಿಕೆಗಳಲ್ಲಿ ಭಾಗವಹಿಸಿ ಜನರು ಆತ್ಮಸ್ಥೈರ್ಯ ಹೆಚ್ಚಿಸಿಕೊಳ್ಳುತ್ತಿದ್ದರು. ಭಾರತೀಯ ಸಮಯ ಬೆಳಗ್ಗೆ 7ರಿಂದ 7:40ರವರೆಗೆ, ಅಂದರೆ ನನಗಿಲ್ಲಿ ಹಿಂದಿನ ರಾತ್ರಿ 9:30ರಿಂದ 10:10ರವರೆಗೆ, ಭಗವದ್ಗೀತೆಯ 12ನೆಯ ಮತ್ತು 15ನೆಯ ಅಧ್ಯಾಯಗಳ ಕಲಿಕೆ ತರಗತಿಗೆ ಪ್ರಶಿಕ್ಷಕನಾಗಿ ನಾನು ಸೇವೆ ಸಲ್ಲಿಸುತ್ತಿದ್ದೆ. ನಮ್ಮ ತರಗತಿಯಲ್ಲಿದ್ದ ಸುಮಾರು 60 ಪ್ರಶಿಕ್ಷಾರ್ಥಿಗಳಲ್ಲಿ ಪ್ರಣಮ್ಯಳೂ ಒಬ್ಬಳು. ಪ್ರತಿದಿನವೂ ಉತ್ಸಾಹದಿಂದ ಭಾಗವಹಿಸುತ್ತಿದ್ದಳು. ಸ್ಪಷ್ಟ ಉಚ್ಚಾರದಿಂದ ಶ್ಲೋಕಗಳನ್ನು ಪಠಿಸುತ್ತಿದ್ದಳು. ಆಗ ಅವಳು ಶಿವಮೊಗ್ಗದ ಸಾಂದೀಪನಿ ಪ್ರೌಢಶಾಲೆಯಲ್ಲಿ ಒಂಬತ್ತನೆಯ ತರಗತಿಯಲ್ಲಿ ಓದುತ್ತಿದ್ದಳು. ಈ ಹುಡುಗಿ ಸಂಸ್ಕಾರಯುತ ಕುಟುಂಬದವಳಿರಬೇಕು, ಬಹುಶಃ ಸಂಗೀತಕಲಿಕೆಯ ಹಿನ್ನೆಲೆಯೂ ಇರಬಹುದೆಂದು ನಾನು ಸುಲಭವಾಗಿ ಅಂದಾಜಿಸಿದ್ದೆ. ನನ್ನ ಊಹೆ ನಿಜವೂ ಆಯ್ತು. ಗೀತಾಪರಿವಾರದ ರಿವಾಜಿನಂತೆ ಎರಡಧ್ಯಾಯ ಕಲಿಕೆಯ ಸ್ತರ ಮುಗಿದ ಸಂದರ್ಭದಲ್ಲಿ ಝೂಮ್‌ನಲ್ಲಿಯೇ 'ಆನಂದೋತ್ಸವ' ಸಮಾರಂಭ ಇತ್ತು. ಪ್ರಣಮ್ಯ ಅದರಲ್ಲಿ ಹಿಂದೂಸ್ಥಾನಿ ಸಂಗೀತದ ಚಿಕ್ಕದೊಂದು 'ಚೀಜ್' ಪ್ರಸ್ತುತಪಡಿಸಿದ್ದಳು. ಅದಕ್ಕಿಂತಲೂ ಮುಖ್ಯವಾಗಿ, ತನ್ನ ಚಿತ್ರಕಲೆಯ ಕೊಲಾಜ್ ಮಾಡಿ ಪ್ರದರ್ಶಿಸಿದ್ದಳು. ರವೀಂದ್ರನಾಥ ಟಾಗೋರ್, ಸುಭಾಶ್ಚಂದ್ರ ಬೋಸ್, ಸರ್ ಎಂ.ವಿಶ್ವೇಶ್ವರಯ್ಯ, ಬಾಲಗಂಗಾಧರ ತಿಲಕ್, ಡಿವಿಜಿ, ಮಾಸ್ತಿ, ಪುನೀತ್ ರಾಜಕುಮಾರ್ ಮುಂತಾದವರ ವ್ಯಕ್ತಿಚಿತ್ರಗಳು, ಜಲವರ್ಣದಲ್ಲಿ ಬಿಡಿಸಿದ ಪ್ರಕೃತಿಚಿತ್ರಗಳು, ಪ್ರಾಣಿ-ಪಕ್ಷಿಗಳ ಚಿತ್ರಗಳು... ಎಲ್ಲವೂ ಚಿತ್ತಾಕರ್ಷಕ. ಅನುಭವಿ ಕಲಾವಿದರು ಬಿಡಿಸಿದಂತೆ ಉತ್ಕೃಷ್ಟ. ಭಾಗವಹಿಸಿದ್ದವರೆಲ್ಲರಿಂದ 'ವಾಹ್' ಎಂಬ ಉದ್ಗಾರ.

ಗೀತಾಪರಿವಾರದಲ್ಲಿ ಭಗವದ್ಗೀತೆ ಕಲಿಕೆಯನ್ನು ಮುಂದುವರಿಸಿದ ಪ್ರಣಮ್ಯ ಆಮೇಲಿನ ಅಧ್ಯಾಯಗಳ ಕಲಿಕೆಗೆ ಇನ್ನೊಬ್ಬ ಪ್ರಶಿಕ್ಷಕ, ನನ್ನ ಸ್ನೇಹಿತ ಬಾಲಕೃಷ್ಣ ರಾನಡೆಯವರ ತರಗತಿಗೆ ಸೇರಿಕೊಂಡಳು. ಅವರಿಗೂ ನೆಚ್ಚಿನ ವಿದ್ಯಾರ್ಥಿನಿಯಾದಳು. ಪ್ರಣಮ್ಯಳ ಅಮ್ಮ 'ತಿಳಿರುತೋರಣ'ದ ನಿಯತ ಓದುಗರಾದ್ದರಿಂದ ವಾಟ್ಸ್ಯಾಪ್‌ನಲ್ಲಿ ನನ್ನೊಡನೆ ಸಂಪರ್ಕದಲ್ಲಿದ್ದರು. ಅಮ್ಮನ ಫೋನ್‌ನಿಂದ ಪ್ರಣಮ್ಯ ತನ್ನ ಕಲಿಕೆ ಪ್ರಗತಿಯ ಬಗ್ಗೆ, ಶಿವಮೊಗ್ಗದಲ್ಲಿ ಸಂಸ್ಕೃತಭಾರತಿ ಸಂಸ್ಥೆ ನಡೆಸಿದ ಗೀತಾಕಂಠಪಾಠ ಸ್ಪರ್ಧೆಯಲ್ಲಿ 12ನೆಯ ಅಧ್ಯಾಯ ಪಠಿಸಿ ಪ್ರಥಮ ಬಹುಮಾನ ಪಡೆದ ಬಗ್ಗೆಯೆಲ್ಲ ಬರೆದು ತಿಳಿಸುತ್ತಿದ್ದಳು. 11ನೆಯ ಅಧ್ಯಾಯ ಕಲಿಯುತ್ತಿದ್ದಾಗ ವಿಶ್ವರೂಪದರ್ಶನದ ಚಿತ್ರ ಬಿಡಿಸುತ್ತಿದ್ದೇನೆಂದು ತಿಳಿಸಿದ್ದಳು. ಬಿಡಿಸಿ ಆದಮೇಲೆ ಅದ್ಭುತವಾದ ಆ ಚಿತ್ರವನ್ನು ವಾಟ್ಸ್ಯಾಪ್‌ನಲ್ಲಿ ನನಗೂ ಕಳುಹಿಸಿದ್ದಳು. ಕೆಲವೊಮ್ಮೆ 'ತಿಳಿರು ತೋರಣ' ಅಂಕಣ ಓದಿ ವಾಯ್ಸ್ ಮೆಸೇಜಿನಲ್ಲಿ ಪ್ರತಿಕ್ರಿಯೆ ಕೊಡುತ್ತಿದ್ದಳು. 2022ರ ಏಪ್ರಿಲ್‌ನಲ್ಲಿ ಖ್ಯಾತ ಗಮಕಿ ಪದ್ಮಶ್ರೀ ಎಚ್.ಆರ್. ಕೇಶವಮೂರ್ತಿಯವರಿಗೆ ಶಿವಮೊಗ್ಗ ಕರ್ನಾಟಕ ಸಂಘದಿಂದ ಅಭಿನಂದನೆ ಕಾರ್ಯಕ್ರಮ ನಡೆದಾಗ ಶತಾವಧಾನಿ ಡಾ. ಆರ್. ಗಣೇಶರು ಅಭಿನಂದನಾ ಭಾಷಣಕಾರರಾಗಿ ಹೋಗಿದ್ದಾಗ, ''ಶತಾವಧಾನಿಯವರನ್ನು ಭೇಟಿಯಾಗುತ್ತೇನೆ; ಅವರ ವ್ಯಕ್ತಿಚಿತ್ರ ಬಿಡಿಸಿ ಉಡುಗೊರೆಯಾಗಿ ನೀಡುತ್ತೇನೆ'' ಎಂದಿದ್ದಳು. ಚಿತ್ರವನ್ನು ರಚನಾಹಂತದಲ್ಲೇ ಒಂದೆರಡು ಸರ್ತಿ ನನಗೆ ತೋರಿಸಿದ್ದಳು. ಸಮಾರಂಭದ ದಿನ ಗಣೇಶರನ್ನು ಭೇಟಿಯಾಗಿ ನಮಸ್ಕರಿಸಿ ಆಶೀರ್ವಾದ ಪಡೆದು ಭಾವಚಿತ್ರ ಸಮರ್ಪಿಸಿದ ಫೋಟೊ ನನಗೆ ಕಳುಹಿಸಿದಳು. ಪ್ರಣಮ್ಯಳ ಸಂಭ್ರಮವನ್ನು ಅದರಲ್ಲಿ ಕಾಣಬಹುದಾಗಿತ್ತು.

ಚಿತ್ರಕಲೆಯಷ್ಟೇ ಅಲ್ಲದೆ ಪ್ರಣಮ್ಯ ಬಹುಮುಖಪ್ರತಿಭೆಯವಳು ಎಂದು ನನಗೆ ಗೊತ್ತಾದದ್ದು ಶಿವಮೊಗ್ಗದ ಸ್ಥಳೀಯ ಪತ್ರಿಕೆಯಲ್ಲಿ, ಶಿವಮೊಗ್ಗ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದ ಸುಂದರರಾಜ್ ಅವರು ಬರೆದ 'ಪ್ರತಿಭೆಯ ಖನಿ ಪ್ರಣಮ್ಯ' ಲೇಖನದಿಂದ. ''ಓದಿನಲ್ಲಿ ಚುರುಕು. ಪಠ್ಯೇತರ ಚಟುವಟಿಕೆಗಳಲ್ಲಿ ಅಪಾರ ಆಸಕ್ತಿ. ಚಿತ್ರಕಲೆ, ಚೆಸ್, ಹಿಂದೂಸ್ಥಾನಿ ಸಂಗೀತ, ಪರಿಸರ ಸಂರಕ್ಷಣೆ, ಪತ್ರಲೇಖನ, ಭಾಷಣ, ಸಾಹಿತ್ಯ- ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಪ್ರಣಮ್ಯ, ಗುರುಹಿರಿಯರಲ್ಲಿ ಗೌರವ ಮತ್ತು ಸೌಜನ್ಯಯುತ ನಡತೆಯವಳು. ಚಿಕ್ಕಂದಿನಿಂದಲೇ, ಕಣ್ಣಿಗೆ ಕಂಡ ವಸ್ತುಗಳದೆಲ್ಲ ಚಿತ್ರ ಬಿಡಿಸುವ ಈಕೆಯ ಹವ್ಯಾಸವನ್ನು ಕಂಡ ತಂದೆ-ತಾಯಿ (ರಾಮು-ರಾಧಾಮಣಿ) ಈ ಬಾಲಕಿಯನ್ನು ರವಿವರ್ಮ ಚಿತ್ರಶಾಲೆಗೆ ಸೇರಿಸಿದರು. ಅಲ್ಲಿ ತುಂಬ ಆಸಕ್ತಿಯಿಂದ ಕಲಿತು ಸುಂದರವಾದ ಚಿತ್ರಗಳನ್ನು ಬಿಡಿಸಿ ಎಲ್ಲರನ್ನೂ ಬೆರಗುಗೊಳಿಸಿದ ಪ್ರಣಮ್ಯ ಜಿಲ್ಲಾ-ರಾಜ್ಯ-ರಾಷ್ಟ್ರ ಮಟ್ಟದ ಹಲವಾರು ಚಿತ್ರಕಲಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಅನೇಕ ಬಹುಮಾನಗಳನ್ನು ಗಳಿಸಿದ್ದಾಳೆ. ಸ್ಕೂಲ್ ಆಫ್ ಇಂಡಿಯಾ ಚೆನ್ನೈ ಮತ್ತು ಮಾರುತಿ ಆರ್ಟ್ಸ್‌ನವರು ನಡೆಸಿದ ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಚಿನ್ನದ ಪದಕ ಗಳಿಸಿದ್ದಾಳೆ. ಶಿಮೊಪೆಕ್ಸ್ 2018 ವಿಭಾಗಮಟ್ಟದ ಪತ್ರಲೇಖನ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ. ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗದ ಪ್ರಬಂಧ ಸ್ಪರ್ಧೆಯಲ್ಲಿ ಮೂರು ಬಾರಿ

ಬಹುಮಾನ. ಪರಿಸರ ಅಧ್ಯಯನ ಕೇಂದ್ರದವರು ನಡೆಸಿದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮಸ್ಥಾನ. ತೋಟಗಾರಿಕೆ ಇಲಾಖೆಯ ಫಲಪುಷ್ಪ ಪ್ರದರ್ಶನದಲ್ಲಿ ಪಾಲ್ಗೊಂಡು ಬಹುಮಾನ ಗಳಿಸಿದ್ದಾಳೆ. ನಳಂದ ಚೆಸ್ ಅಕಾಡೆಮಿಯಿಂದ ಚೆಸ್ ಕಲಿತು ಈ ಆಟದಲ್ಲಿ ಪರಿಣತಿ ಹೊಂದುವ ಉತ್ಸಾಹದಲ್ಲಿದ್ದಾಳೆ. ಸ್ವರಗಂಗಾ ಹಿಂದೂಸ್ಥಾನಿ ಸಂಗೀತ ಶಾಲೆಯಲ್ಲಿ ಕಲಿಯುತ್ತ ಉತ್ತಮವಾಗಿ ಹಾಡಬಲ್ಲವಳಾಗಿದ್ದಾಳೆ. ಸಾಹಿತ್ಯಪ್ರಿಯೆಯಾಗಿದ್ದು ಸ್ವರಚಿತ ಕವನವಾಚನ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಎಲ್ಲರೂ ಹುಬ್ಬೇರಿಸುವಂತೆ ಮಾಡುತ್ತಾಳೆ. ಇಷ್ಟೆಲ್ಲ ಪ್ರತಿಭೆ ಹೊಂದಿ ಓದಿನಲ್ಲೂ ಮುಂದಿರುವ ಪ್ರಣಮ್ಯಳನ್ನು 'ನಿನ್ನ ಚಟುವಟಿಕೆಗಳಿಗೆ ಸಮಯವನ್ನು ಹೇಗೆ ಹೊಂದಿಸಿಕೊಳ್ಳುತ್ತೀಯಾ?' ಎಂದು ಪ್ರಶ್ನಿಸಿದರೆ 'ಬೆಳಗ್ಗೆ ಸಂಜೆ ಒಂದು ಕ್ಷಣವೂ ವ್ಯರ್ಥ ಮಾಡದೆ, ಟಿವಿ-ಮೊಬೈಲ್‌ಗಳಿಂದ ದೂರವಿದ್ದು ನನ್ನ ಹವ್ಯಾಸಗಳನ್ನು ಬೆಳೆಸಿಕೊಳ್ಳುತ್ತಿದ್ದೇನೆ' ಎನ್ನುತ್ತಾಳೆ. ಈಕೆ ಇತರ ಮಕ್ಕಳಿಗೆಲ್ಲ ಆದರ್ಶವಾಗಿದ್ದಾಳೆ'' ಎಂದು ಅವರು ಬರೆದಿದ್ದರು.

ಪ್ರಣಮ್ಯ ಓದುತ್ತಿದ್ದ ಪ್ರೌಢಶಾಲೆಯಲ್ಲೇ ಅಧ್ಯಾಪಕರಾಗಿರುವ ಚೇತನ್ ರಾಯನಹಳ್ಳಿ ಅವರು ಶಿವಮೊಗ್ಗದ ಪತ್ರಿಕೆಯಲ್ಲಿ ಬರೆಯುವ 'ಕ್ಲಾಸ್‌ರೂಂ ಡೈರೀಸ್' ಅಂಕಣದಲ್ಲೂ ಪ್ರಣಮ್ಯಳ ಉಲ್ಲೇಖ ಕೆಲವೊಮ್ಮೆ ಬರುತ್ತಿತ್ತು. ಶೌರ್ಯಚಕ್ರ ಪುರಸ್ಕೃತ ಯೋಧ ಲೂಯಿಸ್ ಪೆರಿಯನಾಯಗಂ ಅವರನ್ನು ಶಾಲೆಗೆ ಆಹ್ವಾನಿಸಿ ಸತ್ಕರಿಸಿದ ಸಂದರ್ಭದಲ್ಲಿ ಅವರ ವ್ಯಕ್ತಿಚಿತ್ರವನ್ನು ಪ್ರಣಮ್ಯ ಬಿಡಿಸಿ ಶಾಲೆಯ ವತಿಯಿಂದ ಅದನ್ನವರಿಗೆ ಸಮರ್ಪಿಸಿದ್ದು, ''ಸರ್, ಇದು ಅತಿಥಿಗಳಿಗೆ ಅವರದ್ದೇ ಚಿತ್ರ ಅಂತ ಗೊತ್ತಾಗತ್ತೆ ಅಲ್ವಾ?'' ಎಂದು ಪ್ರಣಮ್ಯ ಮುಗ್ಧತೆಯಿಂದ ಕೇಳಿದ್ದು, ಚಿತ್ರಕ್ಕೆ ಫ್ರೇಮ್ ಹಾಕುವ ದುಡ್ಡನ್ನು ತಾನೇ ಕೊಡುತ್ತೇನೆ ಎಷ್ಟಾಯ್ತು ಅಂತ ತಿಳಿಸಲಿಕ್ಕೆ ಹೇಳಿದ್ದಾರೆ ಅಮ್ಮ, ಇಲ್ಲವಾದರೆ ಪೆಟ್ಟು ಕೊಡುತ್ತಾರೆ ಎಂದಿದ್ದು... ಇದನ್ನೆಲ್ಲ ಒಮ್ಮೆ ಹೃದಯಂಗಮವಾಗಿ ಬಣ್ಣಿಸಿದ್ದರು. ಪ್ರಣಮ್ಯ ತಾನಾಗಿ ಇವ್ಯಾವುದನ್ನೂ ನನ್ನ ಬಳಿ ಹೇಳಿಕೊಂಡಿದ್ದಿಲ್ಲ. ಅವಳಮ್ಮ ಹಂಚಿಕೊಳ್ಳುತ್ತಿದ್ದ ನ್ಯೂಸ್‌ಪೇಪರ್ ಕ್ಲಿಪ್ಪಿಂಗ್‌ಗಳಿಂದಷ್ಟೇ ನನಗೆ ಗೊತ್ತಾಗಿದ್ದು. ಅವಳಾಗಿ ನನ್ನೊಡನೆ ಹಂಚಿಕೊಂಡಿದ್ದೆಂದರೆ ಒಂದು ಸಲ ಜೂನ್ ಮೂರನೆ ಭಾನುವಾರದ 'ಅಪ್ಪಂದಿರ ದಿನ'ದಂದು ವಿಜಯಕರ್ನಾಟಕದಲ್ಲಿ ಪ್ರಕಟವಾದ ಅವಳದೊಂದು ಪುಟ್ಟ ಬರಹ, ಅಪ್ಪನ ಪ್ರೀತಿಯ ಬಗೆಗಿನದು. ಇನ್ನೊಮ್ಮೆ ಶಂಕರಜಯಂತಿಯಂದು 'ಶಂಕರ ಜೀವನಗಾಥೆ ಎಂದು ಒಂದೇ ಪುಟದಲ್ಲಿ ಶಂಕರಾಚಾರ್ಯರ ಬದುಕಿನ ವಿವಿಧ ಘಟ್ಟಗಳ ಒಟ್ಟು ಹನ್ನೊಂದು ಚಿತ್ರಗಳ ಕೊಲಾಜ್.

ಎಸೆಸೆಲ್ಸಿ ಪರೀಕ್ಷೆ ಮುಗಿದು ಫಲಿತಾಂಶ ಪ್ರಕಟವಾದ ದಿನ ಪ್ರಣಮ್ಯ ನನಗೊಂದು ವಾಯ್ಸ್ ಮೆಸೇಜ್ ಕಳಿಸಿದ್ದಳು. 625ರಲ್ಲಿ 623 ಅಂಕ ಗಳಿಸಿದ್ದವಳಿಗೆ ಎರಡು ಮಾರ್ಕ್ಸ್ ಕಳಕೊಂಡು ಸ್ವಲ್ಪ ನಿರಾಸೆಯಾಗಿತ್ತೆಂದು ಧ್ವನಿಯಲ್ಲೇ ಗೊತ್ತಾಗುತ್ತಿತ್ತು. ಆದರೆ ಅವಳು ಅದನ್ನೇ ಒಂದು ದೊಡ್ಡ ಚಿಂತೆಯಾಗಿ ಮಾಡಿಕೊಳ್ಳಲಿಲ್ಲ. ''ಶತಾವಧಾನಿಗಳು ಡಿವಿಜಿ ಬಗ್ಗೆ ಬರೆದ 'ಬ್ರಹ್ಮಪುರಿಯ ಭಿಕ್ಷುಕ' ಪುಸ್ತಕ ಓದ್ಬೇಕು ಅಂದ್ಕೊಂಡಿದ್ದೆ, ಅದನ್ನೂ ಓದ್ತಾ ಇದ್ದೇನೆ. ಆರ್. ಕೆ.ನಾರಾಯಣ್ ಅವ್ರದ್ದು 'ಸ್ವಾಮಿ ಆ್ಯಂಡ್ ಹಿಸ್ ಫ್ರೆಂಡ್ಸ್' ಓದಿದ್ದೆ; ತುಂಬ ಇಷ್ಟ ಆಗಿತ್ತು, ಅದರ ಒಂದು ಕಥೆ ನಮಗೆ ಇಂಗ್ಲಿಷ್ ಟೆಕ್ಸ್ಟ್ ಬುಕ್ಕಲ್ಲೂ ಇತ್ತು. ಅವ್ರದ್ದೇ 'ಮ್ಯಾನ್ ಈಟರ್ ಆಫ್ ಮಾಲ್ಗುಡಿ' ಮತ್ತು 'ಗೈಡ್' ಈಗ ಓದಿದೆ, ತುಂಬ ಚೆನ್ನಾಗಿದೆ. ಕಾಲೇಜು ಶುರುವಾಗುವುದರೊಳಗೆ 'ಚೆನ್ನಭೈರಾದೇವಿ'ನೂ ಓದ್ಬೇಕು ಅಂದ್ಕೊಂಡಿದ್ದೇನೆ. ಮತ್ತೆ, ಗೀತಾಪರಿವಾರದ ಗೀತಾಕ್ಲಾಸುಗಳಲ್ಲಿ ತಾಂತ್ರಿಕ ಸಹಾಯಕಿಯಾಗಿ ಸೇವೆ ಸಲ್ಲಿಸಲಿಕ್ಕೆ ನೋಂದಾಯಿಸಿಕೊಂಡಿದ್ದೇನೆ'' ಎಂದಿದ್ದಳು. ಅವಳನ್ನು ಅಭಿನಂದಿಸುತ್ತ ''ಪ್ರಣಮ್ಯ, ನಿನಗೆ 625ಕ್ಕೆ 625 ಬರುತ್ತಿದ್ದರೆ ಇನ್ನೇನೂ ಸುಧಾರಣೆ ಸಾಧ್ಯವಿಲ್ಲ ಎಂದಾಗುತ್ತಿತ್ತು. ಅದಕ್ಕಿಂತ, ಕಡಿಮೆ ಅಂಕ ಬಂದಿರುವುದನ್ನೂ ಧನಾತ್ಮಕವಾಗಿ ತಗೊಳ್ಳಬಹುದು. ಇನ್ನೂ ಚೆನ್ನಾಗಿ ಮಾಡಬಲ್ಲೆ/ಮಾಡುತ್ತೇನೆ ಎಂಬ ಛಲ ಬೆಳೆಸಿಕೊಳ್ಳಬಹುದು. ಜೀವನಮೌಲ್ಯದ ದೃಷ್ಟಿಯಿಂದ ಇದೇ ಒಳ್ಳೆಯದು'' ಎಂದು ಬರೆದಿದ್ದು ಅವಳಿಗೆ ಒಪ್ಪಿಗೆಯಾಗಿತ್ತು. ''ನನ್ನದೇ ಸಿಲ್ಲಿಮಿಸ್ಟೇಕ್‌ನಿಂದ ಎರಡು ಮಾರ್ಕ್ಸ್ ಕಳಕೊಂಡೆ. ಇನ್ನುಮುಂದೆ ಎಚ್ಚರದಿಂದಿರುತ್ತೇನೆ'' ಎಂದು ಉತ್ತರಿಸಿದ್ದಳು.

ಕಳೆದವರ್ಷ ಮೇ ತಿಂಗಳಲ್ಲಿ ನಾನು ಭಾರತಪ್ರವಾಸದ ವೇಳೆ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲಿಕ್ಕೆ ಶಿವಮೊಗ್ಗಕ್ಕೂ ಭೇಟಿಯಿತ್ತಿದ್ದೆ. ಬೆಂಗಳೂರಿನಿಂದ ಶಿವಮೊಗ್ಗಕ್ಕೆ ರೈಲಿನಲ್ಲಿ ಹೋದ ನನ್ನನ್ನು ಸ್ವಾಗತಿಸಲಿಕ್ಕೆ ಪ್ರಣಮ್ಯ ಹೂಗುಚ್ಛ ಹಿಡಿದುಕೊಂಡು ತನ್ನ ಅಪ್ಪನೊಡನೆ ರೈಲುನಿಲ್ದಾಣಕ್ಕೆ ಬಂದಿದ್ದಳು. ಅಂದು ಮಧ್ಯಾಹ್ನದೂಟ ಅವರ ಮನೆಯಲ್ಲೇ. ಪ್ರಣಮ್ಯಳ ಅಕ್ಕ ಪ್ರಣತಿ ಈಗಾಗಲೇ ಎಂಜಿನಿಯರಿಂಗ್ ಓದು ಮುಗಿಸಿ ಬೆಂಗಳೂರಲ್ಲಿ ಐಟಿ ಉದ್ಯೋಗದಲ್ಲಿರುವವಳು ಸಹ ಬಂದಿದ್ದಳು. ಪ್ರಣಮ್ಯಳ ಶಿಕ್ಷಕರಾಗಿದ್ದ ಚೇತನ್ ರಾಯನಹಳ್ಳಿ ಮಾತ್ರವಲ್ಲದೇ, ಅದುವರೆಗೆ ನನಗೆ ವಾಟ್ಸ್ಯಾಪ್ ಮೂಲಕವಷ್ಟೇ ಪರಿಚಿತರಾಗಿದ್ದ ಇನ್ನೂ ಕೆಲವರನ್ನು ಆಹ್ವಾನಿಸಿದ್ದರು. ಮನೆತುಂಬ ಪ್ರಣಮ್ಯಳ ಪೇಂಟಿಂಗ್‌ಗಳು, ಪ್ರಶಸ್ತಿಗಳು, ಪಾರಿತೋಷಕಗಳು. ಆದರೆ ದೊಡ್ಡಸ್ತಿಕೆ ಜಂಬ ಬಡಿವಾರ ಯಾರಲ್ಲೂ ಲವಲೇಶವೂ ಇಲ್ಲ. ಮಾರನೆಯ ದಿನ ಬೆಳಗ್ಗೆ ನಾನು ಶಿವಮೊಗ್ಗದಿಂದ ಬೆಂಗಳೂರಿಗೆ ರೈಲು ಹಿಡಿಯುವಾಗಲೂ ಪ್ರಣಮ್ಯ ಮತ್ತು ಅವಳ ತಂದೆ-ತಾಯಿ ನನ್ನನ್ನು ಬೀಳ್ಕೊಡಲಿಕ್ಕೆ ಬಂದಿದ್ದರು.

ಇಂಥ ಹಿನ್ನೆಲೆಯಿರುವ ಪ್ರಣಮ್ಯ ಆ ಪತ್ರದಲ್ಲಿ ''ಅಳಿಲಿನ ಬಾಲ ಅಳೆಯುವ ಬಾಲರವಿಯ ಚಿತ್ರ ಬಿಡಿಸಿ ಕಳುಹಿಸುತ್ತೇನೆ'' ಎಂದಾಗ ಎಂಥ ಮೋಹಕ ಚಿತ್ರವೊಂದು ಮೂಡಿಬರಲಿದೆ ಎಂದು ನನಗೆ ಅಂದಾಜಿತ್ತು. ಅದಾಗಿ ನಾಲ್ಕೈದು ದಿನಗಳಲ್ಲೇ ಪ್ರಣಮ್ಯ ಕಪ್ಪು-ಬಿಳುಪು ರೇಖಾಚಿತ್ರವೊಂದನ್ನು ಕಳುಹಿಸಿ ''ಇದಕ್ಕಿನ್ನೂ ಬಣ್ಣ ತುಂಬಬೇಕಿದೆ. ಆದರೆ ಇದು ಜ್ಯೋತಿ ಮೇಡಂ ಬರೆದ ಕವನಕ್ಕೆ ಸರಿಹೊಂದುವಂತೆ ಇದೆಯೇ ಅಂತ ಮೊದಲಿಗೆ ನಿಮ್ಮನ್ನೊಮ್ಮೆ ಕೇಳುತ್ತಿದ್ದೇನೆ'' ಎಂದು ಬರೆದಿದ್ದಳು. ''ಶತಪ್ರತಿಶತ ಹೊಂದುತ್ತದೆ!'' ಎಂದು ಅವಳಿಗೆ ತಿಳಿಸಿದೆ. ಆಮೇಲೆ ಎರಡೇ ದಿನಗಳೊಳಗೆ ಬಂತು ವರ್ಣರಂಜಿತ ಚಿತ್ರ! ಹೆಗಲಮೇಲೆ ಅಳತೆಟೇಪು ಇಳಿಬಿಟ್ಟು ಪಕ್ಕಾ ಟೈಲರ್‌ನಂತೆ ಕಾಣುವ ಸೂರ್ಯದೇವ. ಕೊಂಬೆಯ ಮೇಲೆ ವಿಧೇಯನಾಗಿ ಕುಳಿತಿರುವ ಅಳಿಲು. ಹೆಚ್ಚೂಕಡಿಮೆ ಅದರ ದೇಹದಷ್ಟೇ ಗಾತ್ರದ ಪುಚ್ಛ, ಬೇಗಡೆ ಅಂಟಿಸಲಿಕ್ಕಾಗಿ ಬಾಲದ ಅಳತೆ ತಗೊಳ್ಳಲಾಗುತ್ತಿದೆ. ''ವಾಹ್ ಪ್ರಣಮ್ಯ ವಾಹ್!'' ಎಂದಷ್ಟೇ ನನ್ನ ಪ್ರತಿಕ್ರಿಯೆ. ಅಷ್ಟರಲ್ಲಿ ಮತ್ತೊಂದಿಷ್ಟು ಪೂರಕ ಮಾಹಿತಿ ಬಂತು, ಪ್ರಣಮ್ಯಳ ಅಮ್ಮನಿಂದ: ''ಪ್ರಣಮ್ಯ ಬಾಲರವಿ ಅಳಿಲಿನ ಬಾಲ ಅಳೆಯುವ ಚಿತ್ರ ಕಳಿಸಿದಳಷ್ಟೆ? ಆ ಚಿತ್ರ ಬರೆಯುವಾಗ ಮನೆಯಲ್ಲಿದ್ದ 88 ವರ್ಷದ ನಮ್ಮಮ್ಮ ಬಂದು ನೋಡಿ ಏನ್ಮಾಡ್ತಾ ಇದ್ದಿ ಅಂತ ಕೇಳಿದ್ದಾರಂತೆ. ಪ್ರಣಮ್ಯ ಅವರಿಗೂ ಕುಂಚ ಕೊಟ್ಟು ಬಣ್ಣ ಹಚ್ಚಿಸಿ (ಸ್ವಲ್ಪ ತಪ್ಪಾಗಿದೆ ಎಂದು ಇಟ್ಟ ಚಿತ್ರಕ್ಕೆ) ದೊಡ್ಡಮ್ಮ ಎಷ್ಟುಚೆನ್ನಾಗಿ ಬಣ್ಣ ಹಚ್ಚಿದ್ದಾರೆ ನೋಡಮ್ಮ ಅಂತ ತೋರಿಸಿದ್ಲು. ಅವರಿಗೆ ಹೇಗೆ ಇಷ್ಟು ಚೆನ್ನಾಗಿ ಬರುತ್ತದೆ ಅಂತ ಆಶ್ಚರ್ಯದ ಪ್ರಶ್ನೆ ಅವಳದು. 30-40 ವರ್ಷಗಳ ಹಿಂದೆ ನಮ್ಮನೆಯಲ್ಲಿ ದೇವರಮನೆ, ಅಡುಗೆಮನೆ ಗೋಡೆಗೆಲ್ಲಾ ಅಮ್ಮನೇ ಬಣ್ಣ ಹಚ್ಚುತ್ತಿದ್ದರು(ಮಡಿಯ ಕಾರಣವೂ ಇತ್ತು). ಅದೂ ಬಿಳಿಬಣ್ಣಕ್ಕೆ ಜೇಡಿಮಣ್ಣು, ಕೆಂಪು ಬಣ್ಣಕ್ಕೆ ಕೆಮ್ಮಣ್ಣು, ತೋಟದಿಂದ ಕೆಂಪುಮಣ್ಣು ತಂದು ಅದಕ್ಕೆ ನಿಂಬೆರಸ, ಸ್ವಲ್ಪ ಬೆಲ್ಲ ಹಾಕಿ ಕಲಸಿ, ಕದಡಿ ಹಚ್ಚುತ್ತಿದ್ದರಂತೆ. ಒಣಹುಲ್ಲಿನ ಸಿಂಬೆ ಮಾಡಿ ಬ್ರಷ್‌ನಂತೆ ಬಳಸುತ್ತಿದ್ದರಂತೆ. ಕಾಲಕ್ರಮೇಣ ಸುಣ್ಣ, ಬ್ರಷ್ ಬಂದವು. ಈಗಂತೂ ಥರಥರದ ಬಣ್ಣಗಳಿವೆ. ಒಟ್ಟಿನಲ್ಲಿ ಚಿತ್ರ ಬರೆಯಲು ಹೋಗಿ ಇಷ್ಟೆಲ್ಲ ಮಾಹಿತಿ ತಿಳಿದುಕೊಂಡಹಾಗಾಯಿತು.''

ಕವಯಿತ್ರಿ ಜ್ಯೋತಿ ಮಹಾದೇವ್‌ಗೆ ಇದನ್ನು ಒಳ್ಳೇ ಸ್ಟೈಲ್‌ನಲ್ಲೇ ತೋರಿಸೋಣ ಅಂದ್ಕೊಂಡೆ. ಏನೆಂದರೆ, ''ನೋಡಿ ನಿಮ್ಮ ತನಗ ಕವನಕ್ಕೆ ಶಿವಮೊಗ್ಗದ ಪ್ರಣಮ್ಯ ಎಂಬ ಪ್ರತಿಭಾನ್ವಿತ ಹುಡುಗಿ ಚಿತ್ರ ಬಿಡಿಸಿದ್ದಾಳೆ!'' ಅಂತ. ಮರುಯೋಚನೆ ಬಂತು. ಅವರೊಬ್ಬರಿಗೇ ಏಕೆ, ಇದರದೊಂದು ವರ್ಲ್ಡ್ ಪ್ರೀಮಿಯರ್ ಪ್ರದರ್ಶನವೇ ಆಗಲಿ ಎಂದುಕೊಂಡು 'ವಿಶ್ವವಾಣಿ'ಯ ಅಂಕಣವೇ ಸೂಕ್ತವೆಂದುಕೊಂಡೆ. ಇಲ್ಲೀಗ ನಿಮಗೆಲ್ಲ ಈ ಚಿತ್ರವನ್ನು ನೋಡುವ ಭಾಗ್ಯ. ಅಂದಹಾಗೆ ಕುವೆಂಪು ಅವರ ಪ್ರಖ್ಯಾತ ''ದೇವರು ರುಜು ಮಾಡಿದನು; ರಸವಶನಾಗುತ ಕವಿ ಅದ ನೋಡಿದನು!'' ಕವನ ನಿಮಗೆ ನೆನಪಿರಬಹುದು. ಅದಕ್ಕೆ ಹೋಲಿಸಿದರೆ ಇದರಲ್ಲಿ ಇನ್ನೂ ಎರಡು ಹಂತಗಳು: ಸೂರ್ಯದೇವನು ಅಳಿಲಿನ ಬಾಲ ಅಳೆದನು; ಅದನ್ನು ಕಂಡು ಕವಯಿತ್ರಿ ತನಗ ಬರೆದಳು; ಅಂಕಣಕಾರ ಅದರ ವ್ಯಾಖ್ಯಾನ ಮಾಡಿದನು; ಚಿತ್ರಕಾರ್ತಿ ಹುಡುಗಿಯು ಕಲರ್ ಕಲರ್ ಚಿತ್ರ ಬಿಡಿಸಿದಳು!

ಕ್ರಿಕೆಟ್ ಕಾಶಿಯಲ್ಲಿ ಬಾಯಿತನಕ ಬಂದು ಕೈಜಾರಿದ ತುತ್ತು



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com
vinayakavbhat@autoaxle.com

ಕ್ರೀಡೆ ಅಂದ ಮೇಲೆ ಸೋಲು ಗೆಲುವು ಎರಡೂ ಇದ್ದದ್ದೇ. ಕ್ರಿಕೆಟ್ ಇತಿಹಾಸದಲ್ಲಿ ಇಲ್ಲಿಯವರೆಗೆ ಭಾರತ ಅನೇಕ ಪಂದ್ಯಗಳನ್ನು ಗೆದ್ದಿದ್ದಿದೆ, ಹಾಗೆ ಸೋತಿದ್ದೂ ಬೇಕಾದಷ್ಟಿದೆ. ಆದರೆ ಎಲ್ಲ ಗೆಲುವೂ ಸ್ಮರಣೀಯವಾಗಿಲ್ಲ. ಹಾಗೆಯೇ ಸೋಲುಗಳೂ ಅಷ್ಟೆ, ಎಲ್ಲವೂ ನೆನಪಿನಲ್ಲಿ ಉಳಿಯುವಂಥದ್ದಲ್ಲ. ಆದರೆ ಕೆಲವು ಸೋಲು ಗೆಲುವುಗಳನ್ನು ಮರೆಯುವುದು ಬಹಳ ದುಸ್ತರ. ಸೋಲಿಗೆ ಅತಿ ಸಮೀಪವಿದ್ದ 'ಹೀರೋ ಕಪ್' ಸೆಮಿಫೈನಲ್‌ನಲ್ಲಿನ ಸಚಿನ್‌ನ ಜಾದೂಭರಿತ ಕೊನೆಯ ಓವರ್‌ನಿಂದ ಭಾರತಕ್ಕೆ ಸಿಕ್ಕ ಗೆಲುವು ಹಾಗೂ ಮದ್ರಾಸಿನ ಚೆಪಾಕ್ ಮೈದಾನದಲ್ಲಿ ಐತಿಹಾಸಿಕವಾಗಿ 'ಟೈ' ಆದ ಟೆಸ್ಟ್ ಪಂದ್ಯಗಳನ್ನು ಮರೆಯಲಾಗುವುದೇ ಇಲ್ಲ. ಹಾಗೆಯೇ, ಕ್ರಿಕೆಟ್ ಕಾಶಿ ಲಾರ್ಡ್ಸ್‌ನಲ್ಲಿ ಮೊನ್ನೆ ನಡೆದ ಭಾರತ ಮತ್ತು ಇಂಗ್ಲೆಂಡ್ ನಡುವಿನ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡ ಕಂಡ 22 ರನ್‌ಗಳ ವೀರೋಚಿತ ಪರಾಭವದಿಂದಾಗಿಯಷ್ಟೇ ಅಲ್ಲದೇ, ಇನ್ನೂ ಅನೇಕ ಕಾರಣಗಳಿಗಾಗಿ ಬಹಳಕಾಲ ಮರೆಯಲಾಗದ ಪಂದ್ಯವಾಗಿ ಉಳಿಯುವುದರಲ್ಲಿ ಸಂದೇಹವಿಲ್ಲ.

ಲಾರ್ಡ್ಸ್‌ನಲ್ಲಿ ಭಾರತ ಮತ್ತು ಇಂಗ್ಲೆಂಡ್ ನಡುವಿನ ಟೆಸ್ಟ್ ಪಂದ್ಯಗಳ ಇತಿಹಾಸವು ಸ್ಮರಣೀಯ ಕ್ಷಣಗಳು ಮತ್ತು ತೀವ್ರ ಹೋರಾಟಗಳಿಂದ ಸಮೃದ್ಧವಾಗಿದೆ. ಕ್ರಿಕೆಟ್‌ಗೆ ತವರು ಮೈದಾನವಾದ ಲಾರ್ಡ್ಸ್ ಈ ಎರಡು ರಾಷ್ಟ್ರಗಳ ನಡುವಿನ ಕೆಲವು ರೋಮಾಂಚಕ ಮುಖಾಮುಖಿಗಳಿಗೆ ಸಾಕ್ಷಿಯಾಗಿದೆ. 1986ರಲ್ಲಿ ಕಪಿಲ್‌ದೇವ್ ನಾಯಕತ್ವದ ಭಾರತ ತಂಡವು ಲಾರ್ಡ್ಸ್‌ನಲ್ಲಿ ಪಡೆದ ಮೊದಲ ಟೆಸ್ಟ್ ಗೆಲುವಿನಿಂದ ಹಿಡಿದು ಇತ್ತೀಚಿನ ಅದ್ಭುತ ಪಂದ್ಯದವರೆಗೆ, ಪ್ರತಿ ಪಂದ್ಯವೂ ಐತಿಹಾಸಿಕವೇ. ಆ ಮೈದಾನವೇ ಹಾಗೆ ಮತ್ತು ಯಾವುದೇ ದೇಶದ ಆಟಗಾರನಿಗೆ ಅಲ್ಲಿ ಆಡುವುದೇ ಒಂದು ಗೌರವ. ಅಲ್ಲಿ ಶತಕ ಬಾರಿಸುವ ಅಥವಾ ಐದು ವಿಕೆಟ್ ಕೀಳುವ ಆಸೆ ಎಲ್ಲ ಆಟಗಾರನಿಗೂ ಇದ್ದೇ ಇರುತ್ತದೆ. ಇಂಗ್ಲೆಂಡ್ ಮತ್ತು ಭಾರತದ ನಡುವಿನ ಪಂದ್ಯಗಳಲ್ಲಿ, ಪಾಕಿಸ್ತಾನದ ವಿರುದ್ಧ ಆಡುವಾಗಿನ ಉದ್ವಿಗ್ನತೆ ಇರುವುದಿಲ್ಲವಾದರೂ, ಆಡುತ್ತಿರುವ ಅಂಗಳ 'ಲಾರ್ಡ್ಸ್' ಅಗಿರುವುದರಿಂದ, ಶತಾಯ ಗತಾಯ ಇಬ್ಬರೂ ಗೆಲುವಿಗಾಗಿ ಹೋರಾಡುವುದು ಅನಿವಾರ್ಯವಾಗುತ್ತದೆ. ಒಟ್ಟಾರೆ, ಕಳೆದ ಕೆಲವು ವರ್ಷಗಳಿಂದ ಕ್ರಿಕೆಟ್ ಸ್ವಲ್ಪ ಹೆಚ್ಚು ಸ್ನೇಹಪರವಾಗಿದೆ ಎನ್ನಬಹುದು. ಏಕೆಂದರೆ ಆಟಗಾರರು ಪ್ರಪಂಚದಾದ್ಯಂತದ ಫ್ರಾಂಚೈಸಿ ಪಂದ್ಯಾವಳಿಗಳಲ್ಲಿ ಒಟ್ಟಿಗೆ ಆಡುತ್ತಾರಲ್ಲ! ಅದರಿಂದ ಒಂದು ರೀತಿಯ ಸ್ನೇಹ ಆಟಗಾರರಲ್ಲಿ ಮೂಡಿರುತ್ತದೆ.

ಸ್ವಲ್ಪ ಕ್ರಿಕೆಟ್ ಮೈದಾನ, ಸ್ವಲ್ಪ ವಸ್ತುಸಂಗ್ರಹಾಲಯದಂತಿರುವ ಲಾರ್ಡ್ಸ್‌ನಲ್ಲಿ, ಕೊನೆಯದಿನ ಎಲ್ಲಾ 30,000 ಟಿಕೆಟ್‌ಗಳು ಮಾರಾಟವಾಗಿದ್ದವು. ರಜಾದಿನವಲ್ಲದಿದ್ದರೂ, ಮೈದಾನವು ಇತ್ತಂಡದ ಅಭಿಮಾನಿಗಳಿಂದ ಕಿಕ್ಕಿರಿದು ತುಂಬಿತ್ತು. ಗಳಿಸಿದ ಪ್ರತಿ ಬೌಂಡರಿ ಮತ್ತು ವಿಕೆಟ್ಟಿಗೂ ಅಭಿಮಾನಿಗಳ ಪ್ರೋತ್ಸಾಹದ ಧ್ವನಿ ಮೈದಾನದ ತುಂಬಾ ಪ್ರತಿಧ್ವನಿಸುತ್ತಿತ್ತು. ಇದು ಐದನೇ ದಿನ, ಬಹುಶಃ ಕೆಲವೇ ಗಂಟೆಗಳ ಪಂದ್ಯವಾಗಿರುತ್ತದೆ, ಊಟದ ವಿರಾಮದ ಹೊತ್ತಿಗೆ ಪಂದ್ಯ ಮುಗಿದೇಹೋಗುತ್ತದೆ ಎಂದು ಭಾವಿಸಲಾಗಿತ್ತಾದರೂ, ಭಾರತ ತಂಡದ ವೀರೋಚಿತ ಹೋರಾಟದಿಂದಾಗಿ, ಪಂದ್ಯ ಕೊನೆಯ ಅವಧಿಯವರೆಗೂ ಮುಂದುವರಿಯುವಂತಾಯ್ತು. ಪಂದ್ಯ ಐದನೇ ದಿನಕ್ಕೆ ಕಾಲಿಟ್ಟಾಗ, ಗೆಲುವಿಗೆ ಇಂಗ್ಲೆಂಡ್‌ಗೆ ಆರು ವಿಕೆಟ್‌ಗಳು ಬೇಕಾಗಿದ್ದವು. ಭಾರತವು ಇಡೀ ದಿನದಲ್ಲಿ ಕೇವಲ 135 ರನ್‌ಗಳನ್ನು ಗಳಿಸಬೇಕಾಗಿತ್ತು. ಸರಣಿಯಲ್ಲಿ ಇನ್ನೂ ಎರಡು ಟೆಸ್ಟ್‌ಗಳು ಬಾಕಿ ಇರುವಾಗ, 2-1 ಮುನ್ನಡೆ ಸಾಧಿಸುವಲ್ಲಿ ಇಬ್ಬರಿಗೂ ತವಕ ಇತ್ತು. ನಾಲ್ಕನೇ ದಿನ ಆತಿಥೇಯ ಭಾರತ ತಂಡವು ವಾಷಿಂಗ್ಟನ್ ಸುಂದರ್ ಅವರ ಸುಂದರ ಸ್ಪಿನ್ ದಾಳಿಯಿಂದ, ಇಂಗ್ಲೆಂಡ್ ತಂಡವನ್ನು ಆಲೌಟ್ ಮಾಡಿ, ಆ ತಂಡದ ಮಾನಸಿಕ ಸ್ಥೈರ್ಯವನ್ನು ಅಕ್ಷರಶಃ ನುಚ್ಚುನೂರು ಮಾಡಿಬಿಟ್ಟಿತ್ತು. ಈ ಪಂದ್ಯವನ್ನು ಆಂಗ್ಲರು ಗೆಲ್ಲಲು ಪವಾಡವೇ ಅಗಬೇಕು ಎನ್ನುವಂತಿತ್ತು, ಆದರೆ ಆ ಪವಾಡ ಆಗೇಹೋಯ್ತು.

ಕೇವಲ 193 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಪ್ರವಾಸಿ ಭಾರತ ತಂಡವು, ನಾಲ್ಕನೇ ದಿನದ ಕೊನೆಗೆ ಹೆಚ್ಚೂ ಕಡಿಮೆ 60 ರನ್ ಗಳಿಸುವಷ್ಟರಲ್ಲಿ 4 ಪ್ರಮುಖ ವಿಕೆಟ್‌ಗಳನ್ನು ಕೈಚೆಲ್ಲಿಯೂ ಆಗಿತ್ತು. ಅಗ್ರಕ್ರಮಾಂಕದ ನಾಲ್ಕು ಆಟಗಾರರು ಪೆವಿಲಿಯನ್ ಗೂಡು ಸೇರಿಬಿಟ್ಟಿದ್ದರು. ಆ ಘಟ್ಟದಲ್ಲಿ, ಭಾರತೀಯ ಆಟಗಾರರಿಗೆ ನಾಲ್ಕನೇ ದಿನ ನಾವು ಆಂಗ್ಲರನ್ನು ಆಲೌಟ್ ಮಾಡದಿದ್ದರೇ ಒಳ್ಳೆಯದಿತ್ತೇನೋ ಎಂದು ಅನಿಸಿರಲಿಕ್ಕೆ ಸಾಕು!

ಪ್ರತಿಭಾವಂತ ಆರಂಭಿಕ ದಾಂಡಿಗ ಯಶಸ್ವೀ ಜೈಸ್ವಾಲ್, ಈ ಬಾರಿಯಾದರೂ ಆಡುತ್ತಾರೆ ಎಂದು ನಿರೀಕ್ಷಿಸಲಾಗಿದ್ದ ಕನ್ನಡಿಗ ಕರುಣ್ ನಾಯರ್ ಹಾಗೂ ಹಿಂದಿನ ಪಂದ್ಯದಲ್ಲಿ ದ್ವಿಶತಕ ಬಾರಿಸಿದ್ದ ನಾಯಕ ಶುಭಮನ್ ಗಿಲ್ ನೋಡನೋಡುತ್ತಿದ್ದಂತೆ ತಮ್ಮ ವಿಕೆಟ್ ಚೆಲ್ಲಿಬಿಟ್ಟಿದ್ದರು. ಶನಿವಾರ ಸಂಜೆ ಜ್ಯಾಕ್ ಕ್ರಾಲೆ ಸಮಯ ವ್ಯರ್ಥಮಾಡಲು ಪ್ರಯತ್ನಿಸಿದಾಗ ಭಾರತ ಆಕ್ರೋಶಗೊಂಡಿತು. ಆದರೆ, ಭಾನುವಾರ ಸಂಜೆ, ರಾತ್ರಿ ಕಾವಲುಗಾರನಾಗಿ ಬಂದಿದ್ದ ಆಕಾಶ್ ದೀಪ್ ಅದೇ ರೀತಿ ಕಾಲ ವ್ಯರ್ಥಮಾಡಲಾಗದೇ ದಿನದ ಕೊನೆಯ ಕ್ಷಣದಲ್ಲಿ ತಮ್ಮ ಆಫ್ ಸ್ಟಂಪ್ ಅನ್ನು ಬೆನ್ ಸ್ಟೋಕ್ಸ್‌ಗೆ ಒಪ್ಪಿಸಿಬಿಟ್ಟಿದ್ದರು.

ಎಂದಿನಂತೆ, ಭಾರತ ತಂಡದ ಸ್ಥಿರತೆಯಲ್ಲಿ ರಾಹುಲ್ ಪ್ರಮುಖ ಪಾತ್ರ ವಹಿಸುತ್ತಾರೆ ಎಂದುಕೊಂಡರೆ, ನಾಲ್ಕನೇ ದಿನದಾಟದ ಕೊನೆಗೆ 33 ರನ್‌ಗಳೊಂದಿಗೆ ಅಜೇಯರಾಗಿದ್ದ ಕೆ.ಎಲ್. ರಾಹುಲ್, ಐದನೇ ದಿನ ಬೆಳಗ್ಗೆ ಕೇವಲ ಐದು ರನ್ ಸೇರಿಸುವಷ್ಟರಲ್ಲಿ ವೋಕ್ಸ್‌ಗೆ ಔಟ್ ಆದರು. ಉತ್ತಮ ಫಾರ್ಮ್‌ನಲ್ಲಿರುವ ರಿಷಭ್ ಪಂತ್ ಆಡುತ್ತಾರೆ ಎಂದುಕೊಂಡರೆ, ಅದೂ ಆಗಲಿಲ್ಲ. ಅವರು ಆಡಿದರೆ ಕಣ್ಣು ಮಿಟುಕಿಸುವುದರೊಳಗೆ ಈ ಪಂದ್ಯವನ್ನು ಗೆಲ್ಲಬಹುದು ಎಂದುಕೊಂಡವರಿಗೆ ನಿರಾಸೆಯಾಯಿತು. ಅಂದು ಯಾರು ಒತ್ತಡವನ್ನು ಉತ್ತಮವಾಗಿ ನಿಭಾಯಿಸುತ್ತಾರೆ ಎಂಬುದು ಮುಖ್ಯವಾಗಿತ್ತು. ಇಂಗ್ಲೆಂಡ್ ತಂಡವು, ತವರು ತಂಡ ಮತ್ತು ಸ್ವಲ್ಪ ಹೆಚ್ಚು ಅನುಭವಿ ತಂಡ ಎಂದು ಪರಿಗಣಿಸಲಾಗಿತ್ತಾದರೂ, ಅಂದು ಪಂತ್ ಎಂದಿನಂತೆ ಆಕ್ರಮಣಕಾರಿಯಾಗಿ ಆಡಿದರೆ ಇದ್ಯಾವುದೂ ಮುಖ್ಯವಾಗುತ್ತಿರಲಿಲ್ಲ.

ಈ ಮೈದಾನದಲ್ಲಿ, ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಒಂದು ತಂಡ ಮಾತ್ರ, 387ಕ್ಕೂ ಹೆಚ್ಚು ರನ್ ಗಳಿಸಿ ಗೆಲುವು ಸಾಧಿಸಿದೆ. ಭಾರತವು ಇದೇ ರೀತಿಯ ಆಟವನ್ನು ಪುನರಾವರ್ತಿಸಿದ್ದರೆ, 95 ವರ್ಷಗಳ ಹಿಂದೆ ಡೊನಾಲ್ಡ್ ಬ್ರಾಡ್ಮನ್, ಬ್ಯಾಗಿ ಗ್ರೀನ್ ಕಾಲದಲ್ಲಿ ಆಸ್ಟ್ರೇಲಿಯಾದ ಸಾಧನೆಯನ್ನು ಸರಿಗಟ್ಟಬಹುದಾಗಿತ್ತು. ನಮಗೆ ಇಂಥ ಸುವರ್ಣಾವಕಾಶ ಸಿಕ್ಕಿರುವುದಕ್ಕೆ ಭಾಗಶಃ ಆಫ್-ಸ್ಪಿನ್ನರ್ ವಾಷಿಂಗ್ಟನ್ ಸುಂದರ್ ಕಾರಣರಾಗಿದ್ದರು. ಅವರು ಇಂಗ್ಲೆಂಡ್‌ನ ಎರಡನೇ ಇನ್ನಿಂಗ್ಸ್‌ನಲ್ಲಿ 4-22 ವಿಕೆಟ್ ಪಡೆದು ಪಂದ್ಯದ ದಿಕ್ಕನ್ನೇ ಬದಲಿಸಿದ್ದರು. ಆದರೆ, ಕೊನೆಗೆ ಆಗಿದ್ದೇ ಬೇರೆ.

ಇಂಗ್ಲೆಂಡ್ ವಿರುದ್ಧ ನಡೆಯುತ್ತಿರುವ ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಭಾರತ ತಂಡ ಲಾರ್ಡ್ಸ್‌ನಲ್ಲಿ ಸೋತಿದ್ದಕ್ಕೆ, ಕ್ರಿಕೆಟ್ ತಜ್ಞರುಗಳು ವಿವಿಧ ಕಾರಣಗಳನ್ನು ನೀಡಿದ್ದಾರೆ. ಮೊದಲ ಇನ್ನಿಂಗ್ಸ್‌ನಲ್ಲಿ ಪಂತ್ ಅವರ ಅನವಶ್ಯಕ ರನೌಟ್ ಮತ್ತು ಎರಡೂ ಇನ್ನಿಂಗ್ಸ್‌ಗಳಲ್ಲಿ ಕರುಣ್ ನಾಯರ್ ಅವರ ನೀರಸ ಪ್ರದರ್ಶನ ಭಾರತಕ್ಕೆ ಭಾರಿ ಹೊಡೆತ ನೀಡಿತು ಎಂದು ವಿಶ್ಲೇಷಿಸಿದರು. ಆದಾಗ್ಯೂ, 193 ರನ್‌ಗಳನ್ನು ಬೆನ್ನಟ್ಟುವಾಗ ಜೈಸ್ವಾಲ್ ವಿಕೆಟ್ ಬೇಗನೆ ಕಳೆದುಕೊಂಡರೂ, ಎರಡನೇ ಇನ್ನಿಂಗ್ಸ್‌ನಲ್ಲಿ ಭಾರತ ಮುನ್ನಡೆಯುತ್ತಿತ್ತು. ಆದರೆ ಕರುಣ್ ನಾಯರ್ ಅವರ ಆ ಎಲ್‌ಬಿಡಬ್ಲ್ಯೂ ಭಾರತ ಮತ್ತು ಇಂಗ್ಲೆಂಡ್ ಪಂದ್ಯದ ದಿಕ್ಕನ್ನೇ ಬದಲಾಯಿಸಿತು. ಇಂಗ್ಲೆಂಡ್, ಆಟಕ್ಕೆ ಮತ್ತೆ ಚೆನ್ನಾಗಿ ಮರಳಿತು ಮತ್ತು ಅದರ ನಂತರ, ಅವರು ಚೆನ್ನಾಗಿ ಬೌಲಿಂಗ್ ಮಾಡಲು ಪ್ರಾರಂಭಿಸಿದರು. ಮೈದಾನದಲ್ಲಿ ಬೌಲರ್‌ಗಳ ತೀವ್ರತೆ, ಅವರ ಫೀಲ್ಡರ್‌ಗಳು ತೋರಿಸಿದ ಚುರುಕುತನ ಅದ್ಭುತವಾಗಿತ್ತು. ಟೆಸ್ಟ್ ಕ್ರಿಕೆಟ್‌ನಲ್ಲಿ ನೋಡಲು ಬಯಸುವುದು ಅದನ್ನೇ ತಾನೆ? ಎಲ್ಲಾ 11 ಆಟಗಾರರು ಒಟ್ಟಾಗಿ ಸೇರಿದರೆ ಮಾತ್ರ ಟೆಸ್ಟ್ ಪಂದ್ಯವನ್ನು ಗೆಲ್ಲಲು ಸಾಧ್ಯವಾಗುತ್ತದೆ. ಅಂದು ಮೈದಾನದಲ್ಲಿ ಆಂಗ್ಲರ ಆಕ್ರಮಕ ವರ್ತನೆಯನ್ನು ನೋಡಲು ತುಂಬಾ ಸಂತೋಷವಾಗುತ್ತಿತ್ತು. ಭಾರತ ನಿಜವಾಗಿಯೂ ಉತ್ತಮವಾಗಿ ಹೋರಾಡಿದರೂ, ಮತ್ತೊಮ್ಮೆ, ಗೆಲುವಿನ ಕೀರ್ತಿ ಮಾತ್ರ ಇಂಗ್ಲೆಂಡ್ ತಂಡಕ್ಕೆ ಸೇರಿತು ಎಂದು ತಜ್ಞರುಗಳು ಅಭಿಪ್ರಾಯಪಟ್ಟರು.

ಗೆಲ್ಲಬಹುದಾಗಿದ್ದ ಈ ಪಂದ್ಯವನ್ನು ಭಾರತ ಎಲ್ಲಿ ಸೋತಿತು ಎಂಬುದರ ಕುರಿತು ನೋಡುವಾಗ, ಕೆ.ಎಲ್. ರಾಹುಲ್ ಮತ್ತು ರಿಷಭ್ ಮೊದಲ ಇನ್ನಿಂಗ್ಸ್‌ನಲ್ಲಿ ಬ್ಯಾಟಿಂಗ್ ಮಾಡುತ್ತಿದ್ದಾಗ, ಅವರ ಪಾಲುದಾರಿಕೆ ಅದ್ಭುತವಾಗಿತ್ತು. ಅವರು ಸುಂದರವಾಗಿ ಬ್ಯಾಟಿಂಗ್ ಮಾಡಿದರು. ಆದರೆ ಭಾರತಕ್ಕೆ 75-100 ರನ್‌ಗಳ ಕೊರತೆಯಾಯ್ತು. 4 ಮತ್ತು 5ನೇ ದಿನ ಬ್ಯಾಟಿಂಗ್ ಮಾಡುವುದು ಸ್ವಲ್ಪ ಕಷ್ಟ ಎಂದು ನಮಗೆಲ್ಲರಿಗೂ ತಿಳಿದಿದೆ. ರನ್ ಗಳಿಸುವುದು ಸುಲಭವಲ್ಲ. ಹೌದು, ಇಂಗ್ಲೆಂಡ್ ನಿಜವಾಗಿಯೂ ಚೆನ್ನಾಗಿ ಬೌಲಿಂಗ್ ಮಾಡಿತು. ಆದರೆ ಭಾರತ ಮೊದಲ ಇನ್ನಿಂಗ್ಸ್‌ನಲ್ಲಿ ಆ ದೊಡ್ಡ ಸ್ಕೋರ್ ಗಳಿಸುವ ಅವಕಾಶವನ್ನು ಕಳೆದುಕೊಂಡಿರುವುದೇ ಸೋಲಿಗೆ ಪ್ರಮುಖ ಕಾರಣವಾಯ್ತು ಎಂದು ವಿಶ್ಲೇಷಕರು ಭಾವಿಸುತ್ತಾರೆ. ಇದರ ಜತೆಗೆ ಇನ್ನೂ ಕೆಲವು ಕಾರಣಗಳನ್ನು ತಜ್ಞರುಗಳು ಗುರುತಿಸುತ್ತಾರೆ. ಭಾರತದ ರಕ್ಷಣಾತ್ಮಕ ವಿಧಾನ, ಎಕ್ಸ್‌ಟ್ರಾಗಳನ್ನು ಬಿಟ್ಟುಕೊಡುವುದು, ಪಂತ್-ರಾಹುಲ್ ರನೌಟ್, ಅಗ್ರ ಕ್ರಮಾಂಕದ ಕುಸಿತವು ತಂಡಕ್ಕೆ ದೊಡ್ಡ ಪೆಟ್ಟನ್ನು ಕೊಟ್ಟಿತು. ಅಷ್ಟೇ ಅಲ್ಲದೆ, ಅಂತಿಮ ಇನ್ನಿಂಗ್ಸ್‌ನಲ್ಲಿ 193 ರನ್‌ಗಳ ಗುರಿ ಬೆನ್ನತ್ತಿದ ಭಾರತ, ಅಗತ್ಯಕ್ಕಿಂತ ಹೆಚ್ಚಿನದಾದ ರಕ್ಷಣಾತ್ಮಕ ಆಟ ಪ್ರದರ್ಶಿಸಿತು. ಅವರ ಶಾಟ್ ಆಯ್ಕೆಗಳು, ಇಂಗ್ಲಿಷ್ ಬೌಲರ್‌ಗಳ ಪ್ರಾಬಲ್ಯವನ್ನು ಹೆಚ್ಚಿಸಿತು. ಅಪ್ರತಿಮ ಹೋರಾಟ ನಡೆಸಿ ಅರ್ಧಶತಕ ಗಳಿಸಿ ಅಜೇಯರಾಗುಳಿದ ರವೀಂದ್ರ ಜಡೇಜಾ ಮತ್ತು ಕೆ.ಎಲ್. ರಾಹುಲ್ 39 ರನ್ ಗಳಿಸಿರುವುದನ್ನು ಹೊರತುಪಡಿಸಿ, ಇತರ ಯಾವುದೇ ಬ್ಯಾಟ್ಸ್‌ಮನ್‌ಗಳು, ಇಂಗ್ಲಿಷ್ ವೇಗದ ದಾಳಿಯ ಮುಂದೆ ಸುಲಭವಾಗಿ ಮಂಡಿಯೂರಿಬಿಟ್ಟರು. ಭಾರತದ ಆರಂಭ ಮತ್ತು 3ನೇ ಕ್ರಮಾಂಕವು ಉತ್ತಮ ಆರಂಭವನ್ನು ನೀಡಲು ವಿಫಲವಾಯಿತು. ಯಶಸ್ವಿ ಜೈಸ್ವಾಲ್ 13 ಮತ್ತು 0 ರನ್ ಗಳಿಸಿದರೆ, ಕರುಣ್ ನಾಯರ್ ಉತ್ತಮ ಆರಂಭ ಪಡೆದರೂ ದೊಡ್ಡ ಸ್ಕೋರ್ ಗಳಿಸಲು ವಿಫಲರಾದರು. ಆಕಾಶ್ ದೀಪ್ ಅವರನ್ನು ರಾತ್ರಿ ಕಾವಲುಗಾರನಾಗಿ ಕಳುಹಿಸುವ ಭಾರತದ ಕಾರ್ಯತಂತ್ರವೂ ಹಿನ್ನಡೆ ಅನುಭವಿಸಿತು. ಭಾರತೀಯ ಬೌಲರ್‌ಗಳು ಮೊದಲ ಇನ್ನಿಂಗ್ಸ್‌ನಲ್ಲಿ 31 ಮತ್ತು ಎರಡನೇ ಇನ್ನಿಂಗ್ಸ್‌ನಲ್ಲಿ 32 ಹೆಚ್ಚುವರಿ ರನ್‌ಗಳನ್ನು ಬಿಟ್ಟುಕೊಟ್ಟರು. ಒಟ್ಟು 63 ಎಕ್ಸ್‌ಟ್ರಾ ರನ್ನುಗಳನ್ನು ಉಡುಗೊರೆಯಾಗಿ ನೀಡಲಾಯಿತು, ಇದು ಕೊನೆಯಲ್ಲಿ ಭಾರತದ ಸೋಲಿಗೆ ನಿರ್ಣಾಯಕವಾಯಿತು.

ತನ್ನ ಕಣ್ಣ ಮುಂದೆ ವಿಕೆಟ್ಟಿನ ಮೇಲೆ ವಿಕೆಟ್ಟುಗಳು ಬೀಳುತ್ತಿದ್ದರೂ, ತಾನು ಮಾತ್ರ ಗಟ್ಟಿಯಾಗಿ ನಿಂತು ಹೋರಾಡಿದ ರವೀಂದ್ರ ಜಡೇಜಾ ಭಾರತದ ಭರವಸೆಯನ್ನು ಹೆಚ್ಚಿಸಿದರು. ಭಾರತದ 10ನೇ ಕ್ರಮಾಂಕದ ಆಟಗಾರ ಜಸ್ಪ್ರೀತ್ ಬುಮ್ರಾ 54 ಮತ್ತು 11ನೇ ಕ್ರಮಾಂಕದ ಮೊಹಮ್ಮದ್ ಸಿರಾಜ್ ಅವರು 30 ಬೆಂಕಿಯುಂಡೆಯಂತಿರುವ ಬಾಲುಗಳನ್ನು ಎದುರಿಸಿ ಜಡೇಜಾ ಅವರಿಗೆ ನೀಡಿದ ಬೆಂಬಲವೇನಿದೆ, ಅದು ಅವಿಸ್ಮರಣೀಯವಾಗಿತ್ತು. ಈ ಬಾಲಂಗೋಚಿಗಳ ಆಟವಂತೂ ನಿಜಕ್ಕೂ ಅಗ್ರ ಕ್ರಮಾಂಕದ ಆಟಗಾರರಿಗೆ ನಾಚಿಕೆ ಹುಟ್ಟಿಸುವಂತಿತ್ತು.

5ನೇ ದಿನದಾಟದಲ್ಲಿ ಜೋಫ್ರಾ ಆರ್ಚರ್ ಮತ್ತು ಬೆನ್ ಸ್ಟೋಕ್ಸ್, ರಿಷಭ್ ಪಂತ್ ಮತ್ತು ಕೆ.ಎಲ್. ರಾಹುಲ್ ಅವರನ್ನು ಔಟ್ ಮಾಡಿದಾಗ ಇಂಗ್ಲೆಂಡ್ ಸ್ಮರಣೀಯ ಗೆಲುವು ಹೆಚ್ಚೂ ಕಡಿಮೆ ಖಚಿತವಾಗಿತ್ತು. ವಾಷಿಂಗ್ಟನ್ ಸುಂದರ್ ಅವರ ಪತನವಾದಮೇಲಂತೂ, ಪಂದ್ಯ ಕೇವಲ ಔಪಚಾರಿಕವಾಗಿಬಿಟ್ಟಿತು. 82 ರನ್ನುಗಳು ಆಗುವಷ್ಟರಲ್ಲಿ ಭಾರತದ ಏಳು ವಿಕೆಟ್ ಪತನವಾಗಿಹೋಗಿತ್ತು. ಇಷ್ಟಾದರೂ ಗೆಲುವಿನ ಆಸೆಯನ್ನು ಕೈಚೆಲ್ಲದ ಜಡೇಜಾ, ರೆಡ್ಡಿಯವರ ಜತೆಗೂಡಿ 30 ರನ್ ಸೇರಿಸಿದರು. ನಂತರ, ಬುಮ್ರಾ ಜತೆಗೂಡಿ 35 ರನ್ ಹಾಗೂ ಸಿರಾಜ ಜತೆಗೂಡಿ 23 ರನ್ನುಗಳನ್ನು ನಿಧಾನವಾಗಿ ಕಲೆಹಾಕಿ ತಂಡವನ್ನು ಗೆಲುವಿನ ತೋರಣಬಾಗಿಲಿನವರೆಗೆ ತಂದು ನಿಲ್ಲಿಸಿಬಿಟ್ಟರು. ಜಡೇಜಾ ಅವರ ಈ ಕಠಿಣ ಹೋರಾಟದ ನಡುವೆಯೂ, ತಂಡದ ಗೆಲುವಿನ ದೋಣಿ ದಡ ಸೇರಲು ಸಾಧ್ಯವಾಗಲೇ ಇಲ್ಲ. ಪಂದ್ಯದಲ್ಲಿ ಇಂಗ್ಲೆಂಡ್ 22 ರನ್ನುಗಳ ಸ್ಮರಣೀಯ ಜಯ ಸಾಧಿಸಿ, ಐದು ಪಂದ್ಯಗಳ ಆಂಡರ್ಸನ್-ತೆಂಡೂಲ್ಕರ್ ಟ್ರೋಫಿ ಸರಣಿಯಲ್ಲಿ 2-1 ಮುನ್ನಡೆ ಸಾಧಿಸಿತು.

ಜಡೇಜಾ, ಬುಮ್ರಾ ಮತ್ತು ಸಿರಾಜ್ ಅವರ ಅಪ್ರತಿಮ ಹೋರಾಟದಿದಾಗಿ ನಮಗೆ ಈ ಪಂದ್ಯ ಬಹಳಕಾಲ ನೆನಪಿನಲ್ಲುಳಿಯಲಿದೆ. 30 ಬಾಲುಗಳನ್ನು ತಡೆದು ನಿಂತಿದ್ದ ಸಿರಾಜ್, ಆ ಬಾಲನ್ನೂ ಯಶಸ್ವಿಯಾಗಿಯೇ ತಡೆದಿದ್ದರು ಪಾಪ. ಆದರೆ ಅದು ನಿಧಾನವಾಗಿ ಉರುಳಿಕೊಂಡು ಹೋಗಿ ವಿಕೆಟ್ಟಿಗೆ ಮುತ್ತಿಕ್ಕಿ, ಬೇಲ್ಸ್ ಕೆಳಗೆ ಬಿತ್ತು. ತನ್ನಿಂದ ಸೋಲಾಯಿತಲ್ಲಾ ಎನ್ನುವ ಭಾವನೆಯಿಂದ ಸಿರಾಜ್ ಕಣ್ಣೀರಾದರು. ಜಡೇಜಾ ಮಾತ್ರ ಸ್ತಬ್ಧವಾಗಿ ನಿಂತೇ ಇದ್ದರು.

ತನ್ನ ಅವಿಸ್ಮರಣೀಯ ಗೆಲುವನ್ನು ಸಂಭ್ರಮಿಸುವುದನ್ನೂ ಬಿಟ್ಟು, ನಾಯಕ ಉಪನಾಯಕನೂ ಸೇರಿ ಇಂಗ್ಲಿಷ್ ತಂಡದ ಪ್ರಮುಖ ಆಟಗಾರರು, ಸೋಲಿನ ಆಘಾತದಲ್ಲಿದ್ದ ಜಡೇಜಾ ಮತ್ತು ಸಿರಾಜ್ ಅವರನ್ನು ಸಂತೈಸಲು ಧಾವಿಸಿದ ಪರಿಯೇನಿದೆ, ಅದು, ಕ್ರಿಕೆಟ್ ಆಟದ, ಆಂಗ್ಲ ಆಟಗಾರರ ಮತ್ತು ಲಾರ್ಡ್ಸ್ ಮೈದಾನದ ಗೌರವವನ್ನು ಹೆಚ್ಚಿಸಿತು. ಪಂದ್ಯವನ್ನೊಂದಲ್ಲದೇ, ಮಾನವೀಯತೆಯನ್ನು ಮೆರೆದು, ಜಾಗತಿಕವಾಗಿ ಕ್ರಿಕೆಟ್ ಪ್ರೇಮಿಗಳ ಹೃದಯವನ್ನೂ ಅಂದು ಆಂಗ್ಲರು ಗೆದ್ದುಬಿಟ್ಟರು. ಈ ಪಂದ್ಯ ಸ್ಮರಣೀಯವಾಗಲು ಈ ಸಂತೈಕೆಯ ಘಟನೆಯೂ ಕಾರಣವಾಯ್ತು.

ಸರ್ಕ್ಯುಲೇಶನ್ ಕಡಿಮೆ ಆಗಿರೋ ಡೈಲಿ ಪತ್ರಿಕೆ: 'ವೀಕ್'ಲಿ

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಚಿತ್ರರಂಗದಲ್ಲಿ ಈಗ ಹೊಸದೊಂದು ಚಾಳಿ ಶುರುವಾಗಿದೆ. ಅದು ಚಿತ್ರದ ಕಲೆಕ್ಷನ್ ವಿಚಾರದ್ದು. ಮೊದಲೆಲ್ಲ ಸಿನಿಮಾ ಒಂದು, 100 ದಿನ ಓಡಿದ್ರೂ ನಿರ್ಮಾಪಕರು ಬಾಯಲ್ಲಿ ಕೋಟಿ ಅನ್ನೋಕೆ ಮುಂಚೆ ಕೋಟಿ ಸಲ ಯೋಚನೆ ಮಾಡ್ತಾ ಇದ್ರು. ಈಗ ಮಾತೆತ್ತಿದರೆ ಬಾಯಿಗೆ ಬಂದ ಹಾಗೆ ಮೊದಲ ದಿನವೇ ಕೋಟಿಗಟ್ಟಲೆ ಲೆಕ್ಕದಲ್ಲಿ ಮಾತಾಡ್ತಾರೆ. ಆದ್ರೆ ಇದ್ಯಾವುದೂ ಅಫಿಷಿಯಲ್ ಹೇಳಿಕೆ ಅಲ್ಲ. ಕೆಲವು 'ಬಿ' ಮತ್ತು 'ಸಿ' ಗ್ರೇಡ್ ವೆಬ್‌ಸೈಟುಗಳು, ಯುಟ್ಯೂಬ್ ಚಾನೆಲ್ಲುಗಳು ಮೊದಲ ದಿನದ ಮಾರ್ನಿಂಗ್ ಶೋ ಅಥವಾ ಈಗಿನ ಟ್ರೆಂಡ್‌ನಂತೆ ಅರ್ಲಿ ಮಾರ್ನಿಂಗ್ ಶೋ ಮುಗಿಯೋ ಮೊದಲೇ ಕೋಟಿಗಳ ಲೆಕ್ಕ ಬರೆಯೋಕೆ ಶುರುಮಾಡಿರ್ತವೆ. ಇದಕ್ಕೆ ಚಿತ್ರದ ನಿರ್ಮಾಪಕರು ಹೌದು ಅಂತಲೂ ಹೇಳಲ್ಲ, ಇಲ್ಲ ಅಂತಲೂ ಹೇಳಲ್ಲ. ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ, 'ಹೌದಾ, ಅಷ್ಟೊಂದ್ ಕಲೆಕ್ಷನ್ ಆಗಿದೆಯಾ, ನಮಗೇ ಗೊತ್ತಿಲ್ಲ' ಅಂತ ನಿರ್ಮಾಪಕರೇ ಹೇಳ್ತಾರೆ. ಪ್ರಶಾಂತ್ ನೀಲ್ ಅವರ 'ಸಲಾರ್' ಚಿತ್ರದ ಕಥೆ ಇದೇ ಆಗಿತ್ತು. 50 ಕೋಟಿ, 100 ಕೋಟಿ ಅಂತ ಶುರುವಾಗಿ 1000 ಕೋಟಿ ಮಾಡುತ್ತೆ ಅಂತೆಲ್ಲಾ ರಿಪೋರ್ಟುಗಳು ಬಂದಿದ್ದವು. ಅದಾದ ನಂತರ ನಿರ್ಮಾಪಕರು ತಮ್ಮ ಅಫಿಷಿಯಲ್ ಸೋಷಿಯಲ್ ಮೀಡಿಯಾ ಪೇಜ್‌ಗಳಿಂದ ಅಂಥ ರಿಪೋರ್ಟ್‌ಗಳನ್ನು ತೆಗೆದುಹಾಕಿದ್ದರು. ಇವೆಲ್ಲ ಏನಿದ್ರೂ ಚಿತ್ರಮಂದಿರಕ್ಕೆ ಪ್ರೇಕ್ಷಕರನ್ನು ಸೆಳೆಯಲು ಮಾಡುವ ತಂತ್ರ ಎನ್ನಲಾಗುತ್ತಿದೆ. ಇದಕ್ಕೆ ಸಹಾಯ ಮಾಡುವಂತೆ ಕಾರ್ಪೋರೇಟ್ ಬುಕ್ಕಿಂಗ್ ಎನ್ನುವ ಹೊಸ ದಂಧೆ ಶುರುವಾಗಿದೆ. ಇದು ಸುಳ್ಳು ಟಿಕೆಟ್ ಬುಕ್ಕಿಂಗ್ ತೋರಿಸುವ ಕೆಲಸ ಎಂದು ಸಿನಿಪಂಡಿತರು ಹೇಳುತ್ತಿದ್ದಾರೆ. ಅದಾದ ನಂತರ 'ಸಲಾರ್' ಚಿತ್ರ ಇದ್ದಕ್ಕಿದ್ದಂತೆ ತನ್ನ ಪ್ರಚಾರ ನಿಲ್ಲಿಸಿತ್ತು. ಅದರ ಬೆನ್ನಲ್ಲೇ, ಜನವರಿ ಆರಂಭದಲ್ಲೇ 'ಸಲಾರ್' ಒಟಿಟಿಗೆ ಬಂದಿತ್ತು. ಇದೆಲ್ಲದರ ನಡುವೆ ಒಂದು ಸಿನಿಮಾ ಎಷ್ಟರ ಮಟ್ಟಿಗೆ ಹಿಟ್ ಆಗಿದೆ ಅನ್ನೋದು ನಮ್ಮ ಊಹೆಗೆ ಬಿಟ್ಟಿದ್ದು. ನಂತರ ನಮ್ಮ ಕನ್ನಡದ 'ಕಾಟೇರ' ಚಿತ್ರ ಕೂಡಾ ಇದೇ ರೀತಿಯ ಪ್ರಚಾರದ ಹಾದಿ ಹಿಡಿದಿತ್ತು. ಈ ಪರಂಪರೆ ಇನ್ನೂ ಮುಂದುವರಿದಿದೆ. ಇದನ್ನೆಲ್ಲಾ ನೋಡಿ, ಒಂದು ಸಿನಿಮಾದ ಕಲೆಕ್ಷನ್ ಅಸಲಿಯತ್ತು ಗೊತ್ತಾಗುವುದು ಹೇಗೋ ಅಂತಿದ್ದಾನೆ ಕನ್ನಡ ಪ್ರೇಕ್ಷಕ.

ಲೂಸ್ ಟಾಕ್

▸▸ ತೇಜಸ್ವಿ ಸೂರ್ಯ

- **ಏನ್ ಸರ್, ಇತ್ತೀಚೆಗೆ ಅಮೆರಿಕಕ್ಕೆ ಹೋಗಿದ್ದಾಗ ಡೊನಾಲ್ಡ್ ಟ್ರಂಪ್ ನಿಮ್ಮನ್ನ 'ಗೆಟ್ ಔಟ್' ಅಂತ ಡೋರ್ ತೋರಿಸಿದ್ರಂತೆ?**
- ಅವೆಲ್ಲ ಸುಳ್ಳು, ಎಮರ್ಜೆನ್ಸಿ ಡೋರ್ ಯಾವುದು ಅಂತ ನಂಗೊತ್ತಿಲ್ವಾ? ಅವರೇನೂ ಡೋರ್ ತೋರಿಸಿಲ್ಲ, ನಾನೇ ಓಪನ್ ಮಾಡ್ಕೊಂಡು ಬಂದೆ.
- **ಸರಿ, ಅಂತೂ ಎಮರ್ಜೆನ್ಸಿ ಅಂದ್ರೆ, ಇಂದಿರಾ ಗಾಂಧಿ ಬಿಟ್ರೆ ನೀವೇ ನೆಕ್ಸ್ಟ್ ಎಲ್ಲರಿಗೂ ನೆನಪಾಗೋದು ಅಲ್ವಾ?**
- ಓಹ್ ಥ್ಯಾಂಕ್ಸ್, ಅವರ ಜತೆ ನನ್ನನ್ನ ಕಂಪೇರ್ ಮಾಡಿದ್ದಕ್ಕೆ
- **ಆದ್ರೆ ತೇಜಸ್ವಿ ಸೂರ್ಯ ಅಂದ್ರೆ ಅವರ ಜತೆ ಜಮೀರ್ ಅಹ್ಮದ್ ಕೂಡಾ ನೆನಪಾಗ್ತಾರೆ ಬಿಡಿ.**
- ಏನ್ರೀ ಇದು, ಒಂದೇ ಸಲ ಇಂದಿರಾ ಗಾಂಧಿಯಿಂದ ಜಮೀರ್ ಅಹ್ಮದ್ ಲೆವೆಲ್‌ಗೆ ಇಳಿಸಿಬಿಟ್ರಲ್ಲ. ದೇವರು ಮೆಚ್ತಾನಾ..
- **ಸೂರ್ಯ ಅಂದಮೇಲೆ ಬೆಳಗ್ಗೆ ಹುಟ್ಟೋ ಹಾಗೆ ಸಂಜೆ ಮುಳುಗಲೇಬೇಕಲ್ಲ?**
- ಮುಳುಗ್ದೇ ಇದ್ರೂ, ನೀವು ನನ್ನ ಮುಳುಗಿಸ್ತೀರ ಬಿಡಿ
- **ಅದ್ಸರಿ, ಯುವ ಎಂಪಿಗಳು ಅಂತ ಇದ್ದಿದ್ದು ನೀವು ಮತ್ತು ಪ್ರತಾಪ್ ಸಿಂಹ. ಆದರೆ ಅವರು ತಮ್ಮ ಕೆಲಸದಿಂದ ಸುದ್ದಿ ಮಾಡಿದ್ರೆ ನೀವು ಬರೀ ಮಾತಿನಿಂದ ಸುದ್ದಿಯಲ್ಲಿರ್ತೀರ ಅಲ್ವಾ?**
- ಮತ್ತೆ, ಎಲ್ಲರೂ ಕೆಲಸ ಮಾಡ್ಕೊಂಡ್ ಕೂತ್ಕೊಂಡ್ರೆ ಮಾತಾಡೋರ್ ಯಾರು?

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮು ಯಾವಾಗ್ಲೂ ಸಿಕ್ಕಾಪಟ್ಟೆ ಕುಡೀತಿದ್ದ. ಕುಡಿದರೆ ಅವನಿಗೆ ಮೈಮೇಲೆ ಜ್ಞಾನವೇ ಇರುತ್ತಿರಲಿಲ್ಲ. ತನ್ನ ಸುತ್ತಮುತ್ತ ಅಷ್ಟೇ ಅಲ್ಲ, ತನಗೆ ಏನಾಗ್ತಾ ಇದೆ ಅನ್ನೋದೂ ಅವನಿಗೆ ಗೊತ್ತಾಗ್ತಾ ಇರಲಿಲ್ಲ. ಖೇಮು ಮನೆಯಲ್ಲೇ ಕುಡಿಯುತ್ತಿದ್ದರಿಂದ ಖೇಮುಶ್ರೀಗೆ ಇದರ ಅನುಭವ ಹಲವಾರು ಬಾರಿ ಆಗಿ ಬೇಸತ್ತುಹೋಗಿದ್ದಳು. ಆದರೆ ಖೇಮು ಅದನ್ನು ನಂಬಲು ತಯಾರಿರುತ್ತಿರಲಿಲ್ಲ. 'ನಾನು ಎಷ್ಟೇ ಕುಡಿದರೂ ಅಲರ್ಟ್ ಆಗಿ ಇರ್ತೀನಿ, ನಂಗೆಲ್ಲಾ ಗೊತ್ತಾಗುತ್ತೆ' ಅಂತನೇ ವಾದಿಸ್ತಾ ಇದ್ದ. ಒಂದು ದಿನ ಖೇಮುಶ್ರೀ, ತನ್ನ ಗಂಡ ಕುಡಿದ ಮೇಲೆ ಅವನಿಗೆ ಮೈಮೇಲೆ ಜ್ಞಾನ ಇರಲ್ಲ ಅನ್ನೋದನ್ನ ಪ್ರೂವ್ ಮಾಡೇ ಮಾಡ್ತೀನಿ ಅಂತ ಚಾಲೆಂಜ್ ಮಾಡಿದಳು. ಖೇಮು ಕೂಡ ಅದಕ್ಕೆ ಒಪ್ಪಿದ. ಸರಿ, ಒಂದು ದಿನ ಖೇಮು 3 ಲಾರ್ಜ್ ವಿಸ್ಕಿ ಕುಡಿದು ಟೈಟಾದ. ಮನೆಯಲ್ಲೇ ಎಣ್ಣೆ ಸ್ಟಾಕ್ ಇಟ್ಟಿರುತ್ತಿದ್ದುದರಿಂದ ಖೇಮುಶ್ರೀಗೆ 'ಇನ್ನೊಂದು ಲಾರ್ಜ್ ವಿಸ್ಕಿ ತಗೊಂಬಾ' ಅಂದ, ತಂದುಕೊಟ್ಟಳು ಖೇಮುಶ್ರೀ. ಅದನ್ನು ಅವನು ಕುಡಿದ ನಂತರ ಮೊದಲೇ ಪ್ಲ್ಯಾನ್ ಮಾಡಿದಂತೆ ಖೇಮುವನ್ನು ಹಿಗ್ಗಾಮುಗ್ಗಾ ಬಾರಿಸತೊಡಗಿದಳು ಖೇಮುಶ್ರೀ. ಖೇಮು ನೆಲದ ಮೇಲೆಲ್ಲಾ ಬಿದ್ದು ಹೊರಳಾಡಿದ ನಂತರ ಎದ್ದು ಅವಳ ಮುಖ ನೋಡಿ, 'ಮತ್ತೆ ಇನ್ನೊಂದು ಲಾರ್ಜ್ ವಿಸ್ಕಿ ತಗೊಂಡ್ ಬಾ' ಅಂದ. ವಿಸ್ಕಿ ರಿಪೀಟ್ ಆದಂತೆ ಅದನ್ನು ಕುಡಿದ ನಂತರ ಖೇಮುಶ್ರಿ ಒದೆ ಕೂಡ ರಿಪೀಟ್ ಆಯ್ತು. ಒದೆ ತಿಂದು ಬಿದ್ದು, ಮತ್ತೆ ಎದ್ದು ಹೆಂಡತಿ ಮುಖವನ್ನು ಗುರಾಯಿಸಿದ ಖೇಮು ಹೇಳಿದ 'ಇನ್ನೊಂದು ಲಾರ್ಜ್ ವಿಸ್ಕಿ ತಗೊಂಡ್ ಬಾ'. 'ಓ, ನನ್ನ ಗಂಡನಿಗೆ ಎಷ್ಟು ಕುಡಿದರೂ ತನ್ನ ಸುತ್ತಮುತ್ತ ಏನಾಗ್ತಾ ಇದೆ ಅಂತ ಗೊತ್ತಾಗ್ತಿದೆಯಲ್ಲ ಸಾಕು' ಅಂತ ಖೇಮುಶ್ರೀ ಖುಷಿಯಾಗಿ ಇನ್ನೊಂದು ತಂದು ಕೊಟ್ಳು. ಮತ್ತೆ ಏಟನ್ನೂ ಕೊಟ್ಟಳು. ಈ ಸಲ ಒದೆ ತಿಂದು ಕೆಳಗೆ ಬಿದ್ದು, ಹೆಂಡ್ತಿಯನ್ನು ಗುರಾಯಿಸಿದ ಖೇಮು ಹೇಳಿದ, 'ಇನ್ನೊಂದ್ ಲಾರ್ಜ್ ರಮ್ ತಗೊಂಡ್ ಬಾ'. ಅದಕ್ಕೆ ಖೇಮುಶ್ರೀ, 'ಅಲ್ಲರೀ, ನೀವು ಆವಾಗಿಂದ ವಿಸ್ಕಿ ಅಲ್ವಾ ಕುಡಿತಾ ಇದೋದು?' ಅಂದ್ಳು. ಅದಕ್ಕೆ ಖೇಮು ಹೇಳಿದ, 'ವಿಸ್ಕಿ ಕುಡಿತಾ ಇದ್ದೀನಿ ಅಂತ ನಂಗೊತ್ತು, ನಾನು ಅಲರ್ಟ್ ಆಗೇ ಇದ್ದೀನಿ. ಆದ್ರೆ, ವಿಸ್ಕಿ ಕುಡಿದ್ರೆ, ಯಾಕೋ ಆವಾಗಿಂದ ಸಿಕ್ಕಾಪಟ್ಟೆ ಮೈ ಕೈ ನೋವಾಗ್ತಿದೆ. ಅದಕ್ಕೆ ಈ ಸಲ ರಮ್ ತಗೊಂಡ್ ಬಾ'.

ಲೈನ್‌ಮ್ಯಾನ್

- **ಸದಾ ಅಭಿವೃದ್ಧಿಯ ಜಪ ಮಾಡೋ ದೇಶ**
- ಜಪಾನ್
- **ಸರ್ಕ್ಯುಲೇಶನ್ ಕಡಿಮೆ ಆಗಿರೋ ಡೈಲಿ ಪತ್ರಿಕೆ**
- 'ವೀಕ್'ಲಿ
- **'ಮೂಗು' ಔಟ್ ಆಫ್ ಆರ್ಡರ್ ಆಗಿದ್ರೆ ಅದು**
- 'ನಾಕ್' ಔಟ್
- **ಮೂಗು ಕಟ್ಟಿಕೊಂಡ್ರೆ ಅದು**
- 'ನಾಕಾ' ಬಂದಿ
- **ನೀವು ಸರಿಯಾಗಿ ಯೋಚನೆ ಮಾಡ್ತಾ ಇಲ್ಲ ಅನ್ನೋದನ್ನು ಕಣ್ಣು, ಮೂಗು ಪದಗಳನ್ನ ಬಳಸಿ ಹೇಳುವಾಗ ಆಗುವ ವ್ಯತ್ಯಾಸ**
- ನೀವು 'ವಕ್ರ'ದೃಷ್ಟಿ ಬೀರ್ತಾ ಇದ್ದೀರಿ.
- ನೀವು ನಿಮ್ಮ ಮೂಗಿನ 'ನೇರಕ್ಕೆ' ಮಾತಾಡ್ತಾ ಇದ್ದೀರಿ.
- **ಭಾಷಾ ಬಳಕೆ**
- ಕನ್ನಡ ಮಾತಾಡೋನಷ್ಟೇ ಅಲ್ಲ, ಕನ್ನಡಿ ಮಾರೋನು ಕೂಡಾ ಕನ್ನಡಿಗನೇ
- **ಪೊಲೀಸರೇ ಹೆಚ್ಚಾಗಿರುವ ಪ್ರದೇಶ**
- ಪೊಲೀಸ್ 'ಬೆಲ್ಟ್'
- **ಜನಸಂದಣಿಯಲ್ಲಿ ಸಮಯ ನೋಡಿ ಕಾದು ಹೊಂಚುಹಾಕಿ ಜನರ ಪರ್ಸ್, ಮೊಬೈಲ್ ಎತ್ತೋನು**
- 'ವೆಯ್ಟ್' 'ಲಿಫ್ಟರ್'
- **ಬ್ಯಾಟ್ಸ್‌ಮನ್‌ಗಳು ರನೌಟ್ ಆಗ್ತಾ ಇರೋದನ್ನ ತಡೆಯಲಾಗದೆ ಕೈಚೆಲ್ಲಿ ಕೂತ ಕ್ಯಾಪ್ಟನ್ ಮಾತುಗಳು**
- ವಿ ಹ್ಯಾವ್ ರನ್ ಔಟ್ ಆಫ್ ಐಡಿಯಾಸ್
- **ರಸ್ತೆ ಅಡವಿಟ್ಟು ಸಾಲ ಪಡೆದ ಪಾಕಿಸ್ತಾನ**
- ಜೀವ್ನ ರೋಡಿಗ್ ಬರೋದು ಅಂದ್ರೆ ಇದೇನಾ?

ಅವಧೂತರೊಂದಿಗೆ ಅಮಾಯಕಿಯ ಅನುಸಂಧಾನ

ರಸದೌತಣ
ಯಗಟಿ ರಘು ನಾಡಿಗ್
vveditoped@gmail.com
naadigru@gmail.com

ಹೊಳೆದಂಡೆಯಲ್ಲಿ ಕುಳಿತಿದ್ದ ಶಿಷ್ಯರು ಮೇಲ್ನೋಟಕ್ಕೆ ಉಪ್ಪಿಟ್ಟನ್ನು ಸವಿಯುತ್ತಿದ್ದರೂ, ಅವರೆಲ್ಲರ ಮನದ ನೌಕೆಗಳು ಬೇರಾವುದೋ ಭಾವಸಾಗರದಲ್ಲಿ ವಿಹರಿಸುತ್ತಿದ್ದವು. ವಿದ್ಯಾರ್ಥಿನಿಲಯಕ್ಕೆ ಅನಿವಾರ್ಯವಾಗಿ ಮರಳಲೇಬೇಕಿದ್ದ ಶಾರದೆಯನ್ನು ಬೀಳ್ಕೊಡುವಾಗ ಅವಳ ತಾಯಿ ನಡೆದುಕೊಂಡ ರೀತಿ ಈ ಭಾವವಿಹಾರಕ್ಕೆ ಕಾರಣವಾಗಿತ್ತು. ನಿಜಸಂಗತಿ ಅರಿಯದ ಆ ತಾಯಿ, 'ಹೆತ್ತವರನ್ನು ಬಿಟ್ಟಿರಲಾಗದ್ದಕ್ಕೆ ಶಾರದೆ ಹೀಗೆ ರೋದಿಸುತ್ತಿದ್ದಾಳೆ' ಎಂದುಕೊಂಡು ಅವಧೂತರ ಚಿತ್ರಪಟವನ್ನು ಮಗಳಿಗೆ ನೀಡಿದ್ದು ಶಿಷ್ಯರಿಗೆ ಸಾಮಾನ್ಯ ನಡೆಯಂತೆ ಕಂಡಿರಲಿಲ್ಲ. 'ಅಮೂಲ್ಯರತ್ನ'ದಂತೆ ಆ ಚಿತ್ರಪಟವನ್ನು ತನ್ನ ಹಸುಬೆ ಚೀಲದಲ್ಲಿ ಕಾಪಿಟ್ಟುಕೊಂಡಿದ್ದ ಆಕೆ, ಶಾರದೆ ಎಂಬ ಮನೆಯ 'ಅಮೂಲ್ಯರತ್ನ'ಕ್ಕೆ ಸಂಕಟ-ಸಂಕಷ್ಟ ಒದಗಿದಾಗ ಉಪಶಾಮಕವಾಗಿ ಒದಗಲೆಂದು ಅದನ್ನು ಹೀಗೆ ಹಸ್ತಾಂತರಿಸಿದಳೆಂದರೆ, ಆ ಮಮತಾಮಯಿ ತಾಯಿಯು ಅವಧೂತರ ಶಕ್ತಿಯಲ್ಲಿ ಅದಿನ್ನೆಷ್ಟರ ಮಟ್ಟಿಗೆ ವಿಶ್ವಾಸವಿಟ್ಟಿರಬೇಕು, ಆಕೆಯ ಹೃದಯದಲ್ಲಿ ಅವಧೂತರ ಬಗೆಗಿನ ಭಕ್ತಿ-ಭಾವ ಅದೆಷ್ಟು ಗಾಢವಾಗಿ ಕೆನೆಗಟ್ಟಿರಬೇಕು ಎಂಬೆಲ್ಲಾ ಸಂಗತಿಗಳ ಸಮುದ್ರವನ್ನು ಶಿಷ್ಯರು ಮಥಿಸುತ್ತಿದ್ದರು.

ಅಷ್ಟೇ ಅಲ್ಲ, ಹಿಂದೊಮ್ಮೆ ಅವಧೂತರಲ್ಲಿಗೆ ಬಂದಿದ್ದ ಮ್ಯಾನೇಜರ್, ಸಂಸ್ಥೆಯ ಆವರಣದಲ್ಲಿ ಮಡುಗಟ್ಟಿದ್ದ ನಕಾರಾತ್ಮಕ ಶಕ್ತಿಯನ್ನು ನಿವಾರಿಸುವಂತೆ ಕೋರಿದಾಗ, ''ಒಳಸೇರಿರುವ ಕಳ್ಳಬೆಕ್ಕನ್ನು ತೊಲಗಿಸಿದರೆ ಒಳಿತು'' ಎಂಬ ಒಗಟಿನ ರೂಪದ ಪರಿಹಾರೋಪಾಯವನ್ನು ಮೊದಲಿಗೆ ತಿಳಿಸಿದ್ದ ಅವಧೂತರು, ಆ ಒಗಟನ್ನು ಅರ್ಥೈಸಿಕೊಳ್ಳುವಲ್ಲಿ ಮ್ಯಾನೇಜರ್ ವಿಫಲರಾಗಿದ್ದುದು ಅರಿವಾಗುತ್ತಿದ್ದಂತೆ ತಾವೇ ಅಖಾಡಕ್ಕಿಳಿದು ಶಾರದೆಯ ಆತ್ಮಬಂಧುವಾಗಲು ಸಂಕಲ್ಪಿಸಿರುವುದೇಕೆ ಎಂಬುದು ಕೂಡ ಶಿಷ್ಯರಿಗೆ ನಿಚ್ಚಳವಾಗುತ್ತಾ ಹೋಯಿತು. 'ನಿಮ್ಮ ವರ್ಗದವರು' ಎಂಬ ಪರಿಗಣನೆಯಲ್ಲಿ ಸಮಾಜದಲ್ಲಿ ಮೂಲೆಗುಂಪಾಗಿದ್ದ ಕುಟುಂಬವೊಂದಕ್ಕೆ ಹೀಗೆ ನಿರಂತರ ಅಭಯ ನೀಡುತ್ತಾ, ಅವರ ಮನೆಯ ಮೇಲೆ 'ಅಶ್ವತ್ಥವೃಕ್ಷದ ನೆರಳು' ಬೀರುತ್ತಿರುವ ಅವಧೂತರು, 'ದೇವರ ದೃಷ್ಟಿಯಲ್ಲಿ ಯಾರೂ ಮೇಲಲ್ಲ, ಯಾರೂ ಕೀಳಲ್ಲ' ಎಂಬುದನ್ನು ಮನಗಾಣಿಸಲೆಂದೇ, ಶಿವರಾತ್ರಿಯ ಕಾರ್ಯಕ್ರಮ ಮುಗಿಸಿಕೊಂಡು ಊರಿಗೆ ಮರಳುವ ಮಾರ್ಗಮಧ್ಯದಲ್ಲಿದ್ದ ಶಾರದೆಯ ಮನೆಗೆ ತಮ್ಮನ್ನೂ ಕರೆದೊಯ್ದು, ಜೇನುಹಲಸಿನ ಆತಿಥ್ಯ ಸ್ವೀಕಾರದಲ್ಲಿ ಭಾಗಿಯಾಗಿಸುವ ಮೂಲಕ 'ಮೇಲು-ಕೀಳು' ಕಲ್ಪನೆಯನ್ನು ತೊಡೆದು 'ಸರ್ವಸಮಾನತೆ'ಯ ಸಿದ್ಧಾಂತವನ್ನು ಪ್ರಾಯೋಗಿಕವಾಗಿ ತಮಗೆ ಅರೆದು ಕುಡಿಸಿದರೇ? ತರುವಾಯ ಕಾರಿಗೆ ಇಂಧನ ತುಂಬಿಸುವಾಗ ಅಲ್ಲಿಗೆ ಧಾವಿಸಿಬಂದ ಗ್ರಂಥಿಗೆ ಅಂಗಡಿಯ ವಯೋವೃದ್ಧರೊಬ್ಬರು ನೀಡಿದ ಗೋಕರ್ಣದ ಜನಿವಾರದ ಕಟ್ಟು ಮತ್ತು ಪಳನಿಯ ಸುಗಂಧಭರಿತ ವಿಭೂತಿಯ ಪೊಟ್ಟಣಗಳಿದ್ದ ಚೀಲವನ್ನು ಗೌರವಪೂರ್ಣವಾಗಿ ಸ್ವೀಕರಿಸುವ ಮೂಲಕ, ತ್ರೇತಾಯುಗದಲ್ಲಿ ಲಂಕೆಗೆ ಸಮುದ್ರಸೇತು ಕಟ್ಟುವಾಗ ಪುಟ್ಟ ಅಳಿಲಿನಿಂದಲೂ ಸೇವೆ ಸ್ವೀಕರಿಸಿದ ಶ್ರೀರಾಮಚಂದ್ರನ ಆದರ್ಶವನ್ನು ಅವಧೂತರು ಹೀಗೆ ಪ್ರಾತ್ಯಕ್ಷಿಕೆಯಾಗಿ ತಮಗೆ ತೋರಿಸಿದರೇ? ತಮ್ಮನ್ನು ಹೃದಯಪೂರ್ವಕವಾಗಿ ನಂಬಿದವರನ್ನು ದಿವ್ಯಾತ್ಮಗಳು ಯಾವತ್ತೂ ಕೈಬಿಡುವುದಿಲ್ಲ ಎಂಬುದನ್ನು ಪ್ರತ್ಯಕ್ಷ ತೋರಿಸಲೆಂದೇ ಅವಧೂತರು ಶಿವರಾತ್ರಿ ಜಾಗರಣೆಗೆ, ತರುವಾಯದ ಸಂಚಾರಕ್ಕೆ ತಾವೊಬ್ಬರೇ ತೆರಳದೆ ಶಿಷ್ಯರಾದ ತಮ್ಮನ್ನೂ ಕರೆತಂದರೇ? ಎಂದೆಲ್ಲಾ ಶಿಷ್ಯರು ತಮ್ಮತಮ್ಮಲ್ಲೇ ವಿಶ್ಲೇಷಿಸುತ್ತಿದ್ದರು.

''ಶಾರದೆಯ ಕಥೆ ಮುಗಿಯುವ ಮುಂಚೆಯೇ ಅದನ್ನು ನೀವೆಲ್ಲಾ ವಿಮರ್ಶಿಸುತ್ತಿರುವಂತಿದೆಯಲ್ಲಾ?!'' ಎಂಬ ಅವಧೂತರ ದನಿ ಕೇಳಿದಾಗಲೇ ಶಿಷ್ಯರೆಲ್ಲರೂ ಭಾವನೌಕೆಯಿಂದ ಕೆಳಗಿಳಿದಿದ್ದು! 'ಈ ಜಗತ್ತಿನಲ್ಲಿ ಬೋಧನೆ ಮಾಡುವವರು ಲಕ್ಷಗಟ್ಟಲೆ ಸಿಕ್ಕಾರು, ಆದರೆ 'ಬೋಧನೆ-ಆಚರಣೆ' ಎರಡಕ್ಕೂ ಒಡ್ಡಿಕೊಂಡಿರುವ ಅನನ್ಯ ಚೇತನಗಳಲ್ಲಿ ನಮ್ಮ ಅವಧೂತರೂ ಒಬ್ಬರು, ಅವರ ಸಾಂಗತ್ಯದಲ್ಲಿರುವ ನಾವೇ ಪುಣ್ಯವಂತರು' ಎಂಬ ಧನ್ಯತಾಭಾವ ಶಿಷ್ಯರೆಲ್ಲರ ಮುಖದಲ್ಲಿ ನಂದಾದೀಪದಂತೆ ಬೆಳಗುತ್ತಿತ್ತು.

ಭಾಗ-10

ಅವಧೂತರ ಪ್ರಶ್ನೆಗೆ ಉತ್ತರವೆಂಬಂತೆ ಶಿಷ್ಯರೊಬ್ಬರು, ''ಗುರುಗಳೇ, ಆ ತಾಯಿ ಕೊಟ್ಟ ನಿಮ್ಮ ಚಿತ್ರಪಟ ಶಾರದೆಗೆ ಒಂದು 'ಅಮೂಲ್ಯ ನಿಧಿ'ಯಾಗಿ, ನಿಮ್ಮೊಂದಿಗೆ ಅಹವಾಲು ತೋಡಿಕೊಳ್ಳುವ 'ಸಂವಹನ ಸಾಧನ'ವೇ ಆಗಿಬಿಟ್ಟಿತೇನೋ, ಅಲ್ಲವೇ?'' ಎಂದು ಕುತೂಹಲಭರಿತ ಗೌರವದೊಂದಿಗೆ ಕೇಳಿದರು.

ಗಹಗಹಿಸಿ ನಕ್ಕ ಅವಧೂತರು, ''ಪರವಾಗಿಲ್ಲ ಕಣಯ್ಯಾ, ತುಪ್ಪದಲ್ಲಿ ಹುರಿದ ದ್ರಾಕ್ಷಿ-ಗೋಡಂಬಿ ಬೆರೆಸಿದ ತರಕಾರಿ ಉಪ್ಪಿಟ್ಟನ್ನು ನಿಮಗೆ ತಿನ್ನಿಸಿದ್ದಕ್ಕೂ ಸಾರ್ಥಕವಾಯಿತು! 'ವಿಶ್ಲೇಷಣೆ' ಮತ್ತು 'ವಿಚಕ್ಷಣೆ'ಯಂಥ ಸಾಮರ್ಥ್ಯಗಳು ನಿಮ್ಮ ಮಿದುಳಿನಲ್ಲಿ ಎಷ್ಟು ಬೇಗ ಉದ್ದೀಪನಗೊಂಡಿತಲ್ಲಾ? ಭಲೇ ಭಲೇ!'' ಎಂದು ತಮಾಷೆ ಮಾಡಿ, ''ಹಾಗೇ ಇರಬೇಕು ಕಣ್ರಯ್ಯಾ... ಗುರುವೊಬ್ಬನ ಮಾತನ್ನು ಶಿಷ್ಯರು ಚಾಚೂತಪ್ಪದೆ ಪರಿಪಾಲಿಸಬೇಕು ಎಂಬುದು ಎಷ್ಟು ನಿಜವೋ, ಜಿಜ್ಞಾಸೆಯ ಪ್ರವೃತ್ತಿ, ಕಾಲಾನುಕಾಲಕ್ಕೆ ಪ್ರಶ್ನಿಸುವ ಸ್ವಭಾವ, ತರ್ಕಶಕ್ತಿಗಳನ್ನೂ ರೂಢಿಸಿಕೊಳ್ಳಬೇಕು. ಆಗ ಮಾತ್ರವೇ ಸಾಗುವ ದಾರಿಯೂ ನಿಚ್ಚಳವಾಗುತ್ತದೆ, ಸೇರಬೇಕಾದ ಗಮ್ಯವೂ ಸುಲಭಕ್ಕೆ ದಕ್ಕುತ್ತದೆ. 'ಅರಿವೇ ಗುರು' ಎಂಬ ಮಾತು ಜೊಳ್ಳಲ್ಲ, ಅದು ಗಟ್ಟಿಮುಟ್ಟಾದ ಶಕ್ತಿಬೀಜ'' ಎಂದು ಹೇಳಿ, ''ಎಲ್ಲರೂ ಹೊಳೆನೀರಲ್ಲಿ ಕೈತೊಳೆದುಕೊಂಡು ಬನ್ನಿ, ಕಥೆಯನ್ನು ಮುಂದುವರಿಸುವೆ'' ಎಂದರು. ಅಂತೆಯೇ ಮಾಡಿದ ಶಿಷ್ಯರು ಲಗುಬಗೆಯಿಂದ ಮರಳಿದರು, ಅವಧೂತರು ಕಥೆಯನ್ನು ಮುಂದುವರಿಸಿದರು....

''ಅಯ್ಯಾ, ನಿಮ್ಮ ಗ್ರಹಿಕೆ ಸರಿಯಾಗಿದೆ... ತಾಯಿ ಕೊಟ್ಟ ಚಿತ್ರಪಟ ಶಾರದೆಗೆ ಒಂದು 'ಅಮೂಲ್ಯನಿಧಿ'ಯಾಗಿ, ನನ್ನೊಂದಿಗೆ ಅಹವಾಲು ತೋಡಿಕೊಳ್ಳಲಿಕ್ಕಾಗಿನ ಒಂದು 'ಸಂವಹನ ಸಾಧನ' ಆಗಿದ್ದು ನಿಜ. ಅಂದು 'ಗುರುಪೂರ್ಣಿಮೆ'ಯ ಮಧ್ಯರಾತ್ರಿ. ನಾನು ವಾಡಿಕೆಯ ಕೆಲಸಗಳನ್ನೆಲ್ಲ ಮುಗಿಸಿ ಊರಾಚೆಯ ಅಶ್ವತ್ಥ ವೃಕ್ಷದೆಡೆಗೆ ತೆರಳಿ ಕೊಂಚ ವಿರಮಿಸಿ, ಭಗವಂತನ ಜತೆಗಿನ 'ಮೌನ-ಅನುಸಂಧಾನ'ದಲ್ಲಿ ತೊಡಗಿದ್ದೆ. ಕೆಲ ಕ್ಷಣದ ನಂತರ 'ಬುದ್ಧೀ.... ನನ್ನಪ್ಪಾ...' ಅಂತ ದೂರದಿಂದ ಅದ್ಯಾರೋ ಕರೆದಂತಾಯಿತು. ಅದು 'ಅಪರಿಚಿತವಾಗಿದ್ದರೂ ಪರಿಚಿತ' ಎನಿಸುವ ಬಾಲೆಯೊಬ್ಬಳ ದಿವ್ಯದನಿ. ಅದು ಶಾರದೆಯದ್ದು! ಗುರುಪೂರ್ಣಿಮೆಯ ದಿನದಂದು 'ಗುರುಸೂತ್ರ'ದ ಪ್ರಭಾವವು ಬೇರೆ ದಿನಗಳಿಗಿಂತ ಸಾವಿರ ಪಟ್ಟು ಹೆಚ್ಚು ತೀವ್ರವಾಗಿರುತ್ತದೆ ಎಂಬ ಅನುಪಮ ಮಾಹಿತಿಯನ್ನು ಅದೆಲ್ಲಿಂದಲೋ ದಕ್ಕಿಸಿಕೊಂಡಿದ್ದ ಜಾಣೆ ಶಾರದೆ, ದೂರದಲ್ಲಿದ್ದುಕೊಂಡೇ ನನ್ನೊಡನೆ ಸಂವಹಿಸಲು ಗುರುಪೂರ್ಣಿಮೆಯ ದಿನವನ್ನೇ ಆಯ್ದುಕೊಂಡಿದ್ದಳು! ಇಲ್ಲಿ ಅಶ್ವತ್ಥ ವೃಕ್ಷದ ಕೆಳಗೆ ವಿರಮಿಸಿದ್ದ ನಾನು, ಅಷ್ಟು ದೂರದಲ್ಲಿ ಅವಳಿದ್ದ ಜಾಗವನ್ನೊಮ್ಮೆ ಕಣ್ಣ ಮುಂದೆ ಚಿತ್ರಿಸಿಕೊಂಡೆ. ತನಗೆ ಆಶ್ರಯ ನೀಡಿದ್ದ ಸಂಸ್ಥೆಯ ಆವರಣದಲ್ಲಿದ್ದ ಅಶ್ವತ್ಥ ವೃಕ್ಷದ ಬುಡದಲ್ಲಿ ನನ್ನ ಚಿತ್ರಪಟವನ್ನು ಎದುರಿಗಿಟ್ಟುಕೊಂಡು ಶಾರದೆ ಕೂತಿದ್ದಳು. ಆಕೆಯ ದೇಹದ ಕಣಕಣದಿಂದಲೂ ಗುರುಮಂತ್ರ ಜಪದ ನಿನಾದ ಅನುರಣಿಸುತ್ತಿತ್ತು.....

''ನಾನು ಇಲ್ಲಿದ್ದುಕೊಂಡೇ ಶಾರದೆಯನ್ನುದ್ದೇಶಿಸಿ 'ಅದೇನು ಹೇಳು ತಾಯೀ...' ಎಂದೆ. 'ಕೊಲ್ಲುವುದು ರಾಕ್ಷಸರ ಕರ್ಮ, ಕಾಯುವುದು ದೇವರ ಧರ್ಮ' ಎಂಬ ಮಾತಿನಲ್ಲಿ ಗಟ್ಟಿನಂಬಿಕೆಯಿಟ್ಟಿದ್ದ ಶಾರದೆಗೆ ನನ್ನ ಭರವಸೆಯ ದನಿ ಕೇಳಿಸಿತು ಎನಿಸುತ್ತೆ. ಆ ಮಗು ಬಿಕ್ಕಿಬಿಕ್ಕಿ ಅಳಲು ಶುರು ಮಾಡಿತು. ಆದರೆ ಅದು ದುಃಖದ ಅಳುವಲ್ಲ, ಬಹುತೇಕ ಅರಣ್ಯರೋದನವೇ ಆಗಿಬಿಟ್ಟಿದ್ದ ತನ್ನ ಧ್ವನಿಗೆ ಒಂದು 'ಉಪಶಾಮಕ ಪ್ರತಿಧ್ವನಿ' ಮೊಳಗಿತಲ್ಲಾ ಎಂಬ ಸಂತಸದಿಂದಾಗಿ ಚಿಮ್ಮಿದ ಚಿಲುಮೆ ಅದು! ನಂಬಿದವರನ್ನು ದೇವರು-ಗುರು-ಅವಧೂತರು ಕೈಬಿಡುವುದಿಲ್ಲ ಎಂಬ 'ಸ್ಥಾಪಿತ ಗ್ರಹಿಕೆ'ಗೆ ಆಕೆಗೆ ತಾನು ಕುಳಿತಿದ್ದ ಸ್ಥಳದಲ್ಲೇ ದಿವ್ಯಪುರಾವೆ ಸಿಕ್ಕಿತ್ತು. ಮರದ ಬುಡದಲ್ಲಿಟ್ಟಿದ್ದ ನನ್ನ ಚಿತ್ರಪಟವನ್ನು ಕೈಗೆತ್ತಿಕೊಂಡ ಶಾರದೆ ಅದನ್ನೊಮ್ಮೆ ಕಣ್ಣಿಗೊತ್ತಿಗೊಂಡು, 'ಕಡೆಗೂ ಸಿಕ್ಕಿಬಿಟ್ಯಾ ನನ್ನಪ್ಪಾ.... ನಿನ್ನ ಕಾರುಣ್ಯಕ್ಕೆ ನಾನು ನಿನಗೆ ಏನು ಕಾಣಿಕೆ ನೀಡಲೋ ತಂದೇ..?' ಎಂದು ಮುಗ್ಧದನಿಯಲ್ಲಿ ಅಕ್ಕರೆಗರೆದಳು ಶಾರದೆ. 'ಸಮಯ ಬಂದಾಗ ಅದನ್ನು ಪಡೆಯುವೆ. ಈಗ ನಿನ್ನ ಸಮಸ್ಯೆಯೇನು ಹೇಳವ್ವಾ ಕಂದಾ...' ಎಂದು ನಾನು ಸಂತೈಸಿದೆ. ಸಂಸ್ಥೆಯ ಮಹಾನುಭಾವರೊಬ್ಬರು ತನ್ನನ್ನು 'ಅನೈತಿಕ' ಕೆಲಸಕ್ಕೆ ಆಹ್ವಾನಿಸುತ್ತಿರುವುದರ ಕುರಿತು ಎಳೆಎಳೆಯಾಗಿ ಬಿಡಿಸಿ ಹರವಿಟ್ಟ ಶಾರದೆ, 'ನಾನು ಅಂಥವಳಲ್ಲ ಬುದ್ಧೀ. ವಿದ್ಯೆಯ ಹಸಿವನ್ನು ನೀಗಿಸಿಕೊಳ್ಳಲು ಬಂದವಳು ನಾನು. ಇಲ್ಲಿಯೂ 'ಇಂಥ' ಹಸಿವೇ? ಇದಕ್ಕೊಂದು ಪರಿಹಾರ ಕೊಡಿ ಬುದ್ಧೀ' ಎನ್ನುತ್ತಾ ನನ್ನ ಚಿತ್ರಪಟವನ್ನು ಮತ್ತೊಮ್ಮೆ ಕಣ್ಣಿಗೊತ್ತಿಕೊಂಡಳು. ನಾನು ಸುಮ್ಮನೆ ಅವಳನ್ನು ಪರೀಕ್ಷಿಸಲೆಂದು, 'ಇದಕ್ಕೆ ಇಷ್ಟೊಂದು ತಲ್ಲಣವೇಕೆ ಮಗೂ? ಪೊಲೀಸರಿಗೆ ದೂರು ನೀಡಿದರೆ ಸಾಕು, ಈ ಸಮಸ್ಯೆ ಪರಿಹಾರವಾಗುತ್ತೆ' ಎಂದೆ..'' ಎಂದು ಹೇಳಿ ಅವಧೂತರು ಕಥನವನ್ನು ಕೊಂಚ ನಿಲ್ಲಿಸಿದರು.

ಆಗ ಶಿಷ್ಯರೊಬ್ಬರು, ''ನಿಮ್ಮ ಮಾತಿನಂತೆಯೇ ಶಾರದೆ ಪೊಲೀಸರಿಗೆ ದೂರು ನೀಡಿದಳು ಎನಿಸುತ್ತೆ. ಆದರೆ ಸದರಿ ಸಮಾಜಸೇವಾ ಸಂಸ್ಥೆಗಿರುವ ಪ್ರಭಾವದಿಂದಾಗಿ ಅದರಿಂದೇನೂ ಪ್ರಯೋಜನವಾಗಲಿಲ್ಲ, ಹೀಗಾಗಿ ಶಾರದೆ ಹತಾಶಳಾದಳು. ಅಲ್ವೇ ಗುರುಗಳೇ?'' ಎಂದು ಪ್ರಶ್ನಿಸಿದರು.

ಈ ಮಾತಿಗೆ ನಸುನಕ್ಕ ಅವಧೂತರು, ''ಇಲ್ಲಿಯೇ ನಿಮ್ಮ ಲೆಕ್ಕಾಚಾರ ತಪ್ಪಿದ್ದು. ಮಾಮೂಲಿ ಹುಡುಗಿಯಾಗಿದ್ದರೆ ಹಾಗೆ ಮಾಡುತ್ತಿದ್ದಳೋ ಏನೋ? ಆದರೆ ನಾನು ಮೊದಲೇ ಹೇಳಿದಂತೆ ಶಾರದೆಯೊಬ್ಬಳು ಬರಿಯ ಚೇತನವಲ್ಲ, ಉದಾತ್ತ ಚೇತನ. ಅವಳೊಂದು ದಿವ್ಯಾತ್ಮ. ಪೊಲೀಸರಿಗೆ ದೂರು ನೀಡು ಎಂಬ ನನ್ನ ಮಾತಿಗೆ ಶಾರದೆ, 'ಬೇಡ ಬುದ್ಧೀ, ಇದು ಸಾಕಷ್ಟು ವರ್ಷಗಳಿಂದ ಸಾವಿರಾರು ಬಡ ಮತ್ತು ಅಸಹಾಯಕ ಮಕ್ಕಳಿಗೆ 'ಅನ್ನ-ಅರಿವು-ಆಶ್ರಯ' ನೀಡುತ್ತಾ ಬಂದಿರುವ ಸಂಸ್ಥೆ. ಇಂಥ ಒತ್ತಾಸೆಯಿಂದಾಗಿಯೇ ಅದೆಷ್ಟೋ ಮನೆಗಳು ಬೆಳಕು ಕಂಡಿವೆ, ಅವುಗಳಲ್ಲಿ ನೆಮ್ಮದಿಯ ಹೂವು ಅರಳಿದೆ. ಯಾರೋ ಕೆಲವರು ಮಾಡಲು ಹೊರಟ ತಪ್ಪು ಕೆಲಸಕ್ಕೆ ಒಂದಿಡೀ ಸಂಸ್ಥೆಯ ಹೆಸರು ಮತ್ತು ಪ್ರತಿಷ್ಠೆ ಮಣ್ಣುಪಾಲಾಗಬಾರದು. ಅದರಿಂದಾಗಿ, ಇಂಥ ಸಂಸ್ಥೆಯಲ್ಲಿ ತಮ್ಮ ಮಕ್ಕಳನ್ನು ಸೇರಿಸುವುದಕ್ಕೆ ಸಮಾಜದ ಅಸಹಾಯಕರು ಹಿಂದು-ಮುಂದು ನೋಡುವಂತಾಗಬಾರದು. ಆದರೆ ಮೈಯಲ್ಲಿ ಇಂಥದೊಂದು 'ಹೀನವಾಂಛೆ' ತುಂಬಿಕೊಂಡಿರುವವರು ತಕ್ಕ ಪಾಠ ಕಲಿಯುವಂತೆ ಮತ್ತು ಅದು ಹೊರಜಗತ್ತಿಗೆ ಗೊತ್ತಾಗದಂತೆ ಏನಾದರೂ ಪರಿಹಾರ ಕಟ್ಟಿಕೊಡಿ ಬುದ್ಧೀ..' ಎಂದು ಅಲವತ್ತುಕೊಂಡಳು. ನಾನು ಒಡ್ಡಿದ್ದ ಪರೀಕ್ಷೆಯಲ್ಲಿ ಶಾರದೆ ಗೆದ್ದಿದ್ದಳು. ಹೀಗಾಗಿ ಈ ಕಥೆಯ ಅಖಾಡದಲ್ಲಿ ನನ್ನ ಪ್ರವೇಶ ಅನಿವಾರ್ಯವಾಯಿತು...'' ಎಂದರು.

ಕುತೂಹಲ ತಡೆಯಲಾಗದ ಶಿಷ್ಯರೊಬ್ಬರು, ''ಗುರುಗಳೇ, ಹಾಗೆ ಹೀನವಾಂಛೆ ತೋರಿದ್ದು ಯಾರು?'' ಎಂದಾಗ, ''ಈಗಾಗಲೇ ಮಧ್ಯಾಹ್ನವಾಯಿತು ಕಣಯ್ಯಾ. ಅನ್ನದ ಜತೆಗೆಂದು ಎಳೆಯ ಹಲಸಿನಕಾಯಿ ಹುಳಿ, ಸುಟ್ಟಿರುವ ಹುರುಳಿ ಹಪ್ಪಳ, ಕಳಲೆ ಉಪ್ಪಿನಕಾಯಿ ಇತ್ಯಾದಿಯನ್ನು ಒಪ್ಪ ಮಾಡ್ಕೊಂಡು ನಮ್ಮಮ್ಮ ಕಾಯ್ತಾ ಇರ್ತಾರೆ! ನಡೀರಿ, ಮನೆಗೆ ತೆರಳಿ ಮೊದಲು ಊಟ ಮುಗಿಸಿ, ನಂತರ ಕಥೆ ಮುಂದುವರಿಸೋಣ'' ಎಂದರು.

''ನೀವು ಮತ್ತೆ 'ಪತ್ತೇದಾರ ಪುರುಷೋತ್ತಮ' ಆಗಿಬಿಟ್ಟಿರಿ ಗುರುಗಳೇ'' ಎಂದು ಆ ಶಿಷ್ಯರು ಹುಸಿಮುನಿಸಿನಲ್ಲೇ ಲೊಚಗುಟ್ಟಿದರು, ಅವರ ತಲೆಗೆ ಅವಧೂತರು ಪ್ರೀತಿಯಿಂದ ಮೊಟಕಿದರು..!

(ಮುಂದುವರಿಯುವುದು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:186

ರ್‍ಯಾಗಿಂಗ್‌ಗೆ ಐಐಟಿ ವಿದ್ಯಾರ್ಥಿ ಬಲಿ

ಕೋಲ್ಕತಾ: ಪಶ್ಚಿಮ ಬಂಗಾಳದ ಐಐಟಿ ಖರಗ್‌ಪುರದ ಹಾಸ್ಟೆಲ್ ಕೊಠಡಿಯಲ್ಲಿ 21 ವರ್ಷದ ವಿದ್ಯಾರ್ಥಿಯೊಬ್ಬ ಶುಕ್ರವಾರ ರ್‍ಯಾಗಿಂಗ್‌ಗೆ ಭಯಪಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಕಳೆದ ಮೂರು ವರ್ಷಗಳಲ್ಲಿ ಐಐಟಿ ಖರಗ್ ಪುರದಲ್ಲಿ ಇದು ಏಳನೇ ಆತ್ಮಹತ್ಯೆ ಪ್ರಕರಣವಾಗಿದೆ. ಕೋಲ್ಕತಾದ ರೀತಂ ಮೊಂಡಾಲ್ ಎಂದು ಗುರುತಿಸ ಲಾಗಿದ್ದು, ಶುಕ್ರವಾರ ಬೆಳಗ್ಗೆ 11:30ಕ್ಕೆ ತನ್ನ ಕೊಠಡಿಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾನೆ. ಘಟನೆಯ ಬಳಿಕ ಕಾಲೇಜು ಆಡಳಿತವು ಆತನ ತಂದೆ ಉತ್ತಮ್ ಮೊಂಡಾಲ್‌ಗೆ ಮಾಹಿತಿ ನೀಡಿದೆ. ರೀತಂ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನ ನಾಲ್ಕನೇ ವರ್ಷದ ವಿದ್ಯಾರ್ಥಿಯಾಗಿದ್ದು, ರಾಜೇಂದ್ರ ಪ್ರಸಾದ್ ಹಾಲ್‌ನ ಹಾಸ್ಟೆಲ್ ಕೊಠಡಿಯಲ್ಲಿ ವಾಸಿಸುತ್ತಿದ್ದ. ಪೊಲೀಸರು ಸ್ಥಳಕ್ಕೆ ಆಗಮಿಸಿ, ಕೊಠಡಿಯ ಬಾಗಿಲನ್ನು ಒಡೆದಾಗ, ರೀತಂ ಸೀಲಿಂಗ್ ಫ್ಯಾನ್‌ಗೆ ನೇಣು ಬಿಗಿದ ಸ್ಥಿತಿಯಲ್ಲಿ ಕಂಡುಬಂದಿದ್ದಾನೆ. ಕೂಡಲೇ ಆತನನ್ನು ಐಐಟಿ ಕ್ಯಾಂಪಸ್‌ನ ಬಿ.ಸಿ. ರಾಯ್ ಆಸ್ಪತ್ರೆಗೆ ಕೊಂಡೊಯ್ಯಲಾಯಿತು.

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಕಾರ್ಯನಿರ್ವಾಹಕ ಇಂಜಿನೀಯರರ ಕಚೇರಿ, ಬಂದರು ವಿಭಾಗ,
ಬೈತಖೋಲ್, ಕಾರವಾರ, ಉತ್ತರ ಕನ್ನಡ ಜಿಲ್ಲೆ-581302
ದೂ: 08382-229672 ಇ-ಮೇಲ್: eepdkwr4@gmail.com/eepdk@rediffmail.com
ನಂ:ಕಾನಿಇಂ/ಬಂವಿಕಾ/ಟೆಂಡರ್/2025-26/419 ದಿನಾಂಕ: 19-07-2025

ಮರು ಟೆಂಡರು ಪ್ರಕಟಣೆ (3ನೇ ಕರೆ)
(ಕೆ.ಪಿ.ಪಿ.ಪಿ ಪದ್ಧತಿಯಲ್ಲಿ ಮಾತ್ರ) (ದ್ವಿ ಲಕೋಟೆ ಪದ್ಧತಿ)
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಕೆ.ಪಿ.ಪಿ.ಪಿ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು www.kppp.karnataka.gov.in ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.
"ಜಿಎಸ್‌ಟಿಯನ್ನು ಅನುಮೋದಿತ ಟೆಂಡರ್ ಮೊತ್ತಕ್ಕೆ ಅನುಗುಣವಾಗಿ ಪ್ರತ್ಯೇಕವಾಗಿ ಪಾವತಿಸಲಾಗುವುದು"
ಕಾಮಗಾರಿಯ ಹೆಸರು ಮತ್ತು ಇಂಡೆಂಟ ನಂ: (1) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಶಿರೂರು ಗ್ರಾಮದಲ್ಲಿ ಭಾರಿ ಭೂಕುಸಿತದಿಂದ ಗಂಗಾವಳಿ ನದಿಯಲ್ಲಿ ಬಿದ್ದ ಮಣ್ಣಿನ ರಾಶಿಯನ್ನು ತೆರವುಗೊಳಿಸುವ (Dredging in Gangavali River at Shirur Landslide Area) ಕಾಮಗಾರಿ. Indent no: IDD/2025-26/OW/WORK_INDENT142/CALL-3, ಟೆಂಡರಿಗಿಟ್ಟ ಮೊತ್ತ: ರೂ. 15621090.04
ಟೆಂಡರ್ ಬಗ್ಗೆ ಸ್ಪಷ್ಟನೆಗಳಿಗಾಗಿ ಕೋರಿಕೆ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ವೇಳೆ: 25-07-2025 ಸಂಜೆ 16.00 ಘಂಟೆಯವರೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ವೇಳೆ: 26-07-2025 ಸಂಜೆ 16.30 ಘಂಟೆಯವರೆಗೆ
ಸಹಿ/- ಕಾರ್ಯನಿರ್ವಾಹಕ ಇಂಜಿನೀಯರ್,
ಬಂದರು ವಿಭಾಗ, ಕಾರವಾರ (ಉ.ಕ)
DIPR/ADK/KSMCA/300/25-26 Dt.19.07.25

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-562123
ದೂರವಾಣಿ ಸಂಖ್ಯೆ: 080-23718487
ಇ-ಮೇಲ್: itstaff_ulb_mnhalli@yahoo.com
ಸಂಖ್ಯೆ: ಮಾ.ನ.ಕಾ/ತಾ.ಶಾ/ಸಿ.ಆರ್/22/2025-26 ದಿನಾಂಕ: 19-07-2025

ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)
ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2021-22, 2022-23ನೇ ಸಾಲಿನ 15ನೇ ಹಣಕಾಸು ಅನುದಾನ, ಎಸ್.ಎಫ್.ಸಿ ಅನುದಾನ ಮತ್ತು ನಗರಸಭೆ ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆ, ವಿದ್ಯುತ್ ಪರಿವೀಕ್ಷಣಾಲಯ ಮತ್ತು ನೊಂದಾಯಿತ ಅರ್ಹ ದರ್ಜೆ ಏಜೆನ್ಸಿದಾರರಿಂದ ಕಾಮಗಾರಿ/ಸರಬರಾಜು/ಇ-ಹರಾಜು ನಿರ್ವಹಿಸಲು ಮೊಹರಾದ ಟೆಂಡರ್‌ಗಳನ್ನು ಕೆ.ಪಿ.ಪಿ. ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಅಲ್ಪಾವಧಿ ಟೆಂಡರ್ ಇಂಡೆಂಟ್ ಸಂಖ್ಯೆಗಳು: INDENT45558, INDENT45559, INDENT45560(CAT-IIA), IND5085,INDENT42102/CALL-2, INDENT42030/CALL-2(CAT-IIA), IND5082. 1) ಮಾಹಿತಿಯನ್ನು ಪಡೆಯಲು ಕೊನೆಯ ದಿನಾಂಕ: 28.07.2025 ಸಂಜೆ 17.30 ಗಂಟೆಯವರೆಗೆ 2) ಕಾಮಗಾರಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 29.07.2025 ಸಂಜೆ 5.00 ವರೆಗೆ. 3) ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 30.07.2025 ಸಂಜೆ 5.15 ಗಂಟೆಗೆ. 4) ಟೆಂಡರ್‌ನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 31.07.2025 ಸಂಜೆ.17.20 ಗಂಟೆಗೆ, ಪೂರ್ಣಾವಧಿ ಟೆಂಡರ್ ಇಂಡೆಂಟ್ ಸಂಖ್ಯೆಗಳು: INDENT45499, INDENT45504, INDENT45506(SC). ಮಾಹಿತಿಯನ್ನು ಪಡೆಯಲು ಕೊನೆಯ ದಿನಾಂಕ: 04.08.2025 ಸಂಜೆ 17.30 ಗಂಟೆಯವರೆಗೆ 2) ಕಾಮಗಾರಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 05.08.2025 ಸಂಜೆ 5.00 ಗಂಟೆಯವರೆಗೆ. 3) ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 06.08.2025 ಸಂಜೆ 5.15 ಗಂಟೆಗೆ. 4) ಟೆಂಡರ್‌ನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 07.08.2025 ಸಂಜೆ 17.20 ಗಂಟೆಗೆ ಇ-ಹರಾಜು ಇಂಡೆಂಟ್ ಸಂಖ್ಯೆ:- AUCTION No: 3588,3592,3593,3594,3596 1) ಮಾಹಿತಿಯನ್ನು ಪಡೆಯಲು ಕೊನೆಯ ದಿನಾಂಕ: 04.08.2025 ಸಂಜೆ 17.30 ಗಂಟೆಯವರೆಗೆ 2) ಇ-ಹರಾಜುಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 05.08.2025 ಸಂಜೆ 5.00 ಗಂಟೆಯವರೆಗೆ. 3) ಇ-ಹರಾಜು ಲೈವ್ ದಿನಾಂಕ: 11.08.2025 ಬೆಳಿಗ್ಗೆ 10.30 ರಿಂದ ಸಂಜೆ 5.00 ಗಂಟೆ ವರೆಗೆ. 4) ಹೆಚ್ಚಿನ ಮಾಹಿತಿಗಾಗಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/- ಪೌರಾಯುಕ್ತರು, ನಗರಸಭೆ, ಮಾದನಾಯಕನಹಳ್ಳಿ

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು- 570 005.
ಸಂ.: ಮೈಅಪ್ರಾ:ನಯೋಶಾ:ಭೂಉಬ:ನಯೋ-1:2025-26 ದಿನಾಂಕ: 15.07.2025

ಸಾರ್ವಜನಿಕ ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಹೊಂಗಹಳ್ಳಿ ಗ್ರಾಮದ ಸ.ನಂ.130/2ರ 00ಎಕರೆ 27ಗುಂಟೆ, 132/2ರ 02ಎಕರೆ 00ಗುಂಟೆ, 133ರ 05ಎಕರೆ 04ಗುಂಟೆ, 142/2ರ 07ಎಕರೆ 32ಗುಂಟೆ ಮತ್ತು 143/5ರ 00ಎಕರೆ 24.08ಗುಂಟೆ ಒಟ್ಟು 16ಎಕರೆ 17.08ಗುಂಟೆ ವಿಸ್ತೀರ್ಣದ ಜಮೀನನ್ನು ಕೆ.ಟಿ.ಸಿ.ಪಿ. ಕಾಯ್ದೆ 1961ರ ಪ್ರಕರಣ 14(ಎ) ರನ್ವಯ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ M/s SANNITHA EDUCATIONAL INSTITUTIONS PVT.LTD ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ "ಪ್ರಶ್ನಿತ ಜಮೀನಿನಲ್ಲಿ ವಾಣಿಜ್ಯ(ಶೈಕ್ಷಣಿಕ) ಚಟುವಟಿಕೆಯನ್ನು ಪ್ರಾರಂಭಿಸುವುದರಿಂದ ಸ್ಥಳೀಯರಿಗೆ ಉದ್ಯೋಗವಕಾಶಗಳು ಲಭಿಸುತ್ತವೆ. ವಾಣಿಜ್ಯ(ಶೈಕ್ಷಣಿಕ) ಉದ್ದೇಶದ ಕಟ್ಟಡಗಳನ್ನು ನಿರ್ಮಿಸುವ ಸಂಧರ್ಭ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಾಣಿಜ್ಯ(ಶೈಕ್ಷಣಿಕ) ಚಟುವಟಿಕೆಗಳಿಂದ ಸುತ್ತಮುತ್ತಲಿನ ಪ್ರದೇಶದ ಸ್ವಾಭಾವಿಕ ಬೆಳವಣಿಗೆಗೆ ಪೂರಕವಾದ ವಾತಾವರಣ ಸೃಷ್ಠಿಯಾಗುತ್ತದೆ ಹಾಗೂ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ" ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು-570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN
LAND IN QUESTION

ಸಹಿ/-
ನಗರ ಯೋಜಕ ಸದಸ್ಯರು
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.
DIPR/MYS/663/SA/2025-26

ಜು.23-26ರವರೆಗಿನ ಪ್ರವಾಸದಲ್ಲಿ ದ್ವಿಪಕ್ಷೀಯ ವಾಣಿಜ್ಯ ಒಪ್ಪಂದ ಚರ್ಚೆ

ಮೋದಿ ಬ್ರಿಟನ್, ಮಾಲ್ಡೀವ್ಸ್‌ಗೆ ಭೇಟಿ

ದೆಹಲಿ: ಜು.23ರಿಂದ 26ರವರೆಗೆ ಪ್ರಧಾನಿ ಮೋದಿ ಅವರು ವಿದೇಶ ಪ್ರವಾಸಕ್ಕೆ ತೆರಳಲಿದ್ದು, ಈ ಬಾರಿ ಬ್ರಿಟನ್ ಮತ್ತು ಮಾಲ್ಡೀವ್ಸ್‌ಗೆ ಭೇಟಿ ನೀಡಲಿದ್ದಾರೆ.

ಈ ಭೇಟಿಯು ಭಾರತ-ಇಂಗ್ಲೆಂಡ್ ನಡುವಿನ ದ್ವಿಪಕ್ಷೀಯ ವಾಣಿಜ್ಯ ಒಪ್ಪಂದಕ್ಕೆ ಅಂತಿಮ ಸ್ವರೂಪ ನೀಡುವುದು ಹಾಗೂ ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಗಟ್ಟಿಗೊಳಿಸುವ ಪ್ರಮುಖ ಗುರಿಯನ್ನು ಹೊಂದಿದೆ.

ಮೂರು ವರ್ಷಗಳ ಚರ್ಚೆಯ ಬಳಿಕ ಮೇ ತಿಂಗಳಲ್ಲಿ ಒಪ್ಪಂದಕ್ಕೆ ಅಂತಿಮ ರೂಪ ನೀಡಲಾಗಿದ್ದು, ಇದು ಭಾರತದ ಶೇ.99ರಷ್ಟು ರಫ್ತುಗಳ ಮೇಲಿನ ಸುಂಕವನ್ನು ತೆಗೆದುಹಾಕಲಿದೆ. ಇದರಿಂದ ಬ್ರಿಟಿಷ್ ಉತ್ಪನ್ನಗಳಾದ ವಿಸ್ಕಿ ಮತ್ತು ಆಟೋಮೊಬೈಲ್‌ಗಳಿಗೆ ಭಾರತದ ಮಾರುಕಟ್ಟೆಯಲ್ಲಿ ಸುಲಭ ಪ್ರವೇಶ ಸಿಗಲಿದೆ. ಎಸ್‌ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್ ಪ್ರಕಾರ, ಈ ಒಪ್ಪಂದವು ಭಾರತಕ್ಕೆ ಗಣನೀಯ ಆರ್ಥಿಕ ಉತ್ತೇಜನ ನೀಡಲಿದೆ. 2024ರಲ್ಲಿ ಇಂಗ್ಲೆಂಡ್‌ನಿಂದ ಭಾರತಕ್ಕೆ 130 ಬಿಲಿಯನ್ ಡಾಲರ್‌ನಷ್ಟು (ಭಾರತದ ಜಿಡಿಪಿಯ 3.3%) ವಿದೇಶಿ ವಿನಿಮಯ ಹರಿವು ದಾಖಲಾಗಿದ್ದು, ಮುಂದಿನ ಒಪ್ಪಂದದಿಂದ ಈ ಹರಿವು ಮತ್ತಷ್ಟು ಹೆಚ್ಚಲಿದೆ. ವಿಶೇಷವಾಗಿ ಬ್ರಿಟನ್‌ನಲ್ಲಿ ಕೆಲಸ ಮಾಡುವ ಭಾರತೀಯ ಐ.ಟಿ ವೃತ್ತಿಪರರಿಗೆ ಮೂರು ವರ್ಷಗಳವರೆಗೆ ರಾಷ್ಟ್ರೀಯ ವಿಮೆಯಿಂದ ವಿನಾಯಿತಿ ನೀಡುವ ನಿಬಂಧನೆಯು ಅವರ ಉಳಿತಾಯ ಮತ್ತು ವಿದೇಶಿ ವಿನಿಮಯ ಹರಿವನ್ನು ಹೆಚ್ಚಿಸಲಿದೆ. 2024ರಲ್ಲಿ 56.7 ಬಿಲಿಯನ್ ಡಾಲರ್

ಆಗಿರುವ ದ್ವಿಪಕ್ಷೀಯ ವಾಣಿಜ್ಯವನ್ನು 2030ರ ವೇಳೆಗೆ ದ್ವಿಗುಣಗೊಳಿಸುವ ಗುರಿಯನ್ನು ಈ ಒಪ್ಪಂದ ಹೊಂದಿದೆ.

ಬ್ರಿಟನ್ ಭೇಟಿಯ ಬಳಿಕ, ಪ್ರಧಾನಮಂತ್ರಿ ಮೋದಿ ಜು.25-26ರ ವರೆಗೆ ಮಾಲ್ಡೀವ್ಸ್‌ಗೆ ತೆರಳಲಿದ್ದಾರೆ. ಆ ವೇಳೆ ಅವರು ಮಾಲ್ಡೀವ್ಸ್‌ನ ಸ್ವಾತಂತ್ರ್ಯ ದಿನಾಚರಣೆಯ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. 1965ರಲ್ಲಿ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದ ನಂತರ 60ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಮಾಲ್ಡೀವ್ಸ್, ಈ ಸಂದರ್ಭದಲ್ಲಿ ಮೋದಿಯವರಿಗೆ ಗೌರವಾನ್ವಿತ ಸ್ವಾಗತವನ್ನು ನೀಡಲಿದೆ. ಮಾಲ್ಡೀವ್ಸ್‌ನ ರಾಷ್ಟ್ರಪತಿ ಮೊಹಮ್ಮದ್ ಮುಯಿಝು ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಯಲಿದೆ. ಎರಡೂ ದೇಶಗಳ ನಡುವಿನ ಸಹಕಾರವನ್ನು ಗಾಢವಾಗಿಸುವ ಬಗ್ಗೆ ಮೋದಿ ಚರ್ಚಿಸಲಿದ್ದಾರೆ.

ಮುಯಿಝು-ಮೋದಿ ಭೇಟಿ

ಕಳೆದ ಕೆಲವು ವರ್ಷಗಳಲ್ಲಿ ಭಾರತ-ಮಾಲ್ಡೀವ್ಸ್ ಸಂಬಂಧಗಳು ಕೆಲವು ಏರಿಳಿತಗಳನ್ನು ಕಂಡಿವೆ. 2023ರಲ್ಲಿ ಮುಯಿಝು ಅವರು 'ಇಂಡಿಯಾ ಔಟ್' ಚುನಾವಣಾ ಪ್ರಚಾರದೊಂದಿಗೆ ಅಧಿಕಾರಕ್ಕೆ ಬಂದಿದ್ದರು. ಆದರೆ ಇತ್ತೀಚಿನ ತಿಂಗಳುಗಳಲ್ಲಿ ಎರಡೂ ದೇಶಗಳು ತಮ್ಮ

ಸಂಬಂಧವನ್ನು ಸುಧಾರಿಸಿಕೊಳ್ಳಲು ಮುಂದಾಗಿವೆ. ಭಾರತವು ಮಾಲ್ಡೀವ್ಸ್‌ಗೆ 2024-25ರಲ್ಲಿ 470 ಕೋಟಿ ರು.ನಿಂದ 600 ಕೋಟಿ ರು.ಗೆ ಹೆಚ್ಚಳವಾದ ಲೈನ್ ಆಫ್ ಕ್ರೆಡಿಟ್ ಮತ್ತು ಕರೆನ್ಸಿ ಸ್ವಾಪ್ ಸೌಲಭ್ಯವನ್ನು ವಿಸ್ತರಿಸಿದೆ. ಇದರಿಂದ ಮಾಲ್ಡೀವ್ಸ್‌ನ ಆರ್ಥಿಕ ಸಂಕಷ್ಟವನ್ನು ನಿವಾರಿಸಲು ಸಾಧ್ಯವಾಗಿದೆ. ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರ ಆಡಳಿತದಲ್ಲಿ ಮಾಲ್ಡೀವ್ಸ್‌ಗೆ ಮೋದಿಯ ಮೊದಲ ಭೇಟಿ ಇದಾಗಿದೆ. ಈ ಭೇಟಿಯನ್ನು ದೀರ್ಘಕಾಲೀನ ಕಳವಳಗಳನ್ನು ಪರಿಹರಿಸಲು, ಪರಸ್ಪರ ಸಹಕಾರವನ್ನು ಬೆಳೆಸಲು ಮತ್ತು ಹಿಂದೂ ಮಹಾಸಾಗರ ಪ್ರದೇಶದಲ್ಲಿ ಭಾರತದ 'ನೆರೆಹೊರೆಯವರು ಮೊದಲು' ನೀತಿಯನ್ನು ಪುನರುಚ್ಚರಿಸಲು ಒಂದು ನಿರ್ಣಾಯಕ ಅವಕಾಶವೆಂದು ಪರಿಗಣಿಸಲಾಗಿದೆ. ಪ್ರಧಾನಿ ಮೋದಿಯವರು ಈ ಹಿಂದೆ ಮಾಲ್ಡೀವ್ಸ್‌ಗೆ 2019, ಜೂನ್‌ನಲ್ಲಿ ಭೇಟಿ ನೀಡಿದ್ದರು.

ಪಾಕ್ ವಾಯುನೆಲೆ ನಿರ್ಬಂಧ ವಿಸ್ತರಣೆ

ಇಸ್ಲಾಮಾಬಾದ್: ಭಾರತೀಯ ವಿಮಾನಗಳಿಗೆ ಪಾಕಿಸ್ತಾನದ ವಾಯುಪ್ರದೇಶ ನಿರ್ಬಂಧವನ್ನು ಆಗಸ್ಟ್ 24ರವರೆಗೆ ವಿಸ್ತರಿಸಲಾಗಿದೆ. ಭಾರತೀಯ ವಿಮಾನಯಾನ ಸಂಸ್ಥೆಗಳು ನಿರ್ವಹಿಸುವ ಯಾವುದೇ ವಿಮಾನಗಳು, ಭಾರತದ ಒಡೆತನದಲ್ಲಿರುವ ಅಥವಾ ಗುತ್ತಿಗೆ ಪಡೆದಿರುವ ಮಿಲಿಟರಿ ಮತ್ತು ನಾಗರಿಕ ವಿಮಾನಗಳಿಗೆ ಆಗಸ್ಟ್ 24ರವರೆಗೆ ಪಾಕಿಸ್ತಾನದ ವಾಯುಪ್ರದೇಶವನ್ನು ಬಳಸಲು ಅನುಮತಿಸಲಾಗುವುದಿಲ್ಲ ಎಂದು ಪಾಕಿಸ್ತಾನದ ವಿಮಾನ ನಿಲ್ದಾಣ ಪ್ರಾಧಿಕಾರ ತಿಳಿಸಿದೆ. ಈ ಕುರಿತು ಭಾರತೀಯ ವಾಯುಪಡೆಗೆ ಸೂಚನೆ ನೀಡಲಾಗಿದೆ.

ಕಾಶ್ಮೀರದ ಪಹಲ್ಗಾಮ್‌ನ ಬೈಸರನ್ ಕಣಿವೆಯಲ್ಲಿ ನಡೆದ ಭಯೋತ್ಪಾದಕ ದಾಳಿಯ ಬಳಿಕ ಎರಡು ರಾಷ್ಟ್ರಗಳ ನಡುವೆ ಉದ್ವಿಗ್ನತೆ ಹೆಚ್ಚಾಗಿದ್ದರಿಂದ ಭಾರತೀಯ ವಿಮಾನಗಳಿಗೆ ಪಾಕಿಸ್ತಾನದ ವಾಯುಪ್ರದೇಶ ಬಳಕೆಯನ್ನು ನಿರ್ಬಂಧಿಸಲಾಗಿತ್ತು, ಇದೀಗ ಈ ನಿರ್ಬಂಧ ಆಗಸ್ಟ್ 24ರವರೆಗೆ ವಿಸ್ತರಿಸಲಾಗಿದೆ.

ಭಾರತೀಯ ವಿಮಾನಯಾನ ಸಂಸ್ಥೆಗಳು ನಿರ್ವಹಿಸುವ ಯಾವುದೇ ವಿಮಾನಗಳು, ಭಾರತದ ಒಡೆತನದಲ್ಲಿರುವ ಅಥವಾ ಗುತ್ತಿಗೆ ಪಡೆದಿರುವ ಮಿಲಿಟರಿ ಮತ್ತು ನಾಗರಿಕ ವಿಮಾನಗಳು ಪಾಕಿಸ್ತಾನದ ವಾಯುಪ್ರದೇಶವನ್ನು ಬಳಸಲು ಅನುಮತಿಸಲಾಗುವುದಿಲ್ಲ ಎಂದು ವಾಯುಪಡೆ ಸೂಚನೆ ತಿಳಿಸಿದೆ. ಈ ಕುರಿತು ಪಾಕಿಸ್ತಾನ ವಿಮಾನ ನಿಲ್ದಾಣ ಪ್ರಾಧಿಕಾರವು ಆದೇಶ ನೀಡಿದ್ದು, ಪಾಕಿಸ್ತಾನ ತನ್ನ ವಾಯುಪ್ರದೇಶವನ್ನು ಆ. 24ರ ವರೆಗೆ ಮುಚ್ಚಲಿದೆ ಎಂದು ಹೇಳಿದೆ.

ಆರು ನಕ್ಸಲರ ಎನ್‌ಕೌಂಟರ್

ರಾಯ್ಪುರ್: ಛತ್ತೀಸ್‌ಗಢದ ನಾರಾಯಣಪುರ ಜಿಲ್ಲೆಯಲ್ಲಿ ಶುಕ್ರವಾರ ನಡೆದ ಮಾವೋವಾದಿ ವಿರೋಧಿ ಕಾರ್ಯಾಚರಣೆಯಲ್ಲಿ ಕನಿಷ್ಠ ಆರು ನಕ್ಸಲರನ್ನು ಹೊಡೆದುರುಳಿಸಲಾಗಿದೆ. ಛತ್ತೀಸ್‌ಗಢದ ಅಬುಜ್ಮದ್ ಪ್ರದೇಶದ ದಟ್ಟ ಅರಣ್ಯ ಪ್ರದೇಶದಲ್ಲಿ ಭದ್ರತಾ ಪಡೆಗಳು ಮತ್ತು ನಕ್ಸಲರ ನಡುವೆ ಗುಂಡಿನ ಚಕಮಕಿ ಏರ್ಪಟ್ಟಿತ್ತು. ನಡೆಯುತ್ತಿರುವ ಕಾರ್ಯಾಚರಣೆಯ ಸಮಯದಲ್ಲಿ, ಪಡೆಗಳು ಎ.ಕೆ-47 ಮತ್ತು ರೈಫಲ್‌ಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಕಾರ್ಯಾಚರಣೆ ಇನ್ನೂ ಪ್ರಗತಿಯಲ್ಲಿದೆ ಎಂದು ಭದ್ರತಾ ಮೂಲಗಳು ದೃಢಪಡಿಸಿವೆ. ಎಡಪಂಥೀಯ ಉಗ್ರವಾದದ ಭದ್ರಕೋಟೆ ಎಂದು ಕರೆಯಲ್ಪಡುವ ಅಬುಜ್ಮದ್ ಕೋರ್ ವಲಯದಲ್ಲಿ ಮಾವೋವಾದಿಗಳು ಇರುವಿಕೆಯ ಮಾಹಿತಿ ಮೇರೆಗೆ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ. ಇಲ್ಲಿಯವರೆಗೆ ಒಟ್ಟು 6 ನಕ್ಸಲರನ್ನು ಎನ್‌ಕೌಂಟರ್ ಮಾಡಲಾಗಿದೆ. ಮಾವೋವಾದಿ ಪೀಡಿತ ಪ್ರದೇಶಗಳಲ್ಲಿ ನಕ್ಸಲರನ್ನು ನಿಗ್ರಹಿಸುವ ಪ್ರಯತ್ನದಲ್ಲಿ ಭದ್ರತಾ ಪಡೆಗಳು ಬಹು ಕಾರ್ಯಾಚರಣೆಗಳನ್ನು ಪ್ರಾರಂಭಿಸಿವೆ.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052
ದೂರವಾಣಿ ಸಂಖ್ಯೆ: 22263479
ಸಂಖ್ಯೆ: STRRPA/TP/ಭೂ.ಪ-ಆನ್‌ಲೈನ್/30/2025-26 ದಿನಾಂಕ: 15.07.2025

ಸಾರ್ವಜನಿಕ ಪ್ರಕಟಣೆ
ಅರ್ಜಿದಾರರಾದ ಶ್ರೀ ಸೊಣ್ಣಪ್ಪ ಬಿನ್ ಮುನಿಯಪ್ಪ ರವರು ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಅಮಾನಿದೊಡ್ಡಕೆರೆ ಗ್ರಾಮದ ಸರ್ವೆ ನಂ.396/1ರಲ್ಲಿ 0-18½ಗುಂಟೆ ಮತ್ತು 400/2ರಲ್ಲಿ 0-10ಗುಂಟೆ ವಿಸ್ತೀರ್ಣದ ಜಮೀನುಗಳನ್ನು ವ್ಯವಸಾಯ ವಲಯದಲ್ಲಿ ಶೈಕ್ಷಣಿಕ ಸಂಸ್ಥೆ ಉದ್ದೇಶಕ್ಕೆ ಭೂಪರಿವರ್ತನೆ ಕೋರಿರುತ್ತಾರೆ. ಈ ಪ್ರಸ್ತಾವನೆ ಕುರಿತು ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರ, ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052. ಇವರಿಗೆ ಲಿಖಿತ ರೂಪದಲ್ಲಿ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸಲು ತಿಳಿಸಲಾಗಿದೆ.
ಸಹಿ/-
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ
ಪ್ರಾಧಿಕಾರ, ಬೆಂಗಳೂರು.
ವಾ.ಸಾ.ಸಂ.ಇ/1944/ಆಕಾರ್/2025-26

ಕರ್ನಾಟಕ ಸರ್ಕಾರ
(ಕಾರಾಗೃಹ ಮತ್ತು ಸುಧಾರಣಾ ಸೇವೆಗಳು)
ಮುಖ್ಯ ಅಧೀಕ್ಷಕರ ಕಾರ್ಯಾಲಯ, ಕೇಂದ್ರ ಕಾರಾಗೃಹ ಮತ್ತು ಸುಧಾರಣಾ ಸೇವೆಗಳು, ಶಿವಮೊಗ್ಗ.
Ph:08182-295502 Email:-cpsmg.prisons@ka.gov.in
ಸಂಖ್ಯೆ: ಕೇಕಾಶಿ/ದರಖಾಸ್ತು/1242/2025-26 ದಿನಾಂಕ: 18.07.2025

ಪ್ರಕಟಣೆ
2025-26 ನೇ ಸಾಲಿಗೆ
1. ಬಂದಿಗಳಿಗೆ ತಲೆಕ್ಷೌರ ಮತ್ತು ಮುಖಕ್ಷೌರ ಮಾಡುವ ಕೆಲಸಗಳ ಕುರಿತ ಇ-ದರಖಾಸ್ತು ಸಂಖ್ಯೆ: PCSD/2025-26/SE0016/ ಇ.ಎಂ.ಡಿ. ಮೊತ್ತ ರೂ.81,323-00, ಟೆಂಡರ್ ಕರೆದ ದಿನಾಂಕ:18/07/2025, ಕೊನೆಯ ದಿನಾಂಕ:19/08/2025.
2. ಹೊರ ಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳ ಸೇವೆ ಇ-ದರಖಾಸ್ತು ಸಂಖ್ಯೆ: PCSD/2025- 26/SE0014/CALL-2, ಇ.ಎಂ.ಡಿ.ಮೊತ್ತ ರೂ.40,856-00, ಟೆಂಡರ್ ಕರೆದ ದಿನಾಂಕ:18/07/2025, ಕೊನೆಯ ದಿನಾಂಕ:04/08/2025.
ಸದರಿ ದರಖಾಸ್ತಿನಲ್ಲಿ ಭಾಗವಹಿಸಲು ಈ ದರಖಾಸ್ತಿನ ಕುರಿತು ಹೆಚ್ಚಿನ ಮಾಹಿತಿಯನ್ನು ಆನ್‌ಲೈನ್ www.eproc.karnataka.gov.in ನಲ್ಲಿ ಪಡೆಯಲು ತಿಳಿಸಿದೆ. ಹಾಗೂ ಸದರಿ ದರಖಾಸ್ತಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಈ ಕೆಳಕಂಡ ವಿಳಾಸದಲ್ಲಿ ಪಡೆಯಲು ಸೂಚಿಸಿದೆ.
ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ ಮತ್ತು ಸುಧಾರಣಾ ಸೇವಾ ಕಛೇರಿ, ಸೋಗಾನೆ (ಗ್ರಾ), ನಿಧಿಗೆ ಅಂಚೆ, ಶಿವಮೊಗ್ಗ, ಪಿನ್ ಕೋಡ್: 577222
PhNo.: 08182-295502 / 9845460040
ಸಹಿ/- ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/141/07/640

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಆಸ್ತಿ ವಿಭಾಗ, ಕೃಷಿ ನಗರ, ಧಾರವಾಡ-5
ಫ್ಯಾಕ್ಸ್: +91-836-2441188 ದೂರವಾಣಿ: +91-836-2214214
ಇ-ಮೇಲ್: estateofficer@rediffmail.com Epabx: +91-836-2214214 / 216, 332, 215
ಸಂಖ್ಯೆ: ಅಅ/ಇ-ಪ್ರೊ.ಕೆ.ಎಮ್-2025/2025-26 ದಿನಾಂಕ: 18-07-2025

ಟೆಂಡರ್ ಪ್ರಕಟಣೆ (ತೃತೀಯ ಕರೆ)
ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿ ಜರುಗಲಿರುವ ಕೃಷಿಮೇಳ - 2025 (ಸೆಪ್ಟೆಂಬರ್ 2025 ರಲ್ಲಿ ನಾಲ್ಕು ದಿನ) ಪ್ರದರ್ಶನಕ್ಕೆ ಶಾಮಿಯಾನಾ ಹಾಕಲು ಹಾಗೂ ಇತರೆ ಕೆಲಸಗಳಿಗೆ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಮರು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿಯಂತೆ https://kppp.karnataka.gov.in ಆನ್‌ಲೈನ್ ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಕಚೇರಿ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ: 0836-2214216 / 332 ಸಂಪರ್ಕಿಸಬಹುದು.
ಟೆಂಡರ್ ವೇಳಾಪಟ್ಟಿ: 1) ವಿಚಾರಣೆಗಳಿಗಾಗಿ ಕೊನೆಯ ದಿನಾಂಕ ಮತ್ತು ಸಮಯ: 22-07-2025 ರಂದು 16.00 ಗಂಟೆಯವರೆಗೆ. 2) ಬಿಡ್ ಪೂರ್ವ ಸಭೆ ನಡೆಯುವ ದಿನಾಂಕ ಮತ್ತು ಸಮಯ: 23-07-2025 ರಂದು 11.00 ಗಂಟೆಗೆ. 3) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 26-07-2025 ರಂದು 16.00 ಗಂಟೆಯವರೆಗೆ. 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 28-07-2025 ರಂದು 16.15 ಗಂಟೆಗೆ. 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 29-07-2025 ರಂದು 16.00 ಗಂಟೆಗೆ.
ಸೂಚನೆ: ಇ-ಟೆಂಡರ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಪ್ರವಹಿಸುವ ತಿದ್ದುಪಡಿಗಳು / ಮಾರ್ಪಾಡುಗಳನ್ನು ಗುತ್ತಿಗೆದಾರರು ಗಮನಿಸಬೇಕು.
ಸಹಿ/-
ಆಸ್ತಿ ಅಧಿಕಾರಿಗಳು
ವಾಸಾಸಂಇ/ಧಾರವಾಡ/438/ಅಡ್ವರ್ಟೋರ್/2025-26

ಟ್ರಂಪ್ ಹೇಳಿಕೆಗೆ ಮೋದಿ ಸ್ಪಷ್ಟನೆ ಬೇಕು: ಕಾಂಗ್ರೆಸ್

ಸಂಸತ್ ಅಧಿವೇಶನ ನಾಳೆಯಿಂದ

ದೆಹಲಿ: ಸೋಮವಾರದಿಂದ ಸಂಸತ್‌ನ ಮಳೆಗಾಲದ ಅಧಿವೇಶನ ಆರಂಭವಾಗಲಿದ್ದು, ಆಗಸ್ಟ್ 21ನೇ ತಾರೀಕಿನ ವರೆಗೂ ನಡೆಯಲಿದೆ. ಈ ಸಲದ ಸಂಸತ್ ಕಲಾಪವು ಆಡಳಿತ-ಪ್ರತಿಪಕ್ಷಗಳ ವಾದ-ಪ್ರತಿವಾದಗಳಿಗೆ ವೇದಿಕೆಯಾಗಲಿದೆ. ಹಲವಾರು ವಿಷಯಗಳು ಈ ಬಾರಿಯ ಕಲಾಪದಲ್ಲಿ ಚರ್ಚೆಯಾಗಲಿದೆ.

ಈ ಸಲದ ಮುಂಗಾರು ಅಧಿವೇಶನ ಅತ್ಯಂತ ಮಹತ್ವದ್ದಾಗಿದ್ದು, ದೇಶದ ಜನತೆಗೆ ಏಕತೆ ಮತ್ತು ಒಗ್ಗಟ್ಟಿನ ಸಂದೇಶವನ್ನು ಸಾರಲು ಈ ಅಧಿವೇಶನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುವುದು ಎಂಬ ವಿಶ್ವಾಸ ಇದೆ ಎಂದು ಕೇಂದ್ರ ಸಚಿವ ಕಿರಣ್ ರಿಜಿಜು ಈ ಹಿಂದೆಯೇ ಹೇಳಿದ್ದರು. ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆ ಸಂದರ್ಭದಲ್ಲಿ, ರಾಜಕೀಯ ಪಕ್ಷಗಳು ಪಕ್ಷಭೇಧ ಮರೆತು ಒಗ್ಗಟ್ಟನ್ನು ಪ್ರದರ್ಶಿಸಿವೆ. ಆಡಳಿತ ಪಕ್ಷ ಮತ್ತು ವಿಪಕ್ಷಗಳು ಒಟ್ಟಾಗಿ ಪಾಕಿಸ್ತಾನಕ್ಕೆ ಬುದ್ಧಿ ಕಲಿಸುವಲ್ಲಿ ಯಶಸ್ವಿಯಾಗಿವೆ. ಸಂಸತ್ತಿನ ಮುಂಗಾರು ಅಧಿವೇಶನ ಕೂಡ ಇದೇ ಹುಮ್ಮಸ್ಸಿನಲ್ಲಿ ನಡೆಯಲಿದೆ ಎಂಬ ಭರವಸೆ ಇದೆ ಎಂದು ಅವರು ಸ್ಪಷ್ಟಪಡಿಸಿದ್ದರು. ಭಾರತ ನಡೆಸಿದ ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆ ಕುರಿತು ಚರ್ಚಿಸಲು, ಸಂಸತ್ತಿನ ವಿದೇಶ ಅಧಿವೇಶನ ಕರೆಯಬೇಕು ಎಂಬುದು ಪ್ರತಿಪಕ್ಷಗಳು ಹಲವಾರು ಸಲ ತಮ್ಮ ಬೇಡಿಕೆಯನ್ನು ವ್ಯಕ್ತಪಡಿಸಿದ್ದವು.

ಕಾಂಗ್ರೆಸ್ ಒತ್ತಾಯ ಏನು?

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಕೇಂದ್ರ ಸರಕಾರವನ್ನು ಈ ಕುರಿತಾಗಿ ಪ್ರಶ್ನಿಸಿದ್ದು, ಡೊನಾಲ್ಡ್ ಟ್ರಂಪ್ ಅವರು ಭಾರತ-ಪಾಕ್ ಸಂಘರ್ಷ ನಿಲ್ಲಿಸಿದ್ದು ನಾನು ಎಂದು ಹಲವಾರು ಬಾರಿ ಹೇಳಿದ್ದಾರೆ. ಅವರನ್ನು ತಮ್ಮ ಗೆಳೆಯ ಎಂದು ಹೇಳಿಕೊಳ್ಳುವ ಪ್ರಧಾನಿ ಮೋದಿ, ಅಮೆರಿಕ ಅಧ್ಯಕ್ಷರ ಆ ಹೇಳಿಕೆಯ ಬಗ್ಗೆ ಏಕೆ ಸ್ಪಷ್ಟನೆ ನೀಡುತ್ತಿಲ್ಲ? 2019 ರಲ್ಲಿ 'ಹೌಡಿ ಮೋದಿ', 2020 ರಲ್ಲಿ 'ನಮಸ್ತೆ ಟ್ರಂಪ್?' ಕಾರ್ಯಕ್ರಮ ನಡೆಸಿದ್ದಾರೆ. ಇಬ್ಬರ ನಡುವೆ ಅಂತಹ ಸ್ನೇಹ ಮತ್ತು ಬಾಂಧವ್ಯ ಹೊಂದಿದ್ದೇ ಆದಲ್ಲಿ, ಕಳೆದ 70 ದಿನಗಳಿಂದ ಟ್ರಂಪ್ ನೀಡುತ್ತಿರುವ ಹೇಳಿಕೆಗಳ ಬಗ್ಗೆ ದೇಶಕ್ಕೆ ಪ್ರಧಾನಿಯೇ ಸ್ಪಷ್ಟನೆ ನೀಡಬೇಕಿತ್ತು ಎಂದಿದ್ದಾರೆ. ಆದರೆ ಈ ವಿಷಯವನ್ನು ಕೇಂದ್ರ ಸರಕಾರ ಹಲವಾರು ಸಲ ನಿರಾಕರಿಸಿತ್ತು. ಇದೀಗ ಮತ್ತೆ ಕಾಂಗ್ರೆಸ್ ಪಕ್ಷವು ಅಧಿವೇಶನದಲ್ಲಿ ಈ ಕುರಿತಾಗಿ ಮೋದಿಯಿಂದ ಸ್ಪಷ್ಟತೆ ಬೇಕು ಎಂದಿದೆ.

ಆನ್‌ಲೈನ್ ಬೆಟ್ಟಿಂಗ್ ಆ್ಯಪ್‌ಗೆ ಬೆಂಬಲ

ಗೂಗಲ್, ಮೆಟಾಗೆ ಇ.ಡಿ ನೋಟಿಸ್

ದೆಹಲಿ: ಆನ್‌ಲೈನ್ ಬೆಟ್ಟಿಂಗ್ ಅಪ್ಲಿಕೇಶನ್ ಪ್ರಕರಣಗಳ ತನಿಖೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ಶನಿವಾರ ಟೆಕ್ ಕಂಪನಿಗಳಾದ ಗೂಗಲ್ ಮತ್ತು ಮೆಟಾಗೆ ನೋಟಿಸ್ ಜಾರಿ ಮಾಡಿದ್ದು, ಜುಲೈ 21ರಂದು ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಿದೆ. ಈಗಾಗಲೇ ಇ.ಡಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವಾರು ಸೆಲೆಬ್ರಿಟಿಗಳು ಮತ್ತು ಪ್ರಭಾವಿಗಳಿಗೆ ನೋಟೀಸ್ ನೀಡಿದೆ. ಮನಿ ಲಾಂಡರಿಂಗ್ ಮತ್ತು ಹವಾಲಾ ವಹಿವಾಟುಗಳು ಸೇರಿದಂತೆ ಗಂಭೀರ ಆರ್ಥಿಕ ಅಪರಾಧಗಳಿಗಾಗಿ ಪ್ರಸ್ತುತ ತನಿಖೆಯಲ್ಲಿರುವ ಬೆಟ್ಟಿಂಗ್ ಅರ್ಜಿಗಳ ಪ್ರಚಾರವನ್ನು ಗೂಗಲ್ ಮತ್ತು ಮೆಟಾ ಸಕ್ರಿಯವಾಗಿ ಸುಗಮಗೊಳಿಸುತ್ತಿವೆ ಎಂದು ಇ.ಡಿ. ಆರೋಪಿಸಿದೆ. ಈ ಟೆಕ್ ಕಂಪನಿಗಳು ಪ್ರಮುಖ ಜಾಹೀರಾತು ಸ್ಲಾಟ್‌ಗಳನ್ನು ಒದಗಿಸಿವೆ ಮತ್ತು ಈ ಆನ್‌ಲೈನ್ ಬೆಟ್ಟಿಂಗ್ ಪ್ಲಾಟ್‌ಫಾರ್ಮ್‌ಗಳಿಗೆ ಲಿಂಕ್ ಮಾಡಲಾದ ವೆಬ್‌ಸೈಟ್‌ಗಳು ತಮ್ಮ ಪ್ಲಾಟ್‌ಫಾರ್ಮ್‌ಗಳಲ್ಲಿ ಅವಕಾಶವನ್ನು ನೀಡಿದೆ. ಗೂಗಲ್ ಹಾಗೂ ಮೆಟಾ ಇವುಗಳನ್ನು ಪ್ರೋತ್ಸಾಹಿಸುತ್ತಿದೆ ಎಂದು ಇ.ಡಿ ತನ್ನ ನೋಟೀಸ್‌ನಲ್ಲಿ ತಿಳಿಸಿದೆ.

ಪ್ರಕರಣಗಳಲ್ಲಿ, ಮಹಾದೇವ್ ಬೆಟ್ಟಿಂಗ್ ಆ್ಯಪ್ ಒಂದು ಪ್ರಮುಖ ಆರ್ಥಿಕ ಹಗರಣವಾಗಿದ್ದು, ಒಟ್ಟು ಹಗರಣದ ಅಂದಾಜು ರು. 6,000 ಕೋಟಿ ಮೀರಿದೆ ಎಂದೂ ಅಂದಾಜಿಸಲಾಗುತ್ತಿದೆ.

ಮಹಿಳೆಯರು ಮುಂದಿನ ಪೀಳಿಗೆಗೆ ಸ್ಫೂರ್ತಿ ಎಂದ ಆರ್‌ಎಸ್‌ಎಸ್ ಮುಖ್ಯಸ್ಥ

ಮಹಿಳಾ ಸಬಲೀಕರಣ ಅಗತ್ಯ: ಭಾಗವತ್

ಮುಂಬೈ: ಪುರುಷ ನಿವೃತ್ತಿಯ ವರೆಗೆ ಕೆಲಸ ಮಾಡಿದರೆ ಮಹಿಳೆ ತನ್ನ ಜೀವನದ ಕೊನೆಯವರೆಗೂ ದುಡಿಯುತ್ತಲೇ ಇರುತ್ತಾಳೆ. ರಾಷ್ಟ್ರದ ಪ್ರಗತಿಗೆ ಮಹಿಳೆಯರ ಸಬಲೀಕರಣ ಅತ್ಯಗತ್ಯ. ಅವರನ್ನು ಪ್ರತಿಗಾಮಿ ಪದ್ಧತಿಗಳು ಮತ್ತು ಸಂಪ್ರದಾಯಗಳಿಂದ ಮುಕ್ತಗೊಳಿಸಬೇಕಿದೆ. ಮಹಿಳೆಯರು ಪ್ರತಿಯೊಂದು ಸಮಾಜದ ಪ್ರಮುಖ ಭಾಗವಾಗಿದ್ದಾರೆ. ರಾಷ್ಟ್ರೀಯ ಅಭಿವೃದ್ಧಿಗೆ ಮಹಿಳೆಯರ ಸಬಲೀಕರಣವು ನಿರ್ಣಾಯಕವಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದರು.

ಅವರು ಮಹಾರಾಷ್ಟ್ರದ ಸೋಲಾಪುರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು. ಮಹಿಳೆ ಜೀವನ ಪೂರ್ತಿ ದುಡಿಯುತ್ತಲೇ ಇರುತ್ತಾಳೆ, ಅದನ್ನು ಮೀರಿ ಆಕೆ ಮುಂದಿನ ಪೀಳಿಗೆಗೆ ಸ್ಫೂರ್ತಿ ನೀಡುತ್ತಾಳೆ. ಮಹಿಳೆಯರ ಪ್ರೀತಿ ಮತ್ತು ವಾತ್ಸಲ್ಯದ ಅಡಿಯಲ್ಲೇ ಮಕ್ಕಳು ಬೆಳೆಯುತ್ತಾರೆ ಮತ್ತು ಪ್ರಬುದ್ಧರಾಗುತ್ತಾರೆ ಎಂದೂ ಹೇಳಿದರು.

ದೇವರು ಮಹಿಳೆಯರಿಗೆ ಹೆಚ್ಚುವರಿ ಗುಣವನ್ನು ನೀಡಿದ್ದಾನೆ. ಪುರುಷರಿಗೆ ಸಾಧ್ಯವಾಗದ ಕೆಲಸಗಳನ್ನು ಮಾಡಲು ಅವರಿಗೆ ಶಕ್ತಿ ಕೊಟ್ಟಿದ್ದಾನೆ. ಪುರುಷರಿಗೆ ನೀಡಿರುವ ಎಲ್ಲ ಗುಣಗಳನ್ನು ಮಹಿಳೆಯರಿಗೂ ನೀಡಿದ್ದಾನೆ, ಮಹಿಳೆಯರು ಪುರುಷರು ಮಾಡುವಂತಹ ಪ್ರತಿಯೊಂದು ಕಾರ್ಯವನ್ನೂ ಮಾಡುತ್ತಾರೆ. ಅವರಲ್ಲಿ ಅಷ್ಟೊಂದು ಶಕ್ತಿ ಇದೆ ಎಂದು ಅವರು ತಿಳಿಸಿದರು. ಪುರುಷರು ಮಹಿಳೆಯರನ್ನು ಮೇಲಕ್ಕೆತ್ತುತ್ತೇವೆ ಎಂದು ಹೇಳಿಕೊಳ್ಳುವುದು ಮೂರ್ಖತನ ಎಂದು ಹೇಳಿದ ಭಾಗವತ್, ಈ ರೀತಿಯ ಅಹಂಕಾರ ಪುರುಷರಿಗೆ ಒಳ್ಳೆಯದಲ್ಲ, ಅದಕ್ಕೆ ಕಾರಣವೂ ಇಲ್ಲ, ಮಹಿಳೆಯರು ತಮಗೆ ಬೇಕಾದುದನ್ನು ಮಾಡಲಿ, ಅವರನ್ನು ಸಬಲೀಕರಣಗೊಳಿಸಿ. ಅವರು ಹಿಂಜರಿಯುವಂತೆ ಮಾಡುವ ಪದ್ಧತಿಗಳು ಮತ್ತು ಸಂಪ್ರದಾಯಗಳಿಂದ ಅವರನ್ನು ಮುಕ್ತಗೊಳಿಸಿ. ಒಬ್ಬ ಮಹಿಳೆ ತನ್ನನ್ನು ತಾನು ಮೇಲಕ್ಕೆತ್ತಿಕೊಂಡಾಗ ಅವಳು ಇಡೀ ಸಮಾಜವನ್ನು ಮೇಲಕ್ಕೆತ್ತುತ್ತಾಳೆ ಎಂದು ಭಾಗವತ್ ಹೇಳಿದರು. ಅವರು ಮಹಿಳೆಯರನ್ನು ಸಬಲೀಕರಣಗೊಳಿಸುವ ಮತ್ತು ಬಲಪಡಿಸುವಲ್ಲಿ ಉದ್ಯೋಗವರ್ಧಿನಿಯ ಕೊಡುಗೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮಕ್ಯೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಜೆಸ್ಕಾಂ ಗುಲಬರ್ಗಾ. ಪಿನ್ ನಂ.585102
ದೂ.: 08472 256881 CIN: U04010KA2002SGC030436, ಇ.ಮೆಲ್: gescomdsm@gmail.com
ಸಂಖ್ಯೆ:-ಜೆಸ್ಕಾಂ/ಮು.ಅ.ವಿ(ಕಾ)/ಅ.ಅ.ವಿ(ಪ್ರೊ)/ಕಾ.ನಿ.ಅ./ಸ.ಕಾ.ನಿ.ಅ.(ಡಿಎಸ್‌ಎಮ್)/2025-26/28644-683
ದಿನಾಂಕ: 19.07.2025

ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ)
ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ವ್ಯಾಪ್ತಿಯಲ್ಲಿ ಪಿಎಮ್-ಕುಸುಮ-ಸಿ ಯೋಜನೆ ಅಡಿಯಲ್ಲಿ ಸೌರ ವಿದ್ಯುತ್ ಸ್ಥಾವರಗಳ ನಿರ್ಮಾಣ, ವಿನ್ಯಾಸ, ಸಮೀಕ್ಷೆ, ಸರಬರಾಜು, ಪರೀಕ್ಷೆ, ಚಾಲನೆ, ನಿರ್ವಹಣೆ ಹಾಗೂ ಕಾರ್ಯಾಚರಣೆಯ ಆಧಾರದ ಮೇಲೆ ಸೌರ ವಿದ್ಯುತ್ ಉತ್ಪಾದಕರ ಆಯ್ಕೆಗಾಗಿ ಅರ್ಹ ಬಿಡ್ಡುದಾರರಿಂದ ಟೆಂಡರನ್ನು ಆಹ್ವಾನಿಸಲಾಗುತ್ತಿದೆ. ಜೆಸ್ಕಾಂ ಕಾರ್ಯವ್ಯಾಪ್ತಿಯಲ್ಲಿ ಉಪಕೇಂದ್ರ ಮಟ್ಟದಲ್ಲಿ ಆಯ್ದ ಕೃಷಿ ಫೀಡರುಗಳು ಮತ್ತು ಅದಕ್ಕೆ ಸಂಬಂಧಿಸಿದ 11 ಕೆವಿ ವಿದ್ಯುತ್ ಮಾರ್ಗ ನಿರ್ಮಾಣ ಮತ್ತು ಸೌರ ವಿದ್ಯುತ್ ಸ್ಥಾವರಗಳ ದುರಸ್ತಿ ಹಾಗೂ ಮೇಲ್ವಿಚಾರಣೆ ವ್ಯವಸ್ಥೆಯನ್ನು RESCO ರೀತಿಯಲ್ಲಿ 25 ವರ್ಷಗಳವರೆಗೆ ನಿರ್ವಹಿಸುವುದು.
1. ಗುವಿಸಕಂನಿ/ಮು.ಸ(ಕಾ)/ಅ.ಅ.ವಿ(ಪ್ರೋ)/ಕಾ.ನಿ.ಸ(ಡಿ ಎಸ್ ಎಮ್)/ಪಿ ಎಂ- ಕುಸುಮ್-ಸಿ/ಎಸ್ ಪಿ ಜಿ/504-537- ಮೊದಲನೇ ಕರೆ
ಕಲಬುರಗಿ 18 ವಿದ್ಯುತ್ ಉಪ ಕೇಂದ್ರಗಳು, 75.76 MWp, ಕೊಪ್ಪಳ 3 ವಿದ್ಯುತ್ ಉಪ ಕೇಂದ್ರಗಳು 13.91 MWp, ರಾಯಚೂರು 6 ವಿದ್ಯುತ್ ಉಪ ಕೇಂದ್ರಗಳು 25.97 MWp, ಬಳ್ಳಾರಿ 4 ವಿದ್ಯುತ್ ಉಪ ಕೇಂದ್ರಗಳು 17 MWp, ಬೀದರ 3 ವಿದ್ಯುತ್ ಉಪ ಕೇಂದ್ರಗಳು 19 MWp, - ಒಟ್ಟು: 34 ವಿದ್ಯುತ್ ಉಪಕೇಂದ್ರಗಳು, 151.64 MWp,
2. ಗುವಿಸಕಂನಿ/ಮು.ಸ(ಕಾ)/ಅ.ಅ.ವಿ(ಪ್ರೋ)/ಕಾ.ನಿ.ಸ(ಡಿ ಎಸ್ ಎಮ್)/ಪಿ ಎಂ- ಕುಸುಮ್-ಸಿ/ಎಸ್ ಪಿ ಜಿ/538-545-ಎರಡನೇ ಕರೆ.
ಕೊಪ್ಪಳ 02 ವಿದ್ಯುತ್ ಉಪ ಕೇಂದ್ರಗಳು 5.94 MWp, ಬಳ್ಳಾರಿ 06 ವಿದ್ಯುತ್ ಉಪ ಕೇಂದ್ರಗಳು 28.46 MWp, -> ಒಟ್ಟು: 8 ವಿದ್ಯುತ್ ಉಪಕೇಂದ್ರಗಳು, 34.43 MWp,
ಬಿಡ್ಡು ದಾಖಲೆಗಳು ದಿನಾಂಕ. 28.07.2025 ರಂದು ಅಥವಾ ನಂತರ https://kppp.karnataka.gov.in ನಲ್ಲಿ ಲಭ್ಯವಿರುತ್ತವೆ. ಬಿಡ್ಡುದಾರರು ಟೆಂಡರ್‌ಗಳಲ್ಲಿ ಭಾಗವಹಿಸಲು ಹೆಚ್ಚಿನ ವಿವರಗಳಿಗಾಗಿ ನಿಗಮ ಕಛೇರಿ, ಡಿಎಸ್‌ಎಂ ಶಾಖೆ, ಜೆಸ್ಕಾಂ, ಕಲಬುರಗಿ ರವರಿಂದ ಪಡೆಯಬಹುದಾಗಿದೆ.
ಸಹಿ/- ಮುಖ್ಯ ಇಂಜಿನಿಯರ್ (ವಿ),
(ಕಾರ್ಯಚರಣೆ), ನಿಗಮ ಕಛೇರಿ, ಜೆಸ್ಕಾಂ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/307/ಕೆ.ಎಸ್.ಎಂ.ಸಿ.&ಎ/2025-26

ಸಂಗೀತಾ ಬಿಜಲಾನಿ ಮನೆಯಲ್ಲಿ ಕಳ್ಳತನ

ಮುಂಬೈ: ನಟ ಸಲ್ಮಾನ್ ಖಾನ್ ಮಾಜಿ ಗೆಳತಿ ಹಾಗೂ ಬಾಲಿವುಡ್ ನಟಿ ಸಂಗೀತಾ ಬಿಜಲಾನಿ ಅವರ ಪುಣೆಯ ಮಾವಲ್‌ನಲ್ಲಿರುವ ತೋಟದ ಮನೆಯಲ್ಲಿ ಕಳ್ಳತನ ನಡೆದಿದೆ. ದೀರ್ಘ ಸಮಯದ ನಂತರ ಜುಲೈ 18ರಂದು ಸಂಗೀತಾ ತಮ್ಮ ಫಾರ್ಮ್ ಹೌಸ್‌ಗೆ ಭೇಟಿ ನೀಡಿದಾಗ ಈ ಘಟನೆ ಬೆಳಕಿಗೆ ಬಂದಿದೆ. ಕಳ್ಳತನ ನಡೆದಿರುವುದು ತಿಳಿದ ಕೂಡಲೇ ಸಂಗೀತಾ, ಸ್ಥಳೀಯ ಪೊಲೀಸರಿಗೆ ದೂರು ನೀಡಿದ್ದಾರೆ. ಮನೆಯ ಮುಖ್ಯ ದ್ವಾರ ಹಾಗೂ ಕಿಟಕಿ ಎರಡೂ ಹಾನಿಗೊಳಗಾಗಿವೆ ಎಂದು ವರದಿಯಾಗಿದೆ. ಕಳ್ಳರು ಒಳನುಗ್ಗಿದ್ದರಿಂದ ನಟಿ ಸಂಗೀತಾ ಅವರ ತೋಟದ ಮನೆ ಹಾನಿಗೊಳಗಾಗಿದೆ. ಇಬ್ಬರು ಕೆಲಸದವರೊಂದಿಗೆ ತೋಟದ ಮನೆಗೆ ಹೋದಾಗ, ಮನೆಯ ಮುಖ್ಯ ದ್ವಾರದ ಬಾಗಿಲು ಹಾನಿಗೊಳಗಾಗಿರುವುದನ್ನು ಅವರು ಗಮನಿಸಿದ್ದಾರೆ. ಒಳಗೆ ಹೋದಾಗ ಕಿಟಕಿಯ ಗ್ರಿಲ್ ಮುರಿದಿತ್ತು. ಒಂದು ಟಿ.ವಿ ಸೆಟ್ ಕಳವಾಗಿದ್ದರೆ, ಇನ್ನೊಂದು ಜಖಂಗೊಂಡಿತ್ತು ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ನಟಿ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ರಾಜಕೀಯ ತೊರೆಯಲು ಎಎಪಿ ಶಾಸಕಿ ನಿರ್ಧಾರ

ಚಂಡೀಗಢ: ಗಾಯಕಿ ಹಾಗೂ ಎ.ಎ.ಪಿ ನಾಯಕಿ ಅನ್ಮೋಲ್ ಗಗನ್ ಮಾನ್ ಅವರು ಪಂಜಾಬ್ ವಿಧಾನ ಸಭಾ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ರಾಜಕೀಯ ತೊರೆಯಲು ನಿರ್ಧರಿಸಿರುವುದಾಗಿ ಶನಿವಾರ ಹೇಳಿದ್ದಾರೆ. ಖರಾರ್ ಕ್ಷೇತ್ರದ ಶಾಸಕಿ ಅನ್ಮೋಲ್ ಗಗನ್ ಮಾನ್ ಅವರು ತಮ್ಮ ರಾಜೀನಾಮೆ ಪತ್ರವನ್ನು ಪಂಜಾಬ್ ವಿಧಾನ ಸಭಾ ಸ್ಪೀಕರ್ ಕುಲ್ತಾರ್ ಸಿಂಗ್ ಸಂಧ್ವಾನ್ ಅವರಿಗೆ ಕಳುಹಿಸಿದ್ದಾರೆ. 'ನಾನು ರಾಜಕೀಯ ತೊರೆಯಲು ನಿರ್ಧರಿಸಿದ್ದೇನೆ, ಹೀಗಾಗಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಸ್ಪೀಕರ್ ನನ್ನ ರಾಜೀನಾಮೆಯನ್ನು ಅಂಗೀಕರಿಸಬೇಕು. ಪಕ್ಷಕ್ಕೆ ನನ್ನ ಶುಭಾಶಯಗಳು, ಪಂಜಾಬ್ ಸರಕಾರ ಜನರ ನಿರೀಕ್ಷೆಗಳಿಗೆ ತಕ್ಕಂತೆ ಕೆಲಸ ಮಾಡುತ್ತದೆಂದು ನಾನು ಭಾವಿಸು ತ್ತೇನೆ' ಎಂದು ಮಾನ್ ಅವರು ಎಕ್ಸ್‌ನಲ್ಲಿ ಪಂಜಾಬಿ ಯಲ್ಲಿ ಪೋಸ್ಟ್ ಮಾಡಿದ್ದಾರೆ. ಗಾಯಕಿಯಾಗಿರುವ ಮಾನ್ ಅವರು ಎಎಪಿ ಸೇರಿ, 2022ರ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಖರಾರ್ ವಿಧಾನ ಸಭಾ ಕ್ಷೇತ್ರದಿಂದ ಗೆಲುವು ಸಾಧಿಸಿದ್ದರು. ಸಚಿವೆಯಾಗಿಯೂ ಕೆಲಸ ಮಾಡಿರುವ ಮಾನ್, ಪ್ರವಾಸೋದ್ಯಮ ಮತ್ತು ಸಂಸ್ಕೃತಿ, ಬಂಡವಾಳ ಹೂಡಿಕೆ ಪ್ರಚಾರ, ಕಾರ್ಮಿಕ ಮತ್ತು ಆತಿಥ್ಯ ಖಾತೆಗಳನ್ನು ಹೊಂದಿದ್ದರು. ಕಳೆದ ವರ್ಷ, ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು, ಅನ್ಮೋಲ್ ಗಗನ್ ಮಾನ್ ಸೇರಿದಂತೆ ನಾಲ್ಕು ಸಚಿವರನ್ನು ತಮ್ಮ ಸಂಪುಟದಿಂದ ಕೈಬಿಟ್ಟಿದ್ದರು.

ಅಪಘಾತ ಆರು ಸಾವು

ಮಥುರಾ: ಉತ್ತರ ಪ್ರದೇಶದ ಮಥುರಾ ಜಿಲ್ಲೆಯ ಯಮುನಾ ಎಕ್ಸ್‌ಪ್ರೆಸ್‌ವೇಯಲ್ಲಿ ಟ್ರಕ್‌ಗೆ ಮಿನಿ ವ್ಯಾನ್ ಡಿಕ್ಕಿ ಹೊಡೆದ ಪರಿಣಾಮವಾಗಿ ಒಂದೇ ಕುಟುಂಬದ ಮೂವರು ಸೇರಿದಂತೆ ಆರು ಮಂದಿ ಸಾವನ್ನಪ್ಪಿದ್ದಾರೆ. ಭೀಕರ ಅಪಘಾತದಲ್ಲಿ ಇಬ್ಬರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ. ಬೆಳಗ್ಗೆ 3 ಗಂಟೆಯ ಸುಮಾರಿನಲ್ಲಿ ಈ ಅಪಘಾತ ಸಂಭವಿಸಿದ್ದು, ಆಗ್ರಾಕ್ಕೆ ತೆರಳುತ್ತಿದ್ದ ಮಿನಿ-ವ್ಯಾನ್ ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಚಾಲಕನು ನಿದ್ರೆಯ ಮಂಪರಿನಲ್ಲಿದ್ದರಿಂದ ಈ ಅಪಘಾತ ಸಂಭವಿಸಿದೆ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಶ್ಲೋಕ್ ಕುಮಾರ್ ಹೇಳಿದ್ದಾರೆ.

ಭಾರೀ ಮಳೆ ಸಾಧ್ಯತೆ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಮುಂಗಾರು ಚುರುಕಾಗಿರುವುದರಿಂದ ಜೋರು ಗಾಳಿ ಸಹಿತ ವ್ಯಾಪಕ ಮಳೆಯಾಗುತ್ತಿದ್ದು, ಮುಂದಿನ ಒಂದು ವಾರಗಳ ಕಾಲ ಇದೇ ರೀತಿ ಮುಂದು ವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ ನಗರದ ಹಲವು ಭಾಗಗಳಲ್ಲಿ ಶುಕ್ರವಾರ ಜೋರು ಮಳೆಯಾಗಿದ್ದು, ಶನಿವಾರವೂ ನಗರದಲ್ಲಿ ಮಳೆ ಮುಂದುವರಿದಿದೆ. ಮುಂದಿನ ಒಂದು ವಾರಗಳ ಕಾಲ ಇದೇ ರೀತಿ ಮಳೆ ಮುಂದುವರಿಯಲಿದ್ದು, ಮಳೆ ಚಳಿಯ ವಾತಾವರಣ ಕಂಡು ಬರಲಿದೆ.

ಜುಲೈ 25ರವರೆಗೆ ಇದೇ ರೀತಿ ಮಳೆ ಹಾಗೂ ಗಾಳಿಯ ವಾತಾವರಣ ಮುಂದುವರಿಯ ಲಿದ್ದು, ನಗರದಲ್ಲಿ ಆಗಾಗ ಜಿಟಿ ಜಿಟಿ ಮಳೆ ಸುರಿಯಲಿದೆ. ಸಮುದ್ರ ಭಾಗದಲ್ಲಿ ಉಂಟಾಗಿರುವ ಹವಾಮಾನ ವೈಪರೀತ್ಯಗಳ ಪ್ರಭಾವ ತೀವ್ರ ಗೊಂಡರೆ ಬೆಂಗಳೂರಿನಲ್ಲಿ ಮತ್ತಷ್ಟು ಬಿರುಸಿನ ಮಳೆ ಸುರಿಯುವ ಸಾಧ್ಯತೆಯಿದ್ದು, ನಗರದಲ್ಲಿ ತಾಪಮಾನ ಕನಿಷ್ಠ 20 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದಿದೆ. ಗರಿಷ್ಠ 30-31ರಿಂದ 29 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆ ಆಗಿದೆ. ಹೀಗಾಗಿ ಸಂಜೆ ಆಗುತ್ತಿದ್ದಂತೆ ಚಳಿ ಅನುಭವ ವಾಗುತ್ತಿದೆ. ಭಾನುವಾರವೂ ಅದೇ ರೀತಿ ಲಘು ಮಳೆಯಾಗುವ ನಿರೀಕ್ಷೆ ಇದೆ. ಬೆಂಗಳೂರಿನಲ್ಲಿ ಮುಂದಿನ ದಿನಗಳಲ್ಲಿ ಭಾರೀ ಮಳೆ ನಿರೀಕ್ಷೆ ಇದ್ದು, ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರುಣಾನಿಧಿ ಪುತ್ರ ಎಂ.ಕೆ. ಮುತ್ತು ನಿಧನ

ಚೆನ್ನೈ: ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಕರುಣಾನಿಧಿ ಅವರ ಹಿರಿಯ ಮಗ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಸಹೋದರ ಎಂ.ಕೆ. ಮುತ್ತು ಅವರು ಶನಿವಾರ ಸಾವನ್ನಪ್ಪಿದ್ದಾರೆ. ಕಳೆದ 2 ದಶಕಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಶನಿವಾರ ಬೆಳಗ್ಗೆ ಕೊನೆಯುಸಿರೆಳೆದರು. ಚೆನ್ನೈನ ಈಸ್ಟ್ ಕೋಸ್ಟ್ ರಸ್ತೆಯಲ್ಲಿರುವ ಮನೆಯಲ್ಲಿ ಮೃತಪಟ್ಟಿದ್ದಾರೆ. ಅವರ ಮಗಳು ತೇನ್ಮೋಳಿ ಅವರು ಎಫ್ ಎಮ್‌ಸಿಜಿ ಕಂಪನಿಯಾದ ಕ್ಯಾವಿನ್‌ಕೇರ್‌ನ ವ್ಯವಸ್ಥಾಪಕ ನಿರ್ದೇಶಕ ಸಿ.ಕೆ. ರಂಗನಾಥನ್ ಅವರನ್ನು ವಿವಾಹವಾಗಿದ್ದಾರೆ. 70ರ ದಶಕದಲ್ಲಿ, ಅವರು ಪಿಳ್ಳೈಯೋ ಪಿಳ್ಳೈ, ಪುಕಾರಿ, ಶಯಲಿಕರಣ್ ಮತ್ತು ದಮಯ ವಿಲ್ಲುಕ್ಕು ಮುಂತಾದ ಚಿತ್ರಗಳಲ್ಲಿ ನಾಯಕನಾಗಿ ನಟಿಸಿ ಜನ ಮನ್ನಣೆ ಗಳಿಸಿದ್ದರು.

{ಹಿಮಂತ ಬಿಸ್ವಾ ಶರ್ಮಾ} ಅಸ್ಸಾಂ ಮುಖ್ಯಮಂತ್ರಿ

ಮಮತಾ ಬ್ಯಾನರ್ಜಿ ಒಂದು ನಿರ್ದಿಷ್ಟ ಸಮುದಾಯದ ಅಕ್ರಮ ಅತಿಕ್ರಮಣವನ್ನು ಪ್ರೋತ್ಸಾಹಿಸುತ್ತಿದ್ದಾರೆ ಮತ್ತು ಮತಕ್ಕಾಗಿ ತುಷ್ಟೀಕರಣ ರಾಜಕಾರಣ ಮಾಡುತ್ತಿದ್ದಾರೆ. ಮಮತಾ ಬ್ಯಾನರ್ಜಿ ಬಂಗಾಳಿಗಳನ್ನು ಇಷ್ಟಪಡುತ್ತಾರೋ ಅಥವಾ ಮುಸ್ಲಿಂ- ಬಂಗಾಳಿಗಳನ್ನು ಮಾತ್ರ ಇಷ್ಟಪಡುತ್ತಾರೋ ಎಂಬುದು ಪ್ರಶ್ನೆಯಾಗಿದೆ.

ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರಾಗಿಯೇ ಪೀಠ ತೊರೆದರೆ ಸಂತೋಷ: ಕಾಶಪ್ಪನವರ

ಪರ್ಯಾಯ ಸ್ವಾಮೀಜಿ ನೇಮಕಕ್ಕೆ ನಿರ್ಧಾರ

ಹುಬ್ಬಳ್ಳಿ: ಕೂಡಲ ಸಂಗಮದ ಲಿಂಗಾಯತ ಪಂಚಮಸಾಲಿ ಪೀಠಕ್ಕೆ ನೂತನ ಸ್ವಾಮೀಜಿಯನ್ನು ನೇಮಕ ಮಾಡಿಕೊಳ್ಳಲು ನಿರ್ಧರಿಸಲಾಗಿದ್ದು, ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರಾಗಿಯೇ ಪೀಠ ತೊರೆದರೆ ಸಂತೋಷ ಎಂದು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜದ ಟ್ರಸ್ಟ್ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರ ವರ್ತನೆ, ನಡವಳಿಕೆಯಿಂದ ಸಮಾಜದ ಜನರು ಬೇಸತ್ತಿದ್ದಾರೆ. ಈ ಕುರಿತು ಸಮಾಜದ ಹಿರಿಯರು, ಮುಖಂಡರು, ಜನಪ್ರತಿನಿಧಿಗಳು ಸಭೆ ನಡೆಸಿ ಪರ್ಯಾಯ ಗುರುಗಳ ನೇಮಕದ ಬಗ್ಗೆ ಚರ್ಚಿಸಿದ್ದಾರೆ. ಆ ಕುರಿತು ವ್ಯವಸ್ಥೆ ಸಹ ನಡೆಯುತ್ತಿದೆ. ಈಗಿರುವ ಸ್ವಾಮೀಜಿಯನ್ನು ಮಠ ಬಿಟ್ಟು ಹೋಗಿ ಎಂದು ನಾವಾಗಿಯೇ ಹೇಳುವುದಿಲ್ಲ, ಅವರಾಗಿಯೇ ಹೋದರೆ ಸಂತೋಷ ಎಂದರು.

ಸಮಾಜದ ಅಭಿವೃದ್ಧಿಗಾಗಿ ಟ್ರಸ್ಟ್ ರಚಿಸಿ, 2008ರಲ್ಲಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರನ್ನು ಲಿಂಗಾಯತ ಪಂಚಮಸಾಲಿ ಮಠಕ್ಕೆ ಪೀಠಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಬಸವತತ್ವ ಪ್ರಚಾರ ಹಾಗೂ ಸಮಾಜದ ಏಳ್ಗೆಗೆ ಶ್ರಮಿಸಬೇಕಿದ್ದ ಸ್ವಾಮೀಜಿ ಅವರ ನಡುವಳಿಕೆಯಲ್ಲಿ ತೀವ್ರ ಬದಲಾವಣೆಗಳು ಕಂಡುಬಂದವು. ಮೂಲ ಉದ್ದೇಶ ಮರೆತು, ರಾಜಕೀಯ ಪಕ್ಷದ ಬ್ಯಾನರ್ ಅಡಿ ಕುಳ್ಳುವುದು, ವರ್ಗಾವಣೆಗೆ ಶಿಫಾರಸ್ಸು ಮಾಡುವುದು, ಯಾವುದೋ ಒಬ್ಬ ವ್ಯಕ್ತಿ ಪರ ಮಾತನಾಡುವುದು ಮಾಡುತ್ತಿದ್ದಾರೆ. ಅಲ್ಲದೆ, ಮಠದಲ್ಲಿ ಇದ್ದು ಬಸವತತ್ವ ಪ್ರಚಾರ ಮಾಡದೆ, ಊರೂರು ಅಡ್ಡಾಡುತ್ತ, ಮೊಬೈಲ್‌ನಲ್ಲಿ ಮಾತನಾಡುತ್ತ ಪ್ರಚಾರದ ಹಿಂದೆ ಬಿದ್ದಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

2019ರಲ್ಲಿ ಸ್ವಾಮೀಜಿ ಟ್ರಸ್ಟ್ ವಿರುದ್ಧವಾಗಿ ನಡೆದುಕೊಂಡಾಗ ನೋಟಿಸ್ ನೀಡಲಾಗಿತ್ತು. ತಪ್ಪು ತಿದ್ದಿಕೊಂಡು ಮುನ್ನಡೆಯುತ್ತೇನೆ ಎಂದು ಅವರು ಹಿಂಬರಹದ ಪತ್ರ ಕೊಟ್ಟಿದ್ದರು. ಆದರೂ, ಅವರು ಮಠದಲ್ಲಿ ಸರಿಯಾಗಿ ಇರದೆ, ಸಂಚಾರದಲ್ಲಿ ನಿರತರಾಗುತ್ತಿದ್ದರು. ಒಂದೊಮ್ಮೆ ಇದ್ದರೂ ಮಠವನ್ನು ಮನೆಯನ್ನಾಗಿ ಮಾಡಿಕೊಂಡಿದ್ದರು. ಭಕ್ತರಿಗೆ ಸ್ವಾಮೀಜಿ ದರ್ಶನವಾಗುತ್ತಿರಲಿಲ್ಲ, ಆಗಾಗ, ಮಠಕ್ಕೆ ಕೆಲವು ನರಿ, ನಾಯಿಗಳು ಬರುತ್ತಿದ್ದವು. ಅನೈತಿಕ ಚಟುವಟಿಕೆಗಳು ನಡೆಯುತ್ತಿದ್ದವು. ಟ್ರಸ್ಟ್ ಅಧ್ಯಕ್ಷನಾಗಿ ಮಠದ ರಕ್ಷಣೆಗೆ ಹಿರಿಯರೊಂದಿಗೆ ಚರ್ಚಿಸಿ ನಾನೇ ಗೇಟ್ ನಿರ್ಮಿಸಿ, ಸಿಸಿಟಿವಿ ಕ್ಯಾಮೆರಾ ಅಳವಡಿಸಿದ್ದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜದ ಟ್ರಸ್ಟ್ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಮಾತನಾಡಿದರು.

> ಮಠಕ್ಕೆ ಬರುವುದಾಗಿ ಸ್ವಾಮೀಜಿ ನನ್ನನ್ನು ಸಂಪರ್ಕಿಸಿರಲಿಲ್ಲ. ಅವರ ಪ್ರೇರಣೆಯಿಂದಲೇ ಕೆಲವರು ಮಧ್ಯರಾತ್ರಿ ಬಂದು ಮಠದ ಗೇಟ್ ಒಡೆದು ಅಕ್ರಮ ಪ್ರವೇಶ ಮಾಡಿದ್ದಾರೆ. ಆ ಕುರಿತು ಪ್ರಕರಣ ದಾಖಲಿಸಲಾಗಿದೆ. ಮಠದ ರಕ್ಷಣೆಗೆ ಬೀಗ ಹಾಕಿದ್ದನ್ನೇ ಸ್ವಾಮೀಜಿ ಅವರು ತಪ್ಪು ತಿಳಿದು ನನ್ನ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಸ್ವಾಮೀಜಿ ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದಾರೆ ಎನ್ನುವುದಕ್ಕಿಂತ, ಅದು ಸಹ ಪ್ರಚಾರದ ಒಂದು ಗಿಮ್ಮಿಕ್ಕು ಆಗಿರಬಹುದು.
>
> -**ವಿಜಯಾನಂದ ಕಾಶಪ್ಪನವರ,** ಪಂಚಮಸಾಲಿ ಸಮಾಜದ ಟ್ರಸ್ಟ್ ಅಧ್ಯಕ್ಷ

ಸ್ವಾಮೀಜಿ ಹೆಸರಲ್ಲಿ ಬೆಂಗಳೂರು, ಬೆಳಗಾವಿಯಲ್ಲಿ ಮನೆ

ಟ್ರಸ್ಟ್ ಬೈಲಾ ಪ್ರಕಾರ ಸ್ವಾಮೀಜಿ ಸ್ವಂತ ಆಸ್ತಿ ಹೊಂದುವಂತಿಲ್ಲ. ಆದರೆ, ಬೆಳಗಾವಿಯಲ್ಲಿ 2 ಮನೆ, ಹುಬ್ಬಳ್ಳಿ - ಬೆಂಗಳೂರಲ್ಲಿ ತಲಾ ಒಂದೊಂದು ಮನೆ ಅವರ ಹೆಸರಲ್ಲಿ ಇವೆ. ಅಲ್ಲದೆ, ಮಲಪ್ರಭಾ ದಂಡೆ ಮೇಲೆ ಮಠ ಕಟ್ಟುತ್ತೇನೆ, ಸಂಸ್ಥೆ ಕಟ್ಟಿ ಸಮಾಜದ ಬಡ ಮಕ್ಕಳಿಗೆ ಶಿಕ್ಷಣ ಕಲ್ಪಿಸುತ್ತೇನೆ ಎಂದು ಸ್ವಾಮೀಜಿಯೇ ಹೇಳಿದ್ದಾರೆ. ಇವೆಲ್ಲ ಬೈಲಾಕ್ಕೆ ವ್ಯತಿರಿಕ್ತವಾಗಿವೆ. ಟ್ರಸ್ಟ್‌ಗೆ ನಾವೇ ವಾರಸ್ದಾರರಾಗಿದ್ದೇವೆ. ಪೀಠವನ್ನು ಮುನ್ನಡೆಸಿಕೊಂಡು ಹೋಗಲಷ್ಟೇ ಸ್ವಾಮೀಜಿಯನ್ನು ನೇಮಕ ಮಾಡಿಕೊಂಡಿದ್ದು ಎಂದು ಕಾಶಪ್ಪನವರ ಹೇಳಿದರು.

ಭಿನ್ನಾಭಿಪ್ರಾಯ ಬಗೆಹರಿಸುತ್ತೇವೆ: ನಿರಾಣಿ

ಪಂಚಮಸಾಲಿ ಸಮಾಜ ಬಹಳ ದೊಡ್ಡ ಸಮಾಜ, ಹಾಗಾಗಿ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳು ಬರುತ್ತವೆ. ಅವುಗಳನ್ನು ನಾಲ್ಕು ಗೋಡೆಗಳ ಮಧ್ಯೆ ಬಗೆಹರಿಸಿಕೊಳ್ಳುತ್ತೇವೆ ಎಂದು ಮಾಜಿ ಸಚಿವ ಮುರುಗೇಶ ನಿರಾಣಿ ಹೇಳಿದರು. ಪಂಚಮಸಾಲಿ ಪೀಠದ ಶ್ರೀಗಳ ಭೇಟಿ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮಾಜಿ ಸಚಿವ ದಿ. ಎಸ್. ಆರ್.ಕಾಶಪ್ಪನವರ ಅವರಿಂದ ಹಿಡಿದು ಸಮಾಜಕ್ಕೆ ಬಹಳಷ್ಟು ಹಿರಿಯರು ದುಡಿದಿದ್ದಾರೆ. ಸಮಾಜ ದೊಡ್ಡದಿದೆ, ಸಮಾಜದ ಎಲ್ಲ ಬಾಂಧವರಿಗೆ ಅನುಕುಲವಾಗಲಿ ಎಂದು ಸಮಾಜದ ಎಲ್ಲ ಹಿರಿಯರ ತೀರ್ಮಾನದ ಬಳಿಕ ಮೂರು ಪೀಠಗಳಾಗಿವೆ ಎಂದರು. ಸಮಾಜದ ಎಲ್ಲ ಬಾಂದವರಿಗೆ ಶ್ರೀಗಳು ಲಭ್ಯ ಇರಲಿ. ಆಶೀರ್ವಾದ ಸಿಗಲಿ ಅಂತ ಮೂರು ಪೀಠ ಆಗಿವೆ. ಒಬ್ಬರೇ ಸ್ವಾಮೀಜಿಗೆ ರಾಜ್ಯದ ಎಲ್ಲ ಕಡೆ ಕಾರ್ಯಕ್ರಮಗಳಿಗೆ ಹೋಗಲು ತೊಂದರೆಯಾಗುತ್ತದೆ. ಹಾಗಾಗಿ ಈಗ ಮೂರು ಪೀಠಗಳಾಗಿವೆ. 2008ರಲ್ಲೇ ಐದು ಪೀಠಗಳನ್ನು ಮಾಡಲು ತೀರ್ಮಾನಿಸಲಾಗಿದೆ. 4 ಪುರುಷ ಪೀಠ, ಒಂದು ಮಹಿಳಾ ಪೀಠ ಮಾಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು. ಮತ್ತೋರ್ವ ಗುರುವಿನ ನೇಮಕದ ಬಗ್ಗೆ ಶಾಸಕ ವಿಜಯಾನಂದ ಕಾಸಪ್ಪನವರ ಹೇಳಿಕೆಗೆ ಪ್ರತಿಕ್ರಿಯಿಸಿದ ನಿರಾಣಿ, ಶಾಸಕ ವಿಜಯಾನಂದ ಕಾಶಪ್ಪನವರ ಅವರ ತಂದೆ ಎಸ್.ಆರ್.ಕಾಶಪ್ಪನವರ ಹಾಗೂ ವಿಜಯಾನಂದ ಅವರ ತಾಯಿ ಶಾಸಕರಾಗಿ ಸಮಾಜಕ್ಕೆ ಸೇವೆ ಸಲ್ಲಿಸಿದ್ದಾರೆ. ಸ್ವಲ್ಪ ಭಿನ್ನಾಪ್ರಾಯ ಬಂದಿದ್ದರಿಂದ ಈ ರೀತಿ ಸಮಸ್ಯೆಯಾಗಿದೆ ಎಂದರು.

ರಂಗಸ್ಥಳ ಬೆಳ್ಳಿ ಹಬ್ಬದ ಸಂಭ್ರಮದ ಅಂಗವಾಗಿ ಸರಣಿ ಕಾರ್ಯಕ್ರಮ

ರಾಜಧಾನಿಯಲ್ಲಿ ಇಂದು ಯಕ್ಷಕಲರವ

ಬೆಂಗಳೂರು: ಯಕ್ಷಗಾನ ಮತ್ತು ಯಕ್ಷಗಾನ ಕಲಾವಿದರಿಗೆ ಪ್ರೋತ್ಸಾಹ, ನೆರವು ನೀಡುವ ನಿಟ್ಟಿನಲ್ಲಿ ಹುಟ್ಟಿಕೊಂಡ ರಂಗಸ್ಥಳ ಯಕ್ಷಮಿತ್ರ ಕೂಟ (ರಿ) ಸಂಸ್ಥೆ ತನ್ನ ಬೆಳ್ಳಿಹಬ್ಬದ ಅಂಗವಾಗಿ ಜುಲೈ 20 ಬೆಳಗ್ಗೆ 10 ರಿಂದ ಸಂಜೆಯವರೆಗೂ ಬೆಂಗಳೂರಿನ ನಾಗರಬಾವಿಯಲ್ಲಿರುವ ಶ್ರೀಗಂಧ ಕಾವಲು ಡಿ ಗ್ರೂಪ್ ಬಡಾವಣೆಯಲ್ಲಿರುವ ಶ್ರೀ ವೇಣುಗೋಪಾಲಕೃಷ್ಣ ಸಮುದಾಯ ಭವನದಲ್ಲಿ ಹಲವು ಸರಣಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಕರ್ನಾಟಕ ಯಕ್ಷಗಾನ ಅಕಾಡೆಮಿಯ ಸಹಯೋಗದಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ಬೆಳಗ್ಗೆ ವಿದ್ಯಾ ವಾಚಸ್ಪತಿ ಡಾ.ಅರಳುಮಲ್ಲಿಗೆ ಪಾರ್ಥಸಾರಥಿ ಹಾಗೂ ಶ್ರೀ ದಿನೇಶ್ ಗುರೂಜಿ ಅವರ ಸಾನ್ನಿಧ್ಯದಲ್ಲಿ ಸಾಮೂಹಿಕ ಶ್ರೀ ವಿಷ್ಣು ಸಹಸ್ರನಾಮ ಹೋಮ ನಡೆಯಲಿದೆ. ಬಳಿಕ ತುಮಕೂರಿನ ಯಕ್ಷದೀವಿಗೆ ವತಿ ಯಿಂದ ತೆಂಕುತಿಟ್ಟಿನ ಯಕ್ಷಗಾನ ಪ್ರದರ್ಶನ, ಚಂದ್ರ ಮಂಡಲ ಚರಿತೆ ನಡೆಯಲಿದ್ದು, ಶ್ರೀ ಸುಬ್ರಾಯ ಹೆಬ್ಬಾರ್ ಮತ್ತು ತಂಡದವರಿಂದ ಶ್ರೀಕೃಷ್ಣಗಾರುಡಿ ಯಕ್ಷಗಾನ ಪ್ರದರ್ಶನಗೊಳ್ಳಲಿದೆ. ಮಧ್ಯಾಹ್ನ 3.30ಕ್ಕೆ ಕುಕ್ಕೆ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾ ಪ್ರಸನ್ನ ತೀರ್ಥ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಸಮಾರೋಪ ಸಮಾರಂಭ ನಡೆಯಲಿದ್ದು, ತೆರೆಮರೆಯ ಪ್ರತಿಭಾ ವಂತ ಯಕ್ಷಗಾನಕಲಾವಿದರಿಗೆ ರಂಗಸ್ಥಳ ಪ್ರಶಸ್ತಿ ಹಾಗೂ ಬಡ ಯಕ್ಷಗಾನ ಕಲಾವಿದರಿಗೆ ದತ್ತಿನಿಧಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು.

ವಿಶ್ವವಾಣಿ ಸಂಪಾದಕ ವಿಶ್ವೇಶ್ವರ ಭಟ್, ಬೈಂದೂರು ಶಾಸಕ ಗುರುರಾಜ ಗಂಟಿಹೊಳೆ, ಖ್ಯಾತ ಸಂಗೀತ ನಿರ್ದೇಶಕ ರವಿ ಬಸ್ರೂರು, ಉಡುಪಿ ಯಕ್ಷ ಕಲಾರಂಗದ ಪ್ರಧಾನ ಕಾರ್ಯದರ್ಶಿ ಮುರಳಿ ಕಡೇಕಾರ್, ಮೂಡುಗಿಳಿಯಾರು ಜನಸೇವಾ ಟ್ರಸ್ಟ್‌ನ ವಸಂತ ಗಿಳಿಯಾರ್ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ತದನಂತರ ಶ್ರೀ ಪೆರ್ಡೂರು ಮೇಳದವರಿಂದ ರಾಜ ರುದ್ರ ಕೋಪ ಯಕ್ಷಗಾನ ಪ್ರದರ್ಶನಗೊಳ್ಳಲಿದೆ.

ಈ ಎಲ್ಲ ಕಾರ್ಯಕ್ರಮಗಳಿಗೂ ಉಚಿತ ಪ್ರವೇಶವಿರುತ್ತದೆ ಎಂದು ರಂಗಸ್ಥಳ ಯಕ್ಷಮಿತ್ರ ಕೂಟದ ಅಧ್ಯಕ್ಷರಾದ ರಮೇಶ್ ಕೆ.ನಾಗೂರು ಹಾಗೂ ಪ್ರಧಾನ ಕಾರ್ಯದರ್ಶಿ ಕೆ.ಎಂ.ಶೇಖರ ತಿಳಿಸಿದ್ದಾರೆ.

ಬ್ರ್ಯಾಂಡ್ ಬೆಂಗಳೂರು ಯೋಜನೆಯಲ್ಲಿ ರಾಜ್ಯ ಸರಕಾರದ ಮಹತ್ವಾಕಾಂಕ್ಷೆಯ ಯೋಜನೆ

ಸುರಂಗ ಮಾರ್ಗ ಯೋಜನೆಗೆ 5 ಜಾಗ ಗುರುತು

ಬೆಂಗಳೂರು: ಬ್ರ್ಯಾಂಡ್ ಬೆಂಗಳೂರು ಯೋಜನೆಯಲ್ಲಿ ರಾಜ್ಯ ಸರಕಾರದ ಮಹತ್ವಾಕಾಂಕ್ಷೆಯ ಸುರಂಗ ಮಾರ್ಗ ಯೋಜನೆ ಕಾಮಗಾರಿ ಆರಂಭವಾಗಲಿದ್ದು, ಸುರಂಗ ಕೊರೆಯಲು ಐದು ಪ್ರಮುಖ ಜಾಗಗಳನ್ನು ಗುರುತಿಸಲಾಗಿದೆ.

ಹೆಬ್ಬಾಳ ಎಸ್ಟಿಮ್ ಮಾಲ್‌ನಿಂದ ಸಿಲ್ಕ್ ಬೋರ್ಡ್‌ವರೆಗಿನ ಬಹುಕೋಟಿ ವೆಚ್ಚದಲ್ಲಿ ಈ ಸುರಂಗ ಮಾರ್ಗವು ನಿರ್ಮಾಣವಾಗಲಿದೆ. ಸುರಂಗ ಮಾರ್ಗವು 16.74 ಕಿ.ಮೀ. ಉದ್ದ ಇರಲಿದೆ. ಬೆಂಗಳೂರಿನ ಕೆಲವು ಪ್ರಮುಖ ಪ್ರದೇಶಗಳ ಭೂ ಭಾಗಗಳ ಕೆಳಗೆ ಸುರಂಗ ಮಾರ್ಗ ಹಾದು ಹೋಗ ಲಿದೆ. ಅದಕ್ಕಾಗಿ ಐದು ಜಾಗಗಳನ್ನು ಗುರುತಿಸಲಾಗಿದೆ. ಟನಲ್ ಬೋರಿಂಗ್ ಮೆಷಿನ್ ಆ ಜಾಗಗಳಲ್ಲಿ ಇಳಿಸಲು, ಕೊರೆಯುವಿಕೆ ಆರಂಭಕ್ಕೆ ಪ್ರತಿ ಜಾಗದಲ್ಲೂ ಸುಮಾರು 6.5 ಎಕರೆ ಭೂಮಿ ಅಗತ್ಯವಿದೆ. 100 ಅಡಿ ಆಳದ ಶಾಫ್ಟ್‌ಗಳನ್ನು ಅಗೆಯಲಾಗುತ್ತದೆ. ಇನ್ನೂ ಆಸ್ತಿಗಳ ಸ್ವಾಧೀನ ಹಾಗೂ ಪುನರ್ವಸತಿ ಕ್ರಮಗಳಿಗಾಗಿ ಸುಮಾರು 800 ಕೋಟಿ ರು. ಮೀಸಲಿಡಲಾಗಿದೆ ಎಂದು ವರದಿಯಾಗಿದೆ.

ಸುರಂಗ ರಸ್ತೆಯಿಂದ ಪರಿಣಾಮವಾಗುವ ಪ್ರದೇಶಗಳು: ಸರಕಾರ ಹಾಗೂ ಗುತ್ತಿಗೆದಾರ ಕಂಪನಿಗಳು ಗುರುತಿಸಿರುವ ಜಾಗಗಳಲ್ಲಿ ಲಾಲ್‌ಬಾಗ್, ಖ್ಯಾತ ಆಸ್ಪತ್ರೆ, ರೇಸ್‌ಕೋರ್ಸ್ ಸೇರಿದಂತೆ ಇತರ ಪ್ರಮುಖ ಸ್ಥಳಗಳೂ ಸೇರಿವೆ. ಇದೀಗ ಆ ಆಸ್ತಿ ಮಾಲೀಕರಲ್ಲಿ ಹಾಗೂ ಸಾರ್ವಜನಿಕರಲ್ಲಿ ಆತಂಕ ಶುರುವಾಗಿದೆ. ಸೆಂಟ್ರಲ್ ಸಿಲ್ಕ್‌ಬೋರ್ಡ್ ಮತ್ತು ಹೆಬ್ಬಾಳ ಸಂಪರ್ಕಿಸುವ ಈ ಸುರಂಗ ರಸ್ತೆ ಅಂದಾಜು ವೆಚ್ಚ ಬರೋಬ್ಬರಿ 17,698 ಕೋಟಿ ರುಪಾಯಿಯಾಗಿದ್ದು, ಅದು ಸಂಪೂರ್ಣ ಭೂಗತ ರಸ್ತೆಯಾಗಿದೆ. ಸುರಂಗ ಕೊರೆಯುವ ಹೊಣೆ ಬೆಂಗಳೂರು ಸ್ಮಾರ್ಟ್ ಇನ್ಫ್ರಾ ಸ್ಟ್ರಕ್ಚರ್ ಲಿಮಿಟೆಡ್ ಹೊಂದಿದೆ. ಅದೇ ಕಂಪನಿಯು 5 ಸುರಂಗ ಬೋರಿಂಗ್ ಯಂತ್ರಗಳು (ಟಿಬಿಎಂ) ಕೆಲವೇ ದಿನಗಳಲ್ಲಿ ಕೆಲಸ ಆರಂಭಿಸುವ ನಿರೀಕ್ಷೆ ಇದೆ.

ಗುರುತಿಸಿದ 5 ಜಾಗಗಳು

ಬಿ-ಸ್ಮೈಲ್ ಕಂಪನಿ ಸದ್ಯಕ್ಕೆ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಿಗಿಲ್ಲ. ಕೋರಮಂಗಲದ ಹೊಸೂರು ರಸ್ತೆಯ ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ಆಸ್ಪತ್ರೆ, ಸೇಂಟ್ ಆಂಥೋನಿ ಫ್ರೈರಿಯ ಹಿಂಭಾಗದ ಖಾಲಿ ಜಾಗ ಅಗೆಯಲು ಪ್ಲಾನ್ ಮಾಡಲಾಗಿದೆ. ರೋಗಿಗಳ ಆರೈಕೆ ಹಾಗೂ ಇತರ ಕಾರ್ಯಗಳಿಗೆ ಈ ಸ್ಥಳ ಬಳಕೆ ಆಗುತ್ತಿದೆ.

ಲಾಲ್‌ಬಾಗ್, ರೇಸ್‌ಕೋರ್ಸ್,ಅರಮನೆ ಮೈದಾನ, ಹೆಬ್ಬಾಳ ಭಾಗದ ಕೆಲವು ಭಾಗಗಳು ಹಾಗೂ ಇತರ ಸರಕಾರಿ ಅಧೀನದ ಜಾಗಗಳ ಸ್ವಾಧೀನ ಹೆಚ್ಚು ಸರಳ ಎಂದು ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಂದಿನಿ ಬ್ರ್ಯಾಂಡ್‌ನ ಇಪ್ಪತ್ತು ಮಳಿಗೆ ವಿಸ್ತರಣೆಗೆ ಮನವಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಮ್ಮ ಮೆಟ್ರೋ ನಿಲ್ದಾಣಗಳಲ್ಲಿ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟ ಜಾಲವನ್ನು ವಿಸ್ತರಣೆ ಮಾಡುವಂತೆ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರ್ ರಾವ್ ಅವರಿಗೆ ಮಾಜಿ ಸಂಸದ ಡಿ.ಕೆ. ಸುರೇಶ್ ಮನವಿ ಸಲ್ಲಿಸಿದರು.

ಶನಿವಾರ ಮೆಟ್ರೋದ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರ್ ರಾವ್‌ರನ್ನು ಡಿ.ಕೆ ಸುರೇಶ್ ಅವರು ಭೇಟಿ ಮಾಡಿ ಕೆಲ ಹೊತ್ತು ಮಾತುಕತೆ ನಡೆಸಿದ್ದು, ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟ ಜಾಲವನ್ನು ವಿಸ್ತರಿಸುವ ದೃಷ್ಟಿಯಿಂದ ಮೆಟ್ರೋ ನಿಲ್ದಾಣಗಳ ಮುಂಭಾಗದಲ್ಲಿ, ಇಲಾಖೆಗೆ ಸೇರಿದ ಖಾಲಿ ತೆರೆದ ಸ್ಥಳಗಳಲ್ಲಿ ನಂದಿನಿ ಪಾರ್ಲರ್‌ನ್ನು ನಿರ್ಮಾಣ ಮಾಡಬೇಕು. ಉತ್ಪನ್ನಗಳ ಮಾರಾಟ ಮಾಡಲು ಸ್ಥಳ ಮಂಜೂರಾತಿ ಕೋರಿ, ಮನವಿ ಸಲ್ಲಿಸಿದ್ದಾರೆ.

ನಮ್ಮ ಮೆಟ್ರೋದಲ್ಲಿ ನಂದಿನಿ ಹಾಲಿಗೆ ಆದ್ಯತೆ: ಕೆಎಂಎಫ್ ನಂದಿನಿ ಮಳಿಗೆ ತೆರೆಯುವಲ್ಲಿ ನಿರ್ಲಕ್ಷ್ಯ ತೋರಿದ ಸಲುವಾಗಿ ಬೇರೆ ರಾಜ್ಯದ ಅಮೂಲ್ ಮೆಟ್ರೋ ನಿಲ್ದಾಣಗಳಲ್ಲಿ ಸ್ಥಾನ ಪಡೆದುಕೊಂಡಿದೆ ಎಂದು ರಾಜ್ಯ ಸರಕಾರ ಮತ್ತು ನಮ್ಮ ಮೆಟ್ರೋ ವಿರುದ್ಧ ಆಕ್ರೋಶ ಕೇಳಿ ಬಂದಿತ್ತು. ಈ ನೆಲದ ರೈತರಿಗೆ ಇಲ್ಲಿ ಉತ್ಪಾದನೆಗೆ ಉತ್ತೇಜನ ಸಿಗಬೇಕು ಎಂದು ಆಗ್ರಹಿಸಿದ್ದರು, ಬಳಿಕ ಕೆಎಂಎಫ್ ಮೆಟ್ರೋ ನಿಲ್ದಾಣಗಳಲ್ಲಿ ಮಳಿಗೆ ತೆರೆಯಲು ಅರ್ಜಿ ಸಲ್ಲಿಸಿಲ್ಲ ಎಂದು ತಿಳಿಸಿದ್ದ ಡಿ.ಕೆ ಶಿವಕುಮಾರ್ ಅವರು, ಕೂಡಲೇ ಅರ್ಜಿ ಸಲ್ಲಿಸುವಂತೆ ಸೂಚಿಸಿದ್ದರು. ಬಳಿಕ ಹತ್ತರಲ್ಲಿ ಎಂಟು ಮಳಿಗೆ ನಂದಿನಿ ಇರಲಿವೆ ಎಂದು ಸ್ಪಷ್ಟಪಡಿಸಿದ್ದರು.

ಇದೀಗ ನಂದಿನಿ ಮಳಿಗೆ, ನಂದಿನಿ ಹಾಲಿನ ಉತ್ಪನ್ನಗಳ ಮಾರಾಟಕ್ಕೆ, ಸ್ಥಳೀಯ ಉತ್ಪನ್ನಗಳ ಪ್ರೋತ್ಸಾಹ ಹಾಗೂ ರೈತರಿಗೆ ನೆರವಾಗುವ ನಿಟ್ಟಿನಲ್ಲಿ ಡಿ.ಕೆ ಸುರೇಶ್ ಅವರು ಮೆಟ್ರೋ ನಿಲ್ದಾಣಗಳ ಮುಂದೆ ಖಾಲಿ ಇರುವ ಜಾಗಕ್ಕೆ ಅವಕಾಶ ನೀಡುವಂತೆ ಮನವಿ ಮಾಡಿದ್ದಾರೆ. ಆದಷ್ಟು ಶೀಘ್ರವೇ ಈ ಬಗ್ಗೆ ತಿರ್ಮಾನ ಕೈಗೊಳ್ಳಲಾಗುವುದು ಎಂದು ನಮ್ಮ ಮೆಟ್ರೋ ವ್ಯವಸ್ಥಾಪಕ ನಿರ್ದೇಶಕರು ಸಕಾರಾತ್ಮಕ ಭರವಸೆ ನೀಡಿದ್ದಾರೆ.

ಅಮೂಲ್ 10 ಮಳಿಗೆ ತೆರೆಯಲು ಒಪ್ಪಿದ್ದರಿಂದ ಆಕ್ರೋಶ ವ್ಯಕ್ತವಾದ ಬೆನ್ನಲ್ಲೆ, ನಮ್ಮ ಮೆಟ್ರೋ ನಿಲ್ದಾಣಗಳಲ್ಲಿ ನಂದಿನಿಯ 20 ಮಳಿಗೆ ತೆರೆಯಲು ನಮ್ಮ ಮೆಟ್ರೋ ಕಳೆದ ತಿಂಗಳು ಒಪ್ಪಿಗೆ ನೀಡಿದ್ದು, ಶೀಘ್ರವೇ ಅವುಗಳು ಆರಂಭಗೊಳ್ಳುವ ನಿರೀಕ್ಷೆ ಇದೆ.

ನಮ್ಮ ಮೆಟ್ರೋ ನಿಲ್ದಾಣದಲ್ಲಿ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟ ಜಾಲವನ್ನು ವಿಸ್ತರಣೆ ಮಾಡುವಂತೆ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರ್ ರಾವ್ ಅವರಿಗೆ ಮಾಜಿ ಸಂಸದ ಡಿ.ಕೆ.ಸುರೇಶ್ ಮನವಿ ಸಲ್ಲಿಸಿದರು.

ಒಣ ದ್ರಾಕ್ಷಿಗೆ ಬಂಪರ್ ಬೆಲೆ | ರಾಜ್ಯದಲ್ಲಿ ಮಾತ್ರವಲ್ಲದೆ ಮಹಾರಾಷ್ಟ್ರದಲ್ಲೂ ಬೆಳೆ ಕುಸಿತ

ಒಣದ್ರಾಕ್ಷಿ ಬೆಲೆ ಗಣನೀಯ ಏರಿಕೆ

ಹೂವಪ್ಪ ಐ ಹೆಚ್

ಬೆಂಗಳೂರು: ಒಣ ದ್ರಾಕ್ಷಿ ದರ ಭಾರೀ ಏರಿಕೆಯಾಗಿದ್ದು, ಆ ಕಾರಣಕ್ಕಾಗಿ ಬೇಕರಿ ಹಾಗೂ ಮದುವೆ ಸಮಾರಂಭಗಳಲ್ಲಿ ಸಿಹಿತಿಂಡಿಗೆ ಬಳಸಲು ಹಿಂದೆ ಮುಂದೆ ನೋಡುವಂತಾಗಿದೆ. ಹೀಗಾಗಿ ಗ್ರಾಹಕರಿಗೂ ಒಣ ದ್ರಾಕ್ಷಿ ಕಹಿಯಾಗಿದೆ.

ನಾಲ್ಕು ವರ್ಷಗಳ ನಿರಂತರ ನಷ್ಟ ಮತ್ತು ಬೆಲೆ ಕುಸಿತದ ನಂತರ, ಒಣದ್ರಾಕ್ಷಿಗೆ ಉತ್ತಮ ಬೆಲೆ ಬಂದಿದ್ದರಿಂದ ಉತ್ತರ ಕರ್ನಾಟಕದ ದ್ರಾಕ್ಷಿ ಬೆಳೆಗಾರರ ಮೊಗದಲ್ಲಿ ಅಂತಿಮವಾಗಿ ಮಂದಹಾಸ ಮೂಡಿದೆ.

ಕೋವಿಡ್-19 ಸಾಂಕ್ರಾಮಿಕ ರೋಗ ದಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದ ಬೆಳೆಗಾರರಿಗೆ ಈ ವರ್ಷ ಬಾರಿ ಖುಷಿಯಾಗಿದೆ.

ಕೋವಿಡ್ ಸಾಂಕ್ರಾಮಿಕದ ಕಾಲದಲ್ಲಿ, ಒಣ ದ್ರಾಕ್ಷಿ ಬೆಲೆ ಕೆ.ಜಿ.ಗೆ 60 ರಿಂದ 150 ರು.ಗಳ ವರೆಗೆ ಇತ್ತು, ಇದರಿಂದ ಉತ್ಪಾದನಾ ವೆಚ್ಚವನ್ನು ಸಹ ಭರಿಸಲಾಗದೆ ರೈತರು ಸಾಲದ ಸುಳಿಯಲ್ಲಿ ಸಿಲುಕಿದ್ದರು. ಇದೀಗ ಕೆ.ಜಿ.ಗೆ 180ರಿಂದ 380 ರು. ವರೆಗೆ ಬೆಲೆ ಏರಿಕೆಯಾಗಿದ್ದು, ರೈತರು ತಮ್ಮ ಆದಾಯದಲ್ಲಿ ಗಣನೀಯ ಹೆಚ್ಚಳ ಕಾಣುತ್ತಿದ್ದಾರೆ. ಕೆಲವು ರೈತರು ದಾಖಲೆಯ ದರಗಳನ್ನು ಪಡೆದು ಕೊಂಡಿದ್ದಾರೆ.

ಸಗಟು ಎಪಿಎಂಸಿ ಮಾರುಕಟ್ಟೆಯಲ್ಲಿ ಒಣ ದ್ರಾಕ್ಷಿಯು ಕೆ.ಜಿ.ಗೆ ಕಳೆದ ತಿಂಗಳ ಹಿಂದೆ 280 300 ರು.ಗೆ ಮಾರಾಟವಾಗಿತ್ತು. ಈಗ ಉತ್ತಮ ದರ್ಜೆ 550-600 ರು., ಮಧ್ಯಮ 450-480 ರು.ಗೆ ಮಾರಾಟವಾಗುತ್ತಿದೆ. ಇನ್ನು ಚಿಲ್ಲರೆ ಅಂಗಡಿಗಳಲ್ಲಿ 100 ಗ್ರಾಮ್‌ಗೆ 60-70 ರು.ರಷ್ಟಾಗಿದೆ.

ಉತ್ಪಾದನೆಯ ಕುಸಿತದ ನಡುವೆ ಸುಧಾರಿತ ಬೆಲೆಗಳು ಬರುತ್ತವೆ. ಕಳೆದ ಮುಂಗಾರು ಮಳೆ, ಅಕ್ಟೋಬರ್ ಮತ್ತು ಡಿಸೆಂಬರ್ ನಡುವಿನ ತೀವ್ರ ಚಳಿ, ಮತ್ತು ಭಾರೀ ಇಬ್ಬನಿಯಿಂದ ದ್ರಾಕ್ಷಿತೋಟಗಳಲ್ಲಿ ವ್ಯಾಪಕ ರೋಗ ಮತ್ತು ಕಾಂಡ ಉದುರುವಿಕೆ ಸಮಸ್ಯೆ ಕಾಣಿಸಿತು. ಅದರ ಪರಿಣಾಮವಾಗಿ ಒಟ್ಟಾರೆ ಇಳುವರಿಯಲ್ಲಿ ಶೇಕಡಾ 65ರಷ್ಟು ಕುಸಿದಿದೆ ಎಂದು ದ್ರಾಕ್ಷಿ ಬೆಳೆಗಾರರು ಹೇಳುತ್ತಿದ್ದಾರೆ.

ಮಹಾರಾಷ್ಟ್ರದಿಂದ ಬೇಡಿಕೆ: ಅತ್ಯಧಿಕ ಪ್ರಮಾಣದಲ್ಲಿ ದ್ರಾಕ್ಷಿ ಬೆಳೆಯುವ ನೆರೆಯ ಮಹಾರಾಷ್ಟ್ರದಲ್ಲೂ ಈ ವರ್ಷ ಶೇ.50ರಷ್ಟು ಬೆಳೆ ಕೈಕೊಟ್ಟಿರುವುದು ಕೂಡಾ ಬೆಲೆ ಏರಿಕೆಗೆ ಕಾರಣವಾಗಿದೆ.

ಉತ್ತರ ಕರ್ನಾಟಕದಲ್ಲಿ ಅಂದಾಜು 32,473 ಹೆಕ್ಟೇರ್ ಪ್ರದೇಶದಲ್ಲಿ ವರ್ಷಕ್ಕೆ 8.21 ಲಕ್ಷ ಮೆಟ್ರಿಕ್ ಟನ್ ದ್ರಾಕ್ಷಿ ಬೆಳೆದರೆ, ವಿಜಯಪುರ, ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ 25,637 ಹೆಕ್ಟೇರ್ ಪ್ರದೇಶದಲ್ಲಿ 6.64 ಲಕ್ಷ ಮೆಟ್ರಿಕ್ ಟನ್ ದ್ರಾಕ್ಷಿ ಬೆಳೆಯಲಾಗುತ್ತದೆ. ಶೇ 70ರಷ್ಟು ಒಣ ದ್ರಾಕ್ಷಿ ಈ ಕಡೆಗಳಲ್ಲಿಯೇ ಬೆಳೆಯಲಾಗುತ್ತದೆ.

ಒಟ್ಟಾರೆ ಒಣ ದ್ರಾಕ್ಷಿ ಈ ಮೂರೂ ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ಸುಮಾರು 2.30 ಲಕ್ಷ ಟನ್ ಪ್ರತಿವರ್ಷ ಉತ್ಪಾದನೆಯಾಗುತ್ತಿದೆ.

> ಮುಂಗಾರು ಮಳೆ, ಅಕ್ಟೋಬರ್ ಮತ್ತು ಡಿಸೆಂಬರ್ ನಡುವಿನ ತೀವ್ರ ಚಳಿ ಮತ್ತು ಭಾರೀ ಇಬ್ಬನಿಯಿಂದಾಗಿ ದ್ರಾಕ್ಷಿತೋಟಗಳಲ್ಲಿ ವ್ಯಾಪಕ ರೋಗ ಕಾಣಿಸಿಕೊಂಡ ಪರಿಣಾಮವಾಗಿ ಈ ವರ್ಷ ಒಟ್ಟಾರೆ ಇಳುವರಿ ಶೇಕಡಾ 65ರಷ್ಟು ಕುಸಿದಿದೆ.
>
> -**ಮಾಧವ,** ದ್ರಾಕ್ಷಿ ಬೆಳೆಗಾರ

ಬೆಳೆಗಾರರಿಗೆ ಹತ್ತಾರು ಸಮಸ್ಯೆ

ಹಸಿ ದ್ರಾಕ್ಷಿಯ ಬದಲಾಗಿ ಒಣ ದ್ರಾಕ್ಷಿ ಬೆಳೆಯಲು ಬೆಳೆಗಾರರು ಸಮಸ್ಯೆ ಎದುರಿಸುತ್ತಿದ್ದಾರೆ. ಹಸಿ ದ್ರಾಕ್ಷಿಯನ್ನು ಒಣ ದ್ರಾಕ್ಷಿ ಮಾಡಲು ಸಹ ಹೆಚ್ಚಿನ ಖರ್ಚು ಮಾಡಬೇಕು. ಒಣ ದ್ರಾಕ್ಷಿ ಮಾಡಲು 25 ದಿನಗಳ ಕಾಲ ಸಂಸ್ಕರಣೆ ಮಾಡಬೇಕಿದೆ. ಅದನ್ನು ಶೇಖರಿಸಿಡಲು ಶೀತಲ ಘಟಕಗಳ (ಕೋಲ್ಡ್ ಸ್ಟೋರೇಜ್) ಕೊರತೆ ಇರುವುದರಿಂದ ಬಹುತೇಕ ರೈತರು ಮಹಾರಾಷ್ಟ್ರದತ್ತ ಮುಖ ಮಾಡುತ್ತಾರೆ. 1.25 ಲಕ್ಷ ಮೆಟ್ರಿಕ್ ಟನ್ ಒಣ ದ್ರಾಕ್ಷಿಗೆ ಶೀತಲ ಘಟಕ ಬೇಕು. ಆದರೆ ಮೂರು ಜಿಲ್ಲೆ ಸೇರಿ 40 ಸಾವಿರ ಮೆಟ್ರಿಕ್ ಟನ್ ಒಣ ದ್ರಾಕ್ಷಿಯನ್ನು ಶೀತಲ ಘಟಕಗಳಲ್ಲಿ ಶೇಖರಿಸಿಡಬಹುದು. ಇನ್ನುಳಿದ 85 ಸಾವಿರ ಮೆಟ್ರಿಕ್ ಟನ್ ಒಣ ದ್ರಾಕ್ಷಿಗೆ ಶೀತಲ ಘಟಕದ ವ್ಯವಸ್ಥೆ ಕಲ್ಪಿಸಬೇಕು ಎಂಬುದು ಒಣ ದ್ರಾಕ್ಷಿ ಉತ್ಪಾದಕರ ಬೇಡಿಕೆಯಾಗಿದೆ.

> ಈ ವರ್ಷ ಕರ್ನಾಟಕದಲ್ಲಿ ದ್ರಾಕ್ಷಿ ಬೆಳೆ ಅರ್ಧದಷ್ಟು ಕಡಿಮೆ ಆಗಿದೆ. ಹೆಚ್ಚು ದ್ರಾಕ್ಷಿ ಬೆಳೆಯುವ ಮಹಾರಾಷ್ಟ್ರದಲ್ಲಿ ಕೂಡಾ ಬೆಳೆ ಕಡಿಮೆ ಇದೆ. ರೈತರಿಗೆ ಒಣ ದ್ರಾಕ್ಷಿ ಉತ್ಪಾದಿಸಲು ಸಮಸ್ಯೆ ಇರುವುದರಿಂದ ಹಸಿ ದ್ರಾಕ್ಷಿ ಮಾರಾಟವಾಗುತ್ತಿದೆ. ಹೀಗಾಗಿ ದಾಸ್ತಾನು ಕಡಿಮೆಯಾಗಿ ಒಣ ದ್ರಾಕ್ಷಿಯ ಬೆಲೆ ಏರಿಕೆಯಾಗಿದೆ.
>
> -**ಸುರೇಶ,** ಎಪಿಎಂಸಿ ಸಗಟು ದ್ರಾಕ್ಷಿ ವ್ಯಾಪಾರಿ, ಬೆಂಗಳೂರು

ಸ್ವಚ್ಛತಾ ಕಾರ್ಯ, ಪಾದಚಾರಿ ಮಾರ್ಗ ಒತ್ತುವರಿ ತೆರವು

ಬೆಂಗಳೂರು: ಬಿಬಿಎಂಪಿ ಪಶ್ಚಿಮ, ದಕ್ಷಿಣ ಹಾಗೂ ಪೂರ್ವ ವಲಯಗಳಲ್ಲಿ ಶನಿವಾರ ಸಾಮೂಹಿಕ ಸ್ವಚ್ಛತಾ ಕಾರ್ಯ ಹಾಗೂ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆಯನ್ನು ನಡೆಸಿತು.

ಪಾಲಿಕೆ ವ್ಯಾಪ್ತಿಯಲ್ಲಿ ಸಕ್ರಿಯವಾಗಿ ಸಾಮೂಹಿಕ ಸ್ವಚ್ಛತಾ ಕಾರ್ಯ ನಡೆಯುತ್ತಿದ್ದು, ಆಯಾ ವಲಯ ವ್ಯಾಪ್ತಿಯಲ್ಲಿ ಶಿಲ್ಟ್ ಮತ್ತು ಟ್ರ್ಯಾಕ್ಟರ್‌ಗಳನ್ನು ಬಳಸಿಕೊಂಡು ತೀವ್ರ ಸ್ವಚ್ಛತಾ ಕಾರ್ಯವನ್ನು ಮಾಡಲಾಗಿದೆ. ರಸ್ತೆ ಬದಿಯ ತ್ಯಾಜ್ಯ, ಸೈಡ್ ಡ್ರೈನ್‌ಗಳ ಹೂಳೆತ್ತುವ ಕಾರ್ಯ, ಸ್ಲ್ಯಾಬ್‌ಗಳು ಹಾಗೂ ಕರ್ಬ್ಸ್‌ಗಳನ್ನು ದುರಸ್ತಿಪಡಿಸಲಾಗಿದೆ.

ಪಾದಚಾರಿ ಮಾರ್ಗಗಳ ಒತ್ತುವರಿ ತೆರವು, ಓಎಫ್‌ಸಿ ಕೇಬಲ್‌ಗಳ ತೆರವು, ಶಾಶ್ವತ ಪೆಟ್ಟಿಗೆಗಳ ತೆರವು, ಅಂಗಡಿ ಮುಂಗಟ್ಟುಗಳ ಮುಂಭಾಗ ಮೇಲ್ಭಾಗದಲ್ಲಿ ಅಳವಡಿಸಿರುವ ಶೀಟ್, ಕೆನೋಪಿಗಳ ತೆರವು, ಪಾದಚಾರಿಗಳಿಗೆ ಅಡ್ಡಲಾಗಿ ನಿರ್ಮಿಸಿರುವ ಗೋಡೆ, ಮೆಟ್ಟಿಲುಗಳು ಹಾಗೂ ಕಾಂಕ್ರೀಟ್ ರ್‍ಯಾಂಪ್‌ಗಳ ತೆರವು, ಅಂಗಡಿಗಳ ನಾಮಫಲಕಗಳ ತೆರವು ಕಾರ್ಯಾಚರಣೆ ನಡೆಸಲಾಗಿದೆ. ಆಯಾ ವಲಯ ವ್ಯಾಪ್ತಿಯಲ್ಲಿ ಜೆಸಿಬಿ, ಟ್ರ್ಯಾಕ್ಟರ್‌ಗಳು ಹಾಗೂ ಸಿಬ್ಬಂದಿಯನ್ನು ಬಳಸಿಕೊಂಡು ಸ್ವಚ್ಛತಾ ಕಾರ್ಯ ನಡೆಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿಯೂ ಸ್ವಚ್ಛತಾ ಕಾರ್ಯವನ್ನು ನಿರಂತರವಾಗಿ ಮುಂದುವರಿಸಲಿದೆ. ಈ ಸಾಮೂಹಿಕ ಸ್ವಚ್ಛತಾ ಕಾರ್ಯದ ವೇಳೆ ಆಯಾ ವಲಯಗಳ ಮುಖ್ಯ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು, ಮಾರ್ಷಲ್‌ಗಳು, ಸೇರಿ ದಂತೆ ಇತರೆ ಸಂಬಂಧಪಟ್ಟ ಅಧಿಕಾರಿಗಳು ಇದ್ದರು.

ಸಮಾಚಾರ ಸಣ್ಣದಲ್ಲ

2036ರ ಒಲಿಂಪಿಕ್ಸ್‌ಗೆ ಸಿದ್ಧತೆ: ಅಮಿತ್ ಶಾ



ದೆಹಲಿ: ಭಾರತ 2036ರ ಒಲಿಂಪಿಕ್ಸ್‌ಗೆ ಸಿದ್ಧತೆ ನಡೆಸುತ್ತಿದ್ದು ಅಂದಾಜು 3,000 ಅಥ್ಲೀಟುಗಳಿಗೆ ತಿಂಗಳಿಗೆ ರು.50,000ದಂತೆ ನೆರವು ಒದಗಿಸಲಿದ್ದು, ಇದಕ್ಕಾಗಿ ವಿವರವಾದ ಮತ್ತು ವ್ಯವಸ್ಥಿತವಾದ ಯೋಜನೆ ರೂಪಿಸುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು. ಭಾರತವು ಆ ಒಲಿಂಪಿಕ್ಸ್ ಪದಕ ಪಟ್ಟಿಯಲ್ಲಿ ಅಗ್ರ ಐದರಲ್ಲಿ ಸ್ಥಾನ ಪಡೆಯಲಿದೆ ಎಂಬ ವಿಶ್ವಾಸವನ್ನು ಅಮಿತ್ ಶಾ ವ್ಯಕ್ತಪಡಿಸಿದರು. ಅವರು 21ನೇ ವಿಶ್ವ ಪೊಲೀಸ್ ಮತ್ತು ಅಗ್ನಿಶಾಮಕ ದಳದ ಕ್ರೀಡಾಕೂಟದಲ್ಲಿ ಭಾಗವಹಿಸುವ ತಂಡವನ್ನು ಗೌರವಿಸಿ ಮಾತನಾಡಿದರು. 2036ರ ಒಲಿಂಪಿಕ್ಸ್ ಅತಿಥ್ಯಕ್ಕೆ ಈಗಾಗಲೇ ನಮ್ಮ ದೇಶ ಬಿಡ್ ಸಲ್ಲಿಸಿದ್ದು, ಕಾಮನ್‌ವೆಲ್ತ್ ಕ್ರೀಡೆಗಳ ಆತಿಥ್ಯಕ್ಕೂ ಅಸಕ್ತಿ ಪತ್ರ ಸಲ್ಲಿಸಿದೆ, ಮತ್ತೊಮ್ಮೆ ಏಷ್ಯನ್ ಗೇಮ್ಸ್ ಅತಿಥ್ಯಕ್ಕೂ ಯತ್ನಿಸಲಿದೆ ಎಂದು ಶಾ ತಿಳಿಸಿದರು. ಕ್ರೀಡೆ ಜನಸಾಮಾನ್ಯರ ಜೀವನದ ಭಾಗವಾಬೇಕು ಎಂಬುದು ಈ ಕ್ರೀಡೆಗಳ ಆತಿಥ್ಯ ಪ್ರಯತ್ನದ ಉದ್ದೇಶವಾಗಿದೆ ಎಂದರು.

ಹೊಸ ದಾಖಲೆ ಬರೆದ ವೈಭವ್ ಸೂರ್ಯವಂಶಿ

ಬೆಕ್ಕೆನ್‌ಹ್ಯಾಮ್: ಇಂಗ್ಲೆಂಡ್ ವಿರುದ್ಧ ಯೂಥ್ ಟೆಸ್ಟ್ ಪಂದ್ಯದಲ್ಲಿ ಭಾರತದ ಕಿರಿಯರ ತಂಡದ ಆರಂಭಿಕ ಬ್ಯಾಟ್ಸ್‌ಮನ್ ವೈಭವ್ ಸೂರ್ಯವಂಶಿ ಅವರು ಅರ್ಧಶತಕ ಹಾಗೂ ಎರಡು ವಿಕೆಟ್‌ಗಳನ್ನು ಪಡೆದಿದ್ದಾರೆ. ಆ ಸಾಧನೆಯ ಮೂಲಕ ಯೂಥ್ ಟೆಸ್ಟ್ ಪಂದ್ಯದಲ್ಲಿ ಅರ್ಧಶತಕ ಹಾಗೂ ವಿಕೆಟ್ ಕಬಳಿಸಿದ ಅತ್ಯಂತ ಕಿರಿಯ ಆಟಗಾರ ಎಂಬ ದಾಖಲೆಯನ್ನು 14ನೇ ವಯಸ್ಸಿನಲ್ಲಿ ಬರೆದಿದ್ದಾರೆ. ಟೆಸ್ಟ್ ಪಂದ್ಯ ಡ್ರಾ ಕಂಡಿದ್ದರೂ, ಯೂಥ್ ಟೆಸ್ಟ್ ಪಂದ್ಯದಲ್ಲಿ ಅರ್ಧಶತಕ ಹಾಗೂ ವಿಕೆಟ್ ಪಡೆಯುವ ಮೂಲಕ ಬಾಂಗ್ಲಾದೇಶ ತಂಡದ ಮೆಹಡಿ ಹಸನ್ ಮಿರಾಝ್ ಅವರನ್ನು ವೈಭವ್ ಸೂರ್ಯವಂಶಿ ಹಿಂದಿಕ್ಕಿದ್ದಾರೆ. ಬಾಂಗ್ಲಾ ಆಟಗಾರ 2013ರಲ್ಲಿ ಮೀರ್‌ಪುರ್‌ನಲ್ಲಿ ಶ್ರೀಲಂಕಾ ವಿರುದ್ಧ 15 ವರ್ಷ 167 ದಿನಗಳ ವಯಸ್ಸಿನಲ್ಲಿ ಈ ದಾಖಲೆ ಬರೆದಿದ್ದರು, ಆದರೆ ಸೂರ್ಯವಂಶಿ ತಮ್ಮ 14ನೇ ವಯಸ್ಸಿನಲ್ಲಿಯೇ ಹೊಸ ದಾಖಲೆ ಬರೆದಿದ್ದಾರೆ.

2ನೇ ಆವೃತ್ತಿಯ ಲೆಜೆಂಡ್ಸ್ ಕಪ್ ಕ್ರಿಕೆಟ್ ಟೂರ್ನಿ । ಟೀಮ್ ಇಂಡಿಯಾಕ್ಕೆ ಮೊದಲ ಅಗ್ನಿಪರೀಕ್ಷೆ

ಇಂದು ಭಾರತ-ಪಾಕ್ ಹೈವೋಲ್ಟೇಜ್ ಪಂದ್ಯ

ಬಿರ್ಮಿಂಗ್‌ಹ್ಯಾಮ್: ಪಹಲ್ಗಾಮ್ ದಾಳಿಗೆ ಪ್ರತೀಕಾರವಾಗಿ ಪಾಕಿಸ್ತಾನಕ್ಕೆ ಭಾರತವು ಆಪರೇಷನ್ ಸಿಂದೂರ ಕಾರ್ಯಾಚರಣೆ ಮೂಲಕ ತಕ್ಕ ಉತ್ತರ ನೀಡದ ಬಳಿಕ ಎರಡು ದೇಶಗಳ ನಡುವೆ ಕ್ರೀಡಾ ಸಂಬಂಧ ಕೂಡಾ ಹದಗೆಟ್ಟಿತ್ತು. ಆದರೆ ಇದೀಗ ಮೊದಲ ಬಾರಿಗೆ ಆ ಘಟನೆಯ ಬಳಿಕ ಎರಡು ದೇಶಗಳ ನಡುವಿನ ಹೈವೋಲ್ಟೇಜ್ ಕ್ರಿಕೆಟ್ ಪಂದ್ಯಕ್ಕೆ ವೇದಿಕೆ ಸಜ್ಜಾಗಿದೆ. 2ನೇ ಆವೃತ್ತಿಯ ಲೆಜೆಂಡ್ಸ್ ವಿಶ್ವ ಚಾಂಪಿಯನ್‌ಶಿಪ್ ಕೂಟದಲ್ಲಿ ಭಾರತದ ಹಿರಿಯರ ಕ್ರಿಕೆಟ್ ತಂಡವು ಪಾಕಿಸ್ತಾನದ ವಿರುದ್ಧ ಸೆಣಸಾಟ ನಡೆಸಲಿದೆ.

ಈ ಸಲದ ಟೂರ್ನಿಯಲ್ಲಿ ಭಾರತಕ್ಕೆ ಇದು ಮೊದಲ ಪಂದ್ಯವಾದರೆ, ಪಾಕಿಸ್ತಾನಕ್ಕಿದು ಎರಡನೇ ಪಂದ್ಯವಾಗಿದೆ. ಶುಕ್ರವಾರ ನಡೆದಿದ್ದ ಉದ್ಘಾಟನಾ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಪಾಕಿಸ್ತಾನವು 5 ರನ್ ಅಂತರದ ರೋಚಕ ಗೆಲುವು ಸಾಧಿಸಿ ಶುಭಾರಂಭ ಮಾಡಿತ್ತು. ಕಳೆದ ಆವೃತ್ತಿಯ ಲೀಗ್ ಪಂದ್ಯದಲ್ಲಿ ಪಾಕ್ ವಿರುದ್ಧ ಭಾರತ ಸೋತಿದ್ದರೂ, ಫೈನಲ್‌ನಲ್ಲಿ ಭಾರತ ತಂಡವು ಪಾಕ್ ಅನ್ನು ಮಣಿಸಿ ಚಾಂಪಿಯನ್ ಆಗಿತ್ತು.

2007 ಟಿ20 ಮತ್ತು 2011ರ ಏಕದಿನ ವಿಶ್ವಕಪ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಯುವರಾಜ್ ಸಿಂಗ್ ಭಾರತ ಹಿರಿಯರ ತಂಡವನ್ನು ಮುನ್ನಡೆಸಲಿದ್ದಾರೆ. ಎಡಗೈ ಬ್ಯಾಟರ್‌ಗಳಾದ ಶಿಖರ್ ಧವನ್ ಮತ್ತು ಕನ್ನಡಿಗ ರಾಬಿನ್ ಉತ್ತಪ್ಪ ಭಾರತದ ಇನಿಂಗ್ಸ್ ಆರಂಭಿಸಲಿದ್ದಾರೆ. ಉಳಿದಂತೆ ಸುರೇಶ್ ರೈನಾ, ಅಂಬಾಟಿ ರಾಯುಡು, ಇರ್ಫಾನ್ ಪಠಾಣ್, ಯೂಸಫ್ ಪಠಾಣ್, ಹರ್ಭಜನ್ ಸಿಂಗ್, ಸ್ಟುವರ್ಟ್ ಬಿನ್ನಿ ಮುಂತಾದವರು ತಂಡದ ಪ್ರಮುಖ ಆಟಗಾರರಾಗಿ ಕಾಣಿಸಿಕೊಳ್ಳಲಿದ್ದಾರೆ.

ಪಾಕ್ ಹಿರಿಯರ ತಂಡ ಕೂಡ ಬಲಿಷ್ಠವಾಗಿದ್ದು, ನಾಯಕ ಮೊಹಮ್ಮದ್ ಹಫೀಜ್, ಶೋಯೆಬ್ ಮಲಿಕ್, ಆಸೀಫ್ ಅಲಿ, ಕಮ್ರಾನ್ ಅಕ್ಮಲ್ ಕೂಡ ತಮ್ಮ ಸಾಮರ್ಥ್ಯವನ್ನು ಕೂಡಾ ಒರೆಗೆ ಹಚ್ಚಲಿದ್ದಾರೆ. ಮೊದಲ ಪಂದ್ಯದಲ್ಲಿ ಗೆಲುವು ಸಾಧಿಸಿದ ಕಾರಣ ಭಾರತ ವಿರುದ್ಧದ ಪಂದ್ಯಕ್ಕೆ ಪಾಕ್ ತಂಡವು ತನ್ನ ಆಡುವ ಬಳಗದಲ್ಲಿ ಬದಲಾವಣೆ ಮಾಡುವುದು ಅನುಮಾನವಾಗಿದೆ.

ಪಂದ್ಯ ಆರಂಭ: ರಾತ್ರಿ 9ಗಂಟೆ.
ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಮತ್ತು ಫ್ಯಾನ್‌ಕೋಡ್(ಒಟಿಟಿ).

ಭಾರತ ಸಂಭಾವ್ಯ ತಂಡ: ಶಿಖರ್ ಧವನ್, ರಾಬಿನ್ ಉತ್ತಪ್ಪ, ಸುರೇಶ್ ರೈನಾ, ಯುವರಾಜ್ ಸಿಂಗ್ (ನಾಯಕ), ಅಂಬಾಟಿ ರಾಯುಡು, ಇರ್ಫಾನ್ ಪಠಾಣ್, ಯೂಸುಫ್ ಪಠಾಣ್, ಹರ್ಭಜನ್ ಸಿಂಗ್, ಪೀಯೂಶ್ ಚಾವ್ಲಾ, ವರುಣ್ ಆರೋನ್, ಸಿದ್ಧಾರ್ಥ್ ಕೌಲ್, ವಿನಯ್ ಕುಮಾರ್.
ಪಾಕಿಸ್ತಾನ ಸಂಭಾವ್ಯ ತಂಡ: ಮೊಹಮ್ಮದ್ ಹಫೀಜ್ (ನಾಯಕ), ಕಮ್ರಾನ್ ಅಕ್ಮಲ್ (ಕೀಪರ್), ಶೋಯೆಬ್ ಮಲಿಕ್, ಸರ್ಜಿಲ್ ಖಾನ್, ಆಸಿಫ್ ಅಲಿ, ಉಮರ್ ಅಮೀನ್, ಅಮೀರ್ ಯಾಮಿನ್, ವಹಾಬ್ ರಿಯಾಜ್, ಸೊಹೈಲ್ ಖಾನ್, ಸೊಹೈಲ್ ತನ್ವಿರ್, ರುಮ್ಮನ್ ರಯೀಸ್.

ಕಳೆದ ವರ್ಷದಲ್ಲಿ ಬಿಸಿಸಿಐಗೆ 9,741 ಕೋಟಿ ಆದಾಯ

ಐಪಿಎಲ್‌ನಿಂದಲೇ 5,761 ಕೋಟಿ ರು. ಲಾಭ

ದೆಹಲಿ: ವಿಶ್ವದ ಅತ್ಯಂತ ಶ್ರೀಮಂತ ಕ್ರಿಕೆಟ್ ಸಂಸ್ಥೆ ಎನಿಸಿಕೊಂಡಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ(ಬಿಸಿಸಿಐ) ಮತ್ತಷ್ಟು ಶ್ರೀಮಂತಗೊಂಡಿದೆ. 2023-24ರ ಹಣಕಾಸು ವರ್ಷದಲ್ಲಿ ಬರೋಬ್ಬರಿ 9,741.7 ಕೋಟಿ ರು.ಆದಾಯ ಗಳಿಸಿದೆ, ಅದರಲ್ಲಿ ಐಪಿಎಲ್‌ನಿಂದಲೇ 5,761 ಕೋಟಿ ರು. ಆದಾಯ ಬಂದಿದೆ. ಪ್ರತಿ ವರ್ಷ 1000 ಕೋಟಿ ರು. ಬಡ್ಡಿ ಗಳಿಸುತ್ತಿದೆ ಎಂಬ ಅಚ್ಚರಿಯ ವಿಷಯವೂ ಬಹಿರಂಗವಾಗಿದೆ.

2008ರಲ್ಲಿ ಆರಂಭಗೊಂಡಿದ್ದ ಐಪಿಎಲ್ ಈಗ ಬಿಸಿಸಿಐ ಪಾಲಿಗೆ ಪ್ರಮುಖ ಆದಾಯದ ಮೂಲವಾಗಿದೆ. ಬಿಸಿಸಿಐ ಗಳಿಸಿರುವುದರಲ್ಲಿ ಶೇ. 59ರಷ್ಟು ಪಾಲು ಐಪಿಎಲ್ ಟೂರ್ನಿಯಿಂದ ಲಭಿಸಿದೆ. ಮಹಿಳಾ ಪ್ರೀಮಿಯರ್ ಲೀಗ್ 378 ಕೋಟಿ ರು. ಆದಾಯ ತಂದಿತ್ತಿದೆ. ಕಳೆದ ವರ್ಷ, 2022-23ರ ಹಣಕಾಸು ವರ್ಷದಲ್ಲಿ ಬಿಸಿಸಿಐಗೆ ಎಲ್ಲಾ ಮೂಲಗಳಿಂದ ಸುಮಾರು 6,820 ಕೋಟಿ ರು. ನಷ್ಟು ಆದಾಯ ಲಭಿಸಿತ್ತು. ಅದಕ್ಕೂ ಹಿಂದೆ 2021-22ರಲ್ಲಿ ಸುಮಾರು 7,600 ಕೋಟಿ ರು.ನಷ್ಟು ಗಳಿಸಿತ್ತು, ಆದರೆ ಈ ಬಾರಿ ದಾಖಲೆಯ ಮೊತ್ತ ಗಳಿಸಿರುವುದು ವಿಶೇಷವಾಗಿದೆ. ಐಪಿಎಲ್ ಅಲ್ಲದ ಟೂರ್ನಿಗಳ ಮಾಧ್ಯಮ ಪ್ರಾಯೋಜಕತ್ವದಲ್ಲಿ ಬಿಸಿಸಿಐ 361 ಕೋಟಿ ರು. ಗಳಿಸಿದೆ. ಭಾರತದ ಪುರುಷರ ಕ್ರಿಕೆಟ್ ತಂಡದ ಸರಣಿಗಳ ಮೂಲಕ 350 ಕೋಟಿಗೂ ಹೆಚ್ಚು ಲಾಭವಾಗಿದೆ. ಬಡ್ಡಿ ಮೂಲಕ 987 ಕೋಟಿ, ಇತರ ಮೂಲಗಳಿಂದ 400ಕ್ಕೂ ಹೆಚ್ಚು ಕೋಟಿ ಆದಾಯ 2023-24ರಲ್ಲಿ ಬಿಸಿಸಿಐಗೆ ಲಭಿಸಿದೆ ಎಂದು ವರದಿಯಾಗಿದೆ.

1000 ಕೋಟಿ ಬಡ್ಡಿ: ಐಪಿಎಲ್ ಅಲ್ಲದೆ ರಣಜಿ ಟ್ರೋಫಿ, ದುಲೀಪ್ ಟ್ರೋಫಿ, ಸಿ.ಕೆ.ನಾಯ್ಡು ಟ್ರೋಫಿಯಂತಹ ದೇಸಿ ಟೂರ್ನಿಗಳನ್ನು ವಾಣಿಜ್ಯೀಕರಿಸುವ ಮೂಲಕ ಬಿಸಿಸಿಐ ದೊಡ್ಡ ಆದಾಯ ಗಳಿಸುತ್ತಿದೆ. ಬಿಸಿಸಿಐ 30,000 ಕೋಟಿ ರು.ಗಳಷ್ಟು ಬೃಹತ್ ಮೊತ್ತವನ್ನು ಮೀಸಲು ಠೇವಣಿಯಾಗಿ ಇಟ್ಟಿದೆ. ಅದರಿಂದಲೇ ವಾರ್ಷಿಕ 1,000 ಕೋಟಿ. ರೂ.ಯಷ್ಟು ಬಡ್ಡಿ ಸಿಗುತ್ತಿದೆ, ಹೀಗಾಗಿ ವರ್ಷದಿಂದ ವರ್ಷಕ್ಕೆ ಬಿಸಿಸಿಐ ಆದಾಯದಲ್ಲಿ ಶೇ. 10-12ರಷ್ಟು ಏರಿಕೆ ಕಾಣುತ್ತಲೇ ಇದೆ.

ಐಸಿಸಿ ಆರ್ಥಿಕತೆಗೂ ಬಿಸಿಸಿಐ ಆದಾಯ ಮೂಲ

ಜಾಗತಿಕ ಕ್ರಿಕೆಟ್‌ನ ಆರ್ಥಿಕತೆಯಲ್ಲಿ ಭಾರತದ ಕೊಡುಗೆ ಶೇ.70ರಿಂದ 80ರಷ್ಟಿದೆ, ಅಂದರೆ ವಾರ್ಷಿಕವಾಗಿ 5000 ಕೋಟಿಗೂ ಹೆಚ್ಚಿನ ಹಣ ಸಂಪಾದಿಸುವ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿಯು 4000 ಕೋಟಿಯಷ್ಟು ಮೊತ್ತವನ್ನು ಬಿಸಿಸಿಐ ಮೂಲಕವೇ ಗಳಿಸುತ್ತದೆ. ಇದಕ್ಕೆ ಪ್ರತಿಯಾಗಿ ವಾರ್ಷಿಕವಾಗಿ ಅದು ತನ್ನ ಸದಸ್ಯ ರಾಷ್ಟ್ರಗಳಿಗೆ ಹಂಚುವ ಆದಾಯದಲ್ಲಿ ಬಿಸಿಸಿಐ ಶೇ.38.5ರಷ್ಟು ಪಾಲನ್ನು ಪಡೆಯುತ್ತಿದೆ.

ಅನಿಶ್ಚಿತತೆಯಲ್ಲಿ ಏಷ್ಯಾಕಪ್ ಕ್ರಿಕೆಟ್

ದೆಹಲಿ: ಬಾಂಗ್ಲಾದೇಶದೊಂದಿಗಿನ ರಾಜತಾಂತ್ರಿಕ ಉದ್ವಿಗ್ನತೆಯಿಂದಾಗಿ ಜುಲೈ 24ರಂದು ಢಾಕಾದಲ್ಲಿ ನಡೆಯಲಿರುವ ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಸಭೆ ಯನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಬಹಿಷ್ಕರಿಸಲು ಸಜ್ಜಾಗಿರುವುದರಿಂದ 2025ರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಭವಿಷ್ಯವು ಅನಿಶ್ಚಿತದಲ್ಲಿದೆ.

ಢಾಕಾದಲ್ಲಿ ನಡೆದರೆ ಸಭೆಯಲ್ಲಿ ಭಾಗವಹಿಸುವುದಿಲ್ಲ ಎಂದು ಬಿಸಿಸಿಐ ಅಧಿಕೃತವಾಗಿ ಎಸಿಸಿ ಮತ್ತು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಅಧ್ಯಕ್ಷ ಮೊಹ್ಸಿನ್ ನಖ್ವಿ ಇಬ್ಬರಿಗೂ ತಿಳಿಸಿದೆ ಎಂದು ಉನ್ನತ ಮೂಲವೊಂದು ಬಹಿರಂಗಪಡಿಸಿದೆ. ಭಾರತ ಮತ್ತು ಬಾಂಗ್ಲಾದೇಶ ನಡುವಿನ ಪ್ರಸ್ತುತ ಹದಗೆಟ್ಟ ರಾಜಕೀಯ ಸಂಬಂಧಗಳಿಂದಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಭಾರತ ಮಾತ್ರವಲ್ಲದೆ ಶ್ರೀಲಂಕಾ, ಓಮನ್ ಮತ್ತು ಅಫ್ಘಾನಿಸ್ತಾನದ ಕ್ರಿಕೆಟ್ ಮಂಡಳಿಗಳು ಸ್ಥಳದ ಬಗ್ಗೆ ಇದೇ ರೀತಿಯ ಆಕ್ಷೇಪಣೆಗಳನ್ನು ಉಲ್ಲೇಖಿಸಿ ಬಹಿಷ್ಕಾರಕ್ಕೆ ಸೇರಿಕೊಂಡಿವೆ ಎಂದು ವರದಿಯಾಗಿದೆ. ಹೆಚ್ಚುತ್ತಿರುವ ವಿರೋಧದ ಹೊರತಾ ಗಿಯೂ, ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಅಧ್ಯಕ್ಷ ಮೊಹ್ಸಿನ್ ನಖ್ವಿ ಢಾಕಾದಲ್ಲಿಯೇ ಸಭೆ ನಡೆಸುವುದಾಗಿ ತಿಳಿಸಿದಾರೆ.

ಬಿಸಿಸಿಐ ತನ್ನ ನಿಲುವನ್ನು ಎಸಿಸಿ ಮತ್ತು ಅಧ್ಯಕ್ಷ ನಖ್ವಿ ಇಬ್ಬರಿಗೂ ಸ್ಪಷ್ಟವಾಗಿ ತಿಳಿಸಿ, ಸ್ಥಳ ಬದಲಾವಣೆಗೆ ವೈಯಕ್ತಿಕವಾಗಿ ವಿನಂತಿಸಿದ್ದಾರೆ. ಆದರೆ ಇಲ್ಲಿಯವರೆಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ಏಷ್ಯನ್ ಕ್ರಿಕೆಟ್ ಕೌನ್ಸಿಲ್‌ನ ಸಂವಿಧಾನದ ಪ್ರಕಾರ, ಪ್ರಮುಖ ಸದಸ್ಯರ ಮಂಡಳಿಗಳ ಭಾಗವಹಿಸುವಿಕೆ ಇಲ್ಲದೆ ಢಾಕಾದಲ್ಲಿ ನಡೆಯುವ ಸಭೆಯಲ್ಲಿ ತೆಗೆದುಕೊಳ್ಳುವ ಯಾವುದೇ ನಿರ್ಧಾರಗಳನ್ನು ಅಮಾನ್ಯವೆಂದು ಪರಿಗಣಿಸಬಹುದು, ಹಾಗಾಗಿ ಇದು ಟೂರ್ನಿಯ ಸ್ಥಗಿತದ ಬಗ್ಗೆ ಕಳವಳಗಳನ್ನು ಹುಟ್ಟುಹಾಕಿದೆ.

ನ್ಯೂಜಿಲೆಂಡ್‌ಗೆ ಸತತ 2ನೇ ಗೆಲುವು

ಹರಾರೆ: ಮಾರಕ ಬೌಲಿಂಗ್ ನಂತರ ಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಿದ ನ್ಯೂಜಿಲೆಂಡ್ ತಂಡವು ತ್ರಿಕೋನ ಸರಣಿಯ ಮೂರನೇ ಪಂದ್ಯದಲ್ಲಿ ಜಿಂಬಾಬ್ವೆಯನ್ನು 8 ವಿಕೆಟ್‌ಗಳಿಂದ ಸೋಲಿಸಿತು. ಸರಣಿಯಲ್ಲಿ ಸತತ ಎರಡನೇ ಗೆಲುವು ದಾಖಲಿಸುವ ಮೂಲಕ ನ್ಯೂಜಿಲೆಂಡ್ ತಂಡವು ಅಂಕಪಟ್ಟಿಯಲ್ಲಿ ತನ್ನ ಹಿಡಿತವನ್ನು ಬಲಪಡಿಸಿಕೊಂಡಿದೆ. ಟಾಸ್ ಗೆದ್ದ ನಂತರ ಮೊದಲು ಫೀಲ್ಡಿಂಗ್ ಮಾಡುವ ಮೂಲಕ ನ್ಯೂಜಿಲೆಂಡ್ ನಾಯಕ ಮಿಚೆಲ್ ಸ್ಯಾಂಟ್ನರ್ ಉತ್ತಮ ನಿರ್ಧಾರ ಕೈಗೊಂಡರು. ಜಿಂಬಾಬ್ವೆ ಆರಂಭದಲ್ಲೇ ಬ್ಯಾಟಿಂಗ್ ಹಿನ್ನಡೆ ಕಂಡಿತು. 20 ಓವರ್‌ಗಳಲ್ಲಿ 7 ವಿಕೆಟ್‌ಗಳ ನಷ್ಟಕ್ಕೆ ಕೇವಲ 120 ರನ್‌ಗಳನ್ನು ಗಳಿಸಲಷ್ಟೇ ಶಕ್ತವಾಯಿತು, ಕಿವೀಸ್ 13.5 ಓವರ್‌ಗಳಲ್ಲಿ ಗುರಿ ತಲುಪಿತು.

ವೆಸ್ಲಿ ಮಾಧೇವೆರೆ ಜಿಂಬಾಬ್ವೆ ಪರ 36 ರನ್‌ಗಳ ಹೋರಾಟದ ಇನಿಂಗ್ಸ್ ಆಡಿದರೆ, ಬ್ರಿಯಾನ್ ಬೆನೆಟ್ 21 ರನ್‌ಗಳ ಕೊಡುಗೆ ನೀಡಿದರು. ನ್ಯೂಜಿಲೆಂಡ್ ಬೌಲರ್ ಮ್ಯಾಟ್ ಹೆನ್ರಿ ಅದ್ಭುತ ಬೌಲಿಂಗ್ ಪ್ರದರ್ಶನ ತೋರಿ 3 ವಿಕೆಟ್‌ಗಳನ್ನು ಪಡೆದರು. ಅದರ ಹೊರತಾಗಿ, ರಚಿನ್ ರವೀಂದ್ರ ಮತ್ತು ಆಡಮ್ ಮಿಲ್ನೆ ಕೂಡ ಅತ್ಯುತ್ತಮವಾಗಿ ಬೌಲಿಂಗ್ ನಡೆಸಿ ತಲಾ ಒಂದು ವಿಕೆಟ್ ಪಡೆದರು.

121 ರನ್‌ಗಳ ಸಾಧಾರಣ ಗುರಿಯನ್ನು ಹಿಂಬಾಲಿಸುವಲ್ಲಿ ನ್ಯೂಜಿಲೆಂಡ್ ತಂಡ ಯಶಸ್ವಿಯಾಯಿತು. ಆರಂಭಿಕ ಟಿಮ್ ಸೀಫರ್ಟ್ ಬೇಗ ಔಟಾದರೂ, ಡೆವೋನ್ ಕಾನ್ವೇ ಮತ್ತು ರಚಿನ್ ರವೀಂದ್ರ ಎರಡನೇ ವಿಕೆಟ್‌ಗೆ 59 ರನ್‌ಗಳ ಪ್ರಮುಖ ಜತೆಯಾಟ ಪ್ರದರ್ಶಿಸಿದರು. ರಚಿನ್ ರವೀಂದ್ರ 19 ಎಸೆತಗಳಲ್ಲಿ 30 ರನ್ ಮಾಡಿದರು. ಅದರ ನಂತರ, ಡೆವೋನ್ ಕಾನ್ವೇ, ಡ್ಯಾರಿಲ್ ಮಿಚೆಲ್ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಕಾನ್ವೇ 40 ಎಸೆತಗಳನ್ನು ಎದುರಿಸಿ ಅಜೇಯ 59 ರನ್‌ಗಳ ಅದ್ಭುತ ಇನಿಂಗ್ಸ್ ಆಡಿದರು. ಡ್ಯಾರಿಲ್ ಮಿಚೆಲ್ ಕೂಡ ಅಜೇಯ 26 ರನ್ ಗಳಿಸಿದರು. ನ್ಯೂಜಿಲೆಂಡ್ 13.5 ಓವರ್‌ಗಳಲ್ಲಿ ಕೇವಲ 2 ವಿಕೆಟ್‌ಗಳನ್ನು ಕಳೆದುಕೊಂಡು ಗುರಿ ತಲುಪಿತು.

ದೇಶಿ ಕ್ರಿಕೆಟ್‌ನತ್ತ ಶಮಿ ಒಲವು

ಕೋಲ್ಕತಾ: ಇಂಗ್ಲೆಂಡ್ ಪ್ರವಾಸದ ಭಾರತೀಯ ಟೆಸ್ಟ್ ತಂಡದಿಂದ ಕೈಬಿಡಲ್ಪಟ್ಟ ನಂತರ, ಭಾರತದ ಅನುಭವಿ ವೇಗಿ ಮೊಹಮ್ಮದ್ ಶಮಿ ದೇಶೀಯ ಕ್ರಿಕೆಟ್‌ಗೆ ಪ್ರವೇಶಿಸುವ ಸಾಧ್ಯತೆಯಿದೆ. ಮುಂಬರುವ ದೇಶೀಯ ಋತುವಿಗೆ ಬಂಗಾಳದ 50 ಸಂಭಾವ್ಯ ಆಟಗಾರರ ಪಟ್ಟಿಯಲ್ಲಿ ಶಮಿ ಹೆಸರು ಕೂಡ ಕಾಣಿಸಿಕೊಂಡಿದೆ. ಶಮಿ ದೇಶಿ ಋತುವಿನ ಆರಂಭಿಕ ದುಲೀಪ್ ಟ್ರೋಫಿಯಲ್ಲಿ ಪೂರ್ವ ವಲಯದ ಭಾಗವಾಗುವ ಸಾಧ್ಯತೆಯಿದೆ. ದುಲೀಪ್ ಟ್ರೋಫಿ ಆಗಸ್ಟ್ 28ರಂದು ಆರಂಭವಾಗಲಿದೆ.

34 ವರ್ಷದ ವೇಗಿ ಶಮಿ ಹೆಚ್ಚು ಸಮಯ ಬೌಲಿಂಗ್ ಮಾಡಲು ಸಾಧ್ಯವಾಗುವುದಿಲ್ಲ ಎಂದು ಬಿಸಿಸಿಐ ವೈದ್ಯಕೀಯ ತಂಡವು ಭಾರತೀಯ ಮಂಡಳಿಗೆ ತಿಳಿಸಿದ ನಂತರ, ಆ್ಯಂಡರ್ಸನ್-ತೆಂಡೂಲ್ಕರ್ ಟ್ರೋಫಿಗಾಗಿ 18 ಆಟಗಾರರ ಭಾರತೀಯ ತಂಡದಿಂದ ಶಮಿ ಅವರನ್ನು ಹೊರಗಿಡಲಾಯಿತು. 2024ರಲ್ಲಿ ಮೊಹಮ್ಮದ್ ಶಮಿ ಪಾದದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು, ಅದು ಅವರ ಕ್ರಿಕೆಟ್ ವೃತ್ತಿಯನ್ನು ಸುಮಾರು ಒಂದು ವರ್ಷದ ಕಾಲ ಸ್ಥಗಿತಗೊಳಿಸಿತ್ತು. ಈ ವರ್ಷದ ಆರಂಭದಲ್ಲಿ ಟಿ 20 ಸ್ವರೂಪದ ಮೂಲಕ ಪುನರಾಗಮನ ಮಾಡಿ, ನಂತರ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತ ತಂಡದ ಸದಸ್ಯರಾಗಿದ್ದರು. ಅದಾದ ಬಳಿಕ ಸನ್‌ರೈಸರ್ಸ್ ಹೈದರಾಬಾದ್ ತಂಡದ ಪರ ಐಪಿಎಲ್ ಆಡಿದ್ದರು.

ವಿಟಾಕೀಸ್

ಆಗಸ್ಟ್‌ನಲ್ಲಿ ಎಲ್ಟು ಮುತ್ತ

ಹೊಸತನದ ಕಥೆಯನ್ನು ಹೊತ್ತು ಬಂದಿರುವ ಎಲ್ಟು ಮುತ್ತ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಹಿರಿಯ ನಿರ್ಮಾಪಕ ಎಸ್.ಎ.ಚಿನ್ನೇಗೌಡ ಟ್ರೇಲರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಕಿಶೋರ್ ಕುಮಾರ್, ಮನೋರಂಜನ್ ರವಿಚಂದ್ರನ್ ಮುಂತಾದವರು ಎಲ್ಟು ಮುತ್ತನ ಟ್ರೇಲರ್ ನೋಡಿ ಮೆಚ್ಚಿ ಚಿತ್ರತಂಡಕ್ಕೆ ಶುಭಹಾರೈಸಿದರು. ಕೊಡಗಿನ ಸುತ್ತಮುತ್ತ ಸಾಗುವ ಕಥೆ ಇದಾಗಿದ್ದು ಅದೇ ದಾಟಿಯ ಸಂಭಾಷಣೆಯನ್ನು ಹೊತ್ತುಬಂದಿದೆ. ಚಿತ್ರದಲ್ಲಿ ಸೆಂಟಿಮೆಂಟ್ ಬೆರೆತಿದ್ದು, ಎಲ್ಲಾ ಪ್ರೇಕ್ಷಕರಿಗೂ ಕನೆಕ್ಟ್ ಆಗುವ ಸ್ಟೋರಿ ಇಲ್ಲಿದೆ. 5 ಸ್ಟುಡಿಯೋಸ್ ಲಾಂಛನದಲ್ಲಿ ಸತ್ಯ.ಎಸ್.ಶ್ರೀನಿವಾಸನ್ ನಿರ್ಮಿಸಿರುವ ಈ ಚಿತ್ರವನ್ನು ರಾ.ಸೂರ್ಯ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ, ಎಲ್ಟು ಹಾಗೂ ಮುತ್ತ ಚಿತ್ರದ ಎರಡು ಪಾತ್ರಗಳ ಹೆಸರಾಗಿದ್ದು, ರಾ.ಸೂರ್ಯ ಎಲ್ಟುವಾಗಿ ಶೌರ್ಯ ಪ್ರತಾಪ್ ಮುತ್ತನಾಗಿ ಅಭಿನಯಿಸಿದ್ದಾರೆ. ಪ್ರಿಯಾಂಕಾ ಮಳಲಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ ಉಳಿದಂತೆ ಕಾಕ್ರೋಚ್ ಸುಧೀ , ನವೀನ್ ಡಿ ಪಡೀಲ್, ಯಮುನಾ ಶ್ರೀನಿಧಿ ಮುಂತಾದವರು ತಾರಾಗಣದಲ್ಲಿದ್ದಾರೆ. ಪ್ರಸನ್ನ ಕೇಶವ ಚಿತ್ರದ ಹಾಡುಗಳಿಗೆ ಸಂಗೀತ ಸಂಯೋಜಿಸಿದ್ದು ಹಾಡಿಗೂ ದನಿಯಾಗಿದ್ದಾರೆ. ನಾನು ಮುತ್ತಾ ಪಾತ್ರದಲ್ಲಿ ಅಭಿನಯಿಸಿದ್ದೇನೆ. ನಾನು ಬರವಣಿಗೆ ಹಂತದಿಂದಲೂ ಚಿತ್ರತಂಡದ ಜತೆಗಿದ್ದೇನೆ ಹಾಗಾಗಿ ನನ್ನ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸಲು ಸಾಧ್ಯವಾಯಿತು ಎಂದು ಶೌರ್ಯ ಪ್ರತಾಪ್ ಹೇಳಿದರು. ಎಲ್ಟು ಮುತ್ತ ಆಗಸ್ಟ್ 1 ರಂದು ರಾಜ್ಯಾದ್ಯಂತ ತೆರೆಗೆ ಬರಲಿದೆ.

ನಮ್ಮ ಚಿತ್ರದ ಎರಡು ಹಾಡುಗಳು ಹಾಗೂ ಟೀಸರ್‌ಗೆ ಉತ್ತಮ ಸ್ಪಂದನೆ ದೊರೆತಿದೆ. ಅದರಲ್ಲೂ ಕೊಡವ ಭಾಷೆಯ ಹಾಡಂತೂ ಅಧಿಕ ಸಂಖ್ಯೆಯಲ್ಲಿ ವೀಕ್ಷಣೆಯಾಗುತ್ತಿದೆ. ಹೊಸತನದ ಕಥೆಯನ್ನು ಒಳಗೊಂಡಿರುವ ನಮ್ಮ ಚಿತ್ರ ಆಗಸ್ಟ್ 1ರಂದು ತೆರೆಗೆ ಬರಲಿದೆ.
-ಸತ್ಯ ಶ್ರೀನಿವಾಸನ್ ನಿರ್ಮಾಪಕ

ಎಲ್ಟು ಮುತ್ತ ಎರಡು ಪಾತ್ರಗಳ ಹೆಸರು, ಇದು ಸಾವಿಗೆ ಡೋಲು ಬಡೆಯುವವರ ಸುತ್ತ ಹೆಣೆದಿರುವ ಕಥೆ. ಚಿಕ್ಕವಯಸ್ಸಿನಿಂದ ನಾನು ಕಂಡ ಕೆಲವು ಸನ್ನಿವೇಶಗಳನ್ನು ಚಿತ್ರದ ಮೂಲಕ ತರುತ್ತಿದ್ದೇನೆ. ಸಿನಿಮಾದ ಸ್ಟೋರಿ ಎಲ್ಲರಿಗೂ ಕನೆಕ್ಟ್ ಆಗಲಿದೆ. ನಾನು ನಿರ್ದೇಶನದ ಜತೆಗೆ ಎಲ್ಟು ಪಾತ್ರದಲ್ಲೂ ಅಭಿನಯಿಸಿದ್ದೇನೆ.
-ರಾ ಸೂರ್ಯ ನಿರ್ದೇಶಕ

ಜಾಕಿಗೆ ಸಿಕ್ಕಳು ಸುಂದರಿ

ಕಿರುತೆರೆಯಲ್ಲಿ ಖ್ಯಾತಿ ಗಳಿಸಿರುವ ಕಿರಣ್ ರಾಜ್ ಮತ್ತೆ ಬೆಳ್ಳಿತೆರೆಯಲ್ಲಿ ಸದ್ದು ಮಾಡಲು ಸಿದ್ಧವಾಗಿದ್ದಾರೆ. ಕಿರಣ್ ಸದ್ಯ ಜಾಕಿ 42 ಚಿತ್ರದಲ್ಲಿ ನಾಯಕನಾಗಿ ನಟಿಸುತ್ತಿದ್ದಾರೆ. ಈ ಹಿಂದೆಯೇ ಸಿನಿಮಾದ ಪೋಸ್ಟರ್ ರಿಲೀಸ್ ಮಾಡಿದ್ದ ಚಿತ್ರತಂಡ ಕ್ಯೂರಿಯಾಸಿಟಿ ಮೂಡಿಸಿತ್ತು. ಈ ಸಿನಿಮಾದಲ್ಲಿ ಯಾರೂ ನಾಯಕಿಯಾಗಿ ನಟಿಸಲಿದ್ದಾರೆ ಎಂಬ ಕುತೂಹಲವೂ ಇತ್ತು. ಈಗ ಅದಕ್ಕೆ ಉತ್ತರ ಸಿಕ್ಕಿದೆ. ನಟಿ ಹೃತಿಕಾ ಶ್ರೀನಿವಾಸ್ ಚಿತ್ರಕ್ಕೆ ನಾಯಕಿಯಾಗಿ ಆಯ್ಕೆಯಾಗಿದ್ದಾರೆ. ಮಾಡರ್ನ್ ಹಾಗೂ ಹೋಮ್ಲಿ ಎರಡು ಶೇಡ್ ಇರುವ ಪಾತ್ರ ಇದಾಗಿದ್ದು, ಹೃತಿಕಾ ಡಬ್ಬಲ್ ಶೇಡ್‌ನಲ್ಲಿ ಮಿಂಚಲಿದ್ದಾರೆ. ಈ ಹಿಂದೆ ಉಡಾಳ ಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸಿದ್ದ ಹೃತಿಕಾ, ಸದ್ಯ ತೆಲುಗು ಚಿತ್ರದಲ್ಲಿ ನಟಿಸುತ್ತಿದ್ದಾರೆ. ಸದ್ಯದಲ್ಲೇ ಜಾಕಿ 42 ಚಿತ್ರ ತಂಡ ಸೇರಿಕೊಳ್ಳಲಿದ್ದಾರೆ.

ಜಾಕಿ 42 ಹಾರ್ಸ್ ರೇಸ್ ಹಿನ್ನೆಲೆಯಲ್ಲಿ ಸಾಗುವ ಕಥೆಯಾಗಿದ್ದು, ಗುರುತೇಜ್ ಶೆಟ್ಟಿ ಚಿತ್ರದ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಅದ್ದೂರಿ ವೆಚ್ಚದ ಚಿತ್ರ ಇದಾಗಿದ್ದು, ಗೋಲ್ಡನ್ ಗೇಟ್ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ಭಾರತಿ ಸತ್ಯನಾರಾಯಣ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ತೆಲುಗು ಹಾಗೂ ತಮಿಳಿನ ಜನಪ್ರಿಯ ಚಿತ್ರಗಳಿಗೆ ಸಂಗೀತ ನೀಡಿರುವ ಖ್ಯಾತ ಸಂಗೀತ ನಿರ್ದೇಶಕ ವಿನೋದ್ ಯಜಮಾನಿ ಜಾಕಿ 42 ಸಿನಿಮಾಗೂ ಸಂಗೀತ ಸಂಯೋಜಿಸುತ್ತಿದ್ದಾರೆ. ಕನ್ನಡ, ತಮಿಳು ಹಾಗೂ ತೆಲುಗಿನ ಖ್ಯಾತ ನಟರು ಚಿತ್ರದಲ್ಲಿ ಅಭಿನಯಿಸಲಿದ್ದಾರೆ. ಹಾರ್ಸ್ ರೇಸ್ ಭಾಗದ ಚಿತ್ರೀಕರಣ ಬೆಂಗಳೂರಿನಲ್ಲಿ ನಡೆಯುತ್ತಿದೆ. ಸದ್ಯದಲ್ಲೇ ಚಿತ್ರದ ಟೀಸರ್ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ಗುರುತೇಜ್ ಶೆಟ್ಟಿ ತಿಳಿಸಿದ್ದಾರೆ. ಜಾಕಿ 42 ಕಿರಣ್‌ಗೆ ಬಿಗ್ ಬ್ರೇಕ್ ನೀಡುವ ನಿರೀಕ್ಷೆಯೂ ಇದೆ.



ಶಾರುಖ್‌ಗೆ ಗಾಯ

ಕಿಂಗ್ ಖಾನ್ ಶಾರುಖ್, ಪಠಾಣ್, ಜವಾನ್, ಡಂಕಿ ಹೀಗೆ ಮೂರು ಬ್ಯಾಕ್ ಟು ಬ್ಯಾಕ್ ಹಿಟ್ ಸಿನಿಮಾಗಳನ್ನು ನೀಡುವ ಮೂಲಕ ಗ್ರೇಟ್ ಕಮ್ ಬ್ಯಾಂಕ್ ಮಾಡಿದ್ದರು. ಈ ಸಿನಿಮಾದ ಬಳಿಕ ಶಾರುಖ್ ಯಾವುದೇ ಸಿನಿಮಾವನ್ನು ಘೋಷಿಸಿರಲಿಲ್ಲ. ಈಗ ಸದ್ದಿಲ್ಲದೆ ಕಿಂಗ್ ಸಿನಿಮಾದಲ್ಲಿ ನಟಿಸುತ್ತಿದ್ದರು. ಮುಂಬೈನಲ್ಲಿ ಸಿನಿಮಾ ಶೂಟಿಂಗ್ ನಡೆಯುತ್ತಿತ್ತು. ಕಿಂಗ್ ಆ್ಯಕ್ಷನ್ ಸಿನಿಮಾವಾಗಿದ್ದು ಶಾರುಖ್ ಸಾಹಸ ಸನ್ನಿವೇಶದ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ಅವಘಡ ಸಂಭವಿಸಿದ್ದು, ಶಾರುಖ್‌ಗೆ ಪೆಟ್ಟಾಗಿದೆ. ಸದ್ಯ ಚಿತ್ರೀಕರಣ ಸ್ಥಗಿತವಾಗಿದ್ದು ಶಾರುಖ್ ಚಿಕಿತ್ಸೆ ಪಡೆಯುತ್ತಿದ್ದಾರೆ. ಶಾರುಖ್ ಹೆಚ್ಚಿನ ಚಿಕಿತ್ಸೆಗೆ ಅಮೇರಿಕಾಗೆ ತೆರಳಲಿದ್ದಾರೆ. ಇನ್ನು ಒಂದು ತಿಂಗಳ ಕಾಲ ವಿಶ್ರಾಂತಿ ಪಡೆಯಲಿದ್ದು ಸೆಪ್ಟೆಂಬರ್ ಅಥವಾ ಅಕ್ಟೋಬರ್‌ನಲ್ಲಿ ಚ್ರೀಕರಣ ಆರಂಭವಾಗಲಿದ್ದಾರೆ.

ಚಿತ್ರೀಕರಣ ಮುಗಿಸಿದ ಬಲರಾಮ

ಮಾದೇವನ ಯಶಸ್ಸಿನ ಖುಷಿಯಲ್ಲಿರುವ ವಿನೋದ್ ಪ್ರಭಾಕರ್ ಬಲರಾಮನಾಗಿ ತೆರೆಗೆ ಬರಲು ಸಿದ್ಧವಾಗಿದ್ದಾರೆ. ಸದ್ಯ ಬಲರಾಮನ ದಿನಗಳು ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದೆ. ಬೆಂಗಳೂರು, ಮೈಸೂರು, ಶಿವಮೊಗ್ಗ, ಸಕಲೇಶಪುರ ಸುತ್ತಮುತ್ತ ಸುಮಾರು ಎಂಬತ್ತು ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಶೂಟಿಂಗ್ ಮುಗಿಸಿರುವ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್‌ನಲ್ಲಿ ಬ್ಯುಸಿಯಾಗಿದೆ. ಪದ್ಮಾವತಿ ಫಿಲಂಸ್ ಲಾಂಛನದಲ್ಲಿ ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ನಿರ್ಮಾಣ ಮಾಡುತ್ತಿರುವ ಈ ಚಿತ್ರವನ್ನು ಆ ದಿನಗಳು ಖ್ಯಾತಿಯ ಕೆ.ಎಂ.ಚೈತನ್ಯ ನಿರ್ದೇಶಿಸುತ್ತಿದ್ದಾರೆ. ಬಲರಾಮ ದಿನಗಳು ಭೂಗತ ಲೋಕದ ಕಥೆಯನ್ನು ಒಳಗೊಂಡಿದ್ದು, ರೆಟ್ರೋ ಶೈಲಿಯಲ್ಲಿ ಮೂಡಿಬರಲಿದೆ. ವಿನೋದ್ ಪ್ರಭಾಕರ್ ಹೊಸ ಲುಕ್‌ನಲ್ಲಿ ಮಿಂಚಿದ್ದಾರೆ. ಪ್ರಿಯಾ ಆನಂದ್ ನಾಯಕಿಯಾಗಿ ಬಣ್ಣಹಚ್ಚಿದ್ದು, ಅತುಲ್ ಕುಲಕರ್ಣಿ, ಆಶಿಶ್ ವಿದ್ಯಾರ್ಥಿ ಸೇರಿದಂತೆ ಹಲವು ಪ್ರಸಿದ್ಧ ಕಲಾವಿದರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಎಂಬತ್ತರ ಕಾಲಘಟ್ಟದಲ್ಲಿ ನಡೆಯುವ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಭಾರತದ ಹೆಸರಾಂತ ಸಂಗೀತ ನಿರ್ದೇಶಕ ಸಂತೋಷ್ ನಾರಾಯಣನ್ ಸಂಗೀತ ಸಂಯೋಜಿಸುತ್ತಿದ್ದಾರೆ. ಇದು ಸಂತೋಷ್ ನಾರಾಯಣನ್ ಸಂಗೀತ ನೀಡುತ್ತಿರುವ ಮೊದಲ ಕನ್ನಡ ಚಿತ್ರವಾಗಿದೆ. ವೇಣು ಛಾಯಾಗ್ರಹಣ ಈ ಚಿತ್ರಕ್ಕಿದೆ.

ಪ್ರಭಾಸ್ ಟಾಪ್ 1 ಶೈನ್ ಆದ ಸಮಂತಾ

ಭಾರತೀಯ ಚಿತ್ರರಂಗದಲ್ಲಿ ಫೇಮಸ್ ಆಗಿರುವ ತಾರೆಯರ ಪಟ್ಟಿಯನ್ನು ಆರ್ಮ್ಯಾಕ್ಸ್ ಬಿಡುಗಡೆ ಮಾಡಿದೆ. ಈ ಪಟ್ಟಿಯಲ್ಲಿ ಪ್ರಭಾಸ್ ಮೊದಲ ಸ್ಥಾನದಲ್ಲಿದ್ದಾರೆ. ತಮಿಳಿನ ಖ್ಯಾತ ನಟ ದಳಪತಿ ವಿಜಯ್ ಎರಡನೇ ಸ್ಥಾನ ಪಡೆದುಕೊಂಡಿದ್ದಾರೆ. ಪುಷ್ಪ 2 ಯಶಸ್ಸಿನ ಖುಷಿಯಲ್ಲಿರುವ ಅಲ್ಲು ಅರ್ಜುನ್ ಮೂರನೇ ಸ್ಥಾನದಲ್ಲಿದ್ದಾರೆ. ರಾಮ್ ಚರಣ್ 8ನೇ ಸ್ಥಾನ ಪಡೆದರೆ ಅಕ್ಷಯ್ ಕುಮಾರ್ 9ನೇ ಸ್ಥಾನಕ್ಕೆ ಕುಸಿದಿದ್ದಾರೆ. ಇನ್ನು ನಟಿ ಮಣಿಯರಲ್ಲಿ ಸಮಂತಾ ಮತ್ತೆ ಶೈನ್ ಆಗಿದ್ದು ಮೊದಲ ಸ್ಥಾನ ಪಡೆದಿದ್ದಾರೆ. ಎರಡನೇ ಸ್ಥಾನದಲ್ಲಿ ಆಲಿಯಾ ಭಟ್ ಹಾಗೂ ಮೂರನೇ ಸ್ಥಾನದಲ್ಲಿ ದೀಪಿಕಾ ಪಡುಕೋಣೆ ಇದ್ದಾರೆ. ತ್ರಿಷಾ ನಾಲ್ಕನೇ ಸ್ಥಾನದಲ್ಲಿದ್ದರೆ, ನ್ಯಾಷನಲ್ ಕ್ರಶ್ ರಶ್ಮಿಕಾ ಎಂಟನೇ ಸ್ಥಾನಕ್ಕೆ ಕುಸಿದಿದ್ದಾರೆ. ಕೀರ್ತಿ ಸುರೇಶ್ ಒಂಬತ್ತನೇ ಸ್ಥಾನದಲ್ಲಿದ್ದರೆ, ತಮನ್ನಾ ಭಾಟಿಯಾ ಹತ್ತನೇ ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡಿದ್ದಾರೆ.

ವಿರಾಮ

ಕನ್ನಡನಾಡಿನ ಕಲಾವಿದೆ ಬಿ. ಸರೋಜಾದೇವಿಯವರು (1938-2025) ತಮಿಳು, ತೆಲುಗಿನಲ್ಲೂ ಯಶಸ್ವಿ ನಟಿಯೆನಿಸಿದ್ದರು! ಇದು ನಿಜಕ್ಕೂ ವಿಶೇಷ. ಮಹಾಕವಿ ಕಾಳಿದಾಸ ಚಿತ್ರದ ಮೂಲಕ ಚಲನಚಿತ್ರ ರಂಗವನ್ನು ಪ್ರವೇಶಿಸಿದ ಸರೋಜಾ ದೇವಿ ಅವರಿಗೆ, ತೆಲುಗು, ತಮಿಳು ಚಿತ್ರರಂಗ ನೀಡಿದ ಪ್ರೋತ್ಸಾಹ ಅಪಾರವಾದುದು. **ಸರೋಜಾ ದೇವಿಯವರ ವೃತ್ತಿ ಜೀವನದಲ್ಲಿ ಸದಾಬೆಂಗಾವಲಾಗಿದ್ದವರು ಅವರ ತಾಯಿ ರುದ್ರಮ್ಮ. 'ತೋಳಿಲ್ಲದ ರವಿಕೆ ತೊಡಬಾರದು, ಈಜು ಉಡುಗೆ ಧರಿಸಬಾರದು' ಮೊದಲಾದ ತಾಯಿ ಹಾಕಿದ ಕಟ್ಟಳೆಗಳನ್ನು ಸರೋಜಾ ದೇವಿ ಒಪ್ಪಿಕೊಂಡಿದ್ದರು.** ಅದನ್ನು ಪಾಲಿಸುವುಕ್ಕಾಗಿ, ಕೆಲವು ಉತ್ತಮ ಅವಕಾಶಗಳನ್ನು ಸಹ ಬಿಟ್ಟು ಕೊಟ್ಟಿದ್ದರು. ಕಳೆದ ವಾರ ನಮ್ಮನ್ನಗಲಿಗೆ ಬಿ.ಸರೋಜಾ ದೇವಿಯವರನ್ನು ಹಲವು ಬಾರಿ ಭೇಟಿ ಮಾಡಿ, ಸಂದರ್ಶನವನ್ನೂ ಮಾಡಿದ್ದ ಶ್ರೀಧರ ಮೂರ್ತಿಯವರ ಈ ಬರಹದ ಮೂಲಕ, ಸರೋಜಾದೇವಿಯವರಿಗೆ ವಿಶ್ವವಾಣಿ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತಿದೆ.

ನಮ್ಮ ನಾಡಿನ ಹೆಮ್ಮೆ

ಈ ಅಭಿನಯ ಸರಸ್ವತಿ!

ಅಂಕದ ಪರದೆ ಜಾರಿದ ಮೇಲೆ

ನಾಟಕವಿನ್ನೂ ಉಳಿದಿಹುದೆ?

» ಎನ್.ಎಸ್.ಶ್ರೀಧರ ಮೂರ್ತಿ

ಅದು 1954ನೆಯ ಇಸವಿ. ದಕ್ಷಿಣ ಭಾರತದ ಚಿತ್ರರಂಗದಲ್ಲಿ ಆಗಲೇ ಸೂಪರ್ ಸ್ಟಾರ್ ಎನ್ನಿಸಿಕೊಂಡಿದ್ದ ಹೊನ್ನಪ್ಪ ಭಾಗವತರ್ ಅವರು ಬೆಂಗಳೂರಿಗೆ ಬಂದಾಗ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೋಡುವ ಹವ್ಯಾಸವಿತ್ತು. ಹೀಗೆ ಮೆಯೋಹಾಲ್ ನಲ್ಲಿ ಜಯ ಮಾರುತಿ ಆರ್ಕಾಸ್ಟ್ರಾದಲ್ಲಿ 'ಅನಾರ್ಕಲಿ' ಚಿತ್ರದ ಲತಾ ಮಂಗೇಶ್ಕರ್ ಅವರು ಹಾಡಿದ 'ಏ ಜಿಂದಗೀ ಲ್ಯುಕೆ' ಗೀತೆಯನ್ನು ಹಾಡುತ್ತಿದ್ದ ಒಬ್ಬ ಸುಂದರ ಹುಡುಗಿ ಅವರ ಕಣ್ಣಿಗೆ ಬಿದ್ದಳು. ಇವಳು ಅಭಿನಯದ ಜೊತೆಗೆ ಹಾಡಲೂ ಬಲ್ಲಳು ಎಂದು ನಿರ್ಧರಿಸಿ ಹುಡುಗಿಯ ತಾಯಿಯನ್ನು ಕಂಡು ಮಾತನಾಡಿದರು. ಆದರೆ ಆ ಹುಡುಗಿಗೆ ಸಿನಿಮಾ ಎಂದರೆ ಇಷ್ಟವಿರಲಿಲ್ಲ. ಆದರೆ ತಾಯಿ ಬಹಳವಾಗಿ ಒತ್ತಾಯಿಸಿ 'ಇದೊಂದು ಸಿನಿಮಾ ಮಾತ್ರ' ಎಂದಾಗ ಒಪ್ಪಿಕೊಂಡು ಮದ್ರಾಸಿಗೆ ಮೇಕಪ್ ಟೆಸ್ಟ್‌ಗೆ ತಾಯಿಯ ಜೊತೆಗೆ ಬಂದಳು. ಹೊನ್ನಪ್ಪ ಭಾಗವತರ್ ಅವರ ತಂಡದಲ್ಲಿದ್ದ ಕು.ರ.ಸೀತಾರಾಮ ಶಾಸ್ತ್ರಿಗಳು, ಪರಮೇಶ್, ರಾಮನಾಥ್ ಎಲ್ಲರೂ ಮೇಕಪ್ ಟೆಸ್ಟ್ ನಂತರ 'ಕಣ್ಣಿನಲ್ಲಿ ಒಂದು ಮಚ್ಚೆ ಇದೆ, ಸಣ್ಣ ಅಪರೇಷನ್ ಮಾಡಿ ಅದನ್ನು ತೆಗೆದರೆ ಪಾತ್ರ ಮಾಡಬಹುದು' ಎಂದು ರೇಗಿಸಿದರು. ಚಿಕ್ಕ ಹುಡುಗಿ ಭಯದಿಂದ 'ಈಗಲೇ ಬೆಂಗಳೂರಿಗೆ ಹೋಗೋಣ' ಎಂದು ಅಳಲು ಆರಂಭಿಸಿದಳು. ಆಗ ಹೊನ್ನಪ್ಪ ಭಾಗವರ್ ನಕ್ಕು 'ಇಲ್ಲಮ್ಮ, ಹೆದರಬೇಡ, ಅವರೆಲ್ಲರೂ ತಮಾಷೆ ಮಾಡುತ್ತಿದ್ದಾರೆ, ಕಣ್ಣಿನಲ್ಲಿರುವ ಮಚ್ಚೆ ನಿನ್ನ ಅದೃಷ್ಟದ ಸಂಕೇತ, ನೀನು ಬಹಳ ದೊಡ್ಡ ಕಲಾವಿದೆಯಾಗಿ ಬೆಳೆಯುತ್ತೀಯಾ' ಎಂದು ತುಂಬು ಹೃದಯದಿಂದ ಆಶೀರ್ವಾದ ಮಾಡಿದರು.

ಈ ಬಾಲಕಿಯೇ ಬಿ.ಸರೋಜಾದೇವಿ. ಈ ಘಟನೆಯನ್ನು ನನಗೆ ಅವರು ಹತ್ತಾರು ಸಲ ಹೇಳಿದ್ದಾರೆ. ನನ್ನ 'ಹೊನ್ನಪ್ಪ ಭಾಗವತರ್' ಅವರ ಕುರಿತ 'ಹೊನ್ನ ಪರ್ವತ' ಕೃತಿಗೆ ಬರೆದ ಮುನ್ನಡಿಯಲ್ಲಿಯೂ ನೆನಪು ಮಾಡಿ ಕೊಂಡಿದ್ದಾರೆ. ಹೇಳುವಾಗ ಪ್ರತಿ ಸಲವೂ ಭಾವುಕರಗಿದ್ದಾರೆ. ಹಾಗೆ ನೋಡಿದರೆ ಅದು ಅವರ ಸ್ವಭಾವವೇ ಅಲ್ಲ. ತಮ್ಮದೇ ಆದ ಘನತೆಯನ್ನು ಹೊಂದಿದ್ದ ಸರೋಜ ದೇವಿ ಅದನ್ನು ಕೊನೆಯವರೆಗೂ ಉಳಿಸಿಕೊಂಡು ಬಂದಿದ್ದರು. ಕಣ್ಣಿನ ಕೆಳಗೆ ಹಚ್ಚುವ ಕಪ್ಪಿನಿಂದ ಹಿಡಿದು, ನಡೆಯುವ ಕ್ರಮದವರೆಗೆ ಎಲ್ಲದರಲ್ಲಿಯೂ ಘನತೆಯೇ! ಮಲ್ಲೇಶ್ವರಂನ ರೈಲ್ವೆ ನಿಲ್ದಾಣದ ಬಳಿಯ ಅವರ ಮನೆಯಲ್ಲಿ, ಸದಾಶಿವ ನಗರದ ಅವರ ಕಚೇರಿಯಲ್ಲಿ ಹಲವು ಸಲ ಭೇಟಿ ಮಾಡಿದ, ಅವರ ನೆನಪುಗಳನ್ನು ಆಲಿಸಿದ ಅದೃಷ್ಟ ನನ್ನದು.

'ಮಹಾಕವಿ ಕಾಳಿದಾಸ' ಚಿತ್ರದ ಮೂಲಕ 1955ರಲ್ಲಿ ಬಿ.ಸರೋಜ ದೇವಿ ಚಿತ್ರರಂಗ ಪ್ರವೇಶಿಸಿದ್ದರು. ಅದೇ ವರ್ಷ ಅವರಿಗೆ 'ಶ್ರೀರಾಮ ಪೂಜಾ' ಚಿತ್ರದಲ್ಲಿ ಅಭಿನಯಿಸುವ ಅವಕಾಶ ಸಿಕ್ಕಿತು. ಇದೇ ಮೊದಲು ಬಿಡುಗಡೆಯಾಗಿದ್ದರಿಂದ ಅವರ ಮೊದಲ ಚಿತ್ರ ಎನ್ನಿಸಿಕೊಂಡಿದೆ. ಸರೋಜಾ ದೇವಿಯವರ ವೃತ್ತಿ ಜೀವನದಲ್ಲಿ ಸದಾ ಬೆಂಗಾವಲಾಗಿದ್ದವರು ಅವರ ತಾಯಿ ರುದ್ರಮ್ಮ. 'ತೋಳಿಲ್ಲದ ರವಿಕೆ ತೊಡ ಬಾರದು, ಈಜು ಉಡುಗೆ ಧರಿಸಬಾರದು' ಮೊದಲಾದ ತಾಯಿ ಹಾಕಿದ ಕಟ್ಟಳೆಗಳನ್ನು ಸರೋಜಾ ದೇವಿ ಒಪ್ಪಿಕೊಂಡಿದ್ದರು. ಅದನ್ನು ಪಾಲಿಸುವುಕ್ಕಾಗಿ, ಕೆಲವು ಉತ್ತಮ ಅವಕಾಶಗಳನ್ನು ಸಹ ಬಿಟ್ಟು ಕೊಟ್ಟಿದ್ದರು.

ಜಗತ್ತಿನ ತಾಯಿ

ಸರೋಜಾ ದೇವಿ ಅವರಿಗೆ ಆರಂಭದಲ್ಲೇನೂ ಅವಕಾಶಗಳ ಸುರಿಮಳೆಯಾಗಲಿಲ್ಲ. 'ರತ್ನಗಿರಿ ರಹಸ್ಯ'ದಲ್ಲಿ ಸಿಕ್ಕಿದ್ದು ನೃತ್ಯದಲ್ಲಿ ಬಂದು ಹೋಗುವ ಚಿಕ್ಕ ಪಾತ್ರ. 'ಭೂ ಕೈಲಾಸ'ಚಿತ್ರದಲ್ಲಿ ಮಂಡೋದರಿ ಪಾತ್ರಕ್ಕೆಂದು ಕರೆಸಿದ್ದರೂ ಕೊಟ್ಟಿದ್ದು ಚಿಕ್ಕದಾದ ಪಾರ್ವತಿಯ ಪಾತ್ರ. ಸರೋಜಾ ದೇವಿಯವರ ತಾಯಿಗೇ ಈ ಕಹಿ ಘಟನೆಯಿಂದ ಚಿತ್ರರಂಗ ಸಾಕು ಎನ್ನಿಸಿತ್ತು. ಆದರೆ ಕು.ರ.ಸೀ 'ಪಾರ್ವತಿ ಎಂದರೆ ಜಗತ್ತಿನ ತಾಯಿ, ಈ ಪಾತ್ರ ಮಾಡುವ ಮೂಲಕ ನಿನ್ನ ಬಣ್ಣದ ಬದುಕು ಹೊಸ ಎತ್ತರಕ್ಕೆ ಏರುತ್ತದೆ' ಎಂದಿದ್ದರು. ಈ ಮಾತು ನಿಜವಾಯಿತು ಎಂದು ಸರೋಜಾ ದೇವಿ ಸದಾ ನೆನಪು ಮಾಡಿ ಕೊಳ್ಳುತ್ತಿದ್ದರು. ಕು.ರ.ಸೀ.ಯವರ 'ಅಣ್ಣ-ತಂಗಿ' ಚಿತ್ರದಲ್ಲಿ ಮೈಸೂರು ಭಾಗದ ಗ್ರಾಮ್ಯ ಭಾಷೆಯನ್ನು ಸರೋಜಾ ದೇವಿ ಬಹಳ ಸಹಜವಾಗಿ ಆಡಿ ಹೊಸತನ ತಂದಿದ್ದರು. ಭಾಷೆಯ ಕುರಿತು ನನಗೆ ಅರಿವು ಮೂಡಿಸಿದವರೇ ಕು.ರ.ಸೀ. ಎನ್ನುತ್ತಿದ್ದ ಸರೋಜಾ ದೇವಿ ಇದನ್ನು ತಾವು ಅಭಿನಯಿಸಿದ ಐದೂ ಭಾಷೆಯಲ್ಲಿಯೂ ಉಳಿಸಿಕೊಂಡು ಬಂದರು. ಸ್ಪಷ್ಟ ಉಚ್ಚಾರಣೆಯಿಂದಾಗಿಯೇ ಅವರು ಮನೆ ಮಗಳ ಇಮೇಜ್ ಪಡೆದು ಕೊಂಡರು.

1957ರಲ್ಲಿ ಎನ್. ಟಿ. ರಾಮರಾಯರ ಚಿತ್ರ 'ಪಾಂಡುರಂಗ ಮಹಾತ್ಮೆ'ಯಲ್ಲಿ ನಟಿಸಿದರು. ತಮಿಳು ಚಿತ್ರರಂಗದಲ್ಲಿ ಜೆಮಿನಿ ಗಣೇಶನ್ ಅಭಿನಯದ ಚಿತ್ರವೊಂದಕ್ಕೆ ಆಹ್ವಾನ ಪಡೆದರು.

ಗಾಯಕಿಯೂ ಹೌದು!

ಸರೋಜಾ ದೇವಿ ಒಳ್ಳೆಯ ಗಾಯಕಿ ಯಾಗಿದ್ದರೂ ಅವರಿಗೆ ಹಾಡುವ ಅವಕಾಶ ಸಿಕ್ಕಲಿಲ್ಲ. 'ಹಾಡ ಬೇಕು ಎಂದು ಆಸೆ ಇತ್ತು, ಕಾಲ್ ಶೀಟ್ ಒತ್ತಡ ದಲ್ಲಿ ನಿರ್ಮಾಪಕರು ಈ ಸಾಹಸಕ್ಕೆ ಮುಂದಾಗಲಿಲ್ಲ' ಎಂದು ಅವರು ಹೇಳಿ ದ್ದುಂಟು. ಮನೆಯಲ್ಲಿ ದೇವರ ಪೂಜೆ ಮಾಡುವಾಗ ಅವರೇ ಅಭಿನಯಿಸಿದ 'ಶರಣೆಂಬೆ ನಾ ಶಶಿಭೂಷಣ', 'ಹರಿ ಚಿತ್ತ ನರಚಿತ್ತ' ಮೊದಲಾದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು.

ಅದೇ ವರ್ಷದಲ್ಲಿ ತಮಿಳಿನಲ್ಲಿ ಮೇರು ನಟ ಎಂ. ಜಿ. ರಾಮಚಂದ್ರನ್ ಅವರ ನಾಡೋಡಿ ಮನ್ನನ್, ಶಿವಾಜಿ ಗಣೇಶನ್ ಅವರ ಶಬಾಸ್ ಮೀನ, ಹಿಂದೀ ಚಿತ್ರರಂಗದ ದಿಲೀಪ್ ಕುಮಾರ್ ಅವರೊಂದಿಗೆ ಪೈಗಮ್, ತೆಲುಗಿನ ಮತ್ತೋರ್ವ ಮಹಾನ್ ಕಲಾವಿದ ಅಕ್ಕಿನೇನಿ ನಾಗೇಶ್ವರರಾಯರೊಂದಿಗೆ ಪೆಳ್ಳಿ ಸಂದಡಿ ಚಿತ್ರಗಳಲ್ಲಿ ಅಭಿನಯಿಸಿದರು. ಹಿಂದಿಯಲ್ಲಿ ಅಶೋಕ್ ಕುಮಾರ್, ರಾಜೇಂದ್ರ ಕುಮಾರ್, ಶಮ್ಮಿ ಕಪೂರ್, ಅಜಿತ್, ಭರತ್ ಭೂಷಣ್, ಸುನಿಲ್ ದತ್ ಮುಂತಾದ ಜನಪ್ರಿಯ ನಟರೊಡನೆ ಕೂಡ, ಹಲವಾರು ಚಿತ್ರಗಳಲ್ಲಿ ನಟಿಸಿದರು.

ಈ ದಿನಗಳಲ್ಲಿ ನಾಲ್ಕು ಶಿಫ್ಟ್‌ಗಳಲ್ಲಿ ಸರೋಜಾ ದೇವಿ ಅಭಿನಯಿಸುತ್ತಿದ್ದರು. ಅದರಲ್ಲಿಯೂ ಬೇರೆಬೇರೆ ಭಾಷೆಯ ಚಿತ್ರಗಳಲ್ಲಿ, ವ್ಯತ್ಯಾಸಕ್ಕಾಗಿ ಸರೋಜಾದೇವಿ ಸೀರೆ ಉಡುವ ಕ್ರಮ ಮತ್ತು ಹಣೆಯ ಕುಂಕಮದಲ್ಲಿ ಬದಲಾವಣೆ ಮಾಡಿ ಕೊಳ್ಳುತ್ತಿದ್ದರಂತೆ. 'ಬೇರೆಯವರಿಗಿರಲಿ, ನನಗೇ ವ್ಯತ್ಯಾಸ ಗೊತ್ತಾಗ ಬೇಕಿತ್ತಲ್ಲಪ್ಪ' ಎಂದು ನಗುತ್ತಿದ್ದರು.

ಆರ್. ನಾಗೇಂದ್ರ ರಾಯರ ಮೇಲಿನ ಗೌರವದಿಂದ 'ವಿಜಯನಗರದ ವೀರಪುತ್ರ' ಚಿತ್ರವನ್ನು ಒಪ್ಪಿ ಕೊಂಡ ಸರೋಜಾ ದೇವಿ ಕೊಂಚವೂ ಚಿತ್ರೀಕರಣಕ್ಕೆ ತೊಂದರೆಯಾಗದಂತೆ ಸಹಕರಿಸಿದರು. ಪಂತಲು 'ಕಿತ್ತೂರು ಚೆನ್ನಮ್ಮ'ದ ಚಾರಿತ್ರಿಕ ಪಾತ್ರಕ್ಕೆ ಆಯ್ಕೆ ಮಾಡಿದಾಗ ಮೂರು ಪ್ರಮುಖ ತಮಿಳು ಚಿತ್ರಗಳನ್ನು ಕೈ ಬಿಟ್ಟಿದ್ದರು. ಆ ಚಿತ್ರದಲ್ಲಿ ಅವರು 'ನಿಮಗೇಕೆ ಕೊಡ ಬೇಕು ಕಪ್ಪಾ.. ನೀವೇನು ನಮ್ಮ ಅಣ್ಣ-ತಮ್ಮಂದಿರೇ, ಬಂಧುಗಳೇ' ಎಂದು ಅಬ್ಬರಿಸುವ ಸಂಭಾಷಣೆ ಹಲವು ದಶಕಗಳ ಕಾಲ ಶಾಲೆಗಳಲ್ಲಿ ಏಕ ಪಾತ್ರ ಅಭಿನಯದಲ್ಲಿ ಮೂಡಿ ಬಂದು ಕನ್ನಡಿಗರ ಸ್ವಾಭಿಮಾನದ ಸಂಕೇತವಾಗಿ ಬಿಟ್ಟಿತು.

ಕನ್ನಡ ಮತ್ತು ತೆಲುಗು ಎರಡು ಭಾಷೆಯಲ್ಲಿ ನಿರ್ಮಾಣವಾದ 'ಅಮರ ಶಿಲ್ಪಿ ಜಕಣಾಚಾರಿ' ಚಿತ್ರದಲ್ಲಿ ಕಲ್ಯಾಣ್ ಕುಮಾರ್ ಅವರಿಗೆ ಕನ್ನಡದಲ್ಲಿ ಮತ್ತು ಅಕ್ಕಿನೇನಿ ನಾಗೇಶ್ವರ ರಾವ್ ಅವರಿಗೆ ತೆಲುಗಿನಲ್ಲಿ ನಾಯಕಿಯಾಗಿ ಅಭಿನಯಿಸಿದರು. ಆದರೆ ಆ ಚಿತ್ರದ ಕನ್ನಡ ಅವತರಣಿಕೆಯನ್ನು ರಾಷ್ಟ್ರಪ್ರಶಸ್ತಿ ಸ್ಪರ್ಧೆಗೆ ಕಳುಹಿಸ ಬಾರದು ಎಂದು ನಾಗೇಶ್ವರ ರಾವ್ ಹಾಕಿದ್ದ ಷರತ್ತಿನ ಬಗ್ಗೆ ಸರೋಜಾ ದೇವಿಯವರಿಗೆ ಸಾಕಷ್ಟು ಕೋಪವಿತ್ತು. ಹಲವು ಕನ್ನಡ ಚಿತ್ರಗಳು ರಾಷ್ಟ್ರಪ್ರಶಸ್ತಿಗಳನ್ನು ಕಳೆದುಕೊಂಡ ರಾಜಕೀಯವನ್ನು ಎಳೆ ಎಳೆಯಾಗಿ ಬಿಡಿಸಿಡುವುದು ಅವರಿಗೆ ಮಾತ್ರ ಸಾಧ್ಯವಿತ್ತು. ಮುಂದೆ ಅವರೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳ ಆಯ್ಕೆ ಸಮಿತಿ ಅಧ್ಯಕ್ಷರಾದಾಗ ಕನ್ನಡದ 'ತಾಯಿ ಸಾಹೇಬ' ಚಿತ್ರಕ್ಕೆ ಸ್ವರ್ಣ ಕಮಲ ಬರುವಂತೆ ನೋಡಿಕೊಂಡರು.

ಮದುವೆಯ ನಂತರ..

ವಿವಾಹವಾದರೆ ಚಿತ್ರರಂಗದಲ್ಲಿ ಬೇಡಿಕೆ ಕಡಿಮೆಯಾಗುತ್ತದೆ ಎನ್ನುವುದನ್ನು ಸುಳ್ಳು ಮಾಡಿದ ಕಲಾವಿದೆ ಸರೋಜಾ ದೇವಿ. ಚಿತ್ರರಂಗದ ಉತ್ತುಂಗದಲ್ಲಿದ್ದಾಗಲೇ 1967ರಲ್ಲಿ ಶ್ರೀಹರ್ಷ ಅವರನ್ನು ವಿವಾಹವಾದರು. ಮದುವೆಯ ನಂತರವೇ ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ನಾಯಕಿಯಾಗಿ ಅಭಿನಯಿಸಿದರು. ಅವರಿಗೆ ಪದ್ಮಶ್ರೀ, ಪದ್ಮಭೂಷಣ ಮೊದಲಾದ ಗೌರವಗಳು ಬಂದವು. ಅವಕಾಶವಿದ್ದಾಗಲೂ ಅವರು ಗ್ಲಾಮರ್ ಕಡೆ ವಾಲಲಿಲ್ಲ. ಘನತೆಯನ್ನು ಬಿಟ್ಟು ಕೊಡಲಿಲ್ಲ. 'ಶ್ರೀಕೃಷ್ಣ ರುಕ್ಮಿಣಿ ಸತ್ಯಭಾಮ'ದಲ್ಲಿ ಅವರದು ರುಕ್ಮಿಣಿಯ ಘನತೆಯ ಪಾತ್ರ, ಈ ಪಾತ್ರ ಸರೋಜಾ ದೇವಿಯವರ ವ್ಯಕ್ತಿತ್ವಕ್ಕೆ ರೂಪಕದಂತಿದೆ ಎಂದು ಹಿಂದೊಮ್ಮೆ ಬರೆದಿದ್ದೆ. ಅದು ಅವರಿಗೆ ಬಹಳ ಇಷ್ಟವಾಗಿ, ಅದನ್ನು ಹತ್ತಾರು ಕಡೆ ಹೇಳಿಕೊಂಡು ಬಂದಿದ್ದರು.

ಚಿನ್ನದ ತಟ್ಟೆಯಲ್ಲಿ ಭೋಜನ!

ಕಲಾವಿದೆ ಜಯಂತಿಯವರೊಮ್ಮೆ ಏನೋ ಮಾತಿಗೆ 'ಸರೋಜಾ ದೇವಿ ಚಿನ್ನದ ತಟ್ಟೆಯಲ್ಲಿ ಊಟ ಮಾಡುತ್ತಾರೆ' ಎಂದಿದ್ದರು. ಮಧ್ಯಮ ವರ್ಗದಿಂದ ಬಂದ ನನ್ನಂತವರಿಗೆ ಅದು ಬೆರಗಿನ ಸಂಗತಿ. ಮುಂದೊಂದು ದಿನ ತುಸು ಅಳುಕುತ್ತಲೇ, ಈ ವಿಷಯವನ್ನು ಅವರ ಬಳಿ ಪ್ರಸ್ತಾಪ ಮಾಡಿದಾಗ ಅದು ದೊಡ್ಡ ವಿಷಯವೇ ಅಲ್ಲ ಎನ್ನುವಂತೆ ನಕ್ಕು, ಅವರು ಊಟ ಮಾಡುತ್ತಿದ್ದ ಚಿನ್ನದ ತಟ್ಟೆ ತೋರಿಸಿದ್ದರು. ಅವರ ಆಸ್ತಿಯ ಬಗ್ಗೆ ಹಲವು ಕಥೆಗಳಿವೆ. ಆದರೆ ಅದನ್ನು ಅವರು ಹೇಗೆ ಸದುಪಯೋಗ ಪಡಿಸಿಕೊಂಡರು ಎನ್ನುವುದು ಹೆಚ್ಚು ಪ್ರಚಾರ ಪಡೆಯಲಿಲ್ಲ. ತಮ್ಮ ಹೆಸರಿನಲ್ಲಿಯೇ ಸಹ ಕಲಾವಿದರಿಗೆ ನೀಡಲು ಒಂದು ಲಕ್ಷ ರೂಪಾಯಿಯ ದೊಡ್ಡ ಮೊತ್ತದ ಪ್ರಶಸ್ತಿ ಸ್ಥಾಪಿಸಿದ್ದರು. ಅಕಾಲಿಕವಾಗಿ ಅಗಲಿದ ತಮ್ಮ ಮಗಳು ಭುವನೇಶ್ವರಿಯ ಹೆಸರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಲೇಖಕಿಯರಿಗೆ ದತ್ತಿ ಪುರಸ್ಕಾರ ಸ್ಥಾಪಿಸಿದರು. ಕಲಾವಿದರು ತೊಂದರೆಯಲ್ಲಿದ್ದರೆ ಕೂಡಲೇ ನೆರವಾಗುತ್ತಿದ್ದರು, ತಮ್ಮ ಹುಟ್ಟೂರು ದಶಾವರದಲ್ಲಿ ಶಾಲೆಯನ್ನು ಆರಂಭಿಸಿದರು. ಪ್ರಚಾರಕ್ಕೆ ಹೋಗದೆ ಅವರು ಮಾಡಿದ ಸಮಾಜ ಸೇವೆಯ ದೊಡ್ಡ ಪಟ್ಟಿಯೇ ಇದೆ.

ಈಡೇರದ ಪುಸ್ತಕ ಕನಸು

ಆದಿಚುಂಚನಗಿರಿ ಮಠದ ಯೋಜನೆಯೊಂದಕ್ಕೆ ಬಿ.ಸರೋಜಾದೇವಿಯವರ ಬಗ್ಗೆ ಪುಸ್ತಕ ಬರೆಯುತ್ತೇನೆ ಎಂದು ಎರಡು ವರ್ಷಗಳ ಹಿಂದೆಯೇ ಒಪ್ಪಿಕೊಂಡಿದ್ದೆ. ಒಂದಲ್ಲ ಒಂದು ಕೆಲಸದಲ್ಲಿ ತೊಡಗಿಸಿಕೊಂಡು, ಆ ಪುಸ್ತಕ ಬರವಣಿಗೆಯ ಕೆಲಸವನ್ನು ಮುಂದಕ್ಕೆ ಹಾಕುತ್ತಲೇ ಬಂದೆ. ನಾನು ನೋಡುತ್ತಾ ಬಂದಾಗಿಂದಲೂ ಸರೋಜಾ ದೇವಿ ಅನಾರೋಗ್ಯದಿಂದ ನರಳಿದ ಒಂದು ಘಟನೆಯೂ ನೆನಪಿಲ್ಲ. ಅವರೊಂದು ರೀತಿ ಭೂಮಿಗೆ ಬಂದ ಗಂಧರ್ವರ ರೀತಿಯೇ ಭಾಸವಾಗುತ್ತಿದ್ದರು. 'ಹೀಗೆ ಪುಸ್ತಕ ಬರೆಯ ಬೇಕು. ಒಂದು ದಿನ ಭೇಟಿಗೆ ಅವಕಾಶ' ಎಂದು ಕೇಳಿದಾಗ 'ನಿನಗೆ ಗೊತ್ತಿಲ್ಲದ್ದು ಏನಿದೆ! ಆಗಲಿ ಅದಕ್ಕೇನಂತೆ, ವರಮಹಾಲಕ್ಷ್ಮಿ ಹಬ್ಬ ಕಳೆದು ಕೊಂಡು ಬಾ' ಎಂದಿದ್ದರು. ಅದೇ ಅವರ ಜೊತೆಗಿನ ಕೊನೆಯ ಸಂಭಾಷಣೆಯಾಯಿತು. ಅವರಿದ್ದಾಗಲೇ ಪುಸ್ತಕ ಬರೆಯಲಿಲ್ಲ ಎನ್ನುವ ನೋವು ನನ್ನನ್ನು ಜೀವನವೆಲ್ಲಾ ಕಾಡುತ್ತದೆ.

ಯಾರದೇ ಜನ್ಮಶತಮಾನೋತ್ಸವ ಬಂದರೂ ಸರೋಜಾ ದೇವಿಯವರ ಬಳಿ ಮಾಹಿತಿಗೆ ಓಡುತ್ತಿದ್ದೆ. 'ಅಮ್ಮ, ನಿಮ್ಮ ಜನ್ಮ ಶತಮಾನೋತ್ಸವ ಕೂಡ ಹೀಗೆ ಮಾಡ್ತೀವಿ. ನೀವೂ ನಮ್ಮ ಜೊತೆ ಇರ್ತೀರಿ' ಎಂದಾಗ 'ನೂರು ವರ್ಷ ಇರ ಬೇಕು ಅಂತೇನು ಆಸೆ ನನಗಿಲ್ಲ. ಯಾರಿಗೂ ತೊಂದರೆ ಕೊಡದೆ ಹೋಗಬೇಕು' ಎಂದಿದ್ದರು. ದೇವರು ಅವರ ಕೋರಿಕೆಯನ್ನು ಈಡೇರಿಸಿದ್ದಾನೆ.

ಅಂಕದ ಪರದೆ ಜಾರಿದೆ.. ವಹಿಸಿದ ಪಾತ್ರವ ಯಶಸ್ವಿಯಾಗಿ ಅಭಿನಯಿಸಿ ಸರೋಜಾ ದೇವಿ ತೆರಳಿದ್ದಾರೆ. ಅವರ ಪಾತ್ರಗಳ ಮೂಲಕ, ಅಭಿನಯದ ಮೂಲಕ ನಮ್ಮ ಹೃದಯಗಳಲ್ಲಿ ಚಿರಂತನವಾಗಿ ಉಳಿದುಕೊಳ್ಳುತ್ತಾರೆ.

"'ಭೂ ಕೈಲಾಸ'ಚಿತ್ರದಲ್ಲಿ ಮಂಡೋದರಿ ಪಾತ್ರಕ್ಕೆಂದು ಕರೆಸಿದ್ದರೂ ಕೊಟ್ಟಿದ್ದು ಚಿಕ್ಕದಾದ ಪಾರ್ವತಿಯ ಪಾತ್ರ. ಸರೋಜಾ ದೇವಿಯವರ ತಾಯಿಗೇ ಈ ಕಹಿ ಘಟನೆಯಿಂದ ಚಿತ್ರರಂಗ ಸಾಕು ಎನ್ನಿಸಿತ್ತು. ಆದರೆ ಕು.ರ.ಸೀ 'ಪಾರ್ವತಿ ಎಂದರೆ ಜಗತ್ತಿನ ತಾಯಿ, ಈ ಪಾತ್ರ ಮಾಡುವ ಮೂಲಕ ನಿನ್ನ ಬಣ್ಣದ ಬದುಕು ಹೊಸ ಎತ್ತರಕ್ಕೆ ಏರುತ್ತದೆ' ಎಂದಿದ್ದರು. ಈ ಮಾತು ನಿಜವಾಯಿತು ಎಂದು ಸರೋಜಾ ದೇವಿ ಸದಾ ನೆನಪು ಮಾಡಿಕೊಳ್ಳುತ್ತಿದ್ದರು.

ಡಾ.ರಾಜ್ ಮೆಚ್ಚುಗೆ

'ಮಲ್ಲಮ್ಮನ ಪವಾಡ' 'ಅಣ್ಣ ತಂಗಿ' ಚಿತ್ರಗಳಲ್ಲಿ ಡಾ.ರಾಜ್ ಕುಮಾರ್ ಅವರ ಜೊತೆ ಅಭಿನಯಿಸಿದ್ದ ಸರೋಜಾ ದೇವಿ 'ಭಾಗ್ಯವಂತರು' ಚಿತ್ರದಲ್ಲಿ ಪೈಪೋಟಿಯ ಅಭಿನಯ ನೀಡಿದರು. 'ಬಭ್ರುವಾಹನ' ಅವರ ಜೋಡಿಯ ಇನ್ನೊಂದು ಮಹತ್ವದ ಚಿತ್ರ. 'ಅವರ ಡೆಡಿಕೇಷನ್, ನನಗೆ ಬಹಳ ಮೆಚ್ಚುಗೆ, ಪಾತ್ರ ನೈಜವಾಗಿ ಬರಲು ಶೇಕಡ ನೂರರಷ್ಟು ಸಮರ್ಪಿಸಿಕೊಳ್ಳುತ್ತಿದ್ದರು' ಎಂದು ರಾಜ್ ಕುಮಾರ್ ಮೆಚ್ಚುಗೆ ಮಾತನಾಡಿದ್ದರು. 'ಭಾಗ್ಯವಂತರು' ಚಿತ್ರದ ಲೆಕ್ಕದ ಪುಸ್ತಕದ ಪ್ರಸಂಗ ಅಣ್ಣಾವ್ರಿಗೆ ಬಹಳ ಇಷ್ಟ. 'ನೋಡು ಇದು ನಿಜವಾದ ಕಲಾವಿದರು ಕೊಡುವ ಅಭಿನಯ' ಎಂದು ಅವರು ನನ್ನ ಬಳಿ ಮೆಚ್ಚುಗೆ ಮಾತನ್ನಾಡಿದ್ದರು.

101 ಪ್ರಕೃತಿ ಚಿತ್ರಗಳು

ಪ್ರಕೃತಿಯ ದೃಶ್ಯ ವೈಭವ ಮತ್ತು ಅಂತರಂಗವನ್ನು ಹಿಡಿದಿಡುವ 101 ಚಿತ್ರಗಳ ಪ್ರದರ್ಶನವು ಇದೇ 20ರಂದು ಹುಬ್ಬಳ್ಳಿಯಲ್ಲಿ ನಡೆಯುತ್ತಿದೆ.

» ಚಂದ್ರಶೇಖರ ಬೆಳವಾಡಿ

ಪ್ರಕೃತಿಯು ತನ್ನ ಎಲ್ಲಾ ವೈಭವದಲ್ಲಿ ಮಾನವ ಆತ್ಮವನ್ನು ಆಕರ್ಷಿಸುವ ಒಂದು ಮಾರ್ಗವನ್ನು ಹೊಂದಿದೆ. ಇದು ಪ್ರಕೃತಿಯ ರೂಪದಲ್ಲಿ ಮೋಡಿಮಾಡುವ ಅದ್ಭುತಗಳನ್ನು ಅನಾವರಣಗೊಳಿಸುತ್ತದೆ, ಅಲ್ಲಿನ ಹಸಿರಿನ ರೋಮಾಂಚಕ ವರ್ಣಗಳು ಜೀವನದ ಅಸಂಖ್ಯಾತ ಛಾಯೆಗಳೊಂದಿಗೆ ಹೆಣೆದುಕೊಂಡಿವೆ. ಈ ಅಭಯಾರಣ್ಯಗಳು ಕೇವಲ ಸ್ಪರ್ಶಿಸದ ಅರಣ್ಯದ ತೇಪೆಗಳಲ್ಲ; ಅವು ನಮ್ಮ ಅಸ್ತಿತ್ವ, ಸಸ್ಯ ಮತ್ತು ಪ್ರಾಣಿಗಳ ಸಾಮರಸ್ಯದ ನೃತ್ಯದ ಒಂದು ನೋಟವನ್ನು ನೀಡುತ್ತವೆ.

ಈ ವಿಷಯವನ್ನೊಳಗೊಂಡ ಒಂದು ಕಲಾ ಪ್ರಪಂಚವನ್ನು ಕಲಾವಿದ ಪ್ರಶಾಂತ್ ಅಡೂರ್ ಅವರು ಇದೇ 20 ರಂದು ಪ್ರದರ್ಶಿಸಲಿದ್ದಾರೆ. ಗೋಕುಲ್ ರಸ್ತೆ, ಹುಬ್ಬಳ್ಳಿಯಲ್ಲಿ ತಮ್ಮದೇ ಆದ 'ಪ್ರಕೃತಿ ಸಭಾಂಗಣದಲ್ಲಿ' ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನದಲ್ಲಿ ಅನಾವರಣಗೊಳಿಸಲಿದ್ದಾರೆ. ಒಟ್ಟು 101 ಕಲಾಕೃತಿಗಳನ್ನು ಇಲ್ಲಿ ಪ್ರದರ್ಶಿಸಲಾಗುತ್ತಿದ್ದು, ಜುಲೈ. 20 ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಸಾರ್ವಜನಿಕರ ವೀಕ್ಷಣೆಗೆ ಲಭ್ಯ ಇದೆ. ಸೂರ್ಯನು ದಿಗಂತದ ಮೇಲೆ ಉದಯಿಸಿ, ತನ್ನ ಚಿನ್ನದ ಕಿರಣಗಳನ್ನು ಭೂಮಿಯ ಮೇಲೆ ಬೀಳಿಸುತ್ತಿದ್ದಂತೆ, ವನ್ಯಜೀವಿ ಅಭಯಾರಣ್ಯದ ಕ್ಯಾನ್ವಾಸ್ ಜಾಗೃತಗೊಳ್ಳುತ್ತದೆ. ಪಚ್ಚೆ ಮತ್ತು ಹಚ್ಚ ಹಸಿರಿನ ಬಣ್ಣವು ಕಣ್ಣಿಗೆ ಕಾಣುವಷ್ಟು ದೂರ ವ್ಯಾಪಿಸಿದೆ. ಎತ್ತರವಾಗಿ ಮತ್ತು ಹೆಮ್ಮೆಯಿಂದ ನಿಂತಿರುವ ಮರಗಳು ನಾಗರಿಕತೆಯ ಅವ್ಯವಸ್ಥೆಯಿಂದ ಮರೆ ಮಾಡಲ್ಪಟ್ಟ ಪ್ರಪಂಚದ ರಕ್ಷಕರು. ಅವು ಶತಮಾನಗಳ ಹಿಂದಿನ ಕಥೆಗಳನ್ನು ಪಿಸುಗುಟ್ಟುತ್ತವೆ, ಅವುಗಳ ಎಲೆಗಳು ಪ್ರಕೃತಿಯ ಪುಸ್ತಕದಲ್ಲಿ ಪುಟಗಳನ್ನು ತಿರುಗಿಸುವಂತೆ ಸದ್ದು ಮಾಡುತ್ತವೆ.

ಹಸಿರಿನ ಅಸಂಖ್ಯಾತ ಛಾಯೆಗಳ ನಡುವೆ, ಗುಪ್ತ ನಿಧಿಗಳ ಮಿನುಗುಗಳು ಕಾಣುತ್ತವೆ. ಏಕಾಂತ ಮೂಲೆಗಳಲ್ಲಿ ಅರಳುವ ರೋಮಾಂಚಕ ಹೂವುಗಳು, ಅಮೂಲ್ಯ ರತ್ನಗಳಂತೆ ಇಬ್ಬನಿ ಹನಿಗಳಿಂದ ಅಲಂಕರಿಸಲ್ಪಟ್ಟ ದಳಗಳು. ಬೇಸಿಗೆಯ ಸೂರ್ಯೋದಯದ ವರ್ಣಗಳಲ್ಲಿ ಚಿತ್ರಿಸಿದ ರೆಕ್ಕೆಗಳನ್ನು ಹೊಂದಿರುವ ಚಿಟ್ಟೆಗಳು, ಒಂದು ಹೂವಿನಿಂದ ಇನ್ನೊಂದಕ್ಕೆ ಹಾರುತ್ತವೆ, ಹಸಿರು ವಸ್ತ್ರಕ್ಕೆ ಬಣ್ಣದ ಸ್ಪರ್ಶವನ್ನು ಸೇರಿಸುತ್ತವೆ. ಪ್ರತಿಯೊಂದು ಹೂವು, ಪ್ರತಿಯೊಂದು ಚಿಟ್ಟೆ, ಜೀವವೈವಿಧ್ಯದ ಮೇರುಕೃತಿಯಲ್ಲಿ ಒಂದು ಹೊಡೆತವಾಗಿದೆ.

ಪ್ರಶಾಂತ ಅವರ, ಪ್ರಶಾಂತತೆಯಲ್ಲಿ ಮಾನವ ಚೈತನ್ಯವು ಸಾಂತ್ವನವನ್ನು ಕಂಡುಕೊಳ್ಳುತ್ತದೆ. ಕಾಂಕ್ರೀಟ್ ಕಾಡುಗಳು ಮತ್ತು ಗದ್ದಲದ ನಗರಗಳ ನಡುವೆ, ಹಸಿರು ಸರ್ವೋಚ್ಚವಾಗಿ ಆಳುವ ಮತ್ತು ಜೀವನವು ಅದರ ಶುದ್ಧ ರೂಪದಲ್ಲಿ ತೆರೆದುಕೊಳ್ಳುವ ಒಂದು ಕ್ಷೇತ್ರವಿದೆ ಎಂಬುದನ್ನು ಇದು ನೆನಪಿಸುತ್ತದೆ.

▸▸ ಮೂರನೇ ಪುಟಕ್ಕೆ

ಪುಸ್ತಕ ವಿಮಾನ

ಸುಧಾ ಮೂರ್ತಿ ಸಮಗ್ರ ಸಾಹಿತ್ಯ ಸಮೀಕ್ಷೆ

» ಪ್ರೊ.ಜಿ. ಎನ್. ಉಪಾಧ್ಯ, ಮುಂಬೈ

ಸಾಂಪ್ರತ ಕನ್ನಡ ಸಾಹಿತ್ಯವನ್ನು ಅನ್ಯಾನ್ಯ ನೆಲೆಗಳಲ್ಲಿ ಸಮೃದ್ಧಗೊಳಿಸಿದ ಜನಪ್ರಿಯ ಲೇಖಕರಲ್ಲಿ ಸುಧಾಮೂರ್ತಿ ಅವರದು ಎದ್ದು ಕಾಣುವ ಹೆಸರು. ಅವರದು ಬಹುಮುಖ ಪ್ರತಿಭೆ ಹಾಗೂ ನಾನಾ ಮುಖಗಳ ವ್ಯಕ್ತಿತ್ವ. ಸೃಜನಶೀಲ, ಚಿಂತನಶೀಲ, ಸಾಹಸಶೀಲ, ಉದ್ಯಮಶೀಲ, ವಿನಯಶೀಲ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡ ಅವರು ದೇಶ ವಿದೇಶಗಳಲ್ಲಿ ಸೈ ಎನಿಸಿಕೊಂಡ ಅಪರೂಪದ ಸಾಧಕರು. ಸುಧಾಮೂರ್ತಿ ಅವರು ನಮ್ಮ ನಾಡಿನ ಅಭಿಮಾನದ ಮೂರ್ತಿ. ದೇಶಕ್ಕೆ, ಜಗತ್ತಿಗೆ ಅವರು ಅಲಂಕಾರಪ್ರಾಯರು ಎಂದರೆ ಅತ್ಯುಕ್ತಿಯಾಗದು. ಅವರ ಬದುಕು, ಸಾಹಸ ಸಾಧನೆ, ಯಶೋಗಾಥೆ ಅವರ ಕೃತಿಗಳಂತೆ ರೋಮಾಂಚನಕಾರಿಯಾಗಿವೆ. ಅವರು ವೈವಿಧ್ಯಮಯವಾದ, ಅಪಾರವಾದ ಅನುಭವಗಳ ಗಣಿಯೇ ಆಗಿದ್ದಾರೆ. ಅವರದು ಬಂಡಾಯ ಪ್ರವೃತ್ತಿ; ಪ್ರಗತಿಶೀಲ ನಿಲುವು. ಅವರು ದಿಟ್ಟತನದಿಂದ, ಎದೆಗಾರಿಕೆಯಿಂದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಳಸಿಕೊಂಡು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸಮದಂಡಿಯಾಗಿ ಸಾಹಿತ್ಯ ಕೃಷಿಯನ್ನು ಮಾಡುತ್ತಾ ಬಂದಿದ್ದಾರೆ.

ಟಾಟಾ (ಟೆಲ್ಕೊ) ಕಂಪೆನಿಯಲ್ಲಿ ಲಿಂಗ ತಾರತಮ್ಯದ ನಿಲುವನ್ನು ಪ್ರಶ್ನಿಸಿ ಪತ್ರ ಬರೆದು ವಿಶೇಷ ಸಂದರ್ಶನದ ಮೂಲಕ ಅಲ್ಲಿ ನೇಮಕಗೊಂಡ ಮೊದಲ ಮಹಿಳಾ ಇಂಜಿನಿಯರ್ ಎಂಬ ಖ್ಯಾತಿಗೂ ಅವರು ಪಾತ್ರರಾಗಿದ್ದಾರೆ. ಇದು 'ಪುರುಷರಿಗೆ ಮಾತ್ರ' ಸಾಧ್ಯವಾಗುವ ಕೆಲಸ ಎಂಬ ಮನೋಭಾವನೆಯನ್ನು, ಅಪಪ್ರಥೆಗಳನ್ನು ಬದಲಾಯಿಸಿ ಮಹಿಳೆ ಎಲ್ಲ ರಂಗಗಳಲ್ಲೂ ಕೆಲಸ ಮಾಡಬಲ್ಲಳು, ಅವಳಲ್ಲಿ ಅಗಾಧವಾದ ಶಕ್ತಿ ಸಾಮರ್ಥ್ಯಗಳಿವೆ ಎಂಬುದನ್ನು ಅವರು ತಮ್ಮ ಬದುಕಿನಲ್ಲಿ, ಬರವಣಿಗೆಯಲ್ಲಿ ತೋರಿಸಿಕೊಡುತ್ತಾ ಬಂದಿದ್ದಾರೆ. ಸುಧಾ ಮೂರ್ತಿಯವರ ಹಾಗೆ ವಿವಿಧ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಅನುಭವ ಗಳಿಸಿ ಬರವಣಿಗೆ ಮಾಡಿದ ಮಹಿಳೆಯರು ನಮ್ಮಲ್ಲಿ ಬಹಳ ವಿರಳ ಎಂದರೂ ತಪ್ಪಿಲ್ಲ.

ಸ್ತ್ರೀ ಒಂದು ಮಹಾನ್ ಚೈತನ್ಯವಾಗಿ ಅವರ ಎಲ್ಲ ಬರವಣಿಗೆಯಲ್ಲಿ ಕಾಣಿಸಿಕೊಂಡಿರುವುದು ವಿಶೇಷ. ಮಹಿಳೆಯರು ದೇಶದ ಮುಖ್ಯವಾಹಿನಿಯಲ್ಲಿ ರಚನಾತ್ಮಕವಾಗಿ, ಕ್ರಿಯಾಶೀಲವಾಗಿ ಹೇಗೆಲ್ಲ ಪಾಲ್ಗೊಳ್ಳಬಹುದು ಎಂಬುದಕ್ಕೆ ಅವರು ಮಾದರಿಯಾಗಿದ್ದಾರೆ. ಅವರದು ಮಾತು ಕೃತಿಗಳ ನಡುವೆ ಎರಡಿಲ್ಲದ ಬಾಳ್ವೆ. ಎಲ್ಲ ಬಗೆಯ ಸಂಕೋಲೆ, ಅಡೆತಡೆಗಳನ್ನು ಮೀರಿ ಮಹಿಳೆ ಕಾಲದ ಜೊತೆ ಹೊಸ ಹೆಜ್ಜೆ ಹಾಕಬೇಕಾದ ಅಗತ್ಯವನ್ನು ಅವರು ಬಲವಾಗಿ ಪ್ರತಿಪಾದಿಸುತ್ತಾ ಬಂದಿರುವುದು ಗಮನೀಯ ಅಂಶ. 'ಜ್ಞಾನಂ ವಿಜ್ಞಾನ ಸಹಿತಂ' ಎಂಬ ಮಾತಿನಲ್ಲಿ ಅವರಿಗೆ ವಿಶೇಷವಾದ ನಂಬಿಕೆ. ವಿಜ್ಞಾನ ತಂತ್ರಜ್ಞಾನದ ಹಿನ್ನೆಲೆಯಿಂದ ಬಂದ ಸುಧಾಮೂರ್ತಿ ಅವರು ಸಾಹಿತಿಯಾಗಿ, ಸಮಾಜಸೇವಕರಾಗಿ ಮಿಂಚಿದ ಭಿನ್ನ ಪರಿಯನ್ನು ಈ ಕೃತಿಯಲ್ಲಿ ಸರಳವಾಗಿ ನೇರವಾಗಿ ವಿವರಿಸಿರುವುದು ಅವಲೋಕನೀಯವಾಗಿದೆ.



ಜೀವನ್ಮುಖಿ
ಲೇ: ಪ್ರತಿಭಾ ರಾವ್
ಪ್ರ: ಕನ್ನಡ ವಿಭಾಗ, ಮುಂಬೈ ವಿಶ್ವವಿದ್ಯಾಲಯ. ಮುಂಬೈ
ಬೆಲೆ ರು.200/-

ಪ್ರತಿಭಾ ರಾವ್ ವಿರಚಿತ ಜೀವನ್ಮುಖಿ ಕೃತಿಯು ಡಾ.ಸುಧಾ ಮೂರ್ತಿ ಅವರ ಸಮಗ್ರ ಸಾಧನೆಯ ಅವಲೋಕನ, ವಿಶ್ಲೇಷಣೆಯನ್ನು ಒಳಗೊಂಡಿದೆ.

ಸುಧಾಮೂರ್ತಿ ಅವರು ಒಳ್ಳೆಯ ಕಾದಂಬರಿಕಾರರು, ಉತ್ತಮ ಗದ್ಯ ಲೇಖಕರು, ಪ್ರವಾಸ ಸಾಹಿತಿ ಹಾಗೂ ಸಂಸ್ಕೃತಿ ಚಿಂತಕರು. ಬಾಲಸಾಹಿತ್ಯ ನಿರ್ಮಾಪಕರಾಗಿಯೂ ಅವರು ಸೈ ಎನಿಸಿಕೊಂಡಿದ್ದಾರೆ. ಅನುಭವ ಕಥನಗಳನ್ನು ಬರೆಯುವುದರಲ್ಲಿ ಅವರದು ಎತ್ತಿದ ಕೈ. ಸಮಾಜ ಸೇವೆಯೊಂದಿಗೆ ಸಾಹಿತ್ಯ ಪರಿಚಾರಿಕೆಯ ಜತೆಗೆ ಆನಂದವನ್ನು ಪಸರಿಸುವ ದೇದೀಪ್ಯಮಾನವಾದ ವ್ಯಕ್ತಿತ್ವ ಸುಧಾಮೂರ್ತಿ ಅವರದು.

ಮಹಿಳೆಯ ಸಂಘರ್ಷ

ತನ್ನ ಅಸ್ಮಿತೆಗಾಗಿ ಮಹಿಳೆ ನಡೆಸಿರುವ ಅನವರತ ಸಂಘರ್ಷ ಸುಧಾಮೂರ್ತಿ ಅವರ ಬರವಣಿಗೆಯಲ್ಲಿ ಒಡೆದು ಕಾಣುತ್ತದೆ. ಅವರ ಮುಖ್ಯ ಅಭಿವ್ಯಕ್ತಿ ಮಾಧ್ಯಮ ಕಾದಂಬರಿ. ಅವರು ರಚಿಸಿರುವ ಅತಿರಿಕ್ತೆ , ಅವ್ಯಕ್ತ, ಮಹಾಶ್ವೇತೆ, ಡಾಲರ್ ಸೊಸೆ, ಯಶಸ್ವಿ, ತುಮುಲ, ಋಣ, ಪರಿಧಿ ಮೊದಲಾದ ಕಾದಂಬರಿಗಳಲ್ಲಿ ಸ್ತ್ರೀ ಜಗತ್ತಿನ ವಿದ್ಯಮಾನಗಳೇ ಮಿಂಚಿವೆ. ತಮ್ಮ ವ್ಯಕ್ತಿತ್ವವನ್ನು ಹಿಡಿದು ಅಲ್ಲಾಡಿಸಿದ, ಜೀವಪರಗೊಳಿಸಿದ ಅನೇಕ ಮಹಿಳೆಯರ, ಅಸಾಮಾನ್ಯರ ಬದುಕಿನ ಕಥನಗಳನ್ನು ಅವರು ತಮ್ಮ ಸೃಜನಶೀಲ ಕೃತಿಗಳಲ್ಲಿ ಆಪ್ತವಾಗಿ ಅನಾವರಣಗೊಳಿಸಿದ್ದಾರೆ. ಲೋಕದ, ಪುರುಷ ಪ್ರಧಾನ ವ್ಯವಸ್ಥೆಯ ವೈರುಧ್ಯಗಳನ್ನು ಪ್ರಶ್ನಿಸುವ, ಬಯಲಿಗೆಳೆಯುವ ಕೆಲಸವನ್ನು ಇಲ್ಲಿ ಅವರು ಸಶಕ್ತವಾಗಿ ಮಾಡಿದ್ದಾರೆ. ಸಾಮಾಜಿಕ ಕಳಕಳಿ, ಅಂತಃಕರಣದ ಜೀವಸೆಲೆ ಅವರ ಬರವಣಿಗೆಯಲ್ಲಿ ಚಿಮ್ಮಿದೆ. ಸಾಂಪ್ರತ ಸಮಾಜದ ಸಮ್ಯಕ್ ದರ್ಶನವನ್ನು ಮಾಡಿಕೊಡುವಲ್ಲಿ ಅವರ ಕೃತಿಗಳು ಯಶಸ್ವಿಯಾಗಿವೆ. ಹೀಗಾಗಿಯೇ ಅವರ ಕೃತಿಗಳು ಚಲನಚಿತ್ರ, ಧಾರಾವಾಹಿ, ನಾಟಕ, ರೂಪಕಗಳಾಗಿ ವಿವಿಧ ಮಾಧ್ಯಮಗಳಲ್ಲಿ ಇಂದಿಗೂ ಬಿತ್ತರಗೊಳ್ಳುತ್ತಿರುವುದನ್ನು ನಾವು ಕಾಣಬಹುದಾಗಿದೆ. ಕಥೆ ಹೇಳುವುದು, ಕನಸಿನ ಗೋಪುರ ಕಟ್ಟುವುದು ಅವರ ಕಾದಂಬರಿಗಳ ಉದ್ದೇಶವಲ್ಲ. ಅವರು ತಮ್ಮ ಕೃತಿಗಳ ಮೂಲಕ ಒಂದು ಸಂದೇಶವನ್ನು ಕೊಡುವ, ವಿವೇಕವನ್ನು ಮೂಡಿಸುವ ಕೆಲಸವನ್ನು ಮಾಡುತ್ತಾ ಬಂದಿರುವುದು ಗಮನಾರ್ಹ ಸಂಗತಿ. ಕನ್ನಡ ಸಾಹಿತ್ಯಕ್ಕೆ ಸುಧಾ ಮೂರ್ತಿ ಅವರ ಕೊಡುಗೆ ಏನು ಎಂಬುದನ್ನು ಲೋಕಮುಖಕ್ಕೆ ತಿಳಿಸಿ ಕೊಡುವಲ್ಲಿ ಈ ಕೃತಿ ನಮ್ಮ ನೆರವಿಗೆ ಬರುತ್ತದೆ.

ಪ್ರವಾಸ ಸಾಹಿತ್ಯ

ಸುಧಾಮೂರ್ತಿ ಅವರು ಪ್ರವಾಸಪ್ರಿಯರು. ಕಾಲಿಗೆ ಚಕ್ರ ಕಟ್ಟಿಕೊಂಡಂತೆ ಅವರು ದೇಶ ವಿದೇಶಗಳನ್ನು ಸುತ್ತಿ ಬಂದಿದ್ದಾರೆ. ಪ್ರಯಾಣ ನನ್ನ ಜೀವನದ ಒಂದು ಅವಿಭಾಜ್ಯ ಅಂಗ. ಅದು ವಿದ್ಯೆಯ ಒಂದು ಭಾಗವೂ ಹೌದು. ಅದಿಲ್ಲದಿದ್ದರೆ ವಿದ್ಯೆ ಅಪೂರ್ಣ. ನಮ್ಮ ದೇಶ ಅನೇಕ ರೀತಿಯಿಂದ ವಿಶೇಷವಾಗಿದೆ. ಪ್ರತಿ ರಾಜ್ಯಕ್ಕೂ ಅದರದೇ ಭಾಷೆ, ಸಂಸ್ಕೃತಿ, ಅಡುಗೆ ಪದ್ಧತಿ, ಸಸ್ಯ ಮತ್ತು ಪ್ರಾಣಿಗಳು ಇವೆ. ಆದ್ದರಿಂದ ನಮ್ಮ ಒಂದು ದೇಶವನ್ನು ಸುತ್ತಿದ್ರೆ ಕೇವಲ ಒಂದು ದೇಶವನ್ನು ಸುತ್ತಿದಂತೆ ಅಲ್ಲ. ಹಲವಾರು ದೇಶಗಳ ಅನುಭವ ಬರುತ್ತದೆ'' ಎಂಬುದಾಗಿ 'ಮನದ ಮಾತು' ಕೃತಿಯಲ್ಲಿ ಅವರೇ ಹೇಳಿಕೊಂಡಿದ್ದಾರೆ. ಅವರು ಬರೆದ ಅನುಭವ ಕಥನಗಳಲ್ಲೂ ಪ್ರವಾಸ ಕಥನಗಳು ಸೇರ್ಪಡೆಯಾಗಿವೆ. ಚೀನಾ, ಆಫ್ರಿಕಾ, ಪಾಕಿಸ್ತಾನ ಮೊದಲಾದ ಹತ್ತೈವತ್ತು ರಾಷ್ಟ್ರಗಳಲ್ಲಿ ತಾವು ಕಂಡ ಅನುಭವಗಳನ್ನು ಸೊಗಸಾಗಿ ಅವರು ಕಟ್ಟಿಕೊಟ್ಟಿದ್ದಾರೆ. ಅವರು ಬರೆದ ಮೊದಲ ಕೃತಿ ಸಹ ಪ್ರವಾಸ ಸಾಹಿತ್ಯಕ್ಕೆ ಸಂಬಂಧಿಸಿದ್ದಾಗಿದೆ. ತಮ್ಮ ಅಮೆರಿಕ ಪ್ರವಾಸದ ಅನುಭವಗಳನ್ನು 1981ರಲ್ಲಿ 'ಅಟ್ಲಾಂಟಿಕದಾಚೆಗೆ' ಎಂಬ ಕೃತಿಯಲ್ಲಿ ಸ್ವಾರಸ್ಯಪೂರ್ಣವಾಗಿ ಸೆರೆಹಿಡಿದಿದ್ದಾರೆ. 'ಕಾವೇರಿಯಿಂದ ಮೇಕಾಂಗಿಗೆ' ಅವರ ಮಹತ್ವದ ಕೃತಿ. ಈಜಿಪ್ಟ್, ಚೀನಾ, ಸ್ಕಾಂಡಿನೇವಿಯನ್ ದೇಶಗಳ ಪರ್ಯಟನೆ ಮಾಡಿ ಬಂದು 'ಹಕ್ಕಿಯ ತೆರದಲಿ' ಎಂಬ ಕೃತಿಯನ್ನು ಅವರು ರಚಿಸಿದ್ದಾರೆ. ಕನ್ನಡ ಪ್ರವಾಸ ಸಾಹಿತ್ಯ ಪ್ರಕಾರಕ್ಕೆ ಮೌಲಿಕ ಕೃತಿಗಳನ್ನು ಕೊಟ್ಟ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಸುಧಾಮೂರ್ತಿ ಅವರ ಪ್ರವಾಸ ಕಥನಗಳಲ್ಲಿ ಜಾಗತಿಕ ವಿದ್ಯಮಾನಗಳ ಗಂಭೀರವಾದ ಜಿಜ್ಞಾಸೆ ಇರುವುದನ್ನು ನಾವು ಕಾಣಬಹುದು.

ಇಂಗ್ಲಿಷ್‌ನಲ್ಲಿ ಸಾಹಿತ್ಯ ರಚನೆ

ಸುಧಾ ಮೂರ್ತಿ ಅವರು ಕನ್ನಡದ ಜೊತೆಗೆ ಇಂಗ್ಲಿಷ್‌ದಲ್ಲಿಯೂ ಜನಪ್ರಿಯ ಲೇಖಕರು. ಅವರು ಮಕ್ಕಳ ಮುದ್ದಿನ ಸಾಹಿತಿ. ಸುಧಾ ಅವರ ಸಾಹಿತ್ಯಯಾನದ ಸಮಗ್ರ ಮುಖಗಳ ವಿವರ ಈ ಕೃತಿಯಲ್ಲಿ ದಾಖಲಾಗಿದೆ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಭಾಗವಾಗಿಯೇ ಈ ಕೃತಿಯನ್ನು ನಾವು ಓದಿಕೊಳ್ಳಬಹುದಾಗಿದೆ.

ಸುಧಾ ಮೂರ್ತಿ ಅವರು ತಮ್ಮನ್ನು ಸ್ತ್ರೀವಾದಿ ಮಹಿಳಾ ಸಾಹಿತಿ ಎಂದು ಎಲ್ಲಿಯೂ ಹೇಳಿಕೊಂಡಿಲ್ಲ. ಅವರ ಅನುಭವ ವೈವಿಧ್ಯ ಯಾರನ್ನೂ ಬೆರಗುಗೊಳಿಸದೇ ಬಿಡದು. ಅವರ ಕೃತಿಗಳ ವಸ್ತು, ತಂತ್ರ, ಭಾಷೆ, ನಿರೂಪಣೆ ಎಲ್ಲವೂ ಭಿನ್ನ, ವಿಭಿನ್ನ. ವ್ಯಾಪಕ ಓದು, ಓಡಾಟ, ವೈಚಾರಿಕತೆ ಅವರ ಯಶಸ್ಸಿಗೆ, ಜನಪ್ರಿಯತೆಗೆ ಮೂಲ ಕಾರಣ. ಅವರ ಹೆಚ್ಚಿನ ಕೃತಿಗಳು ಆತ್ಮಕಥನದಂತಿವೆ. ಬರವಣಿಗೆಯೂ ಒಂದು ಗಂಭೀರ ಕಾಯಕ ಅವರ ಪಾಲಿಗೆ. ನಿಜವಾಗಿಯೂ ಅವರು ಭಾರತೀಯ ಸಾಹಿತ್ಯ ನಿರ್ಮಾಪಕರಲ್ಲಿ ಒಬ್ಬರಾಗಿದ್ದಾರೆ ಎಂಬುದು ಈ ಕೃತಿಯ ಓದಿನಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಪ್ರತಿಭಾ ರಾವ್ ಅವರು ಶ್ರಮವಹಿಸಿ, ಕ್ಷೇತ್ರಕಾರ್ಯ ನಡೆಸಿ, ಮಾಹಿತಿಯನ್ನು ಕಲೆ ಹಾಕಿ, ಸುಧಾಮೂರ್ತಿ ಅವರನ್ನು ಭೇಟಿಯಾಗಿ ಈ ಕೃತಿಯನ್ನು ಸಿದ್ಧಪಡಿಸಿದ್ದಾರೆ. ಈ ಕೃತಿಯು ಮುಂಬೈ ವಿ.ವಿ. ಕನ್ನಡ ವಿಭಾಗದ 104ನೆಯ ಕೃತಿಯಾಗಿ ಬೆಳಕು ಕಂಡಿದೆ.

ಪತಿಯ ಕಣ್ಣಲ್ಲಿ ಪತ್ನಿಯ ಬದುಕು

ತನ್ನ ಪ್ರೀತಿಯ ಪತ್ನಿ ಅಗಲಿದ ನಂತರ, ಪತಿ ರಚಿಸಿದ ಪುಸ್ತಕವಿದಾಗಿರುವುದರಿಂದ, ಅದೇ ವಿಶೇಷ! ಜತೆಗೆ, ಪತಿಗೆ ಈಗ 85 ವರ್ಷ! ಇಳಿವಯಸ್ಸಿನ ನಾಗೇಂದ್ರ, ರಾವಣಿಕರ್ ಅವರ ಮೊದಲ ಕೃತಿಯಿದು. ಅವರ ಪತ್ನಿ ರುದ್ರಮ್ಮ ಅವರದ್ದು ಕಷ್ಟದ ಬದುಕು. ತಾನು ಜನಿಸಿದ ಕೆಲ ದಿನಗಳಲ್ಲೇ ತಾಯಿ ಕಳೆದುಕೊಂಡ ರುದ್ರಮ್ಮ ಬೆಳೆದ ಬಗೆ ಬೆರಗಿನದು. ಮಲತಾಯಿ ಹಾಗೂ ಅತ್ತೆಯ ಕಿರುಕುಳದಲ್ಲೇ ಬೆಳೆದ ಅವರು ಕಷ್ಟಪಟ್ಟು ಎಂ.ಎಸ್ಸಿ. ಓದಿ ಮೈಸೂರಿನ ಮಹಾರಾಣಿ ವಿಜ್ಞಾನ ಪದವಿ ಕಾಲೇಜಿನಲ್ಲಿ ಉಪನ್ಯಾಸಕರಾದರು. ಮೂರು ಮಕ್ಕಳ ತಾಯಿಯಾದ ನಂತರ ಸಿಎಫ್‌ಟಿಆರ್‌ಐನಲ್ಲಿ ಪಿಎಚ್.ಡಿ ಪಡೆದರು. ಬಳಿಕ ಮೈಸೂರು ವಿಶ್ವವಿದ್ಯಾಲಯದ ಆಹಾರ ವಿಜ್ಞಾನ ಹಾಗೂ ಪೋಷಣ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ ನಿವೃತ್ತರಾದರು.

ಪಾತಾಳದಿಂದ ಪರ್ವತವೇರಿದ ರುದ್ರಮ್ಮ
ಲೇ: ನಾಗೇಂದ್ರ ರಾವಣಿಕರ್
ಪ್ರ: ಕವಿತಾ ಪ್ರಕಾಶನ, ಮೈಸೂರು
ಬೆಲೆ: ರು. 150/-

ಅವರ ಪತಿ ನಾಗೇಂದ್ರ ಅವರು ಕೇವಲ ಬಿ.ಎಸ್ಸಿಯಷ್ಟೇ ಓದಿದ್ದರೂ ಉದ್ಯೋಗ ಇಲ್ಲದಿದ್ದರೂ ರುದ್ರಮ್ಮ ಅವರನ್ನು ಮೆಚ್ಚಿ ಮದುವೆಯಾದರು. ಆಗ ರುದ್ರಮ್ಮ ಮದುವೆಯಾಗಲು ಪಿಡಬ್ಲುಡಿ ಎಂಜಿನಿಯರ್ ಮುಂದೆ ಬಂದಿದ್ದರೂ ತಿರಸ್ಕರಿಸಿದರು! ಏಕೆಂದರೆ ತಾನು ಪ್ರೀತಿಸುವುದಕ್ಕಿಂತ ತನ್ನನ್ನು ಪ್ರೀತಿಸುತ್ತಿದ್ದ ನಾಗೇಂದ್ರ ಅವರನ್ನು ಇಷ್ಟಪಟ್ಟು ಮದುವೆಯಾದರು. ಇಂಥ ವಿದ್ಯಮಾನಗಳು ಹಲವರ ಬದುಕಿನಲ್ಲಿ ಬಂದಿರಬಹುದು. ಆದರೆ ಶೂನ್ಯದಿಂದ ಶಿಖರವೇರಿದ ರುದ್ರಮ್ಮ ಅವರ ಬದುಕು ಅಪರೂಪ ಎನ್ನಬಹುದು. ಇಂಥ ಅಪರೂಪದ ಬದುಕಿನ ತನ್ನ ಪತ್ನಿಯ ಚಿತ್ರಣವನ್ನು ನಾಗೇಂದ್ರ ಕಟ್ಟಿಕೊಟ್ಟಿದ್ದಾರೆ. ಆದರೆ ಈ ಕೃತಿಯನ್ನು ಓದಲು ರುದ್ರಮ್ಮ ಅವರಿಲ್ಲ. ನಾಲ್ಕು ವರ್ಷಗಳ ಹಿಂದೆ ಅಗಲಿದಾಗ, ಒಂಟಿಯಾದವರು ನಾಗೇಂದ್ರ. ಒಂಟಿತನವನ್ನು ನೀಗಲು, ತಮ್ಮ ಹಿಂದಿನ ಬದುಕನ್ನು ನಾಗೇಂದ್ರ ಈ ಕೃತಿಯಲ್ಲಿ ಹಿಡಿದಿಟ್ಟಿದ್ದಾರೆ. ಬಡತನ, ಕಷ್ಟಗಳನ್ನು ಮೆಟ್ಟಿ ಸಾಧಿಸಿದವರು ಅಸಂಖ್ಯರಿದ್ದಾರೆ. ಆದರೆ ತಮ್ಮ ಬದುಕನ್ನು ನೆಟ್ಟಗಾಗಿಸಿಕೊಳ್ಳುತ್ತ, ಇತರರ ಬದುಕನ್ನು ನೆಟ್ಟಗಾಗಿಸಿದ ರುದ್ರಮ್ಮ ಮಾದರಿ. ಪತ್ನಿ ತೀರಿಕೊಂಡ ನಂತರ, 85 ವರ್ಷ ವಯಸ್ಸಿನ ಪತಿ ಬರೆದ ಕೃತಿ ಎಂಬ ಹೆಗ್ಗಳಿಕೆ ಹೊಂದಿರುವ ಈ ಕೃತಿ, ಸರಾಗವಾಗಿ ಓದಿಸಿಕೊಂಡು ಹೋಗುವ ಗುಣ ಹೊಂದಿದೆ.

ಶಿವಾಜಿಯ ಕುರಿತು. .

» ಉದಯಕುಮಾರ ಹಬ್ಬು

ಇಂಗ್ಲಿಷ್‌ನಲ್ಲಿ ಮೇಧಾ ದೇಶ್‌ಮುಖ್ ಭಾಸ್ಕರನ್ ಅವರು ಬರೆದ 'ಚಾಲೆಂಜಿಂಗ್ ಡೆಸ್ಟಿನಿ' ಎಂಬ ಕೃತಿಯನ್ನು 'ವಿಧಿಗೆ ಸವಾಲು – ಒಂದು ಜೀವನ ಚರಿತ್ರೆ' ಎಂಬ ಶೀರ್ಷಿಕೆಯಲ್ಲಿ ಪ್ರೊ. ಆರ್.ಎಸ್. ಹಬ್ಬು ಅವರು ಅನುವಾದಿಸಿದ್ದಾರೆ. ಇದು ಛತ್ರಪತಿ ಶಿವಾಜಿ ಮಹಾರಾಜರ ಜೀವನ ಚರಿತ್ರೆ; ಆದರೂ ಮಹತ್ವದ ನಿಖರ ಐತಿಹಾಸಿಕ ದಾಖಲೆಗಳಿಂದ ಇಡಿಕಿರಿದ ಕೃತಿ. ಇದೊಂದು ಐತಿಹಾಸಿಕ ಗ್ರಂಥವಾದರೂ ಒಂದು ಐತಿಹಾಸಿಕ ಕಾದಂಬರಿ ಓದಿದಷ್ಟು ರೋಮಾಂಚಕಾರಿಯಾದ ಕಥನವಾಗಿದೆ.

ಈ ಕೃತಿ ಹಿಂದು ಹೋರಾಟಗಾರ ಶೂರ ಪರಾಕ್ರಮಿ, ಯುದ್ಧ ತಂತ್ರಗಳಲ್ಲಿ ನಿಪುಣನಾದ ಛತ್ರಪತಿ ಶಿವಾಜಿ ಮಹಾರಾಜ ಒಂದೆಡೆ, ಧರ್ಮಾಂಧ, ಮತಾಂಧ, ಕ್ರೂರಿ, ಜೇಹಾದಿಯಾದ ಔರಂಗಜೇಬ ಇನ್ನೊಂದೆಡೆ ಇವರಿಬ್ಬರ. ಸ್ವಭಾವ ಮತ್ತು ಗುಣಲಕ್ಷಣಗಳ ಸಮಾಂತರ ಐತಿಹಾಸಿಕ ಪಾತ್ರಗಳ ಕುತೂಹಲಕಾರಿ ಅಧ್ಯಯನವೂ ಹೌದು. ತಾನು ಮಂಡಿಸಿದ ವಿಷಯಗಳಿಗೆ ನಿಖರ, ಅಧಿಕೃತ ದಾಖಲೆಗಳ ಸಂಗ್ರಹವೂ ಹೌದು. ಶಿವಾ ಅಥವಾ ಶಿವಾಜಿ ಮಹಾರಾಜನು ಮುಘಲ್ ಸಾಮ್ರಾಜ್ಯದ ಚತುರಂಗ ಬಲದ ದೈತ್ಯ ಶಕ್ತಿಯ ಎದುರು ಏನೂ ಅಲ್ಲ ಎನ್ನುವಷ್ಟು ಸೈನ್ಯವನ್ನು ಹೊಂದಿ, ಆ ಬಲಾಢ್ಯ ಮುಘಲ್ ಸಾಮ್ರಾಜ್ಯಕ್ಕೆ ಸರಿಸಾಟಿಯಾಗಿ ಇದಿರೇಟು ಕೊಟ್ಟು ಅನೇಕ ಯುದ್ಧಗಳಲ್ಲಿ ಮುಘಲರನ್ನು ಸೋಲಿಸಿ ಅವರ ಹಲವಾರು ರಾಜ್ಯಗಳನ್ನು ವಶಪಡಿಸಿಕೊಂಡದ್ದು ಒಂದು ಪವಾಡ ಸದೃಶ ಸಂಗತಿಯೇ ಸೈ. ಛತ್ರಪತಿ ಶಿವಾಜಿ ಮಹಾರಾಜ ಔರಂಗಜೇಬನಿಗೆ ತಲೆ ನೋವಾಗಿದ್ದ.

ಈ ಐತಿಹಾಸಿಕ ಗ್ರಂಥವನ್ನು ಬರೆಯುವಾಗ ಸುಮಾರು ನೂರೈವತ್ತಕ್ಕಿಂತಲೂ ಹೆಚ್ಚಿನ ಗ್ರಂಥಗಳನ್ನು ಅಧ್ಯಯನ ಮಾಡಿದ್ದಾರೆ. ಶಿವಾಜಿಯ ಕ್ಷಾತ್ರ ತೇಜಸ್ಸನ್ನು, ಅವನ ಯುದ್ಧ ತಂತ್ರಗಳನ್ನು, ಅವನ ಮಾನವೀಯ ಗುಣಗಳನ್ನು, ಔರಂಗಜೇಬನ ಖೈದಿಯಾದಾಗ ಬಂಧನದಿಂದ ತಪ್ಪಿಸಿಕೊಂಡು ಬಂದ ಚಾಕಚಕ್ಯತೆಯನ್ನು, ಅಫ್ಜಲ್ ಖಾನನ ಅರಮನೆಗೆ ರಾತ್ರಿಯ ಸಮಯದಲ್ಲಿ ಹೋಗಿ ನಡೆಸಿದ ಸಾಹಸವನ್ನು ರೋಚಕವಾಗಿ ನಿರೂಪಿಸಲಾಗಿದೆ. ತಮಗೆ ಸಿಕ್ಕ ನಿಖರ ದಾಖಲೆಗಳ ಆಧಾರದಲ್ಲಿ ಶಿವಾಜಿ ಮಹಾರಾಜನ ಸತ್ಯ ಚರಿತ್ರೆಯನ್ನು ನಿಖರವಾಗಿಯೂ ಕುತೂಹಲಕಾರಿಯಾಗಿಯೂ ನಮ್ಮ ಮುಂದಿಟ್ಟಿದ್ದಾರೆ ಮೇಧಾ ದೇಶ್ ಮುಖ್. ಈ ಗ್ರಂಥವು ಇತಿಹಾಸದ ವಿದ್ಯಾರ್ಥಿಗಳಿಗೆ, ಇತಿಹಾಸಕಾರರಿಗೆ ಉತ್ತಮ ಆಕರ ಗ್ರಂಥ ಎನ್ನಬಹುದಾಗಿದೆ.



ವಿಧಿಗೆ ಸವಾಲು
ಮೂಲ : ಮೇಧಾ ದೇಶ್‌ಮುಖ್ ಭಾಸ್ಕರನ್
ಕನ್ನಡಕ್ಕೆ : ಪ್ರೊ. ಆರ್.ಎಸ್. ಹಬ್ಬು
ಪ್ರ: ಪ್ರಿಸಂ ಬುಕ್
ಪುಟ ಸಂಖ್ಯೆ : 280 ಬೆಲೆ: ರು. 499/-

ಮಾರಿಯಮ್ಮ ಆರಾಧನೆಯ ಸುತ್ತಮುತ್ತ

» ಡಾ. ಬಿ. ಜನಾರ್ದನ ಭಟ್

ಮಾರಿಯಮ್ಮನ ಆರಾಧನೆ ಮತ್ತು ಕರಾವಳಿಯ ಮಾರಿಯಮ್ಮ ದೇವತೆಯ ಸ್ವರೂಪ, ಹಿನ್ನೆಲೆ, ಪರಂಪರೆಯನ್ನು ಪರಿಚಯಿಸಿಕೊಡುವ ಈ ಗ್ರಂಥವು ಒಂದು ಪರಾಮರ್ಶನ ಗ್ರಂಥವಾಗಿ ರೂಪುಗೊಂಡಿರುವುದು ವಿಶೇಷ.

ಉಡುಪಿ ಜಿಲ್ಲೆಯ ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನ ನವನಿರ್ಮಾಣ ಸ್ಮರಣೆಯ ಸಂಪುಟ 'ಮಹಾಮಾತೆ ಮಾರಿಯಮ್ಮ' ಎನ್ನುವುದು ಒಂದು ವಿಶಿಷ್ಟ ಆಕರಗ್ರಂಥ. ಆ ದೇವಾಲಯ ಕರಾವಳಿಯ ದೇವಾಲಯಗಳ ಪೈಕಿ ವೈಭವೋಪೇತವಾಗಿ ಮರ ಮತ್ತು ಕಲ್ಲಿನ ಸುಂದರ ರಚನೆಯಾಗಿ ಗಮನ ಸೆಳೆದಿದೆ. ಅದೇ ರೀತಿ ಆ ನವನಿರ್ಮಾಣದ ಸಂದರ್ಭವನ್ನು ಶಾಶ್ವತ ಸ್ಮರಣೆಯಾಗಿಸುವ ನಿಟ್ಟಿನಲ್ಲಿ ರೂಪಿತವಾದ ಈ ಸ್ಮರಣ ಸಂಚಿಕೆಯೂ ಬಹುಕಾಲ ಒಂದು ರೆಫರೆನ್ಸ್ ಪುಸ್ತಕವಾಗಿ ಇರುವುದರಲ್ಲಿ ಸಂಶಯವಿಲ್ಲ. ದೇವಾಲಯ ಪುನರ್ ನಿರ್ಮಾಣಗಳ ದಾಖಲಾತಿಯ ತಜ್ಞರಾದ ಖ್ಯಾತ ಜಾನಪದ ವಿದ್ವಾಂಸ ಕೆ. ಎಲ್. ಕುಂಡಂತಾಯರು ಈ ಸಂಪುಟದ ಪ್ರಧಾನ ಸಂಪಾದಕರಾಗಿದ್ದಾರೆ. ಡಾ. ಬಿ. ಜಗದೀಶ ಶೆಟ್ಟಿ, ಶ್ರೀಕಾಂತ ಶೆಟ್ಟಿ, ಈಶ್ವರ ಶೆಟ್ಟಿ ಚಿಟ್ಪಾಡಿ, ಸುಧಾಕರ ಶೆಟ್ಟಿ, ಯಶೋದಾ ಕೇಶವ ಮತ್ತು ಸುಜಾತ ಶೆಟ್ಟಿ ಪೆರಿಂಜೆ ಸಂಪಾದಕ ಮಂಡಳಿಯಲ್ಲಿದ್ದಾರೆ.

''ಈ ಸಂಪುಟದಲ್ಲಿ ಜಾನಪದ– ಆದಿಮ ಚಿಂತನೆಯಿಂದ ಶಿಷ್ಟದ ದೇವಸ್ಥಾನ ಪರಿಕಲ್ಪನೆಯ ವಿಚಾರಧಾರೆಯವರೆಗೆ ಬಹು ಆಯಾಮದ ಬರಹಗಳನ್ನು ಕ್ರೋಢೀಕರಿಸಲಾಗಿದೆ'' ಎಂದಿದ್ದಾರೆ ಪ್ರಧಾನ ಸಂಪಾದಕ ಕೆ ಎಲ್ ಕುಂಡಂತಾಯ ಅವರು. ವಿಶ್ವಾತ್ಮಕತೆಯಿಂದ ಸ್ಥಳೀಯತೆಯತ್ತ ಸರಿದುಬರುವ ಚಿಂತನೆಯು ಕೊನೆಗೆ ನಿರ್ದಿಷ್ಟವಾಗಿ ಇದೇ ಕಾಪು ಕ್ಷೇತ್ರದ (ಹೊಸ ಮಾರಿಯಮ್ಮ ಗುಡಿ) ಹಲವು ಆಯಾಮಗಳ ಪರಿಚಯ ಮಾಡಿಕೊಡುತ್ತದೆ. ಜತೆಗೆ ಈ ಕರಾವಳಿಯ ಹಲವು ಮಾರಿಯಮ್ಮ ಆರಾಧನಾ ಕ್ಷೇತ್ರಗಳನ್ನು ಪರಿಚಯಿಸುತ್ತದೆ. ಸುಮಾರು ಎಪ್ಪತ್ತಕ್ಕಿಂತಲೂ ಹೆಚ್ಚು ಲೇಖಕರು ಇಲ್ಲಿ ಮಾತೃ ಆರಾಧನಾ ಸಂಪ್ರದಾಯಗಳ ಕುರಿತಂತೆ ವೈವಿಧ್ಯಮಯ ಲೇಖನಗಳನ್ನು ಬರೆದಿದ್ದಾರೆ. 'ತಾಯಿಯ ವಿಶ್ವರೂಪ'ದ ಬಗ್ಗೆ ಈ ಲೇಖಕನ ಬರಹವೂ ಇದರಲ್ಲಿದೆ.

ಇದರಲ್ಲಿ ಜಾಗತಿಕವಾಗಿ ಕಂಡುಬರುವ ಮಾತೃ ಆರಾಧನೆ, ಭಾರತದಲ್ಲಿ ಮಾತೃ ಆರಾಧನೆ ಮತ್ತು ಕರಾವಳಿಯಲ್ಲಿ ಮಾತೃ ಆರಾಧನೆ ಎಂಬ ಮೂರು ಭಾಗಗಳಿವೆ. 'ಮಾತೃ ಶಕ್ತಿಯ ಆರಾಧನೆ: ಹೀಗೊಂದು ಅವಲೋಕನ' ಎನ್ನುವುದು ಪತ್ರಕರ್ತ ಕವಿ ಜಯರಾಮ ಕಾರಂತ ಕಾಂತಾವರ ಅವರ ಒಳ್ಳೆಯ ಬರಹ. 'ತುಳುನಾಡಿನಲ್ಲಿ ಮಾರಿ ಆರಾಧನೆ' ಎನ್ನುವ ದಿವಂಗತ ಪು. ಶ್ರೀನಿವಾಸ ಭಟ್ಟ, ಕಟೀಲು ಅವರ ಲೇಖನವು ಅಧ್ಯಯನಶೀಲವಾದ ಬರಹವಾಗಿದೆ. ಅವರು ಹೀಗೆ ಹೇಳುತ್ತಾರೆ – ''ತುಳುನಾಡಿನಲ್ಲಿ ಮಾರಿಗುಡಿಗಳ ಸಂಖ್ಯೆ ವಿಜಯನಗರ ಮತ್ತು ಕೆಳದಿಯರಸರ ಕಾಲದಲ್ಲಿ ಹೆಚ್ಚಾದಂತೆ ತಿಳಿದು ಬರುತ್ತದೆ. ಆ ಕಾಲದಲ್ಲಿ ನಡೆದುಹೋದ ಸೈನ್ಯದ ಚಲನವಲನಗಳು ಇದಕ್ಕೆ ಕಾರಣವಾಗಿರಬಹುದು. ಸೈನ್ಯದಲ್ಲಿ 'ದಂಡಿನ ಮಾರಿ' ಯೆಂಬ ಕಾರಣೀಕದ ಶಕ್ತಿ ನೆಲೆಯಾಗಿರುತ್ತದೆ ಎಂದು ಹೇಳುತ್ತಾರೆ. ಯುದ್ಧಾರಂಭ ಪೂರ್ವದಲ್ಲಿ ಆಯುಧಗಳಿಗೆ ಪ್ರಾಣಿಬಲಿ ಕೊಡುವ ಕ್ರಮವಿತ್ತಂತೆ''. ಸಂಪಾದಕ ಕೆ. ಎಲ್. ಕುಂಡಂತಾಯ ಅವರು ಮೂರು ನಾಲ್ಕು ಅತ್ಯುತ್ತಮವಾದ ಬರಹಗಳನ್ನು ಬರೆದಿದ್ದಾರೆ. ಅವರು 'ಮಾರಿ....ಮಾರಿಯಮ್ಮ ದೇವರು' ಎನ್ನುವ ಲೇಖನದಲ್ಲಿ ''ದಂಡಿನ ಮಾರಿಯಾಗಿ ಕರುನಾಡಿಗೆ ಆಗಮಿಸಿದ 'ಮಾರಿ ಆರಾಧನೆ' ಇಲ್ಲಿಯ ಮೂಲ ಸಂಸ್ಕೃತಿಯ ಶಕ್ತಿ ವಿಶೇಷಗಳೊಂದಿಗೆ ಒಂದಾಯಿತು. ವೈದಿಕದ ಪ್ರಭಾವದಿಂದ ಬಲು ಆಯಾಮಗಳೊಂದಿಗೆ ಭಕ್ತರನ್ನು ಪೊರೆಯುವ ಶಕ್ತಿಯಾಯಿತು' ಎನ್ನುತ್ತಾರೆ.



ಮಹಾಮಾತೆ ಮಾರಿಯಮ್ಮ
ಪ್ರಧಾನ ಸಂಪಾದಕರು: ಕೆ. ಎಲ್. ಕುಂಡಂತಾಯ
ಪ್ರ: ವಾಸುದೇವ ಶೆಟ್ಟಿ
ಅಧ್ಯಕ್ಷರು, ಹೊಸ ಮಾರಿಗುಡಿ ಸಮಿತಿ, ಕಾಪು.
ಪುಟಗಳು: 458. ಬೆಲೆ: ರೂ 999/-

ಈ ಸಂಪುಟವು ಮಾರಿ ಆರಾಧನೆಯ ಅಧ್ಯಯನಕ್ಕೆ ಒಂದು ನಿಧಿಯೇ ಆಗಿದೆ. ಪುಸ್ತಕದಲ್ಲಿರುವ ಕರಾವಳಿ ಪ್ರದೇಶದ ಹಲವು ಮಾರಿ ಗುಡಿಗಳ ಚರಿತ್ರೆಯನ್ನು ಅವಲೋಕಿಸಿದರೆ ವಿಶೇಷ ಸಂಗತಿಗಳು ತಿಳಿಯುತ್ತವೆ. ಅಂತಹ ಲೇಖನಗಳಲ್ಲಿ ಒಂದು ಕರ್ನಲ್ ಕಾಲಿನ್ ಮೆಕೆಂಜಿಯ 'ಚಉಟ ಅರಸರ ಕೈಫಿಯತ್ತು'. ಇದರಲ್ಲಿ ಮೂಡುಬಿದಿರೆಯ ಚೌಟ ಅರಸನನ್ನು ಕಾರಣಾಂತರದಿಂದ ನಿರ್ಬಂಧನದಲ್ಲಿ ಇರಿಸಿದ್ದ ವಿಜಯನಗರದ ಅರಸ ಅವನನ್ನು ಬಿಟ್ಟು ಕಳುಹಿಸುವಾಗ ಪಾಲಕಿಯಲ್ಲಿ ಕಳುಹಿಸಿಕೊಡುತ್ತಾನೆ. ಪಲ್ಲಕ್ಕಿ ಹೊರುವ ಬೋವಿಗಳು ತಮ್ಮ ದೇವರಾದ ಮಾರಿಯಮ್ಮನಿಗೆ ಗುಡಿ ಕಟ್ಟಿಸಿಕೊಟ್ಟರೆ ಬರುವುದಾಗಿ ಹೇಳಿದ ಪ್ರಯುಕ್ತ ಅವರಿಗಾಗಿ ಮೂಡುಬಿದಿರೆಯಲ್ಲಿ ಮಾರಿಗುಡಿಯನ್ನು ಕಟ್ಟಿಸಿಕೊಡುತ್ತಾನೆ. ವಲಸೆಗಳ ಜತೆಗೆ ದೇವರುಗಳ ವಲಸೆಯು ಒಂದು ಕುತೂಹಲಕರ ಅಧ್ಯಯನವಾಗಿದೆ.

ದಿವಂಗತ ಡಾ. ಸುಶೀಲಾ ಪಿ. ಉಪಾಧ್ಯಾಯ ಅವರ 'ತುಳುನಾಡಿನ ಜನಪದ ಆರಾಧನೆಯಲ್ಲಿ ಮಾತೃ ದೇವತೆಯರು' ಮತ್ತು ಕಾಪು ಮಾರಿಗುಡಿಯ ಪಕ್ಕದಲ್ಲಿ ಆಶ್ರಯ ಪಡೆದಿರುವ ಪಿಲಿ ಭೂತ ಅಥವಾ ಹುಲಿ ದೈವಕ್ಕೆ (ಎರಡು ಹುಲಿಗಳೆಂದು ಐತಿಹ್ಯ ಇರುವುದರಿಂದ ಹುಲಿಭೂತಗಳಿಗೆ?) ಸಂಬಂಧಿಸಿದ ಪಿಲಿಕೋಲ (ಹುಲಿ ಕೋಲ) ಇವುಗಳ ಕುರಿತ ಕುತೂಹಲಕರ ಲೇಖನಗಳನ್ನು ಸಂಪಾದಕರು ಸಂಗ್ರಹಿಸಿ ಸೇರಿಸಿಕೊಂಡಿದ್ದಾರೆ. ಈ ಗ್ರಂಥದಲ್ಲಿ ಈಗ ನಮ್ಮೊಂದಿಗಿಲ್ಲದ ಡಾ. ಯು. ಪಿ. ಉಪಾಧ್ಯಾಯ, ವೆಂಕಟರಾಜ ಪುಣಿಂಚಿತ್ತಾಯ, ಎಸ್. ಕೆ. ರಾಮಚಂದ್ರ ರಾವ್, ಪು. ಶ್ರೀನಿವಾಸ ಭಟ್ಟ ಮುಂತಾದವರ ಲೇಖನಗಳಿವೆ. ಹಲವು ಲೇಖನಗಳ ಜತೆ, ಕರಾವಳಿಯ ಹಲವು ಮಾರಿಯಮ್ಮ ಗುಡಿದೇವಳದ ಪರಿಚಯ ಹೀಗೆ ಜ್ಞಾನ ವಿಸ್ತಾರದ ಸಮೃದ್ಧ ಸಾಹಿತ್ಯ ಈ ಸಂಪುಟದಲ್ಲಿದೆ. ಇಲ್ಲಿನ ಎಂಬತ್ತಕ್ಕಿಂತಲೂ ಹೆಚ್ಚಿನ ಲೇಖನಗಳು ಗಮನ ಸೆಳೆಯುತ್ತವೆ. ಇವೆಲ್ಲ ಬರಹಗಳು ಮುಂದಿನ ಅಧ್ಯಯನಕ್ಕೆ ಕೂಡ ಮಹತ್ವದ ಕೊಡುಗೆ ನೀಡುತ್ತವೆ. ಜತೆಗೆ ಗ್ರಂಥ ರಚನೆಯ ಸನ್ನಿವೇಶವನ್ನು ಸಂಪಾದಕರು ಸಮೀಚೀನವಾಗಿ ದಾಖಲಿಸಿದ್ದಾರೆ. ಈ ದೇವಾಲಯದ ಭವ್ಯತೆಯನ್ನು ಸಾರುವ ಅಪೂರ್ವ ವರ್ಣಚಿತ್ರಗಳ ಸಂಪುಟವೊಂದಿದೆ. ಇದರ ಮಹತ್ವವನ್ನು ಸೂಕ್ತ ಪಾರಿಭಾಷಿಕ ಸ್ಪಷ್ಟತೆಯೊಂದಿಗೆ ಸಂಪಾದಕರಾದ ಕುಂಡಂತಾಯರು ಕೊನೆಯಲ್ಲಿರುವ 'ಶೈಲಿಗಳ ಸಂಕಲನ ಸ್ವರೂಪದ ದೇವಸ್ಥಾನ ಸಮುಚ್ಚಯ' ಎಂಬ ಪುರವಣಿಯಲ್ಲಿ ವಿವರಿಸಿದ್ದಾರೆ. ಇಂತಹ ಒಂದು ಅಪರೂಪದ ಬೃಹದ್ ಗ್ರಂಥವನ್ನು ಹೊರತಂದಿರುವ ದೇವಸ್ಥಾನದ ಆಡಳಿತ ಮಂಡಳಿ ಮತ್ತು ಪ್ರಧಾನ ಸಂಪಾದಕ ಕೆ.ಎಲ್ ಕುಂಡಂತಾಯ ಹಾಗೂ ಅವರ ಸಂಪಾದಕ ಮಂಡಳಿಯ ಪ್ರಯತ್ನ ಸ್ತುತ್ಯರ್ಹ. ಇದು ನಮ್ಮ ಸಾರ್ವಜನಿಕ ಗ್ರಂಥಾಲಯಗಳಲ್ಲಿಯೂ, ನಮ್ಮ ಗೃಹಗ್ರಂಥಾಲಯಗಳಲ್ಲಿಯೂ ಸೇರಬೇಕಾದ ಪರಾಮರ್ಶನ ಗ್ರಂಥ.

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ಕುವೆಂಪು ವಿಚಾರ ಕ್ರಾಂತಿ
(ಕುವೆಂಪು ಅವರು ವಿವಿಧ ಸಂದರ್ಭಗಳಲ್ಲಿ ಮಾಡಿದ ಭಾಷಣ, ಲೇಖನಗಳ ಸಂಕಲನ)
ಸಂ: ಬರಗೂರು ರಾಮಚಂದ್ರಪ್ಪ
ಪ್ರ: ಜನ ಪ್ರಕಾಶನ, ಬೆಂಗಳೂರು
ಬೆಲೆ: ರೂ 100/-

2



ಎದೆಯ ಹಣತೆ
(ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ 13 ಕಥೆಗಳ ಸಂಕಲನ ಈಗ ಬೂಕರ್ ಪ್ರಶಸ್ತಿ ಪುರಸ್ಕಾರದೊಂದಿಗೆ)
ಲೇ: ಬಾನು ಮುಷ್ತಾಕ್
ಪ್ರ: ಅಭಿರುಚಿ ಪ್ರಕಾಶನ, ಮೈಸೂರು
ಬೆಲೆ: ರೂ 250/-

3



ದೂರದೇಶವಾಸಿ
(ದೂರದೇಶವಾಸಿ ಕಿರಣ್ ಉಪಾಧ್ಯಾಯ ಅವರು ವಿವಿಧ ವಿಷಯಗಳನ್ನು ಕುರಿತು ವಿಶ್ವವಾಣಿ ಪತ್ರಿಕೆಗೆ ಬರೆದ ಅಂಕಣ ಬರಹಗಳು ಈಗ ಪುಸ್ತಕ ರೂಪತಾಳಿವೆ.)
ಲೇ: ಕಿರಣ್ ಉಪಾಧ್ಯಾಯ
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ: ರೂ 250/-

4



ತತ್ರಾಣಿ
(1947 ರ ಆಸುಪಾಸಿನ ಹಾವೇರಿ ಪರಿಸರದ ಕುಟುಂಬವೊಂದರ ಹೃದಯಂಗಮ ಕಥನ)
ಲೇ: ದೀಪಾ ಜೋಶಿ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ: ರೂ 395/-

5



ಜೊರಾಮಿ
(ಮಿಜೋರಾಮ್‌ನ ಸಮುದಾಯಗಳ ತಲ್ಲಣಗಳು ಇಲ್ಲಿವೆ. ಕಮರಿ ಹೋಗಿರುವ ಮಿಜೋರಾಮ್‌ನ ಅಸ್ಮಿತೆ ಹಾಗೂ ಸಾಂಸ್ಕೃತಿಕ ಅನನ್ಯತೆಗಳನ್ನು ಈ ಕಾದಂಬರಿ ಚಿತ್ರಿಸುತ್ತಾ ಹೋಗುತ್ತದೆ)
ಪ್ರ: ಲೇ: ಮಾಲ್ಸಾವ್ಮಿ ಜೇಕಬ್
ಅನು: ಭೂಮಿಕಾ ಆರ್
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು
ಬೆಲೆ: ರೂ 350/-

6



ಭಾಷೆಯಿಲ್ಲವೆಂದಾದರೆ
(ಭಾಷೆ ಉಳಿಯಬೇಕೇ? ಹಾಗಾದರೆ ಅದರ ಸ್ವರೂಪ ಹೇಗಿರಬೇಕು? ಭಾಷೆಯಿಲ್ಲವಾದರೆ ಏನಾಗುತ್ತದೆ - ಒಂದು ಚರ್ಚೆ ಇಲ್ಲಿದೆ)
ಲೇ: ಅಜಕ್ಕಳ ಗಿರೀಶ್ ಭಟ್
ಪ್ರ: ಚಿಂತನ ಬಯಲು ಪ್ರಕಾಶನ, ಬಂಟ್ವಾಳ
ಬೆಲೆ: ರೂ 100/-

7



ಧರ್ಮಚಕ್ರವರ್ತಿ ಅಶೋಕ
(ಯುದ್ಧದಿಂದ ಬೇಸತ್ತು, ಹಿಂಸೆಯನ್ನು ತೊರೆಯಲು ಬೌದ್ಧಧರ್ಮದ ಮರೆಹೋದ ಸಾಮ್ರಾಟನೊಬ್ಬನ ಕಥೆಯಿದು)
ಸು. ರುದ್ರಮೂರ್ತಿ ಶಾಸ್ತ್ರಿ
ಪ್ರ: ತನುಮನು ಪ್ರಕಾಶನ, ಮೈಸೂರು
ಬೆಲೆ: ರೂ 400/-

8



ಸಿಲ್ಕ್ ರೂಟ್
(ಇಂದಿಗೂ ಚೀನಾದಿಂದ ಹೊರಡುವ ಈ ರಸ್ತೆ ಸಿಲ್ಕ್‌ರೂಟ್ ಎಂದೇ ಪ್ರಸಿದ್ಧ ರೇಷ್ಮೆ ಸಾಗಿದ ರೋಮಾಂಚಕ ನಗರಗಳು ಓದಿದ್ದು, ಕೇಳಿದ್ದು, ನೋಡಿದ್ದು)
ಲೇ: ಡಾ। ಡಿ.ವಿ. ಗುರುಪ್ರಸಾದ್
ಪ್ರ: ಮನೋಹರಗ್ರಂಥಮಾಲೆ, ಧಾರವಾಡ
ಬೆಲೆ: ರೂ 340/-

9

ಅನ್ನಾ ಕರೆನಿನಾ ...
(ಜಗತ್ತಿನ ಹತ್ತು ಶ್ರೇಷ್ಠ ಕಾದಂಬರಿಗಳಲ್ಲಿ ಒಂದು ಈಗ ಸಂಪೂರ್ಣವಾಗಿ ಕನ್ನಡದಲ್ಲಿ)
ಲೇ: ಲಿಯೋ ಟಾಲ್‌ಸ್ಟಾಯ್
ಅನು: ಓ. ಎಲ್. ನಾಗಭೂಷಣಸ್ವಾಮಿ
ಪ್ರ: ಅಭಿನವ, ಬೆಂಗಳೂರು
ಬೆಲೆ: ರೂ 1200/-

10



ದೇವ ಸನ್ನಿಧಿ
(ಮನುಷ್ಯನ ತಿರುಗಾಟಕ್ಕೊಂದು ಅಧ್ಯಾತ್ಮಿಕ ಸ್ಪರ್ಶ ನೀಡುವುದೇ ತೀರ್ಥಯಾತ್ರೆ. ಪ್ರವಾಸ ಲೌಕಿಕ ಅನುಭವವನ್ನು ಕೊಟ್ಟರೆ ತೀರ್ಥಯಾತ್ರೆ ಅಲೌಕಿಕ ಅನುಭವವನ್ನು ತಂದುಕೊಡುತ್ತದೆ)
ಲೇ: ಗಿರಿಜಾ ರೈಕ್ವ
ಪ್ರ: ವೀರಲೋಕ, ಬೆಂಗಳೂರು
ಬೆಲೆ: ರೂ 250/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ಆಚೆ ಹೋಗಿದ್ದ ಸುಗುಣಳನ್ನು ಇನ್ನೇನು ಬಂದು ಬಿಡುತ್ತಾಳೆ ಎನ್ನುತ್ತಾ ಕಾಯುತ್ತಿದ್ದ ಶೇಖರನಿಗೆ ಬೇಸರವಾಗತೊಡಗಿತು. ನಾನು ಬಂದ ಮೇಲೆ ಹೋಗಬಹುದಿತ್ತು, ಹೇಳದೆ ಕೇಳದೆ ಹೋಗುವಂತಹ ಅವಸರವೇನಿತ್ತು? ಹಾಗೆ ಅಂದು ಕೊಳ್ಳುತ್ತಿರುವಾಗಲೇ ಸುಗುಣ ಬಂದಳು. ಮುಖ ಊದಿಸಿ ಕೊಂಡು ಕುಳಿತಿದ್ದ ಗಂಡನೆಡೆಗೆ ನಸುನಗು ಬೀರಿ ಒಳನಡೆದು ಸೋಫಾ ಮೇಲೆ ಕುಳಿತಳು.

ವಿದಾಯ

ಹೊಸ ಕತೆ

» ಬಿ.ಕೆ.ಮೀನಾಕ್ಷಿ

'ನಾನು ಬರೋವರೆಗೂ ಇರೋದಕ್ಕಾಗಲ್ವಾ? ನಿನ್ ಜೊತೆ ನಾನೂ ಬರ್ತಿರ್ಲಿಲ್ವಾ?'

'ಇಲ್ಲಾರೀ, ಒಂದು ನಿಮಿಷ ತಡವಾಗಿ ಹೋಗಿದ್ರೂ ಸುಮಿತ್ರ ತಗೊಂಡುಬಿಡುತ್ತಿದ್ದಳು. ಬೇಗ ಹೋಗಿ ಒಳ್ಳೆ ಕೆಲಸ ಮಾಡಿದೆ.'

ಶೇಖರ ಮುಖ ಊದಿಸಿಕೊಂಡೇ ಗಿಳಿಗಳನ್ನು ನೋಡಿದ..

'ಚೆನ್ನಾಗಿವೆಯೇನ್ರೀ? ಚೆನ್ನಾಗಿವೆ ಅಲ್ವಾ?' ಎರಡೂ ಮಾತುಗಳನ್ನು ಅವಳೇ ಆಡಿ ಸಮಾಧಾನ ಪಟ್ಟುಕೊಂಡಳು.

ಸುಗುಣ ಹೋಗಿದ್ದು, ಪಕ್ಕದ ರಸ್ತೆಯಲ್ಲಿದ್ದ ಗೆಳತಿ ಗಾಯತ್ರಿ ಮನೆಗೆ. ಅವಳು ಫೋನ್ ಮಾಡಿ ಏನು ಏಕೆಂದು ಹೇಳದೆ, 'ಬೇಗ ಬಾ. ಹಾಗೇ ವಾಪಸ್ಸು ಹೋಗಿಬಿಡುವೆಯಂತೆ' ಎಂದು ಫೋನಿಟ್ಟಿದ್ದಳು. ಗಿಳಿಗಳೆಂದರೆ ಪ್ರಾಣ ಬಿಡುವ ಸುಗುಣಳ ಬಗ್ಗೆ ಅವಳಿಗೆ ಗೊತ್ತಿತ್ತು. ಬೀದಿಯ ಮೇಲೆ ಲವ್‌ಬರ್ಡ್ಸ್ ಮಾರಿಕೊಂಡು ಯಾರೋ ಗಂಡಹೆಂಡತಿ ಬಂದಿದ್ದರು. ಅವರ ಬಳಿ ಕೊಂಡುಕೊಳ್ಳಲು ಇವಳನ್ನು ಗಾಯತ್ರಿ ಕರೆದಿದ್ದು. ಹೋಗಿದ್ದಕ್ಕೆ ಸರಿಯಾಗಿ ಕೊಂಡೂ ತಂದಳು. ಮೊದಲಿದ್ದ ನಾಲ್ಕು ಗಿಳಿಗಳ ಜೊತೆಗೆ ಇವೆರಡೂ ಸೇರಿಕೊಂಡವು. ಶೇಖರ ಮುಖ ಸಿಂಡರಿಸಿದರೂ ಅದವಳಿಗೆ ನಗಣ್ಯ.. ಈಗಂತೂ ಶೇಖರ ಊಟವನ್ನು ಡೈನಿಂಗ್‌ಹಾಲ್‌ನಲ್ಲಿ ಮಾಡುವುದೇ ಇಲ್ಲ. ಕಾರಣ ಸುಗುಣಳ ಬೆಕ್ಕು ನಾಯಿ ಗಿಳಿಗಳು ಎಲ್ಲೆಂದರಲ್ಲಿ ಓಡಾಡುತ್ತಿರುತ್ತವೆ. ಗಿಳಿಗಳು ಹಾರುತ್ತಾ ಎಲ್ಲೆಂದರಲ್ಲಿ ಕೂರುತ್ತವೆ. ಅವುಗಳ ಕೂದಲು, ಪುಕ್ಕ ಗರಿಗಳು ಉದುರುತ್ತಿರುತ್ತವೆ. ಅದವನಿಗೆ ಆಗದ ವಿಷಯ.

ಆದರೂ ಇವುಗಳನ್ನೆಲ್ಲ ಸಹಿಸಿಕೊಂಡು ಡೈನಿಂಗ್ ಹಾಲ್‌ನಲ್ಲೇ ಊಟ ತಿಂಡಿಗಳಿಗೆ ಕೂರುತ್ತಿದ್ದ. ಒಮ್ಮೆ ಊಟ ಮಾಡುವಾಗ ನಾಯಿಯೂ ತನ್ನ ಬಟ್ಟಲಿನಲ್ಲಿ ಊಟ ಮಾಡುತ್ತಿತ್ತು. ಅದೇನಾಯಿತೋ ಏನೋ ಶೇಖರನ ಮುಂದೆಯೇ ನಾಯಿ ವಾಂತಿ ಮಾಡಿಕೊಂಡುಬಿಟ್ಟಿತು. ಅದಕ್ಕೆ ಸರಿಯಾಗಿ ಬೆಕ್ಕೂ ಇದರ ಹತ್ತಿರ ಬಂದು ಮುಖ ಮುಖ ನೋಡಿ ಮೂಸುತ್ತಾ ಕುಳಿತಿತು. ಶೇಖರನಿಗೆ ತಡೆದುಕೊಳ್ಳಲಾಗಲಿಲ್ಲ. ಬಚ್ಚಲಿಗೆ ಓಡಿದವನೇ ಹೊಟ್ಟೆಯಲ್ಲಿದ್ದುದನ್ನೆಲ್ಲ ಹೊರಗೆ ಕಾರಿಕೊಂಡು ಬಾಯಿ ಮುಖ ತೊಳೆದುಕೊಂಡು ಬಂದವನಿಗೆ ಅಂದಿನಿಂದ ಮೂರು ದಿನಗಳು ಊಟ ಮಾಡಲಾಗಲಿಲ್ಲ. ಆಗಿನಿಂದ ರೂಮು ಸೇರಿಕೊಂಡು ಬಾಗಿಲು ಹಾಕಿಕೊಂಡು ಊಟ ಮಾಡುತ್ತಿದ್ದುದಲ್ಲದೆ, ಆ ರೂಮನ್ನು ಬೀಗ ಹಾಕಿಕೊಂಡು ಹೊರಹೋಗುತ್ತಿದ್ದನು.

ಗಂಡನಿಗಾಗಿ ತನ್ನ ಪ್ರಾಣಿಪ್ರೀತಿಯನ್ನು ತ್ಯಜಿಸಬೇಕೆಂದವಳಿಗೆ ಹಾಗೆ ಮಾಡಲಾಗಲಿಲ್ಲ. ಒಮ್ಮೆ ನಾಯಿ ಬೆಕ್ಕುಗಳನ್ನು ದೂರಕ್ಕೆ ಬಿಟ್ಟು ಬಂದಿದ್ದಳು. ಅವುಗಳು ಮತ್ತೆ ಮನೆ ಹುಡುಕಿಕೊಂಡು ಬಂದಿದ್ದವು. ಎಲ್ಲೆಲ್ಲೋ ಅಲೆದುಕೊಂಡು ಹಸಿವಿನಿಂದ ಮನೆ ಬಾಗಿಲಲ್ಲಿ ಬಂದು ನಿಂತ ಅವುಗಳನ್ನು ಎತ್ತಿಕೊಂಡು ಮುದ್ದಾಡಿ ಅತ್ತಿದ್ದಳು. ಸಾಕಿದ ಗಿಳಿಗಳನ್ನು ಕೂಡಾ ಯಾರಿಗೋ ಸಾಕಿಕೊಳ್ಳಿ ಎಂದು ಕೊಟ್ಟುಬಿಟ್ಟಿದ್ದಳು. ಅವುಗಳು ಅವರ ಮನೆಯಲ್ಲಿ ಅವರು ಹಾಕಿದ ಕಾಳು ಬೀಜ ಹಣ್ಣುಗಳನ್ನು ತಿರುಗಿಯೂ ನೋಡಿರಲಿಲ್ಲವಂತೆ. ಮತ್ತೆ ತಂದು ಇವಳಿಗೇ ಕೊಟ್ಟಿದ್ದರು. ಸುಗುಣಳ ಪ್ರಾಣಿಪ್ರೀತಿಯನ್ನರಿತಿದ್ದ ಶೇಖರ ಅವಳನ್ನು ಹೆಚ್ಚು ಕಾಡದೆ, ಅವಳ ಪಾಡಿಗೆ ಅವಳನ್ನು ಬಿಟ್ಟುಬಿಟ್ಟಿದ್ದ. ಆದರೆ ಅವನ ಕೆಲವು ಶರತ್ತುಗಳನ್ನು ಸುಗುಣಳೂ ಪ್ರಾಮಾಣಿಕವಾಗಿ ಪಾಲಿಸುತ್ತಿದ್ದಳು. ಅವುಗಳೆಂದರೆ, ಯಾವುದೇ ಕಾರಣಕ್ಕೂ ಅಡುಗೆ ಮನೆಗೆ ಅವುಗಳು ಬರಬಾರದು. ದೇವರ ಮನೆಗೆ ಕಾಲಿಡಕೂಡದು. ಆಹಾರ ಪದಾರ್ಥಗಳಿಗೆ ಬಾಯಿ ಹಾಕಕೂಡದು. ಇಷ್ಟನ್ನೂ ಸುಗುಣ ಮಾಡಿಕೊಂಡೇ ಬಂದಳು. ಅವನಿಗೆ ಕೆಲವೊಮ್ಮೆ ಕಸಿವಿಸಿಯಾದಾಗ ಉಪಾಯವಾಗಿ ಅವನಿಂದ ಅವುಗಳನ್ನು ಕಣ್ಮರೆಯಾಗಿಸುತ್ತಿದ್ದಳು.

ಇವುಗಳ ಅವಾಂತರವೂ ಒಂದೊಂದಲ್ಲ. ಬೆಕ್ಕು ಟಿ.ವಿ.ಸ್ಟ್ಯಾಂಡು, ಟೀಪಾಯಿಗಳ ಮೇಲೆಲ್ಲ ಓಡಾಡಿ ಅಲ್ಲೇನಾದರೂ ಬೀಳಿಸುತ್ತಿತ್ತು. ನಾಯಿ ಹೊರಗಡೆ ಕದ್ದು ಹೋಗಿಬಿಡುತ್ತಿತ್ತು. ಅದನ್ನು ಇವಳು ಹುಡುಕಿ ತರಬೇಕಿತ್ತು. ಬೀದಿನಾಯಿಗಳನ್ನು ಕಂಡರೆ ಅವುಗಳ ಸ್ನೇಹಕ್ಕೆ ಹಾತೊರೆಯುತ್ತಿತ್ತು. ಹಾಕಿದ ಊಟವನ್ನು ಪೂರ್ತಿ ತಿನ್ನದೆ ನೊಣಗಳು ಮುತ್ತಿ, ಅದು ಶೇಖರನ ಕಣ್ಣಿಗೇ ಬೀಳುತ್ತಿತ್ತು. ಬೆಕ್ಕು ಹಾಲು ಕುಡಿವಾಗ ಬಟ್ಟಲಿನಿಂದ ಹೊರಗೆಲ್ಲ ಹಾರಿ ಇರುವೆಗಳು ಸಾಲುಗಟ್ಟಿರುತ್ತಿದ್ದವು. ಶೇಖರ ಮುಖ ಹುಳ್ಳಗೆ ಮಾಡಿ ಮೊದಲು ಅದನ್ನು ಕ್ಲೀನ್ ಮಾಡು ಎಂದು ರೇಗುತ್ತಿದ್ದನು. 'ಏನ್ರೀ ನೀವು? ನಮ್ಮ ಹಾಗೇ ತಾನೇ ಅವು? ಯಾಕಿಷ್ಟು ಅಸಹ್ಯ ಪಡುತ್ತೀರಿ? ಪಾಪ ಅವಕ್ಕೇನು ಗೊತ್ತಿದೆ?'

'ನೀನು ಅವುಗಳ ಪರವಾಗಿ ಮಾತಾಡಬೇಡ್ವೇ. ನನಗೆ ಅದನ್ನೆಲ್ಲ ನೋಡಕ್ಕಾಗಲ್ಲ ಅನ್ನೋದು ಗೊತ್ತಿಲ್ವಾ? ಏನು ಕರ್ಮಾನೋ ನಂದು' ಗೊಣಗುತ್ತಲೇ ರೂಮಿಗೆ ಹೋಗಿ ದಬಾರೆಂದು ಬಾಗಿಲು ಹಾಕಿಕೊಳ್ಳುತ್ತಿದ್ದ.

ಹೀಗೇ ಒಂದುದಿನ ಹೊರಗಿನಿಂದ ಬಂದ ಶೇಖರ ಐಪಿಎಲ್ ಮ್ಯಾಚ್ ಹಾಕೋಣವೆಂದು ರಿಮೋಟ್ ಹುಡುಕಿದರೆ ಎಲ್ಲಿದೆ? ಸೋಫಾ, ದೀವಾನಕಾಟ್, ಅದರ ಕೆಳಗೆ ಇದರ ಕೆಳಗೆ, ಎಲ್ಲ ಕಡೆಗೂ ಮನೆಯವರೆಲ್ಲ ಸೋಸಿಬಿಟ್ಟರು. ಕಡೆಗೊಮ್ಮೆ ಇಲ್ಲೂ ನೋಡಿಬಿಡೋಣವೆಂದು ಸ್ಟೋರ್ ರೂಂಗೆ ಹೋದರೆ ಅಲ್ಲಿತ್ತು! ಸದ್ಯ ಸಿಕ್ಕಿತಲ್ಲ ಅಂತ ತಂದು ಶೇಖರ ಟಿ.ವಿ. ಆನ್ ಮಾಡಲು ಬಟನ್ ಒತ್ತಿದ. ಟಿ.ವಿ. ಚಾಲೂ ಆಗುತ್ತಲೇಯಿಲ್ಲ! ಬಟನ್‌ಗಳಿದ್ದರೆ ತಾನೇ? ಗಿಳಿಗಳೆರಡು ಸೇರಿಕೊಂಡು ಬಟನ್‌ಗಳನ್ನು ಕಿತ್ತು ಹಾಕಿದ್ದವು. ಸುಗುಣ ಇದನ್ನು ತಿಳಿಯುತ್ತಲೇ ಹತ್ತಿರದಲ್ಲಿದ್ದ ಟಿ.ವಿ. ಶಾಪ್‌ಗೆ ಗಾಡಿಯಲ್ಲಿ ಶರವೇಗದಲ್ಲಿ ಹೋದವಳು, ಐದು ನಿಮಿಷದಲ್ಲಿ ವಾಪಸ್ಸು ಬಂದು ಹೊಸ ರಿಮೋಟನ್ನು ಗಂಡನ ಮುಂದೆ ಹಿಡಿದಿದ್ದಳು!

ಮನೆಗೆ ಅತ್ತೆ ಬರುತ್ತಾರೆನ್ನುವ ಸುದ್ದಿ ಬಂತು. ಅತ್ತೆಗೆ ನಾಯಿಯನ್ನು ಕಂಡರಾಗುವುದಿಲ್ಲ. ಬೆಕ್ಕು ಗಿಣಿ ಪರವಾಗಿಲ್ಲ, ಆಗಿಬರುತ್ತವೆ. ನಾಯಿಯನ್ನು ಈಗೇನು ಮಾಡುವುದು? ಎಲ್ಲಿಗೆ ಕಳಿಸುವುದು? ಸುಗುಣಳಿಗೆ ಸಂಕಟ ಶುರುವಾಯಿತು. ಶೇಖರನಿಗೆ ಒಮ್ಮೆಲೇ ಮುಖದಲ್ಲಿ ಸಮಾಧಾನ ಹೊಮ್ಮತೊಡಗಿತು. ಈಗಂತೂ ನಾಯಿಯನ್ನು ಬಿಡದೆ ವಿಧಿಯಿಲ್ಲ. ಸದ್ಯ! ಅಪ್ಪ ಅಮ್ಮ ಆದಷ್ಟು ಬೇಗ ಬರಲಿ. ಅವನ ಆಸೆ ಬೇಗನೆ ಈಡೇರಿಬಿಟ್ಟಿತು! ಮಾರನೇದಿನವೇ ಇಬ್ಬರೂ ಗಂಟುಮೂಟೆ ಸಮೇತ ಬಂದಿಳಿದರು. ಸುಗುಣ ನಾಯಿಯನ್ನು ಹೊರಗೆ ಕಟ್ಟಿ ಹಾಕಿದಳು. ಹೊರಗೇ ಊಟ ಕೊಡತೊಡಗಿದಳು. ಅವರ ಕಣ್ಣಿಗೆ ಬೀಳದಂತೆ ಹೇಗೋ ಮ್ಯಾನೇಜ್ ಮಾಡಿದರೂ ಅವಳ ಅತ್ತೆ ಗೊಣಗತೊಡಗಿದರು.

ಅತ್ತೆ ಮಾವ ವಾಪಸ್ಸು ಹೋಗುವವರೆಗೂ ಇಟ್ಟುಕೊಳ್ಳಿ ಎಂದು ಅಕ್ಕಪಕ್ಕದವರನ್ನು ಬೇಡಿದಳು. ಯಾರೂ ಮನಸ್ಸು ಮಾಡಲಿಲ್ಲ. ಶೇಖರ ಅವತ್ತು ಸಂಜೆ ಯಾರನ್ನೋ ಕರೆತಂದ. 'ಇವರಿಗೆ ನಾಯಿಯೆಂದರೆ ನಿನ್ನ ಹಾಗೆ ಪ್ರಾಣವಂತೆ. ತಗೋತಾರಂತೆ' ಎಂದವನೇ ನಾಯಿಯನ್ನು ತೋರಿಸಿದ. ಜಾತಿ ನಾಯಿಯಲ್ಲವೇ? ಹತ್ತು ಸಾವಿರ ಹಣವನ್ನು ನಗದಾಗಿ ಪಡೆದು, ಶೇಖರ ನಾಯಿಯ ಚೈನನ್ನು ಅವರ ಕೈಗೆ ಕೊಟ್ಟ! ಸುಗುಣಳ ಕಣ್ಣಾಲಿಗಳು ತುಂಬಿನಿಂತವು. ನಿರ್ವಾಹವಿರಲಿಲ್ಲ. ಶೇಖರ ನಿರ್ಭಾವುಕನಾಗಿ ಕೊಟ್ಟುಬಿಟ್ಟನಲ್ಲ ಎಂಬುದು ಸುಗುಣಳ ಮನಸ್ಸನ್ನು ಕಲಕಿತು. ನಾಯಿ ಸುಗುಣಳನ್ನೇ ಕಾರಿನಲ್ಲಿ ಕುಳಿತು ನೋಡುತ್ತಾ ಹೊರಟುಹೋಯಿತು. ಅವಳ ದುಃಖ ಆ ನಾಯಿಗೆ ಮಾತ್ರ ಅರ್ಥವಾಗಿತ್ತು. ಅಗಲಿಕೆಯ ನೋವು ಇಬ್ಬರಲ್ಲೂ ಸಮಾನವಾಗಿತ್ತು.

★★★

ವರ್ಷಗಳುರುಳಿದವು. ಸುಗುಣಳ ಪ್ರಾಣಿ ಪ್ರೀತಿಯೇನೂ ಕಡಿಮೆಯಾಗಲಿಲ್ಲ. ಮಕ್ಕಳನ್ನೂ ಪ್ರಾಣಿಗಳಿಗೆ ಸಮಾನವಾಗೇ ನೋಡಿಕೊಂಡಳೇ ಹೊರತು ಇಬ್ಬರಲ್ಲೂ ಬೇಧವೆಣಿಸಲಿಲ್ಲ. ವಯಸ್ಸಾಗುತ್ತಾ ಬಂದಂತೆ ಅವುಗಳೇ ಇವಳ ಮೆಚ್ಚಿನ ಸಂಗಾತಿಗಳಾದವು. ಮಕ್ಕಳು ದೊಡ್ಡವರಾದಂತೆ ಸುಗುಣ ಚಿಕ್ಕವಳಾಗಿ ಇವುಗಳನ್ನೇ ಹಚ್ಚಿಕೊಂಡಳು. ಇಬ್ಬರು ಮಕ್ಕಳ ಓದು ಮುಗಿದು ಕೆಲಸಗಳಾದವು. ಶೇಖರ ನಿವೃತ್ತನಾಗಿ, ನಿವೃತ್ತಗೊಂಡ ತನ್ನ ಇತರ ಸ್ನೇಹಿತರೊಡನೆ ಕ್ಲಬ್ಬು, ಸಂಘವೆಂದು ಓಡಾಡಿಕೊಂಡು, ಮೊದಲು ಸಂಜೆಗೆ ಮನೆಗೆ ಬರುತ್ತಿದ್ದವನು ಈಗ ರಾತ್ರಿ ಬರತೊಡಗಿದ. ಸುಗುಣಳಿಗೆ ತನ್ನ ಗಿಡಗಳು, ಪ್ರಾಣಿಗಳು ಅಕ್ಕಪಕ್ಕದವರೊಡನೆ ನಾಲ್ಕು ಮಾತು ಬಿಟ್ಟರೆ ಬೇರೊಂದು ಪ್ರಪಂಚವಿರಲಿಲ್ಲ. ಗಂಡ ಮನೆಯಲ್ಲಿದ್ದರೂ ಇರದಿದ್ದರೂ ಅಂತಹ ವ್ಯತ್ಯಾಸವೇನೂ ಅವಳಿಗೆ ಕಾಣುತ್ತಿರಲಿಲ್ಲ. ಅವಳದೇ ಪ್ರಪಂಚದಲ್ಲಿ ಅವಳು ಸುಖವಾಗಿದ್ದಳು.

ಒಮ್ಮೊಮ್ಮೆ ಮಕ್ಕಳು ಅಮ್ಮನನ್ನು ಹೊರಗೆ ಕರೆದುಕೊಂಡು ಹೋಗುತ್ತಿದ್ದರು. ಮಕ್ಕಳ ಸ್ನೇಹಿತರು ಮನೆಗೆ ಬರುತ್ತಿದ್ದರು. ಅವರಿಗೆ ಇವಳು ಮಾಡುವ ಅಡುಗೆ ತಿಂಡಿಗಳೆಂದರೆ ಬಹಳ ಇಷ್ಟವಾಗುತ್ತಿತ್ತು. ಅವರು ಕೇಳಿದ್ದನ್ನೇ ಮಾಡಿ ಬಡಿಸುತ್ತಿದ್ದಳು. ಅದವಳಿಗೆ ಸಂತೋಷದ ವಿಚಾರ.

'ಆಂಟಿ, ನಮಗೋಸ್ಕರ ಎಷ್ಟು ರಿಸ್ಕ್ ತಗೋತೀರಾ. ಪಾಪ ನೀವು'

'ರಿಸ್ಕೂ ಇಲ್ಲ ಏನೂ ಇಲ್ಲ. ಯಾರಿಗೆ ಏನಿಷ್ಟವೋ ಅದನ್ನು ಕೇಳಿ. ನನಗ್ಯಾವ ತೊಂದರೇನೂ ಇಲ್ಲ.' ನಕ್ಕು ಅವರ ಬಾಯನ್ನು ಮುಚ್ಚಿಸುತ್ತಿದ್ದಳು. ಮನೆಯಲ್ಲಿ ತಿಂದುದಲ್ಲದೆ, 'ನಮ್ಮಮ್ಮನಿಗೆ ಹೇಳಿ ಹೀಗೇ ಮಾಡಿಸಿಕೊಂಡು ತಿಂತೇನೆ' ಎನ್ನುತ್ತಾ ಮನೆಗೂ ಕೊಂಡು ಹೋಗುತ್ತಿದ್ದರು. ಊಟ ತಿಂಡಿಗಾಗಿ ಬರುತ್ತಿದ್ದ ಮಕ್ಕಳೆಲ್ಲ ದೊಡ್ಡವರಾಗಿ ಮದುವೆಯ ಆಹ್ವಾನ ಪತ್ರಿಕೆ ಕೊಡಲು ಬರುವ ಹಾಗಾದರು.

ಒಂದುದಿನ ಸುಗುಣ ಗಂಡನಲ್ಲಿ ಮಾತು ತೆಗೆದಳು. 'ರೀ ಮಕ್ಕಳಿಗೆ ಮದುವೆಯ ವಯಸ್ಸಾಗಿದ್ದು ನಿಮಗೆ ಕಾಣಿಸ್ತಿಲ್ವಾ? ಬರೀ ನಿಮ್ಮ ಕ್ಲಬ್ಬು, ಓಡಾಟವೇ ಆಯಿತಲ್ಲ?' ಅಂದಿನಿಂದ ಇಬ್ಬರು ಗಂಡು ಮಕ್ಕಳಿಗೂ ಹೆಣ್ಣು ಹುಡುಕತೊಡಗಿ, ಇಬ್ಬರಿಗೂ ಅಂದವಾದ ಹುಡುಗಿಯರನ್ನು ಹುಡುಕಿ, ಮದುವೆಯೂ ಮಾಡಿ ಜವಾಬ್ದಾರಿ ಕಳೆದುಕೊಂಡು ಆರಾಮವಾದರು. ಸುಗುಣ ಮಕ್ಕಳಿಗೆ ಮದುವೆ ಮಾಡಿದ ಮೇಲೆ ಸಂಪೂರ್ಣವಾಗಿ ಗಿಳಿಮರಿಗಳು ಬೆಕ್ಕು ನಾಯಿಗಳ ಪಾಲನೆಯಲ್ಲೇ ಲೀನವಾದಳು. ಅವುಗಳ ಆರೈಕೆಯಂತೂ ಅವಳ ಪಾಲಿನ ಆಪ್ಯಾಯಮಾನವಾದ ಕೈಂಕರ್ಯ. ಸೊಸೆಯಂದಿರು ತಮಾಷೆ ಮಾಡಿ ನಗುತ್ತಿದ್ದರು.

'ಹಾಗಾದ್ರೆ, ನೀವು ಮಕ್ಕಳನ್ನ ಎಷ್ಟು ಪ್ರೀತಿಯಿಂದ ಸಾಕಿದ್ದೀರಿ ಅಲ್ವಾ? ಅದ್ಯಾಕೆ ಅಮ್ಮಾ ನಿಮಗೆ ಇವುಗಳಂದ್ರೆ, ಇಷ್ಟ್ ಲವ್?'

'ನನಗೀಗ ನೀವೂ ಒಂದೇ. ಇವುಗಳೂ ಒಂದೇ. ನಿಮಗೊಂದಿಷ್ಟು ಪ್ರೀತಿ ಅತ್ತೆ ಮನೆಯಲ್ಲಿ ಸಿಕ್ಕರೆ ಖುಷಿಯಾಗತ್ತೆ ಅಲ್ವಾ? ನಾನು ಪ್ರೀತಿ ತೋರಿಸೋದ್ರಲ್ಲಿ ಯಾರಿಗೂ ಪಕ್ಷಪಾತ ಮಾಡಲ್ಲ.' ಸುಗಣಳ ಮಾತಿಗೆ ನಕ್ಕ ಹಿರಿಸೊಸೆ ಸಂಜನಾ, 'ಅಯ್ಯೋ ಆಂಟಿ, ನಾಯಿಗೆ ತೋರ್ಸೋ ಪ್ರೀತಿ ನನಗಂತೂ ಬೇಡ. ನಮ್ಮನೇಲಿ ನನ್ನನ್ನು ರಾಣಿ ಹಾಗೆ ಸಾಕಿದ್ದಾರೆ.' ಅವಳ ಧ್ವನಿಯಲ್ಲಿ ವ್ಯಂಗ್ಯವಿದೆಯೇ ಎಂಬ ಅನುಮಾನ ಬಂದರು ಸುಗುಣ ನಕ್ಕಳಷ್ಟೆ.

ಎರಡನೆಯವಳು ಸಾಗರಿ, 'ಆಂಟಿ, ನಾಯನ್ನೂ ನನ್ನನ್ನೂ ಒಂದೇ ಅಂತೀರಲ್ಲಾ? ನಾನೇ ಬೇರೆ ನನ್ನ ಸ್ಟೈಲೇ ಬೇರೆ. ನನ್ನ ಅಮ್ಮ ನನಗೆ ಈಗಲೂ ಊಟ ಮಾಡಿಸುತ್ತಾರೆ.' ಸುಗುಣ ನಕ್ಕಳು. ವಿಷಾದವಿತ್ತೇನೋ ನಗುವಿನಲ್ಲಿ.

ಒಂದುದಿನ ಇದ್ದಕ್ಕಿದ್ದಂತೆ ಹಿರಿಮಗ ಕೂಗಿದ, 'ಅಮ್ಮಾ ಬಾಯಿಲ್ಲಿ, ನಿನ್ನ ಹತ್ರ ಏನೋ ಮಾತಾಡ್ಬೇಕು.' ಯಾವತ್ತಿಗೂ ಧ್ವನಿ ಏರಿಸದ ಸುಗುಣಳ ಮಕ್ಕಳು, ಇದೇನು ಇಷ್ಟು ಜೋರಾಗಿ ಸೂರು ಹಾರಿಹೋಗುವಂತೆ ಕೂಗುತ್ತಿದ್ದಾನಲ್ಲಾ ಅನಿಸಿದರೂ ಅಲ್ಲಿಂದ ಇಲ್ಲಿಗೆ ಕೇಳಿಸಬೇಕಲ್ಲ ಎಂದು ತನಗೆ ತಾನೇ ಸಮಜಾಯಿಷಿ ಕೊಟ್ಟುಕೊಂಡು ಅಡುಗೆ ಮನೆಯಿಂದ ಬಂದಳು..

'ಅಮ್ಮಾ, ಸೀರಿಯಸ್ಸಾಗಿ ಹೇಳ್ತೀನಿ. ಇವಿದ್ದಾವಲ್ಲ, ನಿನ್ನ ನಾಯಿ, ಬೆಕ್ಕು ಗಿಳಿ ಎಲ್ಲವನ್ನೂ ಬಿಟ್ಟು ಕಳಿಸಿಬಿಡಮ್ಮಾ. ಅವುಗಳೂ ಸ್ವತಂತ್ರವಾಗಿ ಬದುಕಿಕೊಳ್ಳಲಿ' ಎಂದನು ನಗುತ್ತಿದ್ದರೂ ದೃಷ್ಟಿ ತೀಕ್ಷ್ಣವಾಗಿತ್ತು.

ಯಾಕೋ ಗರಮ್ ಆಗಿದ್ದಾನೆ ಅನಿಸಿದರೂ, ತನ್ನ ಮಾತನ್ನೂ ನುಡಿದಳು.

'ನಿನಗೆ ಅವು ಏನೂ ತೊಂದರೆ ಕೊಡುವುದಿಲ್ಲ. ಅವುಗಳ ಪಾಡಿಗೆ ಅವಿರುತ್ತವೆ. ಮೊದಲಿನಿಂದಲೂ ಇದ್ದಾವೆ ತಾನೇ? ಈಗೇನು ನಿನ್ನ ಹೊಸರಾಗ?'

ಅವಳ ಧ್ವನಿಯಲ್ಲಿ ಹರಿತಗೊಂಡ ಚಾಕುವಿನ ಅಲಗಿತ್ತು. ತಾನವುಗಳನ್ನು ಕಳಿಸುವುದಿಲ್ಲ ಎಂಬುದನ್ನು ಖಡಾ ಖಂಡಿತವಾಗಿ ನುಡಿದಳು. ಮುಂದೆ ಮಾತನಾಡಲು ಮಗನಿಗೂ ಏನೂ ಉಳಿದಿರಲಿಲ್ಲ. ಆದರೆ ಅವನಿಗೆ ಬಂದ ಕೋಪ ಅವನ ಕಣ್ಣಿನಲ್ಲಿ ಪ್ರಕಟವಾಗಿತ್ತು. ಸುಗುಣ ಅಕಸ್ಮಾತ್ ಇಲ್ಲದಿದ್ದರೆ ಮನೆಯಲ್ಲಿದ್ದವರಾರೂ ಪಾಪ, ಅವುಗಳನ್ನು ಕ್ಯಾರೇ ಎನ್ನುತ್ತಿರಲಿಲ್ಲ. ಹಸಿದು ಆರ್ತವಾಗಿ ಮುಖ ನೋಡುತ್ತಿದ್ದರೂ ಗಮನಿಸದಂತೆ ಓಡಾಡುತ್ತಿದ್ದರು.

ಇನ್ನೊಮ್ಮೆ ಕಿರಿಯಮಗ,

'ಅಮ್ಮಾ, ಇವುಗಳ ಜೊತೆಗೆ ಒಂದು ಕೋತಿಯನ್ನೂ ಸಾಕಿಕೊಳ್ಳಮ್ಮ. ಚೆನ್ನಾಗಿರುತ್ತೆ'

ಅವನ ವ್ಯಂಗ್ಯ ಅರ್ಥವಾದರೂ, ಸುಗುಣ, 'ಹೌದು ಕಣೋ. ಸಿಕ್ಕಿದ್ದರೆ ಅದನ್ನೂ ಸಾಕಬಹುದಿತ್ತು. ಈಗಲೂ ಕಾಲ ಮಿಂಚಿಲ್ಲ. ಎಲ್ಲಾದರೂ ಸಿಕ್ಕರೆ ತಂದುಕೊಡು ಸಾಕೋಣ' ಕಿಂಚಿತ್ತೂ ಅಳುಕದೇ ಉತ್ತರಿಸಿದ್ದಳು. ಮೊದಲೆಲ್ಲ ಅವುಗಳನ್ನು ವಿಶೇಷವಾಗಿ ಪ್ರೀತಿ ಮಾಡದಿದ್ದರೂ, ಆಗೊಮ್ಮೆ ಈಗೊಮ್ಮೆ ಇಬ್ಬರೂ ಮಾತಾಡಿಸುತ್ತಿದ್ದರು. ಅವುಗಳ ಗೊಡವೆಗೇನೂ ಹೋಗುತ್ತಿರಲಿಲ್ಲ. ಆದರೆ ಈಗ? ಹೆಂಡತಿಯರ ಚಿತಾವಣೆ ಇದೆಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳದಷ್ಟು ಮುಗ್ಧೆಯಲ್ಲ ಸುಗುಣ. ಶೇಖರನಂತೂ ಈಗ ಮನೆಯ ಯಾವ ವಿಷಯಕ್ಕೂ ತಲೆ ಹಾಕುವುದೇ ಇಲ್ಲ.

★★★

ಮನೆಯಲ್ಲೀಗ ಹೊಸಜೀವದಾಗಮನದ ಸಂಭ್ರಮ. ಇಬ್ಬರಿಗೂ ಮಕ್ಕಳ ಭಾಗ್ಯ ಒದಗಿಬಂದು ಮನೆಯಲ್ಲಿ ಮಗುವಿನ ಕೇಕೆ ಶುರುವಾಗಿದೆ. ಸುಗುಣಳಿಗಂತೂ ಹೇಳತೀರದ ಆನಂದ. ಮಕ್ಕಳ ಆರೈಕೆ ಮಾಡಲು ಸುಗುಣ ತುದಿಗಾಲಲ್ಲಿ ನಿಂತಿದ್ದಳು. ಎರಡು ಮಕ್ಕಳು; ಮುದ್ದಾಗಿವೆ. ಎತ್ತಿಕೊಂಡು ಆಟವಾಡಿಸುವುದು, ಅವುಗಳಿಗೆ ಮಮ್ಮು ತಿನ್ನಿಸುತ್ತೇನೆನ್ನುವುದು, ಆಚೆಗೆ ಎತ್ತಿಕೊಂಡು ಹೋಗಿ ಕುಳಿತುಕೊಳ್ಳುವುದು ಹೀಗೆ ತನ್ನೆಲ್ಲ ಆಸೆಗಳನ್ನು ಸುಗುಣ ಸಂತೋಷದಿಂದ ಈಡೇರಿಸಿಕೊಂಡು ತಾನೂ ಸಂತಸದಿಂದ ಮಗುವಾಗಿಬಿಡುತ್ತಿದ್ದಳು. ಗಿಳಿಗಳು ಅವಳ ಹೆಗಲೇರಿದಾಗ ಮಕ್ಕಳಿಗೆ ತೋರಿಸಿ ಖುಷಿಪಡಿಸುತ್ತಿದ್ದಳು, ನಾಯಿಯ ಕೈಲಿ ಶೇಕ್ ಹ್ಯಾಂಡ್ ಮಾಡಿಸುತ್ತಿದ್ದಳು. ಬೆಕ್ಕು ಹತ್ತಿರ ಕುಳಿತರೆ ಅದರ ಮೈ ಸವರಿಸುತ್ತಿದ್ದಳು. ಮಕ್ಕಳು ಅವಳ ಎರಡೂ ತೊಡೆಗಳಲ್ಲಿ ರಾರಾಜಿಸಿಕೊಂಡು ಖುಷಿಯಾಗಿ ಕೇಕೆ ಹಾಕುತ್ತಿದ್ದವು.

ಇಬ್ಬರೂ ಸೊಸೆಯರು ಮದ್ಯಾಹ್ನದ ಹೊತ್ತು ಮಕ್ಕಳಿಗೆ ಸ್ನಾನ ಮಾಡಿಸಿ ಆಚೆ ಕರೆದುಕೊಂಡು ಬಂದರು. ಮಕ್ಕಳ ಆರೈಕೆ ಅಂದಚಂದವನ್ನು ತೀಡಿ ಮಲಗಿಸಿದರು. ಮಕ್ಕಳು ಚೆನ್ನಾಗಿ ನಿದ್ದೆ ಮಾಡುತ್ತಿದ್ದವು. ಒಮ್ಮೆ ಸ್ನಾನ ಮಾಡಿಸಿ ಮಗುವನ್ನು ಹೊರಗೆ ಎತ್ತಿಕೊಂಡು ಬರುವಾಗ ಹಿರಿಸೊಸೆ, 'ದಿನವೂ ಇದೊಂದು ಕರ್ಮ' ಎಂದು ಗೊಣಗುತ್ತಲೇ ರೂಮಿಗೆ ಹೋದಳು. ಮಾರನೇದಿನ ಕಿರಿಸೊಸೆ ಸ್ನಾನ ಮಾಡಿಸಿಕೊಂಡು ತರುವಾಗ ಮುಖವನ್ನು ಊದಿಸಿಕೊಂಡು ಹುಬ್ಬು ಗಂಟಿಕ್ಕಿಕೊಂಡು ಬರುತ್ತಿದ್ದಳು. ಇದು ಹೀಗೇ ಪದೇ ಪದೇ ಆಗುವಾಗ ಅದೂ ಸುಗುಣಳ ಮುಂದೆಯೇ ಇದೆಲ್ಲ ನಡೆವಾಗ ಯಾಕೆ ಏನಾಯಿತೆಂಬ ಪ್ರಶ್ನೆ ಉದ್ಭವಿಸಿತು ಅವಳ ಎದೆಯೊಳಗೆ. ಗಂಡನಂತೂ ತನ್ನ ತಂಟೆಗೇ ಬರುವುದಿಲ್ಲ. ಆದರೂ ಸುಗುಣ ರಾತ್ರಿ ಅವನೊಂದಿಗೆ ಮಾತಿಗಿಳಿದು ಮನೆಯಲ್ಲಿ ನಡೆಯುತ್ತಿರುವ ಸ್ನಾನದ ವೃತ್ತಾಂತವನ್ನೆಲ್ಲ ಹೇಳಿದಳು.

'ದಡ್ಡಿ, ನಿನಗಷ್ಟೂ ಅರ್ಥವಾಗಲಿಲ್ಲವಾ? ನೀನು ನಿನ್ನ ಪ್ರಾಣಿಗಳ ಸಹವಾಸದಲ್ಲಿರುತ್ತೀಯಾ. ಮಕ್ಕಳಿಗೂ ಏನಾದರೂ ಅಂಟುರೋಗ ಹತ್ತಿಕೊಳ್ಳಬಹುದೆಂಬ ಹೆದರಿಕೆಯಲ್ಲಿ ಹಾಗೆ ಮಾಡುತ್ತಿದ್ದಾರೆ.'

ಸುಗುಣಳ ಬಾಯಿ ಕಟ್ಟಿತು. ಏನು ಉತ್ತರ ಹೇಳಿಯಾಳು? ಎದೆಯೊಳಗೆ ಒನಕೆ ಕುಟ್ಟಿದ ಹಾಗೆ. ಹಾಗಾದರೆ ತಾನು ಮಕ್ಕಳನ್ನು ಆಡಿಸುವುದು ಅವರಿಗಿಷ್ಟವಿಲ್ಲವೇ?

ಮಾರನೇ ದಿನ ಮಾತಿನ ಬಾಣವೊಂದು ಅವಳಿಗೇ ಗುರಿಯಿಟ್ಟು ನೆಗೆದುಬಂತು. 'ಆಂಟಿ, ನಿಮಗೇಕೆ ಮಕ್ಕಳನ್ನು ಆಡಿಸುವ ತೊಂದರೆ? ಸುಮ್ಮನೆ ಇರಬಾರದೇ? ನಮಗೂ ಡಬ್ಬಲ್ ಕೆಲಸ' ಸುಗುಣ ಸುಮ್ಮನೆ ಮುಖ ನೋಡಿದಳು. ಅಂದಿನಿಂದ ಮಕ್ಕಳು ಹತ್ತಿರ ಬಂದರೂ ಎತ್ತಿಕೊಳ್ಳಲು ಹಿಂದೆಗೆಯತೊಡಗಿ, ಮಕ್ಕಳ ಬಳಿ ಸುಳಿಯುವುದನ್ನೇ ಬಿಟ್ಟುಬಿಟ್ಟಳು. ಅವಳಿಗೆ ಯೋಚನೆಯೊಂದು ಸುಳಿದಾಡತೊಡಗಿ, ಮೊಮ್ಮಕ್ಕಳಿಗಿಂತ ಈ ಪ್ರಾಣಿಗಳು ಹೆಚ್ಚೇ? ಕಳಿಸಿಬಿಡೋಣ ಅನಿಸಿತು. ಮರುಕ್ಷಣವೇ ಅವುಗಳಿಲ್ಲದ ನನ್ನ ಜೀವನ, ನಾನಿಲ್ಲದ ಅವುಗಳ ಜೀವನ ಅದೆಷ್ಟು ದುಸ್ತರವೆಂದು ಯೋಚಿಸುತ್ತಲೇ, 'ಮಕ್ಕಳಿಗೆ ಅವರ ಅಪ್ಪ ಅಮ್ಮನಿದ್ದಾರೆ. ಪಾಪ! ಇವುಗಳಿಗ್ಯಾರಿದ್ದಾರೆ?' ಬಿಟ್ಟು ಕಳಿಸುವ ಯೋಚನೆಯನ್ನು ಕೈಬಿಟ್ಟಳು.

ಆರೇಳು ತಿಂಗಳು ಕಳೆದು ಮಕ್ಕಳು ಸ್ವಲ್ಪ ಬೆಳೆದರು. ನಾಯಿ ಬೆಕ್ಕುಗಳನ್ನು ಹುಡುಕಿಕೊಂಡು ತೆವಳುತ್ತ, ಅಂಬೆಗಾಲಿಕ್ಕುತ್ತ ಹೋಗಿ ಮಾತಾಡಿಸುವ ಹಾಗಾದರು. ಒಂದುದಿನ ಸುಗುಣ ಬೆಳಗ್ಗೆ ಬಾಗಿಲಿಗೆ ನೀರು ಹಾಕಿ, ಗಿಡಗಳಿಗೆ ನೀರುಣಿಸಿ ಒಳಗೆ ಬಂದಳು. ಎರಡೂ ಹಸುಳೆಗಳು ಗಿಳಿಯನ್ನು ಹಿಡಿದುಕೊಂಡು ಎಳೆದಾಡುತ್ತಿದ್ದರು. ಇದನ್ನು ಸಂಜನಾ ನೋಡುತ್ತ ನಗುತ್ತಿದ್ದಳು. ಸುಗುಣ ಓಡಿ ಹೋಗಿ ಗಿಳಿಯನ್ನು ಬಿಡಿಸಿದಳು. ಇನ್ನೊಮ್ಮೆ ಮಕ್ಕಳು ಚಪ್ಪಲಿಯ ಹತ್ತಿರ ಹೋಗಿವೆ. ನಾಯಿ ಅಲ್ಲೇ ಕುಳಿತಿದೆ. ಒಂದು ಮಗು ಬೂಟು ತೆಗೆದುಕೊಂಡು ನಾಯಿಯ ಮುಖಕ್ಕೆ ಪುಟ್ಟ ಕೈಗಳಿಂದ ಹೊಡೆಯುತ್ತಿದೆ. ಇನ್ನೊಂದು ಪಾಪು ಬಾಲವನ್ನು ಎಳೆದಾಡುತ್ತಿದೆ. ನಾಯಿ ಬಿಡಿಸಿಕೊಳ್ಳಲಾರದೆ ಸುಮ್ಮನೆ ಕುಳಿತಿದೆ. ಸುಗುಣಳೇ ಮತ್ತೆ ನಾಯಿಯ ಸಹಾಯಕ್ಕೆ ಬಂದಳು. ಇಂತಹ ಅನೇಕಾನೇಕ ಮಕ್ಕಳ ಚೇಷ್ಟೆಗಳು ಕಣ್ಣ ಮುಂದೆ ನಡೆಯುತ್ತಿರುವಾಗ ಅದನ್ನು ಆನಂದಿಸುವ ಅವರ ತಾಯಂದಿರು! ಸುಗುಣ ಇದನ್ನೇ ಚಿಂತಿಸಿ ಚಿಂತಿಸಿ ಕುಗ್ಗಿ ಹೋಗಿದ್ದಾಳೆ. ಪರಿಹಾರ ಅವಳ ಬಳಿ ಇಲ್ಲ.

ಇನ್ನೊಂದುದಿನ ಹೃದಯವಿದ್ರಾವಕವಾದ ಘಟನೆ ಇನ್ನೇನು ನಡೆಯಲಿತ್ತು. ಮಗುವಿನ ಕೈಗೆ ಅದು ಹೇಗೆ ಸ್ಕ್ರೂ ಡ್ರೈವರ್ ಬಂದಿತ್ತೋ ಯಾರು ಕಾಣರೇನೋ. ಅಥವಾ ಅದರ ತಾಯಿಯೇ ಕೊಟ್ಟಿದ್ದರೂ ಕೊಟ್ಟಿರಬಹುದು. ಮಗು ನಾಯಿಯ ಮೈಗೆ ಅದರಿಂದ ಚುಚ್ಚುತ್ತಿದ್ದುದಲ್ಲದೆ, ಕಣ್ಣಿಗೂ ಚುಚ್ಚಲು ಪ್ರಯತ್ನಿಸುತ್ತಿತ್ತು. ಎಲ್ಲರೂ ಅಲ್ಲೇ ಇದ್ದರೂ ಯಾರೂ ಅದರ ಕೈಯ್ಯಿಂದ ಸ್ಕ್ರೂಡ್ರೈವರನ್ನು ಕಿತ್ತುಕೊಳ್ಳಲಿಲ್ಲ. ಗಮನವೇ ಇಲ್ಲದಂತೆ ಸುಮ್ಮನೆ ಅವರವರ ಮಾತುಕತೆಯಲ್ಲಿ ತೊಡಗಿದ್ದಾರೆ. ಸ್ನಾನ ಮುಗಿಸಿ ಬಂದ ಸುಗುಣ ಈ ಸನ್ನಿವೇಶವನ್ನು ನೋಡಿದವಳೇ ಮಗುವಿನ ಕೈಯ್ಯಿಂದ ಅದನ್ನು ಕಿತ್ತೆಸೆದಳು. ನಾಯಿ ಎದ್ದುನಿಂತು ಇವಳ ಕಾಲ ಬಳಿ ಬಂದಿತು. ಇದೇತರ ಗಿಳಿಯನ್ನು ಎಳೆದಾಡಿ ಎಳೆದಾಡಿ ಮಕ್ಕಳು ರೆಕ್ಕೆಯನ್ನು ಮುರಿದಿದ್ದವು.

ರಾತ್ರಿ ಮೆಟ್ಟಿಲ ಮೇಲೆ ಕುಳಿತ ಸುಗುಣಳ ಕಣ್ಣುಗಳಿಂದ ನೀರು ದಳದಳನೆ ಹರಿದು ಹೋಗುತ್ತಿತ್ತು. ತಾನು ಈ ಪ್ರಾಣಿಗಳನ್ನು ಪ್ರೀತಿಸಿದ್ದು ತಪ್ಪೇ? ಮೂಕ ಪ್ರಾಣಿಗಳು ಅನುಭವಿಸುವ ಹಿಂಸೆಯನ್ನು ಆನಂದಿಸುವ ಇವರೆಂತಹ ವಿಕೃತ ಮನಸ್ಸಿನವರು. ನಾಯಿಯೂ ಅವಳ ಪಕ್ಕದಲ್ಲೇ ಕುಳಿತಿತ್ತು. ಅದರ ಬೆನ್ನು ಸವರುತ್ತಾ ಕುಳಿತಿದ್ದವಳಿಗೆ ಬೆಕ್ಕಿನ ಆರ್ತನಾದ ಕೇಳಿಸಿತು. ಸುಡುವ ಹಾಲಿಗೆ ಬಾಯಿ ಹಾಕಿ ಮಿಯಾವ್ ಎಂದು ಅರಚಿಕೊಳ್ಳುವ ಅದರ ವೇದನೆಗೆ ಅವಳ ಮನ ಮರುಗಿತು. ತಾನು ತಣ್ಣಗಿನ ಹಾಲು ಹಾಕಿದ್ದರೆ ಅದನ್ನು ಚೆಲ್ಲಿ ಬಿಸಿ ಹಾಲನ್ನು ಹಾಕುವ ಸೊಸೆಯರ ಅಟ್ಟಹಾಸವೂ ತಿಳಿದಿತ್ತು. ಕೇಳಿದರೆ ಜಗಳ ಶುರು. ಮೌನವನ್ನೇ ಹೊದ್ದು ಕೂರುತ್ತಾಳೆ ಸುಗುಣ.

ಇಂದವಳ ಮನಸ್ಸು ಒಂದು ನಿರ್ಧಾರಕ್ಕೆ ಬಂದಿತ್ತು.

ಬೆಳಗ್ಗೆ ಎದ್ದವಳೇ ಎಲ್ಲವನ್ನು ಕರೆದುಕೊಂಡು ಸುಮಾರು ದೂರ ನಡೆದಳು. ಒಂದು ತೋಪಿನ ಬಳಿಗೆ ಹೋಗಿ ಗಿಳಿಗಳನ್ನು ಹಾರಿಬಿಟ್ಟಳು. ಕಂಡರಿಯದ ಬೀದಿಯಲ್ಲಿ ನಾಯಿ, ಬೆಕ್ಕುಗಳಿಗೆ ವಿದಾಯ ಹೇಳಿ ಬರಿಗೈಲಿ ಮನೆಗೆ ವಾಪಸ್ಸಾದಳು. ಅವಳನ್ನು ಯಾರೂ ಏನು ಪ್ರಶ್ನಿಸಲಿಲ್ಲ. ಮನೆಯಲ್ಲಿ ಏನೂ ವ್ಯತ್ಯಯವಾಗಿಲ್ಲವೆಂಬಂತೆ ಓಡಾಡುತ್ತಿದ್ದ ಅವರನ್ನು ಕಂಡು ಸುಗುಣ ಕೃದ್ಧಳಾದಳು. ಆದರೊಂದು ಸಮಾಧಾನ, ಇನ್ನು ಮುಂದೆ ನನ್ನ ಪ್ರಾಣಿಗಳು ಸುಖವಾಗಿರುತ್ತವೆ!

ಸ್ವಾತಂತ್ರ್ಯೋತ್ತರ ಕಾಲದ ಸಣ್ಣ ಕಥೆಗಳು

» ಶ.ಹಾ.

ಮುಖ್ಯವಾಗಿ ನಮ್ಮ ದೇಶವು ಸ್ವತಂತ್ರಗೊಂಡ ನಂತರ ಕನ್ನಡದಲ್ಲಿ ಹೊರಬಂದ ಸಣ್ಣಕಥೆಗಳು ಮತ್ತು ಕಿರುಗತೆಗಳು ಈ ಸಂಕಲನದಲ್ಲಿದ್ದು, ಸುಲಭ ಓದಿಗೆ ದಕ್ಕುವ ಸಮಯದಲ್ಲೇ, ಗಂಭೀರ ಅಧ್ಯಯನಕ್ಕೂ ಸೂಕ್ತ ಎನಿಸಿವೆ.

ಕನ್ನಡದ ಸಣ್ಣಕಥೆಗಳಿಗೆ ಮತ್ತು ಕಿರುಕಥೆಗಳಿಗೆ ಒಂದು ಪರಂಪರೆಯಿದೆ. ಅವುಗಳ ಬೆಳವಣಿಗೆಯನ್ನು ಗುರುತಿಸುವುದು ಮತ್ತು ಓದುವುದಕ್ಕೆ ಸೂಕ್ತವಾಗುವಂತೆ, ಕಳೆದ 75 ವರ್ಷಗಳಲ್ಲಿ ಹೊರಬಂದ ಕಿರು ಕಥೆಗಳನ್ನು ಆಯ್ದು ಈ ಸಂಕಲನವನ್ನು ರೂಪಿಸಲಾಗಿದೆ. ಸಾಹಿತಿ, ಪ್ರಕಾಶಕ ಮತ್ತು ಸಾಹಿತ್ಯಪರಿಚಾರಕರಾಗಿರುವ ನಿಡಸಾಲೆ ಪುಟ್ಟಸ್ವಾಮಯ್ಯ ಅವರ 75ನೆಯ ಜನ್ಮದಿನದ ಸಂಭ್ರಮದ ಸವಿನೆನಪಿಗಾಗಿ ಈ ಸಂಕಲನ ಹೊರಬಂದಿದ್ದು, ಕನ್ನಡ ಕಿರುಕಥೆಗಳನ್ನು ಓದಲು ಬಯಸುವವರಿಗೆ ಒಂದು ಉತ್ತಮ ಸಂಗ್ರಹವಾಗಿ ರೂಪುಗೊಂಡಿದೆ. ಶಾಂತಿನಾಥ ದೇಸಾಯಿ, ಬೆಸಗರಹಳ್ಳಿ ರಾಮಣ್ಣ, ದೇವನೂರ ಮಹಾದೇವ, ಪೂರ್ಣಚಂದ್ರ ತೇಜಸ್ವಿ, ಪಿ.ಲಂಕೇಶ್, ಕುಂ.ವೀ., ಮಲ್ಲೇಪುರಂ ವೆಂಕಟೇಶ್, ಬಿ. ಜನಾರ್ದನ ಭಟ್ ಮೊದಲ್ಗೊಂಡು, ಹೊಸತಲೆಮಾರಿನ ಹಲವು ಲೇಖಕರು ರಚಿಸಿರುವ ಕಿರುಕಥೆಗಳು ಇಲ್ಲಿವೆ. ಇಲ್ಲಿನ ಕಥೆಗಳನ್ನು ಓದುತ್ತಾ ಹೋದಂತೆ, ಸಣ್ಣಕಥೆಗಳ ಬೆಳವಣಿಗೆ, ಅದರಲ್ಲೂ ಕಿರಿದು ಎನಿಸುವ ಸಣ್ಣಕಥೆಗಳ ವ್ಯಾಪಕ ಪರಿಚಯವಾದೀತು; ಕಳೆದ 75 ವರ್ಷಗಳಲ್ಲಿ ಪ್ರಕಟವಾದ ಕಥೆಗಳನ್ನು ಗಮನದಲ್ಲಿಟ್ಟುಕೊಂಡಿರುವುದರಿಂದ, ಅದಕ್ಕೂ ಹಿಂದಿನ ಕಥೆಗಳು ಇಲ್ಲಿಲ್ಲ.

''ಕನ್ನಡ ಸಣ್ಣಕಥೆಗಳ, ಕಿರುಗತೆಗಳ ಬೆಳವಣಿಗೆ ಹಾಗೂ ಅವುಗಳ ವಸ್ತುವೈವಿಧ್ಯತೆಯ ಹಿನ್ನೆಲೆಯಲ್ಲಿ 75 ಕಿರುಗತೆಗಳನ್ನು ಆಯ್ದು ಪ್ರಸ್ತುತ ಸಂಕಲವನ್ನು ರೂಪಿಸಲಾಗಿದೆ. ಈ ಕಿರುಗತೆಗಳು ಮುಖ್ಯವಾಗಿ 1950 ರಿಂದ 2025ರ ನಡುವೆ ಪ್ರಕಟವಾದ ಕಥೆಗಳಾಗಿವೆ. ಇದಕ್ಕಾಗಿ ಸುಮಾರು ನಾನೂರು ಕಥೆಗಳವರೆಗೂ ನಾನು ಓದಿರಬಹುದು. ನನ್ನ ನಲ್ವತ್ತು ವರ್ಷಗಳಿಗೂ ಹೆಚ್ಚು ಕಾಲದ ಕನ್ನಡದ ಸಣ್ಣಕಥೆಗಳ ಅಭ್ಯಾಸದಿಂದ ಈ ಆಯ್ಕೆ ನನಗೆ ಸಾಧ್ಯವಾಗಿದೆ. ಈ ಕಥೆಗಳನ್ನು ನಾನು ಅವುಗಳ ವಸ್ತು, ಮಿತಪಾತ್ರಗಳು, ಮಿತ ಘಟನೆಗಳು, ಸಂಕ್ಷಿಪ್ತತೆ, ನಿರೂಪಣೆ, ಭಾಷೆ, ಪರಿಣಾಮ, ಬಹುತ್ವ ಇತ್ಯಾದಿ ಗುಣಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಆಯ್ಕೆ ಮಾಡಿದ್ದೇನೆ. ನಾನು ಇಲ್ಲಿರುವ ಪ್ರತಿಯೊಂದು ಕಥೆಯನ್ನೂ ವಿವರವಾಗಿ ವಿಶ್ಲೇಷಣೆ ಮಾಡಲು ಹೋಗಿಲ್ಲ. ಹೋದರೆ ಅದಕ್ಕೆ ಬೇರೆಯದೇ ಆದ ಒಂದು ಪುಸ್ತಕ ಬರೆಯಬೇಕಾಗಬಹುದು. ಆ ಅವಕಾಶವನ್ನು ಓದುಗರಿಗೇ ಬಿಟ್ಟಿದ್ದೇನೆ. ಆದರೆ ಸೂಕ್ಷ್ಮವಾಗಿ ಈ ಘಟ್ಟದ ಕಥೆಗಳ ವಸ್ತುಗಳ ಬಗ್ಗೆ ಹೇಳುವುದಾದರೆ, ಜಾತಿ, ಧರ್ಮ, ಮದುವೆ, ಬಡತನ, ಬಹಿಷ್ಕಾರ, ಅಸ್ಪೃಶ್ಯತೆ, ಅಸಮಾನತೆ, ಸ್ತ್ರೀಯರು, ಮಕ್ಕಳು, ದಾಂಪತ್ಯ, ಕುಟುಂಬ, ಸಂಬಂಧ, ಅವಮಾನ, ದ್ವೇಷ, ಕ್ರೌರ್ಯ, ಶೋಷಣೆ, ಕೃಷಿ, ಪರಿಸರ, ಪಕ್ಷಿ, ಅಭದ್ರತೆ, ಜಮೀನ್ದಾರಿಕೆ, ಸಣ್ಣತನ, ಸ್ವಾರ್ಥ, ದುರಾಸೆ, ಲೋಲುಪತೆ, ಮಾನವೀಯತೆ, ಜೀವನ ಪ್ರೀತಿ, ಕಾರುಣ್ಯ -ಹೀಗೆ ಹತ್ತಾರು ಬದುಕಿನ ವಿಷಯಗಳಿಗೆ ಇಲ್ಲಿನ ಕಿರುಗತೆಗಳು ಮುಖ್ಯ ಭಿತ್ತಿಯಾಗಿವೆ; ಇವು ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಅನನ್ಯತೆಗಳಾಗಿಯೂ ಮೈದಾಳಿವೆ. ಮನುಕುಲವು ನಿರಂತರವಾಗಿ ಹಂಬಲಿಸುವ ಎಲ್ಲಾ ಕಾಲದ ಮೌಲ್ಯಗಳಾದ ಸಮಾನತೆ, ಸೋದರತ್ವ, ಸಹಿಷ್ಣುತೆ, ಸ್ವಾತಂತ್ರ್ಯ, ಜಾತ್ಯತೀತತೆ ಹಾಗೂ ಮನುಷ್ಯತ್ವದ ಘನತೆಗಾಗಿ ತುಡಿದಿವೆ.''
(ಪ್ರಸ್ತಾವನೆಯಲ್ಲಿ ಡಾ. ಕರಿಗೌಡ ಬೀಚನಹಳ್ಳಿ).

ಅಮೃತ ಕಥಾನಕ
ಸಂ: ಡಾ. ಕರಿಗೌಡ ಬೀಚನಹಳ್ಳಿ
ಪ್ರ: ಗೀತಾಂಜಲಿ ಪಬ್ಲಿಕೇಷನ್ಸ್
ಬೆಂಗಳೂರು
9118191589
ಬೆಲೆ ರು.400/-



ಈ ಕಥಾ ಸಂಕಲನಕ್ಕೆ ಆಯ್ಕೆ ಮಾಡಿದ ಕಥೆಗಳು ರಚನೆಗೊಂಡ ಕಾಲದ ವ್ಯಾಪ್ತಿಯನ್ನು ಗಮನಿಸಿದರೆ, ಇವೆಲ್ಲವೂ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ರಚನೆಗೊಂಡವು. ಈ ಹಿನ್ನೆಲೆಯಲ್ಲಿ, ಸ್ವತಂತ್ರ ಪೂರ್ವ ಕಥೆಗಳನ್ನು ಮತ್ತು ಸ್ವಾತಂತ್ರ್ಯೋತ್ತರ ಕಥೆಗಳನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸಿದರೆ, ಕಥೆಗಳ ಆಶಯ, ಧೋರಣೆ, ರಚನಾಕ್ರಮಗಳ ವಿಚಾರವಾಗಿ ಹಲವು ಕುತೂಹಲಕಾರಿ ಅಂಶಗಳು ಕಂಡುಬರಬಹುದು. ಈ ನಿಟ್ಟಿನಲ್ಲಿಯೂ ಈ ಕಥಾಸಂಕಲನವನ್ನು ಗಮನಸಿವು ಅವಶ್ಯಕತೆಯಿದೆ. ಗಂಭೀರ ಅಧ್ಯಯನಕ್ಕೂ ಒದಗಿಬರಬಲ್ಲ ಈ ಕಥಾ ಸಂಕಲನವು, ಜನಸಾಮಾನ್ಯ(ಲೇಮ್ಯಾನ್) ಓದುಗರಿಗೂ ಉತ್ತಮ ಕಥೆಗಳ ಸುಗ್ರಾಸ ಭೋಜನವನ್ನೇ ಒದಗಿಸುವುದು ವಿಶೇಷ. ಹೆಚ್ಚಿನ ಕಥೆಗಳು ಕಿರಿದಾದ ಗಾತ್ರ ಹೊಂದಿರುವುದರಿಂದ, ಅಂತಹ ಕಥೆಗಳನ್ನು ಇಷ್ಟಪಡುವವರಿಗೂ ಈ ಸಂಕಲನ ಬಹಳ ಇಷ್ಟವಾದೀತು!

ಪ್ರಕೃತಿ ಚಿತ್ರಗಳು

ಮೊದಲ ಪುಟದಿಂದ

ವನ್ಯಜೀವಿ ಅಭಯಾರಣ್ಯಗಳಲ್ಲಿನ ಹಸಿರು ನೋಟಗಳ ರೋಮಾಂಚಕ ವರ್ಣಗಳು ಕೇವಲ ದೃಶ್ಯ ಹಬ್ಬವಲ್ಲ; ಅವು ನಮ್ಮ ಅಸ್ತಿತ್ವದ ಬೇರುಗಳೊಂದಿಗೆ ಮರುಸಂಪರ್ಕಿಸಲು, ಪ್ರಕೃತಿ ಉದಾರವಾಗಿ ನೀಡುವ ಪ್ರಶಾಂತ ಸೌಂದರ್ಯವನ್ನು ಸ್ವೀಕರಿಸಲು ಆಹ್ವಾನವಾಗಿದೆ. ಎಲೆಗಳಿಂದ ಕೂಡಿದ ಹಾದಿಗಳಲ್ಲಿ ನಾವು ಮೃದುವಾಗಿ ನಡೆಯುತ್ತಿದ್ದಂತೆ, ನಾವು ಕೇವಲ ವೀಕ್ಷಕರಲ್ಲ, ಆದರೆ ಕಾಡಿನ ಹೃದಯದಲ್ಲಿ ಹಸಿರು ನೋಟಗಳ ಆಕರ್ಷಕ ಸೌಂದರ್ಯದಿಂದ ಸುತ್ತುವರೆದಿರುವ ಜೀವನದ ಶಾಶ್ವತ ನೃತ್ಯದಲ್ಲಿ ಭಾಗವಹಿಸುವವರಾಗುತ್ತೇವೆ.

ಇದೊಂದು ಅಚ್ಚರಿಯ ಪರಿಕಲ್ಪನೆ. ಎಲ್ಲೆಲ್ಲೋ ಇದ್ದು, ತಾವಾಯ್ತು ತಮ್ಮ ಕೆಲಸವಾಯ್ತು ಎಂದು ಬದುಕುವ ಜೀವಿಗಳನ್ನು, ಸಸ್ಯ ಸಂಕುಲಗಳನ್ನು ಕ್ಯಾನ್ವಾಸ್ ಮೇಲೆ ನೋಡುವುದು ಖುಷಿ ಕೊಡುವ ಸಂಗತಿ. ಮಲೆನಾಡಿನ ಶಿವಮೊಗ್ಗ ಜಿಲ್ಲೆಯಿಂದ ಹುಬ್ಬಳ್ಳಿಗೆ ಬಂದು ನೆಲೆಸಿ ಮಲೆನಾಡಿನ ಪರಿಸರದ ಪ್ರಮುಖ ಅಂಶಗಳನ್ನೇ ವಸ್ತು ವಿಷಯವಾಗಿಸಿಕೊಂಡು ಚಿತ್ರ ರಚಿಸುವ ಕಲಾವಿದ ಪ್ರಶಾಂತ್ ಅಡೂರ್ ಅವರ ಕಲಾಕೃತಿಗಳು ಈಗಾಗಲೇ ಸಾಕಷ್ಟು ಕಡೆಗಳಲ್ಲಿ ಪ್ರದರ್ಶನಗೊಂಡಿವೆ.

ಸಾಂಪ್ರದಾಯಿಕ ಚಿತ್ರಕಲಾ ಶೈಲಿ ಮತ್ತು ನವ್ಯ ಕಲಾ ತಂತ್ರಗಳನ್ನು ಉಪಯೋಗಿಸಿಕೊಂಡು ಕಲಾಕೃತಿಗಳನ್ನು ರಚಿಸುವ ಅಡೂರ್ ಅವರ ಕಲಾಕೃತಿಗಳು ನೋಡುಗನ ಜೊತೆ ಪ್ರಕೃತಿಯ ಜೀವಿಗಳು ಮಾತನಾಡುತ್ತಿವೆಯೇನೊ ಎನ್ನುವ ರೀತಿಯಲ್ಲಿ ಹೊಸ ಲೋಕ ಸೃಷ್ಟಿಸುವ ರೀತಿ ಗಮನಾರ್ಹ.

ಕಲಾವಿದ ಹಾಗೂ ಬರಹಗಾರ ಪ್ರಶಾಂತ್ ಆಡೂರ ಅವರು ಜನಿಸಿದ್ದು 1973. ಹುಟ್ಟಿದ್ದು ಶಿವಮೊಗ್ಗದಲ್ಲಿಯಾದರೂ ಬಾಲ್ಯವೆಲ್ಲಾ ಹುಬ್ಬಳ್ಳಿಯಲ್ಲಿ. ಬಿಎಸ್ಸಿ, ಎಂಬಿಎ ಪದವಿ ಶಿಕ್ಷಣ ಪಡೆದಿದ್ದಾರೆ. ಪ್ರಸ್ತುತ ಹುಬ್ಬಳ್ಳಿಯಲ್ಲಿ ಖಾಸಗಿ ಕಂಪನಿಯೊಂದನ್ನು ನಡೆಸುತ್ತಿದ್ದಾರೆ. ತಮ್ಮದೇ ಆದ ಬ್ಲಾಗ್ ಬರವಣಿಗೆಯಲ್ಲಿಯೂ ತೊಡಗಿಸಿಕೊಂಡಿರುವ ಇವರು, ವಿಜಯಕರ್ನಾಟಕ ಹಾಗೂ ವಿಜಯವಾಣಿಯಲ್ಲಿ ನಿರಂತರವಾಗಿ ಅಂಕಣಗಳನ್ನು ಬರೆಯುತ್ತಿದ್ದಾರೆ.



» ಪ್ರಬಂಧ ಅಂಬುತೀರ್ಥ



ನಾನು ಸನ್ಮಾನಕ್ಕೆ ಅರ್ಹನಲ್ಲ!

ನನಗೆ ಸರಕಾರದ ಸಂಬಳ ಬರುತ್ತಿತ್ತು, ಅಂತಹ ಸಮಯದಲ್ಲಿ ರಚಿಸಿದ ವ್ಯಾಕರಣ ಗ್ರಂಥಕ್ಕೆ ನನಗೇಕೆ ಸನ್ಮಾನ ಎಂದಿದ್ದರು ಈ ಅಧ್ಯಾಪಕರು!

ನೊಣಬೂರು ಗೋಪಾಲಕೃಷ್ಣ ಉಡುಪರು ಕನ್ನಡ ವ್ಯಾಕರಣ ತಜ್ಞರು ಮತ್ತು ವ್ಯಾಕರಣ ಗ್ರಂಥಕರ್ತರು. ಶಿಕ್ಷಕ ವೃತ್ತಿಯನ್ನು ನಿರ್ವಹಿಸಿದ್ದರು. ನನ್ನ ಅಜ್ಜ ದಿವಂಗತ ಎ. ಸುಬ್ಬಾ ಭಟ್ಟರ ಶಿಷ್ಯರೂ ಆಗಿದ್ದರು. ಎರಡು ವರ್ಷಗಳ ಹಿಂದೆ ಒಮ್ಮೆ ಗೋಪಾಲಕೃಷ್ಣ ಉಡುಪರು ನನ್ನ ದೊಡ್ಡಪ್ಪ ಅಂಬುತೀರ್ಥ ಪರಮೇಶ್ವರ ಭಟ್ಟರ ಮನೆಗೆ ಬಂದಿದ್ದರು. ಆ ದಿವಸ ಅಲ್ಲಿ ನನ್ನ ತಂದೆಯವರೂ ಅವರನ್ನು ಭೇಟಿ ಮಾಡಿದ್ದರು. ಉಡುಪರು ಬಹಳ ಹಿಂದೆಯೇ ನಮ್ಮೂರು ಅಂದರೆ ನೊಣಬೂರು ತೊರೆದವರು. ಅವರಿಗೆ ನಮ್ಮೂರಿನ ಈಗಿನ ತಲೆಮಾರಿನ ಯಾರೊಬ್ಬರೂ ಪರಿಚಯವಿರಲಿಲ್ಲ. ನಾನು ಫೇಸ್ ಬುಕ್‌ನಲ್ಲಿ ಬರವಣಿಗೆ ಮಾಡುತ್ತಿದ್ದರಿಂದ ನನ್ನ ಪರಿಚಯ ಇತ್ತು. ನಾನು ಅವರ ಮೆಚ್ಚಿನ ಮೇಷ್ಟ್ರ ಮೊಮ್ಮಗ ಮತ್ತು ತಮ್ಮೂರ ಹುಡುಗನ ಬರವಣಿಗೆ ಎಂದು ನನ್ನ ಬರಹವನ್ನು ಇಷ್ಟಪಟ್ಟು ಓದುತ್ತಿದ್ದರು.ಆ ದಿವಸ ಗೋಪಾಲಕೃಷ್ಣ ಉಡುಪರು ಒಂದು ಸಂಗತಿಯನ್ನು ಜ್ಞಾಪಿಸಿಕೊಂಡರು.

ಸುಮಾರು ಎಂಬತ್ತೈದು ವರ್ಷಗಳ ಹಿಂದೆ ನೊಣಬೂರಿನಲ್ಲಿ ಶಾಲೆ ಇರಲಿಲ್ಲ. ಹತ್ತಿರದ ಆರಗದ ಅಗ್ರಹಾರದಲ್ಲಿ ಒಂದು ಶಾಲೆ ಇತ್ತು. (ಈಗಲೂ ಇದೆ) ನನ್ನ ಅಜ್ಜ ಅಂಬುತೀರ್ಥ ಸುಬ್ಬಾ ಭಟ್ಟರು ಅಲ್ಲಿನ ಮುಖ್ಯೋಪಾಧ್ಯಾಯರಾಗಿದ್ದರು ನಮ್ಮೂರಿನಿಂದ ಸುಮಾರು ಆರು ಕಿಲೋಮೀಟರ್ ದೂರದ ಅಗ್ರಹಾರ ಶಾಲೆಗೆ ಆ ಕಾಲದ ನಮ್ಮ ಊರ ಮನೆಮಕ್ಕಳನ್ನು ನನ್ನ ಅಜ್ಜ ಕರೆದುಕೊಂಡು ಹೋಗುತ್ತಿದ್ದರು. ನಮ್ಮದು ಮಲೆನಾಡು. ಮಳೆಗಾಲದಲ್ಲಿ ಶಾಲೆಗೆ ಹೋಗುವುದು ದೊಡ್ಡ ಸಾಹಸ. ಅಂಬುತೀರ್ಥದಿಂದ ಅಗ್ರಹಾರಕ್ಕೆ ಹೋಗುವ ಮಾರ್ಗದಲ್ಲಿ ಮಜ್ಜಿಗೆಹೊಳೆ ಎಂಬ ಚಿಕ್ಕ ನದಿ ದಾಟಿ ಹೋಗಬೇಕಿತ್ತು. ಆಗಿನ್ನೂ ಸೇತುವೆ ಇರಲಿಲ್ಲ. ಆಜಾನುಬಾಹು ಆಗಿದ್ದ ನನ್ನ ಅಜ್ಜ ಕೆಲವೊಮ್ಮೆ ಎದೆ ಎತ್ತರ ಹರಿಯುತ್ತಿದ್ದ ಮಜ್ಜಿಗೆ ಹೊಳೆ ಹಳ್ಳದಲ್ಲಿ ಈ ಮಕ್ಕಳನ್ನು ಎತ್ತಿಕೊಂಡು ಹೊಳೆ ದಾಟಿಸಿ ಶಾಲೆಗೆ ಕರೆದುಕೊಂಡು ಹೋಗಿ ಪುನಃ ಸುರಕ್ಷಿತವಾಗಿ ವಾಪಸು ಕರೆದುಕೊಂಡು ಊರಿಗೆ ಬರುತ್ತಿದ್ದರಂತೆ! ಇಂತಹದೊಂದು ನಡೆಯು, ಆ ತಲೆಮಾರಿನ ಅದೆಷ್ಟೋ ಮಂದಿಗೆ ವಿದ್ಯೆಯನ್ನು ಕಲಿಸುವುದಕ್ಕೆ ಸಹಕಾರಿ ಎನಿಸಿತು. ಅದನ್ನು ಗೋಪಾಲಕೃಷ್ಣ ಉಡುಪರು ಕೃತಜ್ಞತಾ ಪೂರ್ವಕವಾಗಿ ಜ್ಞಾಪಿಸಿಕೊಂಡರು.

ಗೋಪಾಲಕೃಷ್ಣ ಉಡುಪರು ನನ್ನ ಅಜ್ಜನ ಸಹಕಾರವನ್ನು ಅವರ ಮಕ್ಕಳ ಬಳಿ ಸ್ಮರಿಸಿ ಕೃತಜ್ಞತೆ ಸಲ್ಲಿಸಿದ್ದು ವಿಶೇಷ ವಿಚಾರ.

ನನ್ನ ತಂದೆಯವರು ಗೋಪಾಲಕೃಷ್ಣ ಉಡುಪರ ಶಿಕ್ಷಣ ಸೇವೆ ಮತ್ತು ಕನ್ನಡ ವ್ಯಾಕರಣ ಗ್ರಂಥದ ರಚನೆಯ ಬಗ್ಗೆ 'ನಿಮಗೆ ಸಮಾಜವು ಸನ್ಮಾನ ಮಾಡಬಹುದಿತ್ತು' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಕ್ಕೆ ಅವರು 'ನನಗೆ ಸರ್ಕಾರ ಸಂಬಳ ಕೊಟ್ಟಿತ್ತು. ನಾನು ಪಾಠ ಮಾಡಿದ್ದೇನೆ. ಅದಕ್ಕೆ ಯಾಕೆ ಸನ್ಮಾನ? ಅಂತಹ ಸನ್ಮಾನಕ್ಕೆ ನಾನು ಅರ್ಹನಲ್ಲ!' ಎಂದಿದ್ದರು. ಈ ಕಾಲದಲ್ಲಿ ಇಂತಹ ವ್ಯಕ್ತಿಗಳು ಕಾಣಸಿಗುತ್ತಾರೆಯೇ? ತಮಗೆ ತಾವೇ ಸನ್ಮಾನ ಮಾಡಿಸಿಕೊಳ್ಳುವ, ವಶೀಲಿ ಮಾಡಿ ಪ್ರಶಸ್ತಿ ಹೊಡೆದುಕೊಳ್ಳುವ ಈ ಕಾಲದಲ್ಲಿ 'ಕನ್ನಡ ಭಾಷೆಯ ಬಗ್ಗೆ ಅಧ್ಯಯನ ಗ್ರಂಥ ರಚನೆ ಮಾಡಿದ ಉನ್ನತ ಸೇವೆಗೆ ಸನ್ಮಾನ ಮಾಡಬೇಕಿತ್ತು' ಎಂಬುದನ್ನು ಒಪ್ಪದೇ ಇದ್ದದ್ದು ಆದರ್ಶ ನಡವಳಿಕೆ. ಗೋಪಾಲಕೃಷ್ಣ ಉಡುಪರು ಎಂದೋ ನೊಣಬೂರು ಬಿಟ್ಟು ಶಿಕ್ಷಣ ಸೇವೆಗೆ ಊರೂರು ಸುತ್ತಿ ಕೊನೆಯಲ್ಲಿ ಬೆಂಗಳೂರು ಸೇರಿದರೂ ಒಂದು ಕಾಲದಲ್ಲಿ ನೆಲೆ ನೀಡಿದ ನಮ್ಮೂರು ನೊಣಬೂರನ್ನು ತಮ್ಮ ಹೆಸರ ಜೊತೆಯಲ್ಲಿ ಉಳಿಸಿಕೊಂಡರು. ಅವರ ಪುತ್ರ ಶರತ್ ಉಡುಪರು ಕೂಡ ತಮ್ಮ ಹೆಸರ ಜೊತೆಯಲ್ಲಿ ನೊಣಬೂರಿನ ಹೆಸರನ್ನು ಉಳಿಸಿಕೊಂಡಿರುವುದು ಶ್ರೇಷ್ಠ ಕೃತಜ್ಞತೆ. ಗೋಪಾಲಕೃಷ್ಣ ಉಡುಪರು ಕಳೆದ ವರ್ಷ ತಮ್ಮ ಪುತ್ರಿಯ ಜೊತೆಯಲ್ಲಿ ಕಾಶಿಯಾತ್ರೆಗೆ ಹೋದಾಗ ವಿಶ್ವನಾಥನ ದರ್ಶನ ಮುಗಿಸಿ 'ಕಾಶಿಯಲ್ಲೇ ಸುಖಮರಣ ಮತ್ತು ಕಾಶಿಯಲ್ಲೇ ತಾನು ಸಾಯಬೇಕು' ಎನ್ನುವ ಆಸೆಯನ್ನು ಪೂರೈಸಿಕೊಂಡ ಇಚ್ಛಾಮರಣಿಯೂ ಆಗಿದ್ದಾರೆ. ಈಗಿನ ಥ್ಯಾಂಕ್‌ಲೆಸ್ ಜಗತ್ತಿನಲ್ಲಿ ಗೋಪಾಲಕೃಷ್ಣ ಉಡುಪರು ಬಹಳವಾಗಿ ನೆನಪಾಗುತ್ತಾರೆ.

» ಗೊರೂರು ಶಿವೇಶ್, ಹಾಸನ

ತೇಜಸ್ವಿ ಅವರ ಮಾಯಾಮೃಗ

ಪೂರ್ಣಚಂದ್ರ ತೇಜಸ್ವಿಯವರು 'ಮಾಯಾಮೃಗ' ಎಂಬ ಸಣ್ಣ ಕಥೆಯನ್ನು ಬರೆದಿದ್ದರು. ಆ ಕಥೆಯು, ಆಗಿನ 4 ವರ್ಷದ ಭಾರತೀಯ ಕಥಾ ಸಂದರ್ಭದ 10 ಶ್ರೇಷ್ಠಕಥೆಗಳಲ್ಲೊಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿ, ಕಥಾ ಪ್ರಶಸ್ತಿಯನ್ನು ಸಹ ಪಡೆದಿದೆ. ಅದನ್ನು ನಾಟಕ ರೂಪದಲ್ಲಿ ನೋಡುವ ಅವಕಾಶ ಇತ್ತೀಚೆಗೆ ದೊರಕಿತು. (ಟಿ ಎನ್ ಸೀತಾರಾಮ್ ರವರು ಮಾಯಾಮೃಗದ ಹೆಸರಿನಲ್ಲಿ ಜನಪ್ರಿಯ ಟಿವಿ ಸೀರಿಯಲ್ ಅನ್ನು ನಿರ್ದೇಶಿಸಿ ದರು. ಆದರೆ ಆ ಧಾರಾವಾಹಿಯು, ಈ ಕಥೆಗೆ ಸಂಬಂಧಿಸಿದ್ದಲ್ಲ.)

ನವ್ಯ ಕಾಲಘಟ್ಟದ ಈ ಕಥೆ ಮುಖ್ಯವಾಗಿ ಮಾನವನ ಮನಸ್ಸಿನಲ್ಲಿ ಮೂಡುವ ಕಲ್ಪನೆ, ಹೆದರಿಕೆ ಮತ್ತು ಭ್ರಮೆಗಳ ಕುರಿತಾಗಿ ಚರ್ಚಿಸುತ್ತದೆ. ಇದಕ್ಕಾಗಿ ದೆವ್ವಗಳ ಇರುವಿಕೆ, ದೆವ್ವಗಳ ಸುತ್ತ ಹರಡಿರುವ ಕಾಲ್ಪನಿಕ ಕಥೆಗಳು, ಕಟ್ಟು ಕಥೆಗಳು, ಭೀತಿಯೇ ಭೂತವಾಗುವ ಪ್ರಸಂಗಗಳು ಕೃತಿಯಲ್ಲಿ ಹಾಸು ಹೊಕ್ಕಾಗಿದೆ. ಸಂಗೀತದ ಮೇಷ್ಟ್ರು ದಾಸಪ್ಪ 'ಅಮಾವಾಸ್ಯೆ ರಾತ್ರಿ ಸ್ಮಶಾನಕ್ಕೆ ಹೋದರೆ ದೆವ್ವ ಕಂಡೆ ಕಾಣುತ್ತದೆ, ನಿಮಗೆ ಧೈರ್ಯ ಇದ್ದರೆ ಹೋಗಿ' ಎಂಬ ಸವಾಲು ಸ್ವೀಕರಿಸಿದ ಷಾ ಮತ್ತು ನಿರೂಪಕ ಇಬ್ಬರೂ, ಊರ ಹೊರಗಿನ ಸ್ಮಶಾನಕ್ಕೆ ಹೋಗುತ್ತಾರೆ. ಅಲ್ಲಿನ ಘಟನೆಗಳು ಮತ್ತು, ಸಂಭಾಷಣೆ ಹಾಸ್ಯದ ಜೊತೆಗೆ ಮನರಂಜನೆ ನೀಡುತ್ತದೆ. ಸತ್ತವರು ದೆವ್ವವಾಗುವ, ಆ ದೆವ್ವದ ಚರ್ಚೆಯಲ್ಲಿ ಮುಳುಗಿರುವಾಗ ಚಿಕ್ಕ ಹೊಗೆಯ ಮೋಡ ನಿರ್ಮಾಣವಾಗಿ ಅದರ ಹಿನ್ನೆಲೆಯಲ್ಲಿ ಕಜ್ಜಿ ನಾಯಿ ಒಂದು ಮೇಲೇಳುತ್ತದೆ. ಕಜ್ಜಿನಾಯಿ ಮರಿಯನ್ನು 'ಡೆತ್' ಎಂದು ಷಾ ಹೆಸರಿಸುತ್ತಾರೆ. ಮುಂದೆ ನಾಯಿಯೊಂದಿಗಿನ ಅವರ ಕಣ್ಣ ಮುಚ್ಚಾಲೆ ಆಟ ಕಥೆಯನ್ನು ಕಟ್ಟುತ್ತ ಹೋಗುತ್ತದೆ.

ಸಾಂಕೇತಿಕತೆ ನವ್ಯ ಸಾಹಿತ್ಯದ ಪ್ರಮುಖ ಲಕ್ಷಣ. ಕಜ್ಜಿ ನಾಯಿ ಮರಿಯನ್ನು ಡೆತ್ ಎಂದು ಷಾ ಹೆಸರಿಸಿದಾಗ 'ಇದೇನ್ರೀ ನವ್ಯಸಾಹಿತಿಗಳ ಸಂಕೇತದ ಹಾಗೆ?' ಎಂದು ನಿರೂಪಕ ಹೇಳಿದರೂ ಸಾವನ್ನು ಮುಖಾಮುಖಿಯಾಗಿಸುವ ರೀತಿ ಹಾಗೆಯೇ ಎನಿಸುತ್ತದೆ. ಭಯ, ಹಾಸ್ಯ ವ್ಯಂಗ್ಯ, ಕುತೂಹಲ, ನಿಗೂಢತೆಗೆ ಪೂರಕವಾಗಿ ಕಜ್ಜಿ ನಾಯಿ ಮರಿಯನ್ನು ಮುಖಾಮುಖಿಯಾಗಿರಿಸುವುದು ಲೇಖಕರ ಜಾಣ್ಮೆಗೆ ಸಾಕ್ಷಿಯಾದರೆ, ಅದನ್ನು ರಂಜಿತ್ ಶೆಟ್ಟಿ ಕುಕ್ಕುಡೆ, ವಿನ್ಯಾಸ ಮತ್ತು ನಿರ್ದೇಶನ ಮಾಡಿರುವ ರೀತಿಯು ಕೂಡ ಭಿನ್ನವಾಗಿದೆ. ರಂಗದಲ್ಲಿ 'ನಾಯಿ ಮತ್ತು ನರಿಯ ಕ್ರಾಸ್ ಬೀಡ್‌ನಂತೆ ಕಾಣಿಸುತ್ತದೆ' ಎನ್ನುವ ಸಂದರ್ಭ ಹಾಗೂ ನಾಯಿಯನ್ನು ಒಂದು ಪಾತ್ರವಾಗಿ ಬಳಕೆ ಮಾಡಿರುವಲ್ಲಿ ಹಾಗೂ ಷಾ –ಭೂತದ ಪ್ರಸಂಗ ನಿರೂಪಿಸುವ ಸಂದರ್ಭದಲ್ಲಿ ಸೈಕಲ್ ತುಳಿಯುವ ಘಟನೆಯನ್ನು ರಂಗದ ಮೇಲೆ ತರುವಲ್ಲಿ ತಮ್ಮ ಸೃಜನಶೀಲತೆಯನ್ನು ಮೆರೆದಿದ್ದಾರೆ. ಭಾರ್ಗವರವರ ಸಂಗೀತವು ಈ ನಾಟಕಕ್ಕೆ ಪೂರಕವಾಗಿದ್ದು ಕಲಾವಿದ ಸಹಜ ಅಭಿನಯ ಗಮನ ಸೆಳೆಯುತ್ತದೆ. ತೇಜಸ್ವಿ ಅವರ ಪ್ರಮುಖ ಕಥೆಯೊಂದು ನಾಟಕ ರೂಪದಲ್ಲಿ ಪ್ರೇಕ್ಷಕರನ್ನು ಗಮನ ಸೆಳೆದಿರುವುದು ವಿಶೇಷ ಮತ್ತು ಕನ್ನಡ ನಾಟಕ ಕ್ಷೇತ್ರವು ಕ್ರಿಯಾಶೀಲವಾಗಿದೆ ಎಂಬುದರ ಸಂಕೇತವೂ ಹೌದು.

» ಹೊಸ್ಮನೆ ಮುತ್ತು

ಪರಿಪೂರ್ಣ ಛದ್ಮವೇಷವಿದು!

ನಮ್ಮ ಪರಿಸರವು ಒಂದು ಅದ್ಭುತ; ನಮ್ಮ ರಾಜ್ಯದಲ್ಲಿ ಉದ್ದಕ್ಕೂ ಹರಡಿರುವ ಪಶ್ಚಿಮ ಘಟ್ಟಗಳ ಜೀವ ವೈವಿಧ್ಯವು ಒಂದು ವಿಸ್ಮಯ. ನಿತ್ಯಹರಿದ್ವರ್ಣ ಕಾಡನ್ನು ಹೊಂದಿರುವ ಈ ಘಟ್ಟಗಳ ಒಡಲೊಳಗೆ ಅನೇಕ ಅಚ್ಚರಿಗಳು ಅಡಗಿಕೊಂಡಿವೆ. ಚಿತ್ರದಲ್ಲಿ ಕಾಣುತ್ತಿರುವ ಈ ಕೀಟ ನಿಸರ್ಗ ಒಂದು ವಿಸ್ಮಯ. ಮೊದಲ ನೋಟಕ್ಕೆ ಎಲೆಯಂತೆ ಭ್ರಮೆ ಹುಟ್ಟಿಸುವ ಇದು ಎಲೆಯಲ್ಲ. ಇದೊಂದು ಹಸಿರು ಎಲೆ ಕೀಟ (ಲೀಫ್ ಇನ್ಸೆಕ್ಟ್, ವಾಕಿಂಗ್ ಲೀಫ್). ಹಸಿರು ಎಲೆಯನ್ನು ಸಂಪೂರ್ಣವಾಗಿ ಹೋಲುವ ಇದರ ದೇಹ ಮತ್ತು ಬಣ್ಣ, ಮರೆಮಾಚುವ ಕಲೆಯ ಒಂದು ಪರಿಪೂರ್ಣ ಉದಾಹರಣೆ. ಎಲೆಯೋ, ಕೀಟವೋ ವ್ಯತ್ಯಾಸ ತಿಳಿಯಂತಹ ದೇಹರಚನೆ ಹೊಂದಿರುವ ಈ ಜೀವಿ ಚಲಿಸಿದಾಗ ಮಾತ್ರ ಜೀವಿ ಎಂದು ಗೊತ್ತಾಗುತ್ತದೆ. ಕದಲದೇ ಒಂದೆಡೆ ನಿಂತಾಗ ಹಸಿರೆಲೆಯೆಂದು ಭಾವಿಸಿದರೆ ಅದು ಅಚ್ಚರಿಯಲ್ಲ. ಈ ಎಲೆ ಕೀಟ ಫಿಲ್ಲಿಯಮ್ ಪ್ರಭೇದಕ್ಕೆ ಸೇರಿದೆ.

ಈ ಕೀಟದ ದೇಹವು ಎಲೆಯ ನರಗಳಂತೆ ಕಾಣುವ ವಿನ್ಯಾಸಗಳನ್ನು ಹೊಂದಿದೆ ಮತ್ತು ಇದರ ಕಾಲುಗಳು ಸಹ ಚಿಕ್ಕ ಎಲೆಗಳ ತುಂಡುಗಳಂತೆ ಕಾಣುತ್ತವೆ. ಇಂತಹ, ಹಸಿರೆಲೆಯ ದೇಹವಿನ್ಯಾಸವು, ಇದಕ್ಕೆ ಪರಭಕ್ಷಕಗಳಿಂದ ತಪ್ಪಿಸಿಕೊಳ್ಳಲು ತನ್ನ ಸುತ್ತಮುತ್ತಲಿನ ಸಸ್ಯವರ್ಗದೊಂದಿಗೆ ಸಂಪೂರ್ಣವಾಗಿ ವಿಲೀನಗೊಳ್ಳಲು ಸಹಾಯ ಮಾಡುತ್ತದೆ. ಮೇಲ್ನೋಟಕ್ಕೆ ಇದು ಎಲ್ಲಿದೆ ಎಂದು ಸುಲಭವಾಗಿ ಗುರುತಿಸುವುದು ಬಹಳ ಕಷ್ಟ.

ಈ ಜೀವ ಕಣಗಳು ನೋಡುವುದಕ್ಕೆ ಎಷ್ಟು ರೋಮಾಂಚಕಾರಿಯೋ, ಅವುಗಳ ಜೀವನ ಕ್ರಮ ಕೂಡಾ ಅಷ್ಟೇ ಕುತೂಹಲಕಾರಿ. ಇದು ಹೆಚ್ಚಾಗಿ ಮರಗಳ ಎಲೆಗಳನ್ನು ತಿನ್ನುತ್ತದೆ ಮತ್ತು ನಿಧಾನವಾಗಿ ಚಲಿಸುತ್ತದೆ. ಇದರ ವಿಶಿಷ್ಟ ರೂಪ ಪ್ರಕೃತಿಯ ಸೃಜನಾತ್ಮಕತೆ ಮತ್ತು ಜೀವಿಗಳು ಬದುಕಲು ಅಳವಡಿಸಿಕೊಳ್ಳುವ ಅದ್ಭುತ ತಂತ್ರಗಳಿಗೆ ಒಂದು ಉತ್ತಮ ನಿದರ್ಶನವಾಗಿದೆ. ಸೂಕ್ಷ್ಮವೂ, ಸಂಕೀರ್ಣವೂ ಆದ ಇಂತಹ ಅನೇಕ ಸಂಗತಿಗಳು ನಮ್ಮ ಪರಿಸರ ವ್ಯವಸ್ಥೆಯಲ್ಲಿ ಅಡಗಿವೆ. ಆಗೀಗ ಅವು ನಮ್ಮ ಕಣ್ಣಿಗೆ ಬಿದ್ದು ವಿಸ್ಮಯಗೊಳಿಸುತ್ತವೆ. ಅರಣ್ಯಗಳು ನಾಶವಾದಂತೆ ಪ್ರಕೃತಿಯ ಮಡಿಲಲ್ಲಿ ಅಡಗಿರುವ ಇಂಥಹ ವಿಸ್ಮಯ ಜೀವ ಜಗತ್ತು ನಿಧಾನವಾಗಿ ಕರಗಿಹೋಗುತ್ತಿದೆ.

ಉತ್ತಮ ಪತ್ರಕರ್ತನಾಗಲು ಶಾರ್ಟ್‌ಕಟ್ ಇದ್ದರೆ ತಿಳಿಸಿ!

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಪರಮೇಶ್ವರ ಜೆ.ಎಂ., ಸಂಡೂರು

- **ಭಟ್ರೇ, ಈಗ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ನಮ್ಮ ಸಣ್ಣ ಊರಲ್ಲಿ ಕೇವಲ ಕೈಬೆರಳೆಣಿಕೆಯಷ್ಟಿದ್ದ ದ್ವಿಚಕ್ರವಾಹನಗಳು, ಈಗ ಮನೆಗೆ ಎರಡರಂತೆ ಇವೆ. ಇದು ಭಾರತದೇಶ ಮುಂದುವರಿಯುತ್ತಿರುವ ಸಂಕೇತವೋ ಅಥವಾ ಮುಂದುವರಿದ ದೇಶವಾಗಿದ್ದರ ಸಂಕೇತವೋ? ಇನ್ನು ಮುಂದೆ ಯಾವ ಒತ್ತಡವನ್ನು ಸಹಿಸಿಕೊಳ್ಳಬೇಕೋ ಗೊತ್ತಾಗುತ್ತಿಲ್ಲ. ಪರಿಸರ ಮಾಲಿನ್ಯ, ರಸ್ತೆ ಸುರಕ್ಷತೆ.. ಇತರೆ, ಯಾವುದರ ಕಾಳಜಿ ಮಾಡದೇ ನಾನು ಚೆನ್ನಾಗಿ ಇದ್ದರೆ ಸಾಕು, ನನ್ನ ಸಿರಿವಂತಿಕೆಯೊಂದೇ ಪ್ರದರ್ಶನವಾದರೆ ಸಾಕು, ಬೇರೆಲ್ಲ ನಗಣ್ಯ ಅನ್ನುವ ಮನೋಭಾವ ಎಲ್ಲೆಡೆ ಕಾಣುತ್ತಿದೆ. ನಿಮ್ಮ ಅನಿಸಿಕೆ ಏನು?**

– ಪರಮೇಶ್ವರ ಅವರೇ, ಸುಮಾರು ಇಪ್ಪತ್ತು ವರ್ಷಗಳ ಹಿಂದೆ ನಿಮ್ಮ ಊರಿನಂಥ ಸಣ್ಣ ಪಟ್ಟಣಗಳಲ್ಲಿ ಬೆರಳೆಣಿಕೆಯಷ್ಟಿದ್ದ ದ್ವಿಚಕ್ರ ವಾಹನಗಳು ಈಗ ಮನೆಗೊಂದು, ಎರಡರಂತೆ ಆಗಿರುವುದು ನಿಜಕ್ಕೂ ಆರ್ಥಿಕ ಪ್ರಗತಿಯ ಸ್ಪಷ್ಟ ಸಂಕೇತ. ಇದು ಜನರ ಕೊಳ್ಳುವ ಶಕ್ತಿ ಹೆಚ್ಚಿದೆ, ಸಾರಿಗೆ ಸೌಲಭ್ಯ ಸುಧಾರಿಸಿದೆ ಮತ್ತು ಆರ್ಥಿಕ ಚಟುವಟಿಕೆಗಳು ವಿಸ್ತರಿಸುತ್ತಿವೆ ಎಂಬುದನ್ನು ತೋರಿಸುತ್ತದೆ. ಹೀಗಾಗಿ, ಭಾರತ ಮುಂದುವರಿಯುತ್ತಿರುವ ದೇಶ ಎನ್ನುವುದು ಹೆಚ್ಚು ಸೂಕ್ತ.

ಆದರೆ, ಕೇವಲ ವಾಹನಗಳ ಸಂಖ್ಯೆ ಹೆಚ್ಚಿದ ಮಾತ್ರಕ್ಕೆ ಭಾರತ 'ಮುಂದುವರಿದ ದೇಶ' ಎಂದು ಹೇಳಲಾಗುವುದಿಲ್ಲ. ಮುಂದುವರಿದ ದೇಶಗಳು ಉತ್ತಮ ತಲಾದಾಯ, ಬಲಿಷ್ಠ ಮೂಲಸೌಕರ್ಯ, ಗುಣಮಟ್ಟದ ಶಿಕ್ಷಣ ಮತ್ತು ಆರೋಗ್ಯ ಸೇವೆಗಳ ಸಾರ್ವತ್ರಿಕ ಲಭ್ಯತೆ, ಬಲವಾದ ಸಾಮಾಜಿಕ ಭದ್ರತಾ ವ್ಯವಸ್ಥೆಗಳು ಮತ್ತು ಉನ್ನತ ಜೀವನ ಮಟ್ಟವನ್ನು ಹೊಂದಿರುತ್ತವೆ. ಭಾರತ ಈ ಎಲ್ಲ ಕ್ಷೇತ್ರಗಳಲ್ಲಿ ವೇಗವಾಗಿ ಪ್ರಗತಿ ಸಾಧಿಸುತ್ತಿದ್ದರೂ, ಇನ್ನೂ ಅನೇಕ ಸವಾಲುಗಳನ್ನು ಎದುರಿಸುತ್ತಿದೆ.

ನೀವು ಹೇಳಿದಂತೆ, 'ನಾನು ಚೆನ್ನಾಗಿದ್ದರೆ ಸಾಕು, ನನ್ನ ಸಿರಿವಂತಿಕೆಯೊಂದೇ ಮುಖ್ಯ, ಬೇರೆಲ್ಲ ನಗಣ್ಯ' ಎಂಬ ಮನಸ್ಥಿತಿಯು ನಿಜಕ್ಕೂ ಕಳವಳಕಾರಿ. ಇದು ಸಮುದಾಯ ಮತ್ತು ಪರಿಸರದ ಮೇಲೆ ಉಂಟಾಗುವ ಪರಿಣಾಮಗಳನ್ನು ನಿರ್ಲಕ್ಷಿಸುವ ಅಪಾಯಕಾರಿ ಧೋರಣೆಯೇ ಸರಿ. ಮುಂದಿನ ದಿನಗಳಲ್ಲಿ ನಾವು ಪ್ರಮುಖ ಒತ್ತಡ ಮತ್ತು ಸವಾಲುಗಳನ್ನು ಎದುರಿಸಬೇಕಾಗಬಹುದು. ಹೆಚ್ಚಿದ ವಾಹನಗಳ ಸಂಖ್ಯೆ ವಾಯು ಮತ್ತು ಶಬ್ದ ಮಾಲಿನ್ಯಕ್ಕೆ ದೊಡ್ಡ ಕಾರಣವಾಗಿದೆ. ಇದು ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಇದನ್ನು ನಿಯಂತ್ರಿಸಲು ಕಟ್ಟುನಿಟ್ಟಾದ ನಿಯಮಗಳು, ವಿದ್ಯುತ್ ವಾಹನಗಳ ಪ್ರೋತ್ಸಾಹ ಮತ್ತು ಸಾರ್ವಜನಿಕ ಸಾರಿಗೆಯ ಅಭಿವೃದ್ಧಿ ಅಗತ್ಯ. ಹೆಚ್ಚಿನ ವಾಹನಗಳು ರಸ್ತೆಗಳಲ್ಲಿ ದಟ್ಟಣೆಯನ್ನು ಹೆಚ್ಚಿಸುತ್ತವೆ ಮತ್ತು ಅಪಘಾತಗಳ ಅಪಾಯವನ್ನು ಹೆಚ್ಚಿಸುತ್ತವೆ. ಉತ್ತಮ ರಸ್ತೆ ಮೂಲಸೌಕರ್ಯ, ಕಟ್ಟುನಿಟ್ಟಾದ ಸಂಚಾರ ನಿಯಮಗಳ ಜಾರಿ ಮತ್ತು ರಸ್ತೆ ಸುರಕ್ಷತೆಯ ಬಗ್ಗೆ ಜಾಗೃತಿ ಮೂಡಿಸುವುದು ಅತಿ ಮುಖ್ಯ.

ವಾಹನಗಳ ಉತ್ಪಾದನೆ ಮತ್ತು ಬಳಕೆ ಹೆಚ್ಚಿದಂತೆ ಪೆಟ್ರೋಲ್, ಡೀಸೆಲ್‌ನಂಥ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಒತ್ತಡ ಹೆಚ್ಚಾಗುತ್ತದೆ. ಸುಸ್ಥಿರ ಅಭ್ಯಾಸಗಳು ಮತ್ತು ಪರ್ಯಾಯ ಇಂಧನ ಮೂಲಗಳ ಕಡೆಗೆ ಸಾಗುವುದು ಅನಿವಾರ್ಯ. ಭಾರತದ ನಗರಗಳು ಈಗಲೇ ಜನಸಂಖ್ಯೆ ಮತ್ತು ವಾಹನ ದಟ್ಟಣೆಯೊಂದಿಗೆ ಹೋರಾಡುತ್ತಿವೆ. ಉತ್ತಮ ರಸ್ತೆಗಳು, ಪಾರ್ಕಿಂಗ್ ಸೌಲಭ್ಯಗಳು ಮತ್ತು ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವಲ್ಲಿ ಭಾರೀ ಒತ್ತಡ ಎದುರಾಗಲಿದೆ. ವೈಯಕ್ತಿಕ ಸಂಪತ್ತಿನ ಹಿಂದೆ ಬಿದ್ದು ಸಮುದಾಯದ ಯೋಗಕ್ಷೇಮವನ್ನು ನಿರ್ಲಕ್ಷಿಸುವುದು ಸಾಮಾಜಿಕ ವಿಘಟನೆ ಮತ್ತು ಹೆಚ್ಚಿದ ಒತ್ತಡಕ್ಕೆ ಕಾರಣವಾಗಬಹುದು.

'ನಾನು ಚೆನ್ನಾಗಿದ್ದರೆ ಸಾಕು' ಎಂಬ ಮನೋಭಾವವು ನಿಜಕ್ಕೂ ಸಮಾಜಕ್ಕೆ ಹಾನಿಕಾರಕ. ಇದು ಅಲ್ಪಾವಧಿಯ ವೈಯಕ್ತಿಕ ಲಾಭಕ್ಕೆ ಆದ್ಯತೆ ನೀಡುವ ಮೂಲಕ ದೀರ್ಘಾವಧಿಯ ಸಾಮೂಹಿಕ ಯೋಗಕ್ಷೇಮವನ್ನು ಕಡೆಗಣಿಸುತ್ತದೆ. ಇದು ಸುಸ್ಥಿರ ಅಭಿವೃದ್ಧಿಗೆ ಅಡ್ಡಿಯಾಗಬಹುದು ಮತ್ತು ಸಾಮಾಜಿಕ ಅಸಮಾನತೆಯನ್ನು ಹೆಚ್ಚಿಸಬಹುದು. ಭಾರತವು ನಿಜವಾದ ಅರ್ಥದಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು, ಸಾಮೂಹಿಕ ಜವಾಬ್ದಾರಿಯ ಪ್ರಜ್ಞೆಯನ್ನು ಬೆಳೆಸುವುದು ಅತ್ಯಗತ್ಯ. ದ್ವಿಚಕ್ರ ವಾಹನಗಳ ಹೆಚ್ಚಳವು ಆರ್ಥಿಕ ಪ್ರಗತಿಯ ಸಂಕೇತವಾಗಿದ್ದರೂ, ಭಾರತದ ನಿಜವಾದ ಅಭಿವೃದ್ಧಿಯು ಈ ಸವಾಲುಗಳನ್ನು ಹೇಗೆ ಎದುರಿಸುತ್ತೇವೆ ಎಂಬುದನ್ನು ಅವಲಂಬಿಸಿದೆ. ಏನಂತೀರಿ?

ನಾಗರಾಜು ಸಿ., (ಇಮೇಲ್ ಮೂಲಕ)

- **ಭಟ್ಟರೇ, ನಾನು ನಿಮ್ಮ ಅಂಕಣಗಳ ಕಟ್ಟಾ ಅಭಿಮಾನಿ. ಅದರಲ್ಲೂ 'ಆಸ್ಕ್ ದಿ ಎಡಿಟರ್' ಅಂಕಣವನ್ನು ತಪ್ಪದೇ ಓದುತ್ತೇನೆ. ನಾನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಾ ಜತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಗತಿ ನಡೆಸುತ್ತಿದ್ದೆ. ಸಾಕಷ್ಟು ಪರೀಕ್ಷೆಗಳನ್ನು ಬರೆದಿದ್ದೇನೆ. ಆದರೆ ಕೆಲವು ಪರೀಕ್ಷೆಗಳಲ್ಲಿ ಕಡಿಮೆ ಅಂತರದಿಂದ ಅವಕಾಶಗಳು ಕೈ ತಪ್ಪಿದವು. ಆದರೆ ಇತ್ತೀಚೆಗೆ ಬಿಎಂಟಿಸಿ ಕಂಡಕ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಕೆಲಸಕ್ಕೆ ಸೇರಿದ್ದೇನೆ. ಆದರೆ ನಿರಂತರ ಅಧ್ಯಯನ, ಬೋಧನೆಯಲ್ಲಿ ತೊಡಗಿದ್ದ ನನಗೆ ಕಂಡಕ್ಟರ್ ವೃತ್ತಿಯಲ್ಲಿ ತೃಪ್ತಿ ಸಿಗುತ್ತಿಲ್ಲ. ಇದರಿಂದ ಬೌದ್ಧಿಕ ಜ್ಞಾನ ಹೆಚ್ಚಾಗುತ್ತಿಲ್ಲ. ಹೀಗಾಗಿ ಇದನ್ನು ತೊರೆದು ಪುನಃ ಸ್ಪರ್ಧಾತ್ಮಕ ಪರೀಕ್ಷೆ ಕೇಂದ್ರಗಳಿಗೆ ತೆರಳಿ ಬೋಧನೆಯಲ್ಲಿ ತೊಡಗಲು ನಿರ್ಧರಿಸಿದ್ದೇನೆ. ನಿಮ್ಮ ಸಲಹೆ ಏನು?**

– ನಾಗರಾಜು ಅವರೇ, ನಿಮ್ಮ ಪರಿಸ್ಥಿತಿಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸತತವಾಗಿ ಅಧ್ಯಯನ ಮಾಡಿ, ಬೋಧನೆಯಲ್ಲೂ ತೊಡಗಿಕೊಂಡಿದ್ದ ನಿಮಗೆ ಕಂಡಕ್ಟರ್ ವೃತ್ತಿ ತೃಪ್ತಿ ನೀಡದಿರುವುದು ಸಹಜ. ಅದರಲ್ಲೂ ಬೌದ್ಧಿಕ ಬೆಳವಣಿಗೆಗೆ ಅವಕಾಶವಿಲ್ಲ ಎನ್ನುವ ನಿಮ್ಮ ಆತಂಕವನ್ನು ನಾನು ಗೌರವಿಸುತ್ತೇನೆ. ಮೊದಲಿಗೆ, ನೀವು ಬಿಎಂಟಿಸಿ ಕಂಡಕ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದು ಮತ್ತು ಕೆಲಸಕ್ಕೆ ಸೇರಿರುವುದು ನಿಮ್ಮ ಪರಿಶ್ರಮಕ್ಕೆ ಸಿಕ್ಕ ಪ್ರತಿಫಲ. ಎಷ್ಟೋ ಜನರಿಗೆ ಸರಕಾರಿ ಕೆಲಸ ಎಂದರೆ ಕನಸು, ಅಂಥದರಲ್ಲಿ ನೀವು ಅದನ್ನು ಸಾಧಿಸಿದ್ದೀರಿ. ಈ ಕೆಲಸದಿಂದ ನಿಮಗೆ ಆರ್ಥಿಕ ಭದ್ರತೆ ಸಿಕ್ಕಿದೆ. ಆದರೆ, ಈ ಕೆಲಸದಲ್ಲಿ ಬೌದ್ಧಿಕ ತೃಪ್ತಿ ಸಿಗುತ್ತಿಲ್ಲ ಎನ್ನುವುದು ಮುಖ್ಯ ವಿಚಾರ.

ನೀವು ನಿಜವಾಗಿಯೂ ಬೋಧನೆಯನ್ನು ಪ್ರೀತಿಸುತ್ತೀರಾ ಅಥವಾ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಯ ಭಾಗವಾಗಿ ನೀವು ಬೋಧನೆಯನ್ನು ಆಯ್ಕೆ ಮಾಡಿಕೊಂಡಿದ್ದೀರಾ ಎಂಬುದು ಮುಖ್ಯ. ಬೋಧನೆ ನಿಮಗೆ ಬೌದ್ಧಿಕ ತೃಪ್ತಿ ನೀಡುತ್ತದೆ ಎನ್ನುವುದರಲ್ಲಿ ಸಂಶಯವಿದ್ದಂತಿಲ್ಲ. ಆದರೆ, ಇದು ಆರ್ಥಿಕವಾಗಿ ಎಷ್ಟು ಭದ್ರತೆಯನ್ನು ನೀಡುತ್ತದೆ ಎಂಬುದನ್ನು ಲೆಕ್ಕ ಹಾಕಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳ ಕೋಚಿಂಗ್ ಕೇಂದ್ರಗಳಲ್ಲಿ ಸಿಗುವ ಸಂಭಾವನೆ, ಕೆಲಸದ ಸ್ಥಿರತೆ ಇವುಗಳ ಬಗ್ಗೆ ಸ್ಪಷ್ಟ ಅರಿವಿರಲಿ. ನೀವು ಕಂಡಕ್ಟರ್ ಕೆಲಸವನ್ನು ಬಿಟ್ಟು ಬೋಧನೆಗೆ ಮರಳಿದರೆ, ನಿಮ್ಮ ಪ್ರಸ್ತುತ ಆರ್ಥಿಕ ಸ್ಥಿತಿಯ ಮೇಲೆ ಏನು ಪರಿಣಾಮ ಬೀರುತ್ತದೆ? ಮನೆಯ ಜವಾಬ್ದಾರಿಗಳಿವೆಯೇ? ಬೋಧನೆಯಿಂದ ಬರುವ ಆದಾಯ ನಿಮ್ಮ ಅವಶ್ಯಕತೆಗಳನ್ನು ಪೂರೈಸುತ್ತವೆಯೇ? ಒಂದು ನಿರ್ದಿಷ್ಟ ಅವಧಿಗೆ (ಉದಾಹರಣೆಗೆ 6 ತಿಂಗಳು ಅಥವಾ 1 ವರ್ಷ) ನಿಮ್ಮ ಖರ್ಚುಗಳನ್ನು ನಿಭಾಯಿಸಲು ನಿಮ್ಮ ಬಳಿ ಸಾಕಷ್ಟು ಉಳಿತಾಯವಿದೆಯೇ ಎಂದು ಖಚಿತಪಡಿಸಿಕೊಳ್ಳಿ.

ಕಂಡಕ್ಟರ್ ಕೆಲಸವನ್ನು ಸಂಪೂರ್ಣವಾಗಿ ಬಿಡುವ ಮೊದಲು, ಪರ್ಯಾಯ ಮಾರ್ಗಗಳನ್ನು ಪರಿಗಣಿಸಬಹುದೇ? ಉದಾಹರಣೆಗೆ, ಕಂಡಕ್ಟರ್ ಕೆಲಸವನ್ನು ಮುಂದುವರಿಸುತ್ತಲೇ, ಬಿಡುವಿನ ಸಮಯದಲ್ಲಿ ಆನ್‌ಲೈನ್‌ನಲ್ಲಿ ಅಥವಾ ಅರೆಕಾಲಿಕವಾಗಿ ಬೋಧನೆ ಮಾಡಲು ಸಾಧ್ಯವೇ? ಇದು ನಿಮಗೆ ಎರಡೂ ಕಡೆ ತೃಪ್ತಿ ಮತ್ತು ಭದ್ರತೆ ನೀಡಬಹುದು. ನೀವು ಈಗಾಗಲೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸಿರುವ ಕಾರಣ, ನಿಮ್ಮ ಜ್ಞಾನ ಬೋಧನೆಗೆ ಸೂಕ್ತವಾಗಿದೆ. ಆದರೆ, ಈಗಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಬೋಧನಾ ಕೌಶಲಗಳನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವುದು ಮುಖ್ಯ. ಹೊಸ ಪರೀಕ್ಷಾ ವಿಧಾನಗಳು, ತಂತ್ರಜ್ಞಾನ ಆಧಾರಿತ ಬೋಧನೆ ಇತ್ಯಾದಿಗಳನ್ನು ಅಳವಡಿಸಿಕೊಳ್ಳಿ. ಕೆಲವು ಕೋಚಿಂಗ್ ಸೆಂಟರ್‌ಗಳು ನಿರ್ದಿಷ್ಟ ವಿಷಯಗಳಿಗೆ ಹೆಚ್ಚು ಆದ್ಯತೆ ನೀಡಬಹುದು. ಅದಕ್ಕೆ ತಕ್ಕಂತೆ ನಿಮ್ಮನ್ನು ನೀವು ಸಿದ್ಧಪಡಿಸಿಕೊಳ್ಳಿ.

ಕೇವಲ ಬೋಧನೆಯನ್ನು ಮಾಡುವುದಷ್ಟೇ ನಿಮ್ಮ ಗುರಿಯೇ? ಅಥವಾ ಬೋಧನೆಯ ಮೂಲಕ ಮತ್ತೊಂದು ಉನ್ನತ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸಿ ಅದರಲ್ಲಿ ಯಶಸ್ವಿಯಾಗುವ ಗುರಿ ಇದೆಯೇ? ನಿಮ್ಮ ದೀರ್ಘಾವಧಿಯ ವೃತ್ತಿಜೀವನದ ಗುರಿಗಳ ಬಗ್ಗೆ ಸ್ಪಷ್ಟತೆ ಇದ್ದರೆ, ಈ ನಿರ್ಧಾರ ಹೆಚ್ಚು ಅರ್ಥಪೂರ್ಣವಾಗುತ್ತದೆ. ನಿಮ್ಮ ಸಾಮರ್ಥ್ಯದ ಮೇಲೆ ನಂಬಿಕೆಯಿಡಿ. ಸರಿಯಾದ ಯೋಜನೆ ಮತ್ತು ಕಠಿಣ ಪರಿಶ್ರಮದಿಂದ ನೀವು ಖಂಡಿತವಾಗಿಯೂ ನಿಮಗೆ ತೃಪ್ತಿ ನೀಡುವ ವೃತ್ತಿಜೀವನವನ್ನು ರೂಪಿಸಿಕೊಳ್ಳಬಹುದು. ನಿಮ್ಮ ಮುಂದಿನ ಹೆಜ್ಜೆಗಳಿಗೆ ಶುಭ ಹಾರೈಸುತ್ತೇನೆ.

ದಿವಾಕರ ನಾಡಿಗ, (ಇಮೇಲ್ ಮೂಲಕ)

- **ಸಂಪಾದಕರೇ, ನನಗೂ ಜೀವನದಲ್ಲಿ ಉತ್ತಮ ಪತ್ರಕರ್ತನಾಗಬೇಕೆಂಬ ಆಸೆ ಇದೆ. ಪತ್ರಕರ್ತನಾಗಲು ಯಾವುದಾದರೂ ಶಾರ್ಟ್‌ಕಟ್ ಇದೆಯಾ? ಎರಡು-ಮೂರು ತಿಂಗಳಲ್ಲಿ ಪತ್ರಕರ್ತನಾಗುವುದು ಹೇಗೆ ಎಂಬುದನ್ನು ತಿಳಿಸಿಕೊಡಬಹುದಾ?**

– ದಿವಾಕರ ಅವರೇ, ಜೀವನದಲ್ಲಿ ನೀವು ಪತ್ರಕರ್ತರಾಗಬೇಕು ಎಂದು ನಿರ್ಧರಿಸಿರುವುದು ಸಂತೋಷವೇ. ನನಗೆ ತಿಳಿದಂತೆ ಪತ್ರಕರ್ತರಾಗಲು ಯಾವುದೇ ಒಳ ದಾರಿ ಅಥವಾ ಶಾರ್ಟ್ ಕಟ್ ಎಂಬುದಿಲ್ಲ. ಒಂದು ವೇಳೆ ಅಂಥ ದಾರಿ ಇದ್ದರೆ ಅದು ನನಗೆ ಗೊತ್ತಿಲ್ಲ ಎಂದು ಪ್ರಾಮಾಣಿಕವಾಗಿ ಹೇಳುತ್ತೇನೆ. ಪತ್ರಕರ್ತರ ಕೆಲಸ ನೀವು ಭಾವಿಸಿದಷ್ಟು ಸುಲಭ ಅಲ್ಲ. ಅದೊಂದು ಕಠಿಣ ತಪಸ್ಸು. ನಿರಂತರ ಓದು, ಅಧ್ಯಯನ, ಶೋಧ, ಪರಿಶ್ರಮದಿಂದ ಸಾಧಿಸುವಂಥದ್ದು. ಪತ್ರಕರ್ತನಿಗೆ ಸುದ್ದಿಯನ್ನು ಗ್ರಹಿಸುವ ಅದ್ಭುತವಾದ ಕಲೆ ಎಷ್ಟು ಮುಖ್ಯವೋ, ಅದನ್ನು ಜನಸಾಮಾನ್ಯರಿಗೆ ತಿಳಿಯುವ ರೀತಿಯಲ್ಲಿ ಬರೆಯುವುದೂ ಅಷ್ಟೇ ಮುಖ್ಯ. ಇದನ್ನು ರಾತ್ರಿ ಬೆಳಗಾಗುವುದರೊಳಗೆ ಕಲಿಯುವುದು ಸಾಧ್ಯವಿಲ್ಲ. ಪತ್ರಕರ್ತನಾದವನು ಪ್ರತಿದಿನ ಹೊಸ ವ್ಯಕ್ತಿಗಳನ್ನು ಭೇಟಿ ಮಾಡಬೇಕಾಗುತ್ತದೆ. ಅದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ಹೊಸ ಹೊಸ ವಿಷಯಗಳನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈ ಮಧ್ಯೆ, ತಾನು ಗ್ರಹಿಸಿದ್ದನ್ನು ಭಾಷೆಯ ಮೂಲಕ ವ್ಯಕ್ತಪಡಿಸುವುದೂ ಅಷ್ಟೇ ಮುಖ್ಯ. ನಿಮಗೆ ಬಹುಬೇಗ ಖ್ಯಾತ ಪತ್ರಕರ್ತರಾಗಬೇಕು ಎಂಬ ಆಸೆ ಇದ್ದಂತಿದೆ. ಅದು ತಪ್ಪು ಎಂದು ಹೇಳುತ್ತಿಲ್ಲ. ಆದರೆ ಅದನ್ನು ಅಷ್ಟು ಸುಲಭವಾಗಿ ಮತ್ತು ಶೀಘ್ರವಾಗಿ ರೂಢಿಸಿಕೊಳ್ಳುವುದು ಕಷ್ಟ ಎಂಬುದನ್ನು ತಿಳಿದಿದ್ದರೆ ಸಾಕು.

ಅಷ್ಟಕ್ಕೂ ಪತ್ರಿಕೋದ್ಯಮವನ್ನು ಸರಳವಾಗಿ ರಿಪೋರ್ಟಿಂಗ್ ಮತ್ತು ಎಡಿಟಿಂಗ್ ಎಂದು ಹೇಳಬಹುದು. ಇವೆರಡನ್ನು ಒಂದು ವಾರದಲ್ಲಿ ಓದಿ ತಿಳಿದುಕೊಳ್ಳಬಹುದು. ಆದರೆ ಇವನ್ನು ಪ್ರಾಕ್ಟೀಸ್ ಮಾಡಲು ಬಹಳ ಶ್ರಮ ಪಡಬೇಕು. ರಿಪೋರ್ಟಿಂಗ್ ಅಂದರೆ ಯಾರೋ ಹೇಳಿದ್ದನ್ನು ಬರೆದು ಒಪ್ಪಿಸುವದಷ್ಟೇ ಅಲ್ಲ. ಸುದ್ದಿಯನ್ನು ಗ್ರಹಿಸುವುದು ಒಂದು ಜಾಣ್ಮೆ. ಅದನ್ನು ನಿತ್ಯವೂ ಕರಗತ ಮಾಡಿಕೊಳ್ಳಬೇಕು. ಎಡಿಟಿಂಗ್ ಅಂದರೆ 100 ಪದಗಳಲ್ಲಿ ಬರೆದಿದ್ದನ್ನು ಮೂವತ್ತಕ್ಕೋ, ಐವತ್ತಕ್ಕೋ ಇಳಿಸುವುದಲ್ಲ. ಪದಚ್ಛೇದವೇ ಎಡಿಟಿಂಗ್ ಅಲ್ಲ, ಇವೆಲ್ಲ ವರ್ಷವಿಡೀ ಸಾಧನೆ, ಪರಿಶ್ರಮದಿಂದ ಸಾಧಿಸುವಂಥದ್ದು.

ಜೀವನದಲ್ಲಿ ಒಳ ಹಾದಿಯನ್ನು ಬಿಟ್ಟು, ಸರಿ ದಾರಿ ಯಾವುದು ಎಂಬುದನ್ನು ನೀವು ತಿಳಿದುಕೊಳ್ಳುವುದು ಒಳ್ಳೆಯದು. Short-cut will cut you short ಎಂಬ ಮಾತನ್ನು ನೀವು ಕೇಳಿರಬಹುದು. ಎಲ್ಲ ಸಂದರ್ಭಗಳಲ್ಲೂ ಒಳ ಹಾದಿ ತುಳಿಯುವುದು ಒಳ್ಳೆಯದಲ್ಲ, ಕೆಲವು ಸಲ ಜೀವನದಲ್ಲಿ extract mile ನಡೆಯಲೇ ಬೇಕಾಗುತ್ತದೆ.

ಮಾನಸ, ಚಿಕ್ಕಮಗಳೂರು

- **ಸಂಪಾದಕರೇ, ನನ್ನ ತಂದೆ ಸಾಹಿತ್ಯ ಪ್ರಿಯರು. ನನಗೆ ಕಾದಂಬರಿಗಳನ್ನು ಓದುವಂತೆ ಬಹಳ ಒತ್ತಾಯ ಮಾಡುತ್ತಾರೆ. ನನಗೆ ಅವುಗಳಲ್ಲಿ ಆಸಕ್ತಿ ಇಲ್ಲ. ಆದರೆ ನಾನು ಪುಸ್ತಕಗಳನ್ನು ಓದದಿದ್ದರೆ ತಂದೆಯವರು ಕೋಪ ಮಾಡಿಕೊಳ್ಳುತ್ತಾರೆ; ನನ್ನ ತಂದೆಯವರನ್ನು ಎದುರಿಸುವ ಶಕ್ತಿ ನನಗಿಲ್ಲ. ಏನು ಮಾಡಲಿ?**

– ಮಾನಸ ಅವರೇ, ನಿಮ್ಮ ಪರಿಸ್ಥಿತಿ ಅರ್ಥ ಮಾಡಿಕೊಳ್ಳಬಹುದು. ಒಂದೆಡೆ ತಂದೆಯವರನ್ನು ಬೇಸರಗೊಳಿಸಲು ಇಷ್ಟವಿಲ್ಲ, ಇನ್ನೊಂದೆಡೆ ನಿಮಗೆ ಆಸಕ್ತಿ ಇಲ್ಲದ ಕಾದಂಬರಿಗಳನ್ನು ಓದುವ ಒತ್ತಡ. ಮೊದಲಿಗೆ, ನಿಮಗೆ ಕಾದಂಬರಿಗಳು ಇಷ್ಟವಿಲ್ಲ ಎಂದರೆ ಯಾವ ರೀತಿಯ ಪುಸ್ತಕಗಳನ್ನು ಓದಲು ಇಷ್ಟಪಡುತ್ತೀರಿ? ಅದು ವ್ಯಕ್ತಿತ್ವ ವಿಕಸನ ಪುಸ್ತಕಗಳಾಗಿರಬಹುದು, ವಿಜ್ಞಾನ, ಇತಿಹಾಸ, ತಂತ್ರಜ್ಞಾನದ ಬಗ್ಗೆ ಇರಬಹುದು ಅಥವಾ ಪ್ರೇರಣಾತ್ಮಕ ಪುಸ್ತಕಗಳಾಗಿರಬಹುದು. ನಿಮ್ಮ ಆಸಕ್ತಿಯ ಕ್ಷೇತ್ರಗಳನ್ನು ಗುರುತಿಸುವುದು ಮುಖ್ಯ. ನಂತರ ನಿಮ್ಮ ತಂದೆಯವರೊಂದಿಗೆ ಪ್ರಾಮಾಣಿಕವಾಗಿ, ಆದರೆ ಗೌರವಪೂರ್ವಕವಾಗಿ ಮಾತಾಡುವುದು ಅತ್ಯಂತ ಮುಖ್ಯ. ಅವರು ನಿಮ್ಮ ಮೇಲೆ ಕೋಪ ಮಾಡಿಕೊಳ್ಳಬಹುದು ಎಂದು ಭಯಪಡಬೇಡಿ, ಬದಲಿಗೆ ನಿಮ್ಮ ಭಾವನೆಗಳನ್ನು ಶಾಂತವಾಗಿ ವಿವರಿಸಿ.

'ಅಪ್ಪಾ, ನೀವು ಸಾಹಿತ್ಯ ಪ್ರಿಯರು ಎಂದು ನನಗೆ ಗೊತ್ತು ಮತ್ತು ಪುಸ್ತಕಗಳನ್ನು ಓದುವುದು ಒಳ್ಳೆಯದು ಎಂದು ನೀವು ಭಾವಿಸುವುದಕ್ಕೆ ನಾನು ನಿಮ್ಮನ್ನು ಮೆಚ್ಚುತ್ತೇನೆ. ಆದರೆ ನನಗೆ ಕಾದಂಬರಿಗಳನ್ನು ಓದಲು ಅಷ್ಟೊಂದು ಆಸಕ್ತಿ ಇಲ್ಲ, ಆದರೆ ನಾನು ಬೇರೆ ರೀತಿಯ ಪುಸ್ತಕಗಳನ್ನು ಓದಲು ಇಷ್ಟಪಡುತ್ತೇನೆ. (ಉದಾಹರಣೆಗೆ, ನಿಮ್ಮ ಆಸಕ್ತಿಯ ಪ್ರಕಾರದ ಪುಸ್ತಕಗಳನ್ನು ಇಲ್ಲಿ ಹೇಳಿ.) ನೀವು ನನಗೆ ಕಾದಂಬರಿಗಳನ್ನು ಓದುವಂತೆ ಒತ್ತಾಯ ಮಾಡಿದರೆ, ನನಗೆ ಓದುವ ಆಸಕ್ತಿಯೇ ಕಡಿಮೆಯಾಗುತ್ತದೆ. ದಯವಿಟ್ಟು ನನ್ನ ಆಸಕ್ತಿಯ ಪುಸ್ತಕಗಳನ್ನು ಓದಲು ನನಗೆ ಅವಕಾಶ ಮಾಡಿಕೊಡುತ್ತೀರಾ?' ಎಂದು ಹೇಳಬಹುದಲ್ಲ? ಆಗ ನಿಮ್ಮ ಮನಸ್ಥಿತಿಯನ್ನು ಅವರು ಅರ್ಥ ಮಾಡಿಕೊಳ್ಳಬಹುದು.

ನಿಮ್ಮ ತಂದೆಯವರು ಸಾಹಿತ್ಯವನ್ನು ಪ್ರೀತಿಸುವುದರಿಂದ, ಅವರೊಂದಿಗೆ ಆಸಕ್ತಿ ಹೊಂದಿರುವ ಪುಸ್ತಕಗಳ ಬಗ್ಗೆ ಚರ್ಚಿಸಲು ಪ್ರಯತ್ನಿಸಿ. ನೀವು ಅವರ ನೆಚ್ಚಿನ ಕಾದಂಬರಿಯ ಸಾರಾಂಶ ಕೇಳಬಹುದು ಅಥವಾ ಅದರ ಬಗ್ಗೆ ಅವರ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಕೇಳಬಹುದು. ಇದು ಅವರಿಗೆ ನಿಮ್ಮೊಂದಿಗೆ ಸಂಪರ್ಕ ಸಾಧಿಸಲು ಸಹಾಯ ಮಾಡುತ್ತದೆ. ನಿಮಗೆ ಓದಲು ಆಸಕ್ತಿ ಇಲ್ಲದಿದ್ದರೆ, ನಿಮ್ಮ ತಂದೆ ಸೂಚಿಸಿದ ಕಾದಂಬರಿಗಳ ಆಡಿಯೋ ಆವೃತ್ತಿಗಳನ್ನು ಕೇಳಲು ಪ್ರಯತ್ನಿಸಬಹುದು. ಇದು ಕಾದಂಬರಿಗಳನ್ನು 'ಓದಿದ' ಅನುಭವವನ್ನು ನೀಡುತ್ತದೆ ಮತ್ತು ನಿಮ್ಮ ತಂದೆಯವರ ಮಾತನ್ನುಕೇಳಿದಂತಾಗುತ್ತದೆ. ದೊಡ್ಡ ಕಾದಂಬರಿಗಳು ಬೇಸರ ತರಿಸಿದರೆ, ಸಣ್ಣ ಕಥೆಗಳು ಅಥವಾ ಪ್ರಬಂಧಗಳನ್ನು ಓದಲು ಪ್ರಯತ್ನಿಸಿ. ಒಂದು ನಿರ್ದಿಷ್ಟ ಸಮಯವನ್ನು ನಿಗದಿಪಡಿಸಿ. ಉದಾಹರಣೆಗೆ, ದಿನಕ್ಕೆ 15–20 ನಿಮಿಷಗಳು ಕಾದಂಬರಿಗಳನ್ನು ಓದಲು ಪ್ರಯತ್ನಿಸಿ. ಇದು ನಿಮಗೆ ಒತ್ತಡವನ್ನುಂಟು ಮಾಡುವುದಿಲ್ಲ ಮತ್ತು ತಂದೆಯವರ ಮಾತನ್ನೂ ಗೌರವಿಸಿದಂತಾಗುತ್ತದೆ.

ನಿಮ್ಮ ತಂದೆಯವರು ಕಾದಂಬರಿಗಳನ್ನು ಒತ್ತಾಯಿಸಿದರೂ, ನಿಮ್ಮ ಆಯ್ಕೆಯ ಪುಸ್ತಕಗಳನ್ನು ಓದುವುದನ್ನು ನಿಲ್ಲಿಸಬೇಡಿ. ನೀವು ನಿಜವಾಗಿಯೂ ಇಷ್ಟಪಡುವ ವಿಷಯಗಳ ಬಗ್ಗೆ ಓದುವುದು ನಿಮ್ಮ ಬೌದ್ಧಿಕ ಬೆಳವಣಿಗೆಗೆ ಮತ್ತು ಸಂತೋಷಕ್ಕೆ ಮುಖ್ಯ. ನೆನಪಿಡಿ, ಸಂವಹನವೇ ಇಲ್ಲಿ ಪ್ರಮುಖ ಅಸ್ತ್ರ. ನಿಮ್ಮ ತಂದೆಯವರ ಪ್ರೀತಿಯನ್ನು ಗೌರವಿಸುತ್ತಲೇ, ನಿಮ್ಮ ಆಸಕ್ತಿಗಳ ಬಗ್ಗೆ ಅವರಿಗೆ ತಿಳಿಯಪಡಿಸಿ. ಅವರು ನಿಮ್ಮ ಒಳ್ಳೆಯದನ್ನೇ ಬಯಸುತ್ತಾರೆ. ಬಹುಶಃ ಅವರಿಗೆ ನಿಮ್ಮ ಆಸಕ್ತಿ ಏನು ಎಂಬುದು ತಿಳಿದಿಲ್ಲದಿರಬಹುದು. ಅವರ ಮನವೊಲಿಸಲು ಸಮಯ ತೆಗೆದುಕೊಳ್ಳಬಹುದು, ಆದರೆ ತಾಳ್ಮೆಯಿಂದಿರಿ.

ವಾಸು, ಬಳ್ಳಾರಿ

- **ಭಟ್ರೇ, ನಾನು ನನ್ನ ಹೆಂಡತಿಗೆ ಆಗಾಗ ಸುಳ್ಳು ಹೇಳುತ್ತೇನೆ. ಆಕೆಗೆ ನಾನು ಸುಳ್ಳು ಹೇಳುವುದು ಗೊತ್ತಿಲ್ಲ. ಅವಳಿಗೆ ಗೊತ್ತಾದರೆ ಬೇಸರಿಸಿಕೊಳ್ಳಬಹುದು. ನಂತರ ನಾನು ನಿಜ ಹೇಳಿದರೂ ನಂಬಲಿಕ್ಕಿಲ್ಲ. ಏನು ಮಾಡಲಿ?**

– ವಾಸು ಅವರೇ, ನಿಮ್ಮ ಪರಿಸ್ಥಿತಿ ಅರ್ಥವಾಗಿದೆ, ಪತ್ನಿಗೆ ಸುಳ್ಳು ಹೇಳೋದು ಒಂದು ಕಲೆ. ಆದರೆ ಸಿಕ್ಕಿಬಿದ್ರೆ, ಅದು ಆಪತ್ತು! ಈಗ ಆಕೆಗೆ ಗೊತ್ತಿಲ್ಲ ಅಂದ್ಮೇಲೆ, ಅದು ಸದ್ಯಕ್ಕೆ ನಿಮ್ಮ ಸೀಕ್ರೆಟ್. ಆದರೆ, ಒಂದು ದಿನ ಸತ್ಯ ಹೊರಬಂದ್ರೆ, ಕಷ್ಟ. ಮೊದಲು, ಸುಳ್ಳಿನ ಅಡಿಪಾಯ ಕಿತ್ತು ಹಾಕಿ. ಇನ್ನು ಮುಂದೆ ಸುಳ್ಳು ಹೇಳೋದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡಿ. ಸತ್ಯ ಸ್ವಲ್ಪ ಕಹಿಯಾಗಿದ್ದರೂ, ಸುಳ್ಳಿನ ಸಿಹಿಗಿಂತ ಖಂಡಿತ ಉತ್ತಮ.

ಸಣ್ಣ ಪುಟ್ಟ ಸತ್ಯಗಳನ್ನು ಒಪ್ಪಿಕೊಳ್ಳಿ. ಈಗಲೇ ಆಕೆಗೆ ನೇರವಾಗಿ 'ನಾನು ಸುಳ್ಳು ಹೇಳಿದ್ದೀನಿ' ಅಂತ ಹೇಳಿ ಭಯ ಹುಟ್ಟಿಸಬೇಡಿ. ಸದ್ಯಕ್ಕೆ, ಸಣ್ಣ ಪುಟ್ಟ ಸತ್ಯಗಳನ್ನು ಒಪ್ಪಿಕೊಳ್ಳಲು ಶುರು ಮಾಡಿ. 'ನಿನ್ನೆ ಲೇಟ್ ಆಗಿದ್ದು ಟ್ರಾಫಿಕ್‌ನಿಂದಾನೇ ಹೊರತು ಫ್ರೆಂಡ್ಸ್ ಜತೆಗೆ ಇದ್ದದ್ದರಿಂದ ಅಲ್ಲ' ಅಂತ ಹೇಳಿ. ಈ ರೀತಿ ಸಣ್ಣ ಸಣ್ಣ ವಿಷಯಗಳಲ್ಲಿ ಪ್ರಾಮಾಣಿಕತೆ ತೋರಿಸಿ. ಅವಳ ನಂಬಿಕೆ ಗಳಿಸಿ. ಸಮಯಕ್ಕೆ ಸರಿಯಾಗಿ ಬನ್ನಿ, ಹೇಳಿದ ಕೆಲಸ ಮಾಡಿ. ಇದರಿಂದ ಆಕೆಗೆ ನಿಮ್ಮ ಮೇಲೆ ಪುನಃ ನಂಬಿಕೆ ಬರುತ್ತದೆ. ಒಂದು ವೇಳೆ ಸತ್ಯ ಹೇಳಲೇಬೇಕಾದ ಅನಿವಾರ್ಯತೆ ಬಂದರೆ, ಪರಿಸ್ಥಿತಿ ಶಾಂತವಾಗಿದ್ದಾಗ ಆಕೆಯನ್ನು ಹತ್ತಿರ ಕೂರಿಸಿಕೊಂಡು, ಪರಿಸ್ಥಿತಿಯನ್ನು ವಿವರಿಸಿ. ನೆನಪಿಡಿ, ಹೆಂಡತಿಯ ನಂಬಿಕೆ ಕಳೆದುಕೊಳ್ಳೋದು ಸುಲಭ, ಆದರೆ ವಾಪಸ್ ಗಳಿಸೋದು ತುಂಬಾ ಕಷ್ಟ. ಈಗಲೇ ಎಚ್ಚೆತ್ತುಕೊಂಡರೆ, ಮುಂದಿನ ತಲೆನೋವು ತಪ್ಪುತ್ತದೆ.

ಹಾಂ.. ಹೆಂಡತಿ ಸುಳ್ಳು ಹೇಳಲೇಬೇಕಾದ ಕಠಿಣ ಪ್ರಶ್ನೆಗಳನ್ನು ಕೇಳಿದರೆ, ನಿಜ ಹೇಳುವಾಗ ಯೋಚಿಸಿ.